ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಲಾಕ್‌ಡೌನ್ ಸಮಯದಲ್ಲಿ ಹೆಚ್ಚಿದ ಯೂಟ್ಯೂಬ್ ಅಡುಗೆ ಚಾನೆಲ್‌ಗಳು ಈಗ ಹೆಣ್ಣುಮಕ್ಕಳ ದುಡಿಮೆಗೆ ಮಾರ್ಗವಾಗಿದೆ. ಅಲ್ಲದೇ ಇದರಿಂದ ಅವರಿಗೆ ಜನಪ್ರಿಯತೆಯೂ ಸಿಕ್ಕಿದೆ

‘1.8 ಕೋಟಿ ಜನರಿಗೆ ಹೊಸ ಉದ್ಯೋಗ ಅನಿವಾರ್ಯ’ 11
ಆವಿಗೆ ಗ್ರಾಮಕ್ಕೆ ಆಗಲಿದೆ ಅಭಿವೃದ್ಧಿಯ ‘ಸುದೀಪ್ ಸ್ಪರ್ಶ’ 10
‘₹20 ಸಾವಿರ ಕೋಟಿ ಬೆಳೆ ಸಾಲ ಗುರಿ’ 6
ಒಂದು ಗ್ರಾಮ, ನಾಲ್ಕು ಶಾಲೆ ದತ್ತು 10

ಸೆನ್ಸೆಕ್ಸ್ 50,889 | ನಿಫ್ಟಿ 14,981

ಏರುತ್ತಿದೆ ಹೋರಾಟದ ಕಾವು: ರಾಜ್ಯ ಸರ್ಕಾರಕ್ಕೆ ತಲೆನೋವು

ಮೀಸಲು ಚಳವಳಿ ಹುಯಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿ ಪರಿಷ್ಕರಣೆ, ಪ್ರಮಾಣ ಹೆಚ್ಚಳಕ್ಕಾಗಿ ರಾಜ್ಯದಲ್ಲಿ ಶುರುವಾಗಿರುವ ವಿವಿಧ ಸಮುದಾಯಗಳ ಹೋರಾಟ ದಿನೇ ದಿನೇ ಹೊಸ ತಿರುವು ಪಡೆಯುತ್ತಿದ್ದು, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವತ್ತ ದಾಂಗುಡಿ ಇಡುತ್ತಿದೆ.

ಕಾಗಿನೆಲೆ ಮಹಾಸಂಸ್ಥಾನದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಕುರುಬ ಸಮುದಾಯದವರ ಮೀಸಲಾತಿಗಾಗಿ ನಡೆದ ಪಾದಯಾತ್ರೆ–ಸಮಾವೇಶ ಮುಗಿದ ಬೆನ್ನಲ್ಲೇ, ಲಿಂಗಾಯತ ಪಂಚಮಸಾಲಿ ಸಮುದಾಯದವರು ಈಗ ರಾಜಧಾನಿಗೆ ದೌಡಾಯಿಸಿದ್ದಾರೆ. ಇದೇ 21ಕ್ಕೆ ಮಹಾರ್‍ಯಾಲಿ ನಡೆಯಲಿದೆ.

ಕರ್ನಾಟಕ ಪ್ರದೇಶ ಕುರುಬ ಸಂಘದ ನೇತೃತ್ವದಲ್ಲಿ ಶುಕ್ರವಾರ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ ವೇಳೆ, ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ, ಅಭಿವೃದ್ಧಿ ನಿಗಮದ ಬೇಡಿಕೆ ಮತ್ತೊಮ್ಮೆ ಮೊಳಗಿದೆ. ಅಲಕ್ಷಿತ ಸಮುದಾಯಗಳು ಹೋರಾಟದ ಹಾದಿ ಹಿಡಿದಿದ್ದು, ದಿನೇ ದಿನೇ ಚಳವಳಿ ಬಿರುಸುಗೊಳ್ಳುತ್ತಿದೆ.

ಒಕ್ಕಲಿಗರಿಗೆ ನಿಗಮ: ಬಜೆಟ್‌ನಲ್ಲಿ ಘೋಷಣೆ?

ಮೀಸಲಾತಿಗಾಗಿ ಹೋರಾಟದತ್ತ ಹೆಜ್ಜೆ ಇಟ್ಟಿರುವ ಒಕ್ಕಲಿಗರನ್ನು ಸಮಾಧಾನಪಡಿಸಲು ಮುಂಬರುವ ಬಜೆಟ್‌ನಲ್ಲಿ ಒಕ್ಕಲಿಗ ಅಭಿವೃದ್ಧಿ ನಿಗಮ ರಚಿಸುವ ಘೋಷಣೆ ಮಾಡಲು ಸರ್ಕಾರ ಚಿಂತನೆ ನಡೆಸಿದೆ.

ವೀರಶೈವ ಅಭಿವೃದ್ಧಿ ನಿಗಮ ಸ್ಥಾಪಿಸಿ, ₹500 ಕೋಟಿ ಅನುದಾನ ಘೋಷಣೆ ಮಾಡಿದ ಮಾದರಿಯಲ್ಲೇ ಒಕ್ಕಲಿಗ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು ಎಂಬ ಬೇಡಿಕೆಯನ್ನು ಆ ಸಮುದಾಯ ಮಂಡಿಸಿದೆ. ಅಲ್ಲದೆ, ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸಭೆ ಕೂಡ ಈ ಒತ್ತಾಯ ಮಾಡಿದೆ.

ಒಕ್ಕಲಿಗ ಸಮುದಾಯ ಪ್ರತಿನಿಧಿಸುವ ಸಚಿವರು ಮುಖ್ಯಮಂತ್ರಿಯವರ ಜತೆ ಮಾತನಾಡಿ, ವೀರಶೈವ ನಿಗಮದ ಮಾದರಿಯಲ್ಲೇ ಒಕ್ಕಲಿಗರಿಗೂ ನಿಗಮ ಸ್ಥಾಪಿಸಬೇಕು. ಇಲ್ಲವಾದರೆ ಸಮುದಾಯವು ಬಿಜೆಪಿ ಬಗ್ಗೆ ಮುನಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಯಡಿಯೂರಪ್ಪ ಇದನ್ನು ಒಪ್ಪಿಕೊಂಡಿದ್ದಾರೆ. ಈಗಾಗಲೇ ಬಜೆಟ್ ಮಂಡನೆಯ ದಿನಾಂಕ ನಿಗದಿಯಾಗಿದ್ದು, ಅದಕ್ಕೆ ಮೊದಲು ಘೋಷಿಸುವುದು ಸರಿಯಾಗದು. ಬಜೆಟ್‌ನಲ್ಲೇ ಪ್ರಕಟಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆಮರಣಾಂತ ಉಪವಾಸ- ಜಯ ಮೃತ್ಯುಂಜಯ ಸ್ವಾಮೀಜಿ: ಇದೇ 21ರ ವೇಳೆಗೆ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ಸೌಲಭ್ಯ ಘೋಷಿಸದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದ್ದಾರೆ.

ಮೀಸಲಾತಿ ಪರಿಷ್ಕರಣೆಗೆ ಒತ್ತಾಯಿಸಿ ಜ.14ರಂದು ಕೂಡಲಸಂಗಮದಿಂದ ಹೊರಟಿದ್ದ ಪಾದಯಾತ್ರೆ ಶುಕ್ರವಾರ ಬೆಂಗಳೂರು ಪ್ರವೇಶಿಸಿತು.

ಈ ಸಂದರ್ಭದಲ್ಲಿ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ನಗರದ ಅರಮನೆ ಮೈದಾನದಲ್ಲಿ ಭಾನುವಾರ (ಫೆ.21) ಪಂಚಮಸಾಲಿ ಮಹಾರ್‍ಯಾಲಿ ನಡೆಯಲಿದೆ’ ಎಂದರು.

10ನೇ ಪುಟ ನೋಡಿ

ಬೆಂಕಿ ಬೀಳಲಿದೆ: ಕುರುಬರ ಸಂಘದ ಎಚ್ಚರಿಕೆ

ಬೆಂಗಳೂರು: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂದು ಆಗ್ರಹಿಸಿ ಪ್ರದೇಶ ಕುರುಬರ ಸಂಘ ಮತ್ತು ಎಸ್‌ಟಿ ಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ಪ್ರಧಾನ ಕಾರ್ಯದರ್ಶಿ ಡಿ. ವೆಂಕಟೇಶ್‌ಮೂರ್ತಿ ನೇತೃತ್ವದಲ್ಲಿ ಮೌರ್ಯ ವೃತ್ತದಲ್ಲಿ ಧರಣಿ ನಡೆಸಿದ ಸಮುದಾಯದ ಮುಖಂಡರು, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

10ನೇ ಪುಟ ನೋಡಿ

ಅನುಭವ ಮಂಟಪ

ರಾಜ್ಯದಲ್ಲಿ ರಾಜಕೀಯ ಮತ್ತು ಸಾಮಾಜಿಕವಾಗಿ ಬಲಾಢ್ಯವಾಗಿರುವ ಜಾತಿಗಳಲ್ಲಿ ಹಲವು ಮೀಸಲಾತಿಯ ವಿಚಾರದಲ್ಲಿ ಹೋರಾಟಕ್ಕೆ ಇಳಿದಿವೆ. ಸರ್ಕಾರದ ಮೇಲೆ ಒತ್ತಡ ಹೇರಲು ವಿವಿಧ ಕಾರ್ಯತಂತ್ರ ಅನುಸರಿಸುತ್ತಿವೆ. ಮೀಸಲು ಹೋರಾಟದ ಒಳಹೊರಗನ್ನು ಬಿಚ್ಚಿಡುವ ‘ಅನುಭವ ಮಂಟಪ’ ಸರಣಿ ಇಂದು ಆರಂಭ

ಮೀಸಲು ಹೋರಾಟಗಳ ಸಾಲು ಸಾಲು 9

ಆಲಿಕಲ್ಲು ಮಳೆ: ಬೆಳೆಗಳಿಗೆ ಹಾನಿ

ಬೆಂಗಳೂರು: ರಾಜ್ಯದ ಹಲವೆಡೆ ಶುಕ್ರವಾರವೂ ಮಳೆ ಸುರಿದಿದೆ. ಇದರಿಂದ ತೋಟಗಾರಿಕೆ ಬೆಳೆಗಳಿಗೆ ಅಪಾರ ಹಾನಿಯಾಗಿದೆ.

ಮಾವಿನ ಹೂವು ಉದುರಿದ್ದು, ಎಲೆಕೋಸು, ಸೋರೆಕಾಯಿ, ಸೌತೆ, ಮೆಣಸಿನಕಾಯಿ ಬೆಳೆಗಳಿಗೆ ಹಾನಿಯಾಗಿದೆ. ಕೊಡಗು, ಹಾಸನ, ಚಾಮರಾಜನಗರ, ಮೈಸೂರು ಹಾಗೂ ಮಂಡ್ಯ ಜಿಲ್ಲೆಯ ಹಲವೆಡೆ ಬಿರುಗಾಳಿ ಸಹಿತ ಬಿರುಸಿನ ಆಲಿಕಲ್ಲು ಮಳೆಯಾಗಿದೆ. ಕೊಡಗು ಜಿಲ್ಲೆಯಲ್ಲಿ ಆಲಿಕಲ್ಲು ಹೊಡೆತಕ್ಕೆ ಕಾಫಿ, ಬಾಳೆ, ಕಾಳು ಮೆಣಸಿನ ಬಳ್ಳಿ, ಹಸಿರು ಮೆಣಸಿನ ಕಾಯಿಗೆ ಅಪಾರ ಹಾನಿಯಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಅಕಾಲಿಕವಾಗಿ ಸುರಿದ ಮಳೆಯಿಂದ ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ. ರಾಗಿ ಒಕ್ಕಣೆಗೆ ಅಡ್ಡಿಯಾಗಿದ್ದು, ಕೆಲವೆಡೆ ರಾಗಿ ಹುಲ್ಲು ನೀರುಪಾಲಾಗಿದೆ. ಮೆಕ್ಕೆಜೋಳದ ಕಾಳುಗಳನ್ನು ತೆನೆಯಿಂದ ಬೇರ್ಪಡಿಸುವ ಕಾರ್ಯಕ್ಕೂ ತೊಂದರೆಯಾಗಿದೆ.

ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಉತ್ತಮ ಮಳೆಯಾಗಿದೆ. ಆದರೆ, ಮಳೆಯಿಂದ ಜೋಳ ಕಪ್ಪಾಗುವ ಆತಂಕ ಎದುರಾಗಿದೆ. ಕರಾವಳಿ, ಮಲೆನಾಡಿನ ಹಲವೆಡೆ ಉತ್ತಮ ಮಳೆಯಾಗಿದೆ.

ಇನ್ನಷ್ಟು ಸುದ್ದಿಗಳು 4

ಆಲಿಕಲ್ಲಿನ ಹಾಸು!

ಕೊಡಗು ಜಿಲ್ಲೆಯ ವಿವಿಧೆಡೆ ಶುಕ್ರವಾರ ಧಾರಾಕಾರ ಮಳೆಯಾಗಿದ್ದು, ಶನಿವಾರಸಂತೆ ಹೋಬಳಿ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಆಲಿಕಲ್ಲಿನ ರಾಶಿ

ಒಳ ಪುಟಗಳು

‘ಅನುಮತಿ ನಿರಾಕರಿಸಿದರೂ ಮಹಾಪಂಚಾಯಿತಿ ಖಚಿತ’ 11
ಭಾರತ– ಚೀನಾ: ಸೇನಾಮಟ್ಟದ ಮಾತುಕತೆ ಇಂದು 11
ಖಾಸಗಿತನ ಕಾಯಲು ಬದ್ಧ: ವಾಟ್ಸ್‌ಆ್ಯಪ್ 11

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಹೊಣೆಗಾರಿಕೆಯ ಪತ್ರಿಕೋದ್ಯಮಕ್ಕೆ ಹೈಕೋರ್ಟ್ ಸೂಚನೆ

‘ಟೂಲ್‌ಕಿಟ್: ದಿಶಾ ಕುರಿತ ವರದಿ ಪೂರ್ವಗ್ರಹಪೀಡಿತ’

ನವದೆಹಲಿ (ಪಿಟಿಐ): ರೈತರ ಹೋರಾಟಕ್ಕೆ ಬೆಂಬಲವಾಗಿ ಟೂಲ್ ಕಿಟ್ ರಚಿಸಿದ ಪ್ರಕರಣದ ಆರೋಪಿ, ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರ ಬಗ್ಗೆ ಕೆಲವು ಸುದ್ದಿವಾಹಿನಿಗಳು ಪ್ರಸಾರ ಮಾಡಿದ ವರದಿಯು ‘ಪ್ರಚೋದನಕಾರಿ ಮತ್ತು ಪೂರ್ವಗ್ರಹಪೀಡಿತ’ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತನಿಖೆಗೆ ಸಂಬಂಧಿಸಿದ ಸೋರಿಕೆಯಾದ ಮಾಹಿತಿಯನ್ನು ಪ್ರಸಾರ ಮಾಡಬಾರದು ಎಂದು ಮಾಧ್ಯಮ ಸಂಸ್ಥೆಗಳಿಗೆ ಪೀಠವು ಎಚ್ಚರಿಕೆ ನೀಡಿದೆ. ತನಿಖೆಯ ಭಾಗವಾಗಿ ಸಂಗ್ರಹಿಸಲಾದ ಮಾಹಿತಿಯನ್ನು ಸೋರಿಕೆ ಮಾಡಿಲ್ಲ ಮತ್ತು ಮಾಡುವ ಉದ್ದೇಶವೂ ಇಲ್ಲ ಎಂದು ಸಲ್ಲಿಸಿದ ಪ್ರಮಾಣಪತ್ರಕ್ಕೆ ದೆಹಲಿ ಪೊಲೀಸರು ಬದ್ಧವಾಗಿ ನಡೆದುಕೊಳ್ಳಬೇಕು ಎಂದು ಪೀಠವು ಸೂಚನೆ ನೀಡಿದೆ.

10ನೇ ಪುಟ ನೋಡಿ

3 ದಿನ ನ್ಯಾಯಾಂಗ ಬಂಧನ

ಕಳೆದ ಶನಿವಾರ ದೆಹಲಿ ಪೊಲೀಸರು ಬಂಧಿಸಿದ ದಿಶಾ ರವಿ ಅವರನ್ನು ಐದು ದಿನಗಳ ಪೊಲೀಸ್ ಕಸ್ಟಡಿಯ ಬಳಿಕ ಮೂರು ದಿನಗಳ ನ್ಯಾಯಾಂಗ ಬಂಧನಕ್ಕೆ ದೆಹಲಿಯ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ನ್ಯಾಯಾಲಯವು ಶುಕ್ರವಾರ ಒಪ್ಪಿಸಿದೆ.

ದಿಶಾ ಅವರ ಕಸ್ಟಡಿ ತನಿಖೆ ಸದ್ಯಕ್ಕೆ ಅಗತ್ಯ ಇಲ್ಲ. ಸಹ ಆರೋಪಿಗಳಾದ ಶಾಂತನು ಮುಲುಕ್ ಮತ್ತು ನಿಕಿತಾ ಜೇಕಬ್ ಅವರು ತನಿಖೆಗಾಗಿ ಹಾಜರಾದಾಗ ದಿಶಾ ಅವರನ್ನು ತನಿಖೆಗೆ ಕರೆಸಿಕೊಳ್ಳಬೇಕಾಗಬಹುದು ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದರು. ಈವರೆಗಿನ ತನಿಖೆಯಲ್ಲಿ ದಿಶಾ ಅವರು ಹಾರಿಕೆಯ ಉತ್ತರ ಕೊಟ್ಟಿದ್ದಾರೆ. ತಪ್ಪೆಲ್ಲವೂ ಸಹ ಆರೋಪಿಗಳದ್ದು ಎಂದು ಜಾರಿಕೊಂಡಿದ್ದಾರೆ. ಶಾಂತನು ಮತ್ತು ನಿಕಿತಾ ಅವರಿಗೆ ಸೋಮವಾರ ತನಿಖೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ದಿಶಾ ಅವರ ಜಾಮೀನು ಅರ್ಜಿಯ ವಿಚಾರಣೆ ಶನಿವಾರ ನಡೆಯಲಿದೆ.

ದಿಶಾ ಅವರನ್ನು ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲು ಕರೆತಂದ ಕ್ಷಣ –ರಾಯಿಟರ್ಸ್ ಚಿತ್ರ

4 ಸೈನಿಕರ ಸಾವು: ಕೊನೆಗೂ ಒಪ್ಪಿಕೊಂಡ ಚೀನಾ

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನ ಗಾಲ್ವನ್ ಕಣಿವೆಯಲ್ಲಿ ಕಳೆದ ಜೂನ್ 15ರಂದು ಭಾರತ ಮತ್ತು ಚೀನಾದ ಸೈನಿಕರ ನಡುವೆ ನಡೆದ ಹಿಂಸಾತ್ಮಕ ಸಂಘರ್ಷದಲ್ಲಿ ತಮ್ಮ ಸೇನೆಯ ನಾಲ್ವರು ಸೈನಿಕರು ಮೃತಪಟ್ಟಿದ್ದಾರೆ ಎಂದು ಚೀನಾವು ಇದೇ ಮೊದಲ ಬಾರಿ ಶುಕ್ರವಾರ ಒಪ್ಪಿಕೊಂಡಿದೆ.

ಚೀನಾದ ಸೇನೆಯು ಇಬ್ಬರು ಅಧಿಕಾರಿಗಳು ಮತ್ತು ಮೂವರು ಸೈನಿಕರಿಗೆ ಶೌರ್ಯ ಪ್ರಶಸ್ತಿಗಳನ್ನು ನೀಡಿದೆ. ಅವರಲ್ಲಿ ಒಬ್ಬ ಅಧಿಕಾರಿ ಮತ್ತು ಮೂವರು ಸೈನಿಕರಿಗೆ ಮರಣೋತ್ತರವಾಗಿ ಈ ಗೌರವ ಸಲ್ಲಿಸಲಾಗಿದೆ. ಪಶ್ಚಿಮದಲ್ಲಿ ಗಡಿ ರಕ್ಷಣೆ ಮಾಡಿದ್ದಕ್ಕಾಗಿ ಈ ಗೌರವ ನೀಡಲಾಗಿದೆ ಎಂದು ಚೀನಾದ ಸುದ್ದಿಸಂಸ್ಥೆ ಕ್ಸಿನುವಾ ವರದಿ ಮಾಡಿದೆ. ಚೀನಾ ಸೇನೆಯ ಪತ್ರಿಕೆ ‘ದಿ ಪೀಪಲ್ಸ್ ಲಿಬರೇಷನ್ ಆರ್ಮಿ ಡೈಲಿ’ಯನ್ನು ಉಲ್ಲೇಖಿಸಿ ಈ ವರದಿ ನೀಡಲಾಗಿದೆ.

ಕಾರಕೋರಂ ಪರ್ವತ ಪ್ರದೇಶದಲ್ಲಿ ನಿಯೋಜಿಸಲಾಗಿದ್ದ ಐವರು ಅಧಿಕಾರಿಗಳು ಮತ್ತು ಸೈನಿಕರ ತ್ಯಾಗಕ್ಕೆ ಪ್ರತಿಯಾಗಿ ಅವರಿಗೆ ಸೇನಾ ಗೌರವ ನೀಡಲಾಗುತ್ತಿದೆ ಎಂದು ಚೀನಾದ ಕೇಂದ್ರೀಯ ಸೇನಾ ಆಯೋಗವು (ಸಿಎಂಸಿ) ಹೇಳಿದೆ. ಗಡಿಯಲ್ಲಿ ಭಾರತದ ಜತೆಗಿನ ಸಂಘರ್ಷವನ್ನು ಉಲ್ಲೇಖಿಸಿಯೇ ಶೌರ್ಯ ಪ್ರಶಸ್ತಿ ನೀಡಲಾಗಿದೆ. ಸಿಎಂಸಿಗೆ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೇ ಅಧ್ಯಕ್ಷರು.

ಬೆಟಾಲಿಯನ್ ಕಮಾಂಡರ್ ಚೆನ್ ಹೊಂಗ್‌ಜುನ್ ಅವರಿಗೆ ‘ಗಡಿ ರಕ್ಷಣೆಯ ಹೀರೊ’ ಪ್ರಶಸ್ತಿ ಮತ್ತು ಚೆನ್ ಕ್ಸಿಯಾಂಗ್‌ರಾಂಗ್, ಷಿಯಾವೊ ಸಿಯುವಾನ್ ಮತ್ತು ವಾಂಗ್ ಝೌರಾನ್ ಅವರಿಗೆ ಪ್ರಥಮ ದರ್ಜೆಯ ಶೌರ್ಯ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗಿದೆ. ಗಡಿ ಸಂಘರ್ಷದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಕ್ವಿ ಫಬಾವೊ ಅವರಿಗೆ ‘ಹೀರೊ ರೆಜಿಮೆಂಟ್ ಕಮಾಂಡರ್’ ಪ್ರಶಸ್ತಿ ಕೊಡಲಾಗಿದೆ.

ಎಂಟು ತಿಂಗಳ ಬಳಿಕ ಈ ವಿಷಯವನ್ನು ಬಹಿರಂಗಪಡಿಸಿದ್ದು ಏಕೆ ಎಂಬ ಪ್ರಶ್ನೆಗೆ, ಜನರಿಗೆ ಸತ್ಯ ತಿಳಿಸಲೇಬೇಕು. ಜನರು ಈ ಸತ್ಯಕ್ಕಾಗಿ ಎದುರು ನೋಡುತ್ತಿದ್ದರು ಮತ್ತು ಅವರಿಗೆ ನಿಜವಾದ ವಿಚಾರ ಏನೆಂದು ಗೊತ್ತಾಗಬೇಕು ಎಂಬ ಉತ್ತರ ನೀಡಲಾಗಿದೆ.

ಗಾಲ್ವನ್ ಸಂಘರ್ಷದಲ್ಲಿ ಭಾರತದ 20 ಯೋಧರು ಹುತಾತ್ಮರಾಗಿದ್ದರು. ಇದು ನಾಲ್ಕು ದಶಕಗಳಲ್ಲಿ ಭಾರತ ಮತ್ತು ಚೀನಾ ನಡುವೆ ನಡೆದ ಅತ್ಯಂತ ಹಿಂಸಾತ್ಮಕವಾದ ಮುಖಾಮುಖಿಯಾಗಿತ್ತು. ತಮ್ಮ ಕಡೆಯಲ್ಲಿಯೂ ಸಾವು ನೋವು ಸಂಭವಿಸಿದೆ ಎಂದು ಚೀನಾ ಆಗಲೇ ಹೇಳಿತ್ತು. ಆದರೆ, ವಿವರಗಳನ್ನು ಬಹಿರಂಗ ಮಾಡಿರಲಿಲ್ಲ.

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಕಸಾಪ ‘ಸಾಂಸ್ಕೃತಿಕ’ ಪರಿಷತ್ತಾಗಲಿ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಸಾಹಿತ್ಯಕ್ಕಷ್ಟೇ ಸೀಮಿತವಾಗಬಾರದು. ಕನ್ನಡ ನಾಡಿನ ಸಮಗ್ರ ಪರಿಕಲ್ಪನೆಯೊಂದಿಗೆ ಕನ್ನಡ ಸಾಂಸ್ಕೃತಿಕ ಪರಿಷತ್ತು ಎಂದು ಬದಲಾಗಬೇಕು’ ಎಂದು 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಪ್ರೊ.ದೊಡ್ಡರಂಗೇಗೌಡ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ 18ನೇ ಸಾಹಿತ್ಯ ಸಮ್ಮೇಳನ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕನ್ನಡ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸುವ ಕಾರ್ಯ ಎಲ್ಲಾ ರಂಗದಲ್ಲೂ ನಡೆಯುತ್ತಿದೆ. ಹೋರಾಟ, ಸಂಘಟನೆಗಳು ರಾಜ್ಯಕ್ಕೆ ಅಪಾರ ಕೊಡುಗೆ ನೀಡಿವೆ. ಅತ್ಯಂತ ಹಳೆಯ ಸಂಘಟನೆಯಾಗಿರುವ ಸಾಹಿತ್ಯ ಪರಿಷತ್ತು ಈ ಎಲ್ಲಾ ಚಟುವಟಿಕೆಗಳನ್ನು ಒಳಗೊಳ್ಳುವಂತಾಗಬೇಕು. ಎಲ್ಲಾ ಕ್ಷೇತ್ರಕ್ಕೂ ನ್ಯಾಯ ಒದಗಿಸಬೇಕು. ಹೀಗಾಗಿ ಸಾಂಸ್ಕೃತಿಕ ಪರಿಷತ್ತು ಎಂದು ಬದಲಾದರೆ ಒಳ್ಳೆಯದು’ ಎಂದರು.

‘ದೊಡ್ಡ ನಗರಗಳಲ್ಲಿ ಕನ್ನಡ ಭಾಷೆ ಮರೆಯಾಗುತ್ತಿದೆ. ಇಂಗ್ಲಿಷ್ ಮಾತ್ರ ಅನ್ನ ನೀಡುವ ಭಾಷೆಯಾಗಿದೆ ಎಂಬ ಭ್ರಮೆ ಸೃಷ್ಟಿಯಾಗಿದೆ. ಗುಲಾಮಗಿರಿಯ ಸಂಕೇತ ಎಂಬಂತೆ ಬ್ರಿಟಿಷರು ಬಿಟ್ಟು ಹೋಗಿರುವ ಇಂಗ್ಲಿಷ್ ಭಾಷೆಯನ್ನು ಧಾಳಾಗಿ ಬಳಸುತ್ತಿದ್ದೇವೆ’ ಎಂದು ಹೇಳಿದರು.

‘7ನೇ ತರಗತಿವರೆಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಶಿಕ್ಷಣ ನೀತಿಯ ಅವಶ್ಯಕತೆ ಇದೆ. ಒಂದು ಭಾಷೆಯಾಗಿ ಯಾವುದೇ ಭಾಷೆ ಕಲಿತರೂ ತೊಂದರೆ ಇಲ್ಲ. ಆದರೆ ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಅಗ್ರಮಾನ್ಯವಾಗಬೇಕು’ ಎಂದರು.

ಬ್ರಾಹ್ಮಣ ಸಮುದಾಯಕ್ಕೆ ಅವಹೇಳನ ಆರೋಪ: ಇಲಾಖೆಯ ಕ್ರಮ

ಬೌದ್ಧಧರ್ಮ ಪರಿಚಯದ ಪಾಠಕ್ಕೆ ಕೊಕ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ತರಗತಿಯ ಸಮಾಜ ವಿಜ್ಞಾನ ಭಾಗದಲ್ಲಿನ ‘ಹೊಸ ಧರ್ಮಗಳ ಉದಯ’ ಅಧ್ಯಾಯದಲ್ಲಿನ ಕೆಲವು ಅಂಶಗಳನ್ನು ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸಬಾರದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಈ ಅಧ್ಯಾಯದಲ್ಲಿ ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡಲಾಗಿದೆ ಎಂಬ ಆಕ್ಷೇಪ ವ್ಯಕ್ತವಾಗಿತ್ತು. ಅದಕ್ಕೆ ಪೂರಕವೆಂಬಂತೆ ಇಲಾಖೆ ಈ ಕ್ರಮ ತೆಗೆದುಕೊಂಡಿದೆ.

ಈ ಸಂಬಂಧ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಮುಖ್ಯಶಿಕ್ಷಕರಿಗೆ ಸೂಚನೆಯನ್ನೂ ನೀಡಲಾಗಿದ್ದು, ಈ ಕುರಿತು ಕೈಗೊಂಡ ಕ್ರಮಗಳ ಬಗ್ಗೆ ಇದೇ 28ರೊಳಗೆ ವರದಿ ನೀಡುವಂತೆಯೂ ಹೇಳಲಾಗಿದೆ.

ಯಾವ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬುದನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಿಲ್ಲ. ಅಧ್ಯಾಯದ ಪುಟ ಸಂಖ್ಯೆ 82 ಮತ್ತು 83ರಲ್ಲಿನ ವಿಷಯಾಂಶಗಳನ್ನು ಪರಿಗಣಿಸದಿರುವಂತೆ ಹೇಳಲಾಗಿದೆ.

ಈ ಎರಡು ಪುಟಗಳಲ್ಲಿ ವಿಶ್ವಕ್ಕೆ ಶಾಂತಿಯನ್ನು ಬೋಧಿಸಿದ ಬುದ್ಧನ ಜೀವನ ಕುರಿತ ಮಾಹಿತಿ ಹಾಗೂ ಬೌದ್ಧಧರ್ಮ ಪರಿಚಯ ಇದೆ.

ಖಂಡನೀಯ: ‘ಬ್ರಾಹ್ಮಣರ ವಿರುದ್ಧದ ಅವಹೇಳನಕಾರಿ ಅಂಶಗಳನ್ನು ತೆಗೆಯುವ ನೆಪದಲ್ಲಿ ಬೌದ್ಧಧರ್ಮ ಮತ್ತು ಬುದ್ಧ ಗುರುವಿನ ವಿಷಯವನ್ನು ತೆಗೆದಿರುವುದು ಸರಿಯಲ್ಲ. ಈ ವಿಷಯವನ್ನು ಬೋಧಿಸಬಾರದು ಎಂಬ ತೀರ್ಮಾನವು ಬೌದ್ಧಧರ್ಮೀಯರಿಗೆ ನೋವುಂಟು ಮಾಡುವುದಿಲ್ಲವೇ ? ಬುದ್ಧ ಗುರುವಿಗೆ ಅವಮಾನ ಮಾಡಿದಂತಾಗಲಿಲ್ಲವೇ’ ಎಂದು ಚಿಂತಕ ಹಾಗೂ ಕರ್ನಾಟಕ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಮಾಜಿ ಅಧ್ಯಕ್ಷ ಪ್ರೊ. ಬರಗೂರು ರಾಮಚಂದ್ರಪ್ಪ ಪ್ರಶ್ನಿಸಿದ್ದಾರೆ.

ಬರಗೂರು ರಾಮಚಂದ್ರಪ್ಪ

‘ಪಠ್ಯಪುಸ್ತಕಗಳಲ್ಲಿ ಯಾವುದಾದರೂ ಅಸತ್ಯ ಇದ್ದರೆ ಅದನ್ನು ತೆಗೆದುಹಾಕಲು ಅವಕಾಶವಿದೆ. ಅವಹೇಳನಕಾರಿ ಅಂಶಗಳು ಎಂದು ಹೇಳಿರುವ ವಿಷಯಗಳಲ್ಲಿ ಯಾವುದೇ ಅಸತ್ಯ ಅಥವಾ ತಪ್ಪು ಇಲ್ಲ. ಅದೇ ರೀತಿ, ಪಠ್ಯಕ್ರಮದಲ್ಲಿನ ಯಾವುದೇ ಅಂಶದ ಬಗ್ಗೆ ಆಕ್ಷೇಪವಿದ್ದರೆ ಅದನ್ನು ಸರಿಪಡಿಸುವ ಕೆಲಸವನ್ನು ಸರ್ಕಾರವೇ ಏಕಪಕ್ಷೀಯವಾಗಿ ಮಾಡಬಾರದು. ಇದನ್ನು ವಿಷಯ ತಜ್ಞರ ಪರಿಶೀಲನೆಗೆ ಒಪ್ಪಿಸಬೇಕಾಗಿತ್ತು’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೌದ್ಧಧರ್ಮದ ಅಂಶ ತೆಗೆಯುವ ಮೂಲಕ ಬುದ್ಧ ಗುರುವಿಗೆ ಅವಮಾನ ಮಾಡಿರುವುದು ಖಂಡನೀಯ’ ಎಂದರು.

ಆಕ್ಷೇಪಕ್ಕೆ ಕಾರಣವೇನು?

ಯಾಗ, ಯಜ್ಞಗಳ ಹೆಸರಿನಲ್ಲಿ ಕೃಷಿಗೆ ನೆರವಾಗುತ್ತಿದ್ದ ಪ್ರಾಣಿಗಳನ್ನು ಕೊಲ್ಲಲಾಗುತ್ತಿತ್ತಲ್ಲದೆ, ಹಾಲು, ತುಪ್ಪಗಳನ್ನು ‘ಹವಿಸ್ಸು’ ಎಂದು ದಹಿಸಲಾಗುತ್ತಿದ್ದುದರಿಂದ ಆಹಾರದ ಅಭಾವ ಸೃಷ್ಟಿಯಾಗಿತ್ತು. ಸಂಸ್ಕೃತ ಮಂತ್ರಗಳು ಜನಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ. ಸಮಾಜದಲ್ಲಿ ಬ್ರಾಹ್ಮಣರು ಹಲವು ಸವಲತ್ತು ಹೊಂದಿದ್ದರು. ಬ್ರಾಹ್ಮಣರಿಗೆ ಪ್ರತಿಯಾಗಿ ಹೊಸ ಧರ್ಮಗಳ ಉದಯಕ್ಕೆ ಕ್ಷತ್ರಿಯರು ಕಾರಣರಾದರು ಎಂಬ ಅಂಶ ಈ ಅಧ್ಯಾಯದಲ್ಲಿದೆ. ಈ ಅಂಶವನ್ನು ಪಠ್ಯದಿಂದ ತೆಗೆದುಹಾಕಬೇಕು ಎಂದು ಮಂತ್ರಾಲಯದ ಸುಬುಧೇಂದ್ರತೀರ್ಥರು ಸೇರಿದಂತೆ ಹಲವು ಸ್ವಾಮೀಜಿಯವರು ಆಗ್ರಹಿಸಿದ್ದರು. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಭರವಸೆ ನೀಡಿದ್ದರು.

ICICI Bank | Home Loans

ಇದೇ ಸಕಾಲ.

ನಿಮ್ಮ ಕನಸಿನ ಮನೆಯನ್ನು ನನಸಾಗಿಸಿಕೊಳ್ಳಿ.

ಬಡ್ಡಿದರವು RBIಯ Repo Rate ಅನ್ನು ಅವಲಂಬಿಸಿರುತ್ತದೆ

ICICI Bank ಹೋಮ್ ಲೋನ್ಸ್‌ನ ಲಾಭ ಪಡೆಯಿರಿ

ಕೂಡಲೇ ಪಡೆಯಿರಿ ಆನ್‌ಲೈನ್ ಹೋಮ್ ಲೋನ್ ಮಂಜೂರಾತಿ*

ಸ್ಕ್ಯಾನ್ ಮಾಡಿ, 40,000+ ಮಾನ್ಯತೆ ಹೊಂದಿರುವ ಪ್ರೊಜೆಕ್ಟ್‌ಗಳಿಂದ ಆರಿಸಿಕೊಳ್ಳಿರಿ

*ICICI Bankನ ನಿಬಂಧನೆಗಳು ಹಾಗೂ ಷರತ್ತುಗಳು ಅನ್ವಯಿಸುತ್ತವೆ.

ಆನ್‌ಲೈನ್ ಅರ್ಜಿ ಸಲ್ಲಿಸಿರಿ @ loans.icicibank.com

ಮಿಸ್ಡ್ ಕಾಲ್ ಕೊಡಿ : 81008 81008

ಕೇರಳದಿಂದ ಬರುವಾಗ ಕೋವಿಡ್ ಪರೀಕ್ಷೆ ವರದಿ ತರುವುದು ಕಡ್ಡಾಯ

ಮುನ್ನೆಚ್ಚರಿಕೆ ವಹಿಸದಿದ್ದರೆ ಮತ್ತೆ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದಿಂದ ಬೆಂಗಳೂರಿಗೆ ಬರುವ ಪ್ರಯಾಣಿಕರು ಕೋವಿಡ್ ಪರೀಕ್ಷೆ ನಡೆಸಿದ ನೆಗೆಟಿವ್ ವರದಿ ತರುವುದು ಕಡ್ಡಾಯ' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚಾಗುತ್ತಿರುವ ಕೋವಿಡ್ ಪ್ರಕರಣಗಳು ಬೆಂಗಳೂರಿಗೆ ಹಬ್ಬುವುದನ್ನು ತಡೆಯುವ ನಿಟ್ಟಿನಲ್ಲಿ ಪಾಲಿಕೆಯ ಎಲ್ಲ ವಿಶೇಷ ಆಯುಕ್ತರು, ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

'ರೂಪಾಂತರಗೊಂಡಿರುವ ಕೊರೊನಾ ಸೋಂಕು ನೆರೆಯ ರಾಜ್ಯಗಳಲ್ಲಿ ತನ್ನ ಆರ್ಭಟ ತೋರಿಸುತ್ತಿದೆ. ಕೇರಳದಿಂದ ಬಂದವರಿಂದ ಎರಡು ಕಡೆಗಳಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಅದನ್ನು ನಿಯಂತ್ರಣಕ್ಕೆ ತಂದಿದ್ದೇವೆ. ಈಗಲೇ ಎಚ್ಚೆತ್ತುಕೊಳ್ಳದೆ ಇದ್ದರೆ ಮುಂದಿನ ದಿನಗಳಲ್ಲಿ ಮತ್ತೆ ಸಮಸ್ಯೆಗೆ ಸಿಲುಕಿಕೊಳ್ಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಕೇರಳದಿಂದ ಬಂದವರಿಗೆ ಕೋವಿಡ್ ಪರೀಕ್ಷೆ ಆಗಿದೆಯೇ ಎಂಬುದನ್ನು ಪರಿಶೀಲನೆ ನಡೆಸುವುದು ಉದ್ಯೋಗದಾತ ಕಂಪನಿಗಳು ಮತ್ತು ವಾಸವಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಅಥವಾ ಮನೆಗಳ ಮುಖ್ಯಸ್ಥರ ಜವಾಬ್ದಾರಿ. ಕೋವಿಡ್ ಪರೀಕ್ಷೆ ಮಾಡಿಸದೆ ಬಂದವರಿಗೆ ಕರ್ತವ್ಯ ನಿರ್ವಹಿಸಲು ಅಥವಾ ಉಳಿದುಕೊಳ್ಳಲು ಅವಕಾಶ ನೀಡಿದರೆ ಆ ಸಂಸ್ಥೆ ಮುಖ್ಯಸ್ಥರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು' ಎಂದರು.

'ಒಂದು ವೇಳೆ ಪರೀಕ್ಷೆ ಮಾಡಿಸಿಕೊಳ್ಳದೆ ಬಂದರೆ ಅಂತವರನ್ನು ಕ್ವಾರಂಟೈನ್‌ನಲ್ಲಿ ಇಟ್ಟು ಪರೀಕ್ಷೆ ನಡೆಸಲಾಗುವುದು. ಕೋವಿಡ್ ಇಲ್ಲ ಎಂಬುದು ದೃಢವಾದ ಬಳಿಕ ಹೊರಗೆ ಬಿಡಲಾಗುವುದು. ಮಹಾರಾಷ್ಟ್ರದಿಂದ ಸೋಂಕು ಹರಡದಂತೆ ತಡೆಯಲು ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಸದ್ಯದಲ್ಲೇ ಸರ್ಕಾರ ಆದೇಶ ಹೊರಡಿಸಲಿದೆ' ಎಂದು ಹೇಳಿದರು.



'ಮಾಸ್ಕ್ ಧರಿಸಬೇಕು ಮತ್ತು ಅಂತರ ಕಾಪಾಡಬೇಕು ಎಂಬ ನಿಯಮ ಪಾಲಿಸದೆ ಉದಾಸೀನ ತೋರುವ ಜನರಿಗೆ ಮುಲಾಜಿಲ್ಲದೆ ದಂಡ ಹಾಕಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಮಹಾರಾಷ್ಟ್ರದ ಕೆಲ ಜಿಲ್ಲೆಗಳಲ್ಲಿ ಲಾಕ್‌ಡೌನ್ ಇದೆ. ಆ ಪರಿಸ್ಥಿತಿ ನಮಗೂ ಬಾರದಂತೆ ಈಗಲೇ ಎಚ್ಚೆತ್ತುಕೊಳ್ಳಬೇಕು. ಹೀಗಾಗಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ತಾಕೀತು ಮಾಡಿದರು.

'ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜತೆ ಸಂಪರ್ಕ ಇಟ್ಟುಕೊಂಡು ಕೋವಿಡ್ ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮದುವೆ ಸಮಾರಂಭಗಳು, ಸಿನಿಮಾ ಮಂದಿರಗಳಲ್ಲಿ ನಿಯಮ ಪಾಲಿಸಲಾಗುತ್ತಿದೆಯೇ ಎಂಬುದನ್ನು ಆಗಾಗ ಪರಿಶೀಲನೆ ನಡೆಸಬೇಕು' ಎಂದು ಅವರು ಸೂಚನೆ ನೀಡಿದರು.

ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್‌ನಿಂದ ಮೃತಪಟ್ಟವರ ವಿವರವನ್ನು ಅದೇ ದಿನ ಕೊಡಬೇಕು. ಆದರೆ, ಕೆಲ ಆಸ್ಪತ್ರೆಗಳಲ್ಲಿ ತಡವಾಗಿ ಪಾಲಿಕೆಗೆ ವರದಿ ನೀಡುತ್ತಿದ್ದಾರೆ. ಅಂತಹ ಆಸ್ಪತ್ರೆಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಮಾರ್ಚ್‌ನಲ್ಲಿ ಮೂರನೇ ಹಂತದ ಲಸಿಕೆ

ಮೂರನೇ ಹಂತದ ಕೋವಿಡ್ ಲಸಿಕೆ ಅಭಿಯಾನ ಮಾರ್ಚ್‌ನಲ್ಲಿ ಆರಂಭವಾಗಲಿದೆ ಎಂದು ಆಯುಕ್ತರು ಹೇಳಿದರು.

'50 ವರ್ಷಕ್ಕೂ ಮೇಲ್ಪಟ್ಟವರಿಗೆ ಲಸಿಕೆ ಹಾಕಲಾಗುವುದು. ಅದಕ್ಕೂ ಕಡಿಮೆ ವಯಸ್ಸಿನ ಅನ್ಯ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಲಸಿಕೆ ನೀಡಲಾಗುವುದು. ಅವರನ್ನು ಗುರುತಿಸಲು ಸಮೀಕ್ಷೆ ನಡೆಸಲಾಗುವುದು. ಅದಕ್ಕಾಗಿ ಹೊಸ ಆ್ಯಪ್ ಕೂಡ ಅಭಿವೃದ್ಧಿಪಡಿಸಲಾಗಿದೆ' ಎಂದು ಹೇಳಿದರು.

'ಈ ರೀತಿ ಸಮಸ್ಯೆ ಇರುವವರು ಆ್ಯಪ್ ಮೂಲಕ ಸ್ವಯಂ ನೋಂದಣಿ ಮಾಡಿಕೊಳ್ಳಬಹುದು. ಬಿಬಿಎಂಪಿ ಸಿಬ್ಬಂದಿಯೂ ಮನೆ-ಮನೆಗೆ ಭೇಟಿ ನೀಡಿ ಸರ್ವೆ ನಡೆಸಲಿದ್ದಾರೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡದ ಸಮಸ್ಯೆ ಇರುವ ಕೊಳಚೆ ಪ್ರದೇಶದ ನಿವಾಸಿಗಳನ್ನು ಗುರುತಿಸಿ ಆ್ಯಪ್ ಮೂಲಕ ಅಂಕಿ-ಅಂಶ ಸಂಗ್ರಹಿಸಲಾಗುವುದು. ಅಂತವರಿಗೆ ಕೋವಿಡ್ ಲಸಿಕೆ ನೀಡಲಾಗುವುದು. ಸಮೀಕ್ಷೆಗಾಗಿ 2,500 ಟ್ಯಾಬ್‌ಗಳನ್ನು ಸಿಬ್ಬಂದಿಗೆ ವಿತರಿಸಲಾಗುವುದು' ಎಂದು ತಿಳಿಸಿದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,03,236 ಒಟ್ಟು ಸೋಂಕಿತರು

3,94,583 ಗುಣಮುಖರಾದವರು

4,207 ಸಕ್ರಿಯ ಪ್ರಕರಣ

4,445 ಸಾವು

ಶುಕ್ರವಾರದ ಏರಿಕೆ

209 ದೃಢಪಟ್ಟ ಪ್ರಕರಣ

111 ಗುಣಮುಖ | **04** ಸಾವು

'ಪರೀಕ್ಷೆ ಕಡಿಮೆ ಮಾಡಬಾರದು'

'ಕೋವಿಡ್ ಪರೀಕ್ಷೆಯನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. ದಿನಕ್ಕೆ 25 ಸಾವಿರ ಜನರಿಗೆ ಪರೀಕ್ಷೆ ನಡೆಸಲಾಗುತ್ತಿದೆ. ಪರೀಕ್ಷೆಗೆ ನಿಯೋಜಿಸಿಕೊಂಡಿದ್ದ ಸಿಬ್ಬಂದಿಯನ್ನು ಮಾರ್ಚ್ ಅಂತ್ಯದ ತನಕ ಅದೇ ಕೆಲಸದಲ್ಲಿ ಮುಂದುವರಿಸಬೇಕು' ಎಂದು ಮಂಜುನಾಥ ಪ್ರಸಾದ್ ಸೂಚನೆ ನೀಡಿದರು.

ಮಂಜುನಾಥ ಪ್ರಸಾದ್

'ಪ್ರಕರಣಗಳು ಕಡಿಮೆಯಾಗಿದ್ದ ಕಾರಣ ಕೋವಿಡ್ ಪರೀಕ್ಷೆಗೆ ನಿಯೋಜಿಸಿಕೊಂಡಿದ್ದ ಸಿಬ್ಬಂದಿ ಸಂಖ್ಯೆ ಕಡಿಮೆ ಮಾಡಲು ತಿಳಿಸಲಾಗಿತ್ತು. ಈಗ ಪರಿಸ್ಥಿತಿ ಬದಲಾಗಿರುವ ಕಾರಣ ಅವರನ್ನು ಮತ್ತೆ ನಿಯೋಜಿಸಿಕೊಳ್ಳಬೇಕು' ಎಂದು ತಿಳಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಕೋವಿಡ್ ಸದ್ಯಕ್ಕೆ ದೂರವಾಗಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಸದ್ಯಕ್ಕೆ ಮುಕ್ತಿ ದೊರೆಯುವ ಸಾಧ್ಯತೆ ಇಲ್ಲ. ಈ ವರ್ಷದ ಡಿಸೆಂಬರ್‌ವರೆಗೂ ನಾವೆಲ್ಲ ಮುಖಗವಸು ಧರಿಸುವುದು ತಪ್ಪುವುದಿಲ್ಲ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಡಾ.ಎಂ.ಕೆ.ಸುದರ್ಶನ್ ಶುಕ್ರವಾರ ತಿಳಿಸಿದರು.

ಕೋವಿಡ್–19 ಹಿನ್ನೆಲೆಯಲ್ಲಿ ವಿಕೋಪ ಪರಿಸ್ಥಿತಿ ಎದುರಿಸಲು ಬೇಕಾದ ಸಿದ್ಧತೆ ಮತ್ತು ಅದನ್ನು ನಿರ್ವಹಿಸುವುದಕ್ಕೆ ಬೇಕಾದ ಕ್ರಮಗಳ ಕುರಿತು ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಕೋವಿಡ್ ಲಸಿಕೆ ಪಡೆದಾಕ್ಷಣ ಕೊರೊನಾ ವೈರಾಣು ನಮ್ಮ ದೇಹ ಪ್ರವೇಶಿಸುವುದಿಲ್ಲ ಎಂಬ ತಪ್ಪು ಕಲ್ಪನೆ ಅನೇಕರಲ್ಲಿದೆ. ಲಸಿಕೆಯಿಂದ ದೇಹದೊಳಗೆ ರೋಗದ ವಿರುದ್ಧ ಹೋರಾಡುವ ಪ್ರತಿಕಾಯಗಳು ಬೆಳೆಯುತ್ತವೆಯಷ್ಟೇ. ರೋಗಾಣು ಹತ್ತಿಕ್ಕಲು ಅದರಿಂದ ಸಾಧ್ಯವಿಲ್ಲ' ಎಂದರು.

ದಯಾನಂದ ಸಾಗರ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ (ಎಡದಿಂದ) ಎಚ್.ಕೆ.ರಾಮರಾಜು ಮಾತನಾಡಿದರು. ಎಂ.ಕೆ.ಸುದರ್ಶನ್, ಡಾ. ವಿಶ್ವನಾಥ್ ಇದ್ದಾರೆ –ಪ್ರಜಾವಾಣಿ ಚಿತ್ರ

'ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರು ಹಾಗೂ ಪೊಲೀಸ್ ಸಿಬ್ಬಂದಿ ಫೇಸ್‌ಶೀಲ್ಡ್ ಬಳಸುವುದರಲ್ಲಿ ಅರ್ಥವಿದೆ. ಅವರು ಸೋಂಕಿತರೊಂದಿಗೆ ನೇರ ಸಂಪರ್ಕಕ್ಕೆ ಒಳಪಡುತ್ತಾರೆ. ಅವರನ್ನು ಬಿಟ್ಟು ಇತರರೂ ಫೇಸ್‌ಶೀಲ್ಡ್ ಧರಿಸಿ ಓಡಾಡುವುದನ್ನು ನೋಡಿದ್ದೇವೆ. ಅದು ಹಾಸ್ಯಾಸ್ಪದ. ಸಾಮಾನ್ಯ ಜನರು ಕೈಗವಸು ಧರಿಸಬೇಕಾದ ಅಗತ್ಯವೂ ಇಲ್ಲ. ಎಲ್ಲರೂ ಕಡ್ಡಾಯವಾಗಿ ಮುಖಗವಸು ಧರಿಸಿದರೆ ಸಾಕು. ವೈರಾಣುವಿನ ಪಸರಿಸುವಿಕೆ ತಡೆಯಲು ಇದೊಂದೇ ಪರಿಣಾಮಕಾರಿ ಮಾರ್ಗ' ಎಂದು ನುಡಿದರು.

ವಿಚಾರಸಂಕಿರಣದಲ್ಲಿ ವಿ.ಎಸ್.ಪ್ರಕಾಶ್, ಜಿ.ಎನ್.ನಾಗೇಶ್, ಕೆ.ವಿ.ಮಾರುತಿ, ಕೆ.ಆರ್.ಸೂರ್ಯನಾರಾಯಣ, ಭಾರತಿ ಗಣೇಶ್, ಆರ್.ಗುರುಸ್ವಾಮಿ, ಎಂ.ಟಿ.ಪ್ರತಾಪ್ ಕುಮಾರ್ ಮತ್ತು ಎಸ್.ವಿ.ಚಂದ್ರಮೌಳಿ ಉಪನ್ಯಾಸ ನೀಡಿದರು. ದಯಾನಂದ ಸಾಗರ್ ಕಾಲೇಜಿನ ಪ್ರಾಂಶುಪಾಲ ಸಿ.ಪಿ.ಎಸ್.ಪ್ರಕಾಶ್ ಇದ್ದರು.

ಕೋವಿಡ್ ಪತ್ತೆಗೆ ಸಂಚಾರಿ ಲ್ಯಾಬ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಮುಂದೆ ಕೊರೊನಾ ವೈರಾಣುಗಳ ಪತ್ತೆ ಮತ್ತು ಪರೀಕ್ಷೆಗೆ ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳಿಗೆ ಎಡತಾಕುವ ಅಗತ್ಯವಿಲ್ಲ. ಈ ವೈರಾಣುಗಳನ್ನು ಪತ್ತೆ ಮಾಡಬಲ್ಲ ಸಂಚಾರಿ ಪ್ರಯೋಗಾಲಯಗಳು (ಮೊಬೈಲ್ ಲ್ಯಾಬ್) ಮನೆ ಬಾಗಿಲಿಗೇ ಬರಲಿವೆ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಇತರ ಕೆಲವು ಸಂಸ್ಥೆಗಳ ಜತೆಗೂಡಿ ವಿಶಿಷ್ಟ ಸಂಚಾರಿ ಪ್ರಯೋಗಾಲಯವನ್ನು ಅಭಿವೃದ್ಧಿಪಡಿಸಿದೆ. ವಿಶ್ವದಲ್ಲೇ ಈ ರೀತಿಯ ಪ್ರಯೋಗಾಲಯ ಪ್ರಥಮ ಎಂದು ಐಐಎಸ್‌ಸಿ ಹೇಳಿಕೊಂಡಿದೆ.

ಈ ಸಂಚಾರಿ ಪ್ರಯೋಗಾಲಯವು ಬಿಎಸ್‌ಎಲ್–2 + ಮೂಲ ಸೌಕರ್ಯ ಮತ್ತು ಸಾಧನಗಳನ್ನು ಒಳಗೊಂಡಿದೆ. ಮಿನಿ ಸ್ಪಿನ್ಸ್, ವೊರ್ಟೆಕ್ಸ್ ಮಿಕ್ಸರ್, ಸೆಂಟ್ರಿಫ್ಯೂಗ್ ಮುಂತಾದ ಸಾಧನಗಳನ್ನು ಒಳಗೊಂಡಿದೆ. ಅಲ್ಲದೆ, ಆರ್‌ಟಿ–ಪಿಸಿಆರ್ ಪರೀಕ್ಷಾ ಸಾಧನವನ್ನೂ ಹೊಂದಿದೆ. ಕೊರೊನಾ ವೈರಾಣು ಮತ್ತು ಸಾರ್ಸ್ ಸಿಒವಿ–2 ಗಳನ್ನು ತ್ವರಿತವಾಗಿ ಪತ್ತೆ ಮಾಡಲು ಇರುವ ಸುವರ್ಣ ಮಾನದಂಡ ಎಂದೇ ಪರಿಗಣಿಸಲಾಗಿದೆ.

ಸಂಚಾರಿ ಪ್ರಯೋಗಾಲಯ

ಈ ಹಿಂದಿನ ಸಂಚಾರಿ ಪ್ರಯೋಗಾಲಯಕ್ಕಿಂತ ಇದು ಹೆಚ್ಚು ಸುಧಾರಿತವಾದುದು. 20 ಅಡಿಯಷ್ಟು ವಿಸ್ತೀರ್ಣದ ಭಾರತ್ ಬೆನ್ಜ್ ಚಾಸಿಸ್ ಬಳಸಿ ಪ್ರಯೋಗಾಲಯವನ್ನು ನಿರ್ಮಿಸಲಾಗಿದೆ. ಸ್ಯಾಂಪಲ್ ಮತ್ತು ಕಿಟ್‌ಗಳ ಸಂಗ್ರಹ, ಬಯೋ ಮೆಡಿಕಲ್ ತ್ಯಾಜ್ಯ ನಿರ್ವಹಣೆ, ಪ್ರಧಾನ ಮಿಶ್ರಣ ತಯಾರಿಕೆಯಂತಹ (ಮಾಸ್ಟರ್ ಮಿಕ್ಸರ್) ವ್ಯವಸ್ಥೆ ಇದರಲ್ಲಿದೆ.

'ಟಾಟಾ ಮೆಡಿಕಲ್ ಅಂಡ್ ಡಯಾಗ್ನಸ್ಟಿಕ್ ಸಂಸ್ಥೆ' ಇತ್ತೀಚೆಗಷ್ಟೇ ಚಾಲನೆ ನೀಡಿದ ಕೋವಿಡ್ ಪತ್ತೆ ಮಾಡುವ ಫೆಲುಡಾ ಸಾಧನವನ್ನು(ಕಿಟ್) ಬಳಸಿಕೊಂಡು ಸ್ವತಂತ್ರ ಪರೀಕ್ಷಾ ಘಟಕವಾಗಿಯೂ ಕಾರ್ಯ ನಿರ್ವಹಿಸಬಹುದು. ಇದರ ಜತೆಗೆ ಲಸಿಕೆ ನೀಡಿಕೆಯ ಕಾರ್ಯಕ್ಕೂ ಬಳಸಬಹುದಾಗಿದೆ. ಇದಕ್ಕೆ ಮೊಬೈಲ್ ಇನ್‌ಫೆಕ್ಷನ್ ಟೆಸ್ಟಿಂಗ್ ಅಂಡ್ ರಿಪೋರ್ಟಿಂಗ್ ಲ್ಯಾಬ್ (ಎಂಐಟಿಆರ್) ಎಂದು ಹೆಸರಿಸಲಾಗಿದೆ.

ಭಾರತೀಯ ವಿಜ್ಞಾನ ಸಂಸ್ಥೆಯ ಜತೆಗೆ ಶಾನ್‌ಮುಖ್ ಇನ್ನೊವೇಷನ್ಸ್ ನವೋದ್ಯಮ ಸಂಸ್ಥೆ ಈ ಸಂಚಾರಿ ಪ್ರಯೋಗಾಲಯವನ್ನು ಅಭಿವೃದ್ಧಿ ಪಡಿಸಿವೆ. ಇದಕ್ಕೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯೂ ಅನುಮತಿ ನೀಡಿದೆ.

ಮಿತ್ರ ಲ್ಯಾಬ್ಸ್, ಪಾರೆಕ್ಸೆಲ್, ಸ್ಟೇಟ್ ಸ್ಟ್ರೀಟ್, ಯುನೈಟೆಡ್ ವೇ, ಭಾರತ್ ಬೆನ್ಜ್ ಸಂಸ್ಥೆಗಳ ಸಹಯೋಗವಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ತಿಳಿಸಿದೆ.

ವಂಚನೆಯ ಮಾಹಿತಿ ನೀಡಿದ ಕರ್ಣಾಟಕ ಬ್ಯಾಂಕ್

ನವದೆಹಲಿ (ಪಿಟಿಐ): ಐಎಲ್‌ಆ್ಯಂಡ್‌ಎಫ್‌ಎಸ್ ಟ್ರಾನ್ಸ್‌ಪೋರ್ಟೇಷನ್ ನೆಟ್‌ವರ್ಕ್ಸ್‌ಗೆ ನೀಡಿದ್ದ ₹ 34.16 ಕೋಟಿ ಸಾಲದಲ್ಲಿ ವಂಚನೆ ನಡೆದಿದೆ ಎಂದು ಕರ್ಣಾಟಕ ಬ್ಯಾಂಕ್, ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ಮಾಹಿತಿ ನೀಡಿದೆ.

ಐಎಲ್‌ಆ್ಯಂಡ್‌ಎಫ್‌ಎಸ್ ಟ್ರಾನ್ಸ್‌ಪೋರ್ಟೇಷನ್ ನೆಟ್‌ವರ್ಕ್ಸ್ ಕಂಪನಿಯು ಬ್ಯಾಂಕ್‌ನಿಂದ 2016ರಲ್ಲಿ ಸಾಲ ಪಡೆದಿತ್ತು. 2018ರಲ್ಲಿ ಈ ಸಾಲದ ಖಾತೆಯನ್ನು ಎನ್‌ಪಿಎ ಎಂದು ವರ್ಗೀಕರಿಸಲಾಯಿತು. ಈ ಬಗ್ಗೆ ತಾನು ಆರ್‌ಬಿಐಗೆ ಮಾಹಿತಿ ನೀಡಿರುವುದಾಗಿ ಕರ್ಣಾಟಕ ಬ್ಯಾಂಕ್ ಷೇರುಪೇಟೆಗೆ ಮಾಹಿತಿ ನೀಡಿದೆ.

ರಿಲಯನ್ಸ್ ಡಿಜಿಟಲ್‌ನಲ್ಲಿ ಗ್ಯಾಲಕ್ಸಿ ಎಫ್ 62 ಸ್ಮಾರ್ಟ್‌ಫೋನ್

ಬೆಂಗಳೂರು: ಸ್ಯಾಮ್‌ಸಂಗ್ ಕಂಪನಿಯ 'ಗ್ಯಾಲಕ್ಸಿ ಎಫ್ 62' ಹೊಸ ಸ್ಮಾರ್ಟ್‌ಫೋನ್ ರಿಲಯನ್ಸ್ ಡಿಜಿಟಲ್ ಮತ್ತು ಮೈಜಿಯೋ ಸ್ಟೋರ್‌ಗಳಲ್ಲಿ ಸೋಮವಾರದಿಂದ ಲಭ್ಯವಾಗಲಿದೆ.

'ಗ್ಯಾಲಕ್ಸಿ ಎಫ್ 62' ಸ್ಮಾರ್ಟ್‌ಫೋನ್‌ನಲ್ಲಿ 2.73 ಗಿಗಾಹರ್ಟ್ಸ್ ಒಕ್ಟಾ ಕೋರ್ ಪ್ರೊಸೆಸರ್, 128 ಜಿ.ಬಿ. ವಿಸ್ತರಿಸಬಹುದಾದ ಸ್ಟೋರೇಜ್ ಮತ್ತು ಕಲರ್ ಸೂಪರ್ ಅಮೊಲೆಡ್ ಸ್ಕ್ರೀನ್ ಇವೆ. 7,000 ಎಂಎಎಚ್ ಬ್ಯಾಟರಿಯಿಂದಾಗಿ ಇದು ಆಟ ಆಡಲು ಕೂಡ ಅತ್ಯಂತ ಸೂಕ್ತವಾಗಿದೆ ಎಂದು ಕಂಪನಿ ಹೇಳಿದೆ. ₹ 21,499ರಿಂದ ಇದರ ಬೆಲೆ ಆರಂಭವಾಗುತ್ತದೆ.

PUBLIC NOTICE

Public are hereby inform you that my client **M/s DS-Max Properties Pvt. Ltd.**, rep; by its Authorized Signatory, **Sri. Shivashankar Chikkeri**, having its office at # 1854, 17th Main, 30th 'B' Cross, HBR Layout, 1st stage, 5th Block, Bangalore - 560 043, have intend to enter into a **Absolute Sale Deed** with below respective owner/s **Sri. Y. Mallesham** s/o Sri. Y. Ramulu, is the absolute owner of converted land property bearing Sy. No. **15**, which total measuring **1** acre **01** gunta + **2** acres **34** guntas + **04** guntas 'A' Kharab regularized = **3 acres 39 guntas**, situated at **Vaderamanchenahalli Village**, Jigani Hobli, Anekal Taluk, Bangalore District, in vide; Conversion Order dated **08/05/2014**, in Order No. **ALN(AJ):SR:274/2013-14**, for residential purpose, issued by Deputy Commissioner, Bangalore District and bounded on

East by : Konasandra Gadi,
West by : Sy. No. 14,
North by: Old Sy. No. 16/3 (New Sy. No. 16/3, 4, 5, 6 & 7),
South by: Konasandra Gadi,

with **Sri. M. Doraiswamy** s/o Sri. K. Muniswamy and **Sri. K. Muniswamy** s/o. late Kolandai Gounder are the absolute owner/s of converted land property bearing Sy. No. **16/3**, which measuring **1** acre **25** guntas, situated at **Vaderamanchenahalli Village**, Jigani Hobli, Anekal Taluk, Bangalore District, in vide; Conversion Order dated **21/04/2012**, in Order No. **ALN(AJ):SR:218/2011-12**, for residential purpose, issued by Deputy Commissioner, Bangalore District, **Sri. M. Doraiswamy** s/o. Sri. K. Muniswamy is the absolute owner of converted land property bearing Old Sy. No. **16/3**, New Sy. No. **16/4**, which measuring **11** guntas, Old Sy. No. **16/3**, New Sy. No. **16/5**, which measuring **16** guntas, Old Sy. No. **16/3**, New Sy. No. **16/6**, which measuring **08** guntas, **Sri. M. Doraiswamy** s/o. Sri. K. Muniswamy and **Mr. D. Harshraj** s/o Sri. M. Doraiswamy, are the absolute owner/s of converted land property bearing Old Sy. No. **16/3** New Sy. No. **16/7**, which measuring **30** guntas, which total measuring **3 acres 10 guntas**, situated at **Vaderamanchenahalli Village**, Jigani Hobli, Anekal Taluk, Bangalore District, in vide; Conversion Order dated **08/05/2014**, in Order No. **ALN(AJ):SR:275/2013-14**, for residential purpose, issued by Deputy Commissioner, Bangalore District and bounded on

East by : Konasandra Gadi,
West by : Sy. No. 14,
North by : Private Property,
South by : Sy. No. 15,

which total measuring **3** acres **39** guntas + **3** acres **10** guntas = **7 acres 09 guntas**, which is subject matter of property and referred to as **"composite schedule property"** and composite bounded on:

East by : Konasandra Gadi,
West by : Road (Layout Road),
North by : Private Property,
South by : Konasandra Gadi and Private Property.

And further my client have intend to enter into a regd Absolute Sale Deed with above respective owners, if any person or any promoters or any Agreement holders having any asserting right, title, interest and claims to oppose Absolute Sale Deed in favour of my client of the above referred composite schedule property and further any persons or promoters having any manner of right, title, claims etc., and may lodge their objections, claims over the property along with relevant papers in support of their claims, to the below address within **10** days from the date of this notice, if any objections/claims fails to comply within **10** days, my client shall take further steps for entering into a Absolute Sale Deed with above respective owners.

LINGARAJ. S. NADA GOUDA., ADVOCATE
#1854, 17th Main, 30th 'B' Cross
HBR Layout, 1st Stage, 5th Block,
Bangalore - 560 043.
Mob : 96204 74780 , 94481 35970

ಬೆಳೆಗಾರರಿಗೆ ಸ್ಥಳೀಯವಾಗಿ ಮಾರುಕಟ್ಟೆ ಕಲ್ಪಿಸಲು ಮುಂದಾದ ರಾಜ್ಯ ಮಾವು ಅಭಿವೃದ್ಧಿ ನಿಗಮ

ಜಿಲ್ಲಾವಾರು ‘ಮಾವು ಮೇಳ’ಕ್ಕೆ ಚಿಂತನೆ

• ಮನೋಹರ್ ಎಂ.

ಸಾಂದರ್ಭಿಕ ಚಿತ್ರ

ಬೆಂಗಳೂರು: ಮಾವು ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ಹಾಗೂ ಗ್ರಾಹಕರಿಗೆ ಮಾವು ತಲುಪಿಸುವ ಉದ್ದೇಶದಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ‘ಮಾವು ಮೇಳ’ ಆಯೋಜಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿ) ಚಿಂತನೆ ನಡೆಸಿದೆ.

ನಿಗಮವು ಮಾವು ಬೆಳೆಗಾರರಿಗೆ ನೇರ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಪ್ರತಿವರ್ಷ ಮೇ ಅಥವಾ ಜೂನ್ ತಿಂಗಳಿನಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಮಾವು ಮೇಳ ಆಯೋಜಿಸುತ್ತಿತ್ತು. ಈಗ ಬೆಳೆಗಾರರಿಗೆ ಸ್ಥಳೀಯವಾಗಿ ಮಾರುಕಟ್ಟೆ ಕಲ್ಪಿಸಲು ಜಿಲ್ಲಾವಾರು ಮೇಳ ವಿಸ್ತರಿಸಲು ಮುಂದಾಗಿದೆ.

‘ಈ ವರ್ಷ ಹೆಚ್ಚಿನ ಪ್ರಮಾಣದ ಮಾವು ಇಳುವರಿ ನಿರೀಕ್ಷಿಸಿದ್ದೇವೆ. ಮಾವು ಮೇಳದ ಮೂಲಕ ಎಲ್ಲ ಜಿಲ್ಲೆಗಳಲ್ಲಿನ ಮಾವು ಪ್ರಿಯರಿಗೆ ತರಹೇವಾರಿ ಮಾವಿನ ತಳಿಗಳನ್ನು ಪರಿಚಯಿಸುವ ಹಾಗೂ ತಲುಪಿಸುವ ಉದ್ದೇಶ ಹೊಂದಿದ್ದೇವೆ. ಮಾರ್ಚ್ ಕೊನೆಯ ವಾರ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಜಿಲ್ಲಾವಾರು ಮಾವು ಮೇಳ ಆಯೋಜಿಸಲು ಯೋಜನೆ ರೂಪಿಸಿದ್ದೇವೆ’ ಎಂದು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

> **ರಾಜ್ಯದಲ್ಲಿ ಬೆಳೆಯುವ ಮಾವಿಗೆ ಯುರೋಪ್ ಹಾಗೂ ಗಲ್ಫ್ ದೇಶಗಳಿಂದ ಬೇಡಿಕೆ ಹೆಚ್ಚಿದೆ. ಮಾವು ರಫ್ತಿನಲ್ಲೂ ರಾಜ್ಯ ಅಭಿವೃದ್ಧಿ ಕಾಣಲಿದೆ.**
> **ಕೆ.ವಿ.ನಾಗರಾಜ್,** ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ

‘ಜಿಲ್ಲಾ ಮಟ್ಟದಲ್ಲಿ ಮೇಳ ಆಯೋಜನೆಗೆ ನಿಗಮ, ತೋಟಗಾರಿಕೆ ಇಲಾಖೆ ಹಾಗೂ ರೈತ ಉತ್ಪಾದಕ ಸಂಘಗಳು (ಎಫ್‌ಪಿಒ) ಕೈಜೋಡಿಸಲಿವೆ. ಗ್ರಾಹಕರಿಗೆ ಎಲ್ಲ ವಿಧವಾದ ಮಾವಿನ ಹಣ್ಣುಗಳು ಆಯಾ ಜಿಲ್ಲೆಗಳಲ್ಲೇ ಲಭ್ಯವಾಗಲು ಮೇಳ ಸಹಕಾರಿಯಾಗಲಿದೆ. ಮೇಳದಲ್ಲಿ ಮಾವಿನ ಮಾರಾಟ ಹಾಗೂ ಪ್ರದರ್ಶನವೂ ಇರುವುದರಿಂದ ಮಾವು ಪ್ರಿಯರ ಕುತೂಹಲ ಹೆಚ್ಚಲಿದೆ’ ಎಂದರು.

15 ಲಕ್ಷ ಟನ್ ಮಾವು ಇಳುವರಿ ನಿರೀಕ್ಷೆ: ‘ರಾಜ್ಯದಲ್ಲಿ ಮಾವು ಬೆಳೆ ಕುಂಠಿತವಾಗಿದ್ದರಿಂದ ಕಳೆದ ವರ್ಷ 5ರಿಂದ 7 ಲಕ್ಷ ಟನ್‌ಗಳಷ್ಟು ಇಳುವರಿ ಆಗಿತ್ತು. ಲಾಕ್‌ಡೌನ್‌ನಿಂದಲೂ ಮಾವಿಗೆ ಮಾರುಕಟ್ಟೆ ಕೊರತೆ ಎದುರಾಗಿತ್ತು. ಈ ಬಾರಿ ಉತ್ತಮ ಮಳೆ ಹಾಗೂ ರೋಗಗಳ ನಿಯಂತ್ರಣದ ಪರಿಣಾಮವಾಗಿ ಮಾವಿನ ಮರಗಳಲ್ಲಿ ಭಾರಿ ಹೂವುಗಳು ಬಿಟ್ಟಿವೆ. ಹಾಗಾಗಿ, ಈ ವರ್ಷ ಅಂದಾಜು 15 ಲಕ್ಷ ಟನ್‌ಗಳಷ್ಟು ಮಾವು ಇಳುವರಿ ನಿರೀಕ್ಷಿಸಲಾಗಿದೆ’ ಎಂದು ಕೆ.ವಿ.ನಾಗರಾಜ್ ಮಾಹಿತಿ ನೀಡಿದರು.

ಪ್ರಜಾವಾಣಿ ವಿಶೇಷ

‘ರಾಜ್ಯದಲ್ಲಿ 1.62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಧಾರವಾಡ, ಹಾವೇರಿ, ಗದಗ ಹೆಚ್ಚು ಮಾವು ಬೆಳೆಯುವ ಜಿಲ್ಲೆಗಳು. ಮಾವು ಬೆಳೆಯದ ಜಿಲ್ಲೆಗಳಲ್ಲಿ ಮಾವು ಮೇಳಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು’ ಎಂದೂ ಹೇಳಿದರು.

ಆನ್‌ಲೈನ್‌ನಲ್ಲಿ 100 ಟನ್ ಮಾವು ಮಾರಾಟ

‘ರೈತರಿಂದ ಗ್ರಾಹಕರ ಮನೆ ಬಾಗಿಲಿಗೆ ಮಾವು ತಲುಪಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು ‘ಕಾರ್‌ಸಿರಿ ಮ್ಯಾಂಗೋಸ್’ ಎಂಬ ಆನ್‌ಲೈನ್ ಪೋರ್ಟಲ್ ಆರಂಭಿಸಿತ್ತು. ಲಾಕ್‌ಡೌನ್ ಅವಧಿಯಲ್ಲಿ ಅಂಚೆ ಇಲಾಖೆಯ ಸಹಕಾರದಿಂದ 100 ಟನ್‌ಗಳಷ್ಟು ಮಾವಿನ ಹಣ್ಣನ್ನು ಬೆಂಗಳೂರಿನ ಮಾವು ಪ್ರಿಯರಿಗೆ ತಲುಪಿಸಲಾಯಿತು’ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ.ನಾಗರಾಜು ಮಾಹಿತಿ ನೀಡಿದರು.

‘ನಗರದಲ್ಲಿ 36 ಸಾವಿರ ಮಂದಿ ಮಾವು ತರಿಸಿಕೊಂಡಿದ್ದರು. ಒಟ್ಟು 98 ಪಿನ್‌ಕೋಡ್‌ಗಳ ವಿಳಾಸಕ್ಕೆ ವಿವಿಧ ತಳಿಯ ಮಾವು ಪೂರೈಕೆಯಾಗಿತ್ತು. ಪೋರ್ಟಲ್‌ಗೆ ಗ್ರಾಹಕರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಈ ಬಾರಿಯೂ ಆನ್‌ಲೈನ್ ಮಾರಾಟ ಇರಲಿದೆ. ಕೊರೊನಾ ನಿಯಂತ್ರಣಕ್ಕೆ ಬಂದರೆ, ಗ್ರಾಹಕರನ್ನು ಮಾವಿನ ತೋಟಗಳಿಗೆ ಕರೆದೊಯ್ಯುವ ‘ಮಾವು ಪ್ರವಾಸ’ ಏರ್ಪಡಿಸಲಾಗುವುದು’ ಎಂದರು.

ಬಜೆಟ್‌ನಲ್ಲಿ ₹20 ಕೋಟಿಗೆ ಬೇಡಿಕೆ

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮಾವು ಮೇಳ ಆಯೋಜನೆ ಹಾಗೂ ಮಾವು ಬೆಳೆಗಾರರಿಗೆ ವಿವಿಧ ಮಾರ್ಗಗಳಲ್ಲಿ ಪ್ರೋತ್ಸಾಹ ನೀಡುವ ಸಲುವಾಗಿ ಈ ಬಜೆಟ್‌ನಲ್ಲಿ ನಿಗಮಕ್ಕೆ ₹20 ಕೋಟಿ ಅನುದಾನ ಮೀಸಲು ಇಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜ್ ತಿಳಿಸಿದರು.

‘ಮಾವನ್ನು ನೈಸರ್ಗಿಕವಾಗಿ ಹಣ್ಣು ಮಾಡುವ ವಿಧಾನದ ತರಬೇತಿ ಹಾಗೂ ಅದಕ್ಕೆ ಬೇಕಾಗುವ ಪರಿಕರಗಳನ್ನು ರಿಯಾಯಿತಿಯಲ್ಲಿ ನೀಡುವುದು ಸೇರಿದಂತೆ ನಿಗಮವು ಬೆಳೆಗಾರರಿಗಾಗಿ ಹಲವು ಯೋಜನೆಗಳನ್ನು ರೂಪಿಸಿದೆ. ಅನುದಾನ ಬಂದ ನಂತರ ಯೋಜನೆಗಳೆಲ್ಲ ಕಾರ್ಯರೂಪಕ್ಕೆ ಬರಲಿವೆ’ ಎಂದರು.

ತೀವ್ರವಾಗಿ ಏರುತ್ತಿರುವ ಇಂಧನ ಬೆಲೆ!

ನಾಳೆ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಎರಡನೇ ಕನ್ನಡ ಸಾಹಿತ್ಯ ಸಮ್ಮೇಳನ ರಾಜರಾಜೇಶ್ವರಿ ವಿದ್ಯಾ ಶಾಲಾ ಆವರಣದಲ್ಲಿ ಫೆಬ್ರುವರಿ 21ರಂದು ನಡೆಯಲಿದೆ ಎಂದು ಕಸಾಪ ರಾಜರಾಜೇಶ್ವರಿನಗರ ಕ್ಷೇತ್ರ ಘಟಕದ ಅಧ್ಯಕ್ಷ ನಾಗೇಂದ್ರ ಕುಮಾರ್ ಕೆ.ಎನ್. ತಿಳಿಸಿದರು.

ಬೆಳಿಗ್ಗೆ 8.30ಕ್ಕೆ ಶಾಸಕ ಮುನಿರತ್ನ ರಾಷ್ಟ್ರಧ್ವಜ, ಹಿರಿಯ ಸಾಹಿತಿ ಗೊ.ರು. ಚನ್ನಬಸಪ್ಪ ನಾಡಧ್ವಜ, ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ ಪರಿಷತ್ತಿನ ಧ್ವಜಾರೋಹಣ ನೆರವೇರಿಸುವರು.

ಸಮ್ಮೇಳನಾಧ್ಯಕ್ಷರನ್ನಾಗಿ ಪ್ರೊ. ನಾರಾಯಣ ಘಟ್ಟ(ನಾಹೋ) ಆಯ್ಕೆಯಾಗಿದ್ದಾರೆ. ಬೆಳಿಗ್ಗೆ 10.30ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ ಚಾಲನೆ ನೀಡುವರು. ವಿಮರ್ಶಕ ಡಾ.ಬೈಲಮಂಗಲ ರಾಮೇಗೌಡ ಪುಸ್ತಕ ಮಳಿಗೆ ಉದ್ಘಾಟಿಸುವರು. ಸಮ್ಮೇಳನವನ್ನು ಕವಿ ದೊಡ್ಡರಂಗೇಗೌಡ ಉದ್ಘಾಟಿಸಲಿದ್ದು, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಕರಿಗೌಡ ಬೀಚನಹಳ್ಳಿ ಧ್ವಜ ಹಸ್ತಾಂತರ ಮಾಡುವರು.

ಕವಿಗೋಷ್ಠಿಯಲ್ಲಿ ಪ್ರೊ.ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸುವರು. ಲಲಿತಾ ಹೊಸಪ್ಯಾಟಿ ಅಧ್ಯಕ್ಷತೆಯಲ್ಲಿ ವಿಚಾರಗೋಷ್ಠಿ ನಡೆಯಲಿದೆ. ಸಮಾರೋಪ ಸಮಾರಂಭದಲ್ಲಿ ಸಂಸದ ಡಿ.ಕೆ.ಸುರೇಶ್, ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯ, ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಡಾ.ಸಿದ್ದಲಿಂಗಯ್ಯ ಸಮಾರೋಪ ಭಾಷಣ ಮಾಡುವರು.

ಉಗ್ರಾಣ ನಿಗಮದ ನೂತನ ಆಡಳಿತ ಕಟ್ಟಡ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಉಗ್ರಾಣ ಭವನವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಗುರುವಾರ ಉದ್ಘಾಟಿಸಿದರು. ನಿಗಮದ ಅಧ್ಯಕ್ಷ ಯು.ಬಿ. ಬಣಕಾರ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಪಾಲ್ಗೊಂಡಿದ್ದರು

ಬೆಂಗಳೂರು: ನಗರದ ಪ್ರೈಂ ರೋಸ್ ರಸ್ತೆಯಲ್ಲಿ ನಿರ್ಮಿಸಿರುವ ರಾಜ್ಯ ಉಗ್ರಾಣ ನಿಗಮದ ನೂತನ ಆಡಳಿತ ಕಚೇರಿಯ ಕಟ್ಟಡ ‘ಉಗ್ರಾಣ ಭವನ’ವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಉದ್ಘಾಟಿಸಿದರು.

ಉಗ್ರಾಣ ನಿಗಮವರು ಪ್ರೈಂ ರೋಸ್ ರಸ್ತೆಯಲ್ಲಿ ನಾಲ್ಕು ಎಕರೆ ಜಮೀನು ಹೊಂದಿದೆ. ಅಲ್ಲಿ ಇದ್ದ 50 ವರ್ಷಗಳ ಹಳೆಯ ಕಟ್ಟಡವನ್ನು ನೆಲಸಮಗೊಳಿಸಿ, ₹ 3.76 ಕೋಟಿ ವೆಚ್ಚದಲ್ಲಿ ನೂತನ ಉಗ್ರಾಣ ಭವನ ನಿರ್ಮಿಸಲಾಗಿದೆ. ನಾಲ್ಕು ಮಹಡಿಗಳ ಹೊಸ ಕಟ್ಟಡ 12,000 ಚದರ ಅಡಿ ವಿಸ್ತೀರ್ಣ ಹೊಂದಿದೆ. ನಿಗಮದ ಕೇಂದ್ರ ಕಚೇರಿ ಹೊಸ ಕಟ್ಟಡದಿಂದಲೇ ಕಾರ್ಯನಿರ್ವಹಿಸಲಿದೆ.

ಸಮಾರಂಭದಲ್ಲಿ ಮಾತನಾಡಿದ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ‘ರಾಜ್ಯ ಉಗ್ರಾಣ ನಿಗಮವು ಸಹಕಾರ ಇಲಾಖೆಯ ಅಧೀನದ ಸಂಸ್ಥೆಯಾಗಿದೆ. ದರ ಕುಸಿತದ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಲು ರಿಯಾಯತಿ ದರದಲ್ಲಿ ಸ್ಥಳಾವಕಾಶ ಕಲ್ಪಿಸುತ್ತಿರುವ ನಿಗಮವು, ರೈತರಿಗೆ ಆರ್ಥಿಕವಾಗಿ ಶಕ್ತಿ ತುಂಬುತ್ತಿದೆ’ ಎಂದರು.

ರಾಜ್ಯದಾದ್ಯಂತ ಇರುವ ನಿಗಮದ ಉಗ್ರಾಣಗಳಲ್ಲಿ ಕಂಪ್ಯೂಟರೀಕೃತ ಆಡಳಿತ ನಿರ್ವಹಣೆ ವ್ಯವಸ್ಥೆ ಜಾರಿಗೆ ತರಲಾಗಿದೆ. ಸಾಮಾನ್ಯ ವರ್ಗದ ರೈತರಿಗೆ ಶೇಕಡ 20ರಷ್ಟು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ರೈತರಿಗೆ ಶೇ 25ರಷ್ಟು ರಿಯಾಯತಿ ನೀಡಲಾಗುತ್ತಿದೆ ಎಂದು ಹೇಳಿದರು.

ರಾಜ್ಯ ಸರ್ಕಾರವು ರೈತರಿಂದ ಬೆಂಬಲ ಬೆಲೆ ಭತ್ತ, ರಾಗಿ, ಬಿಳಿಜೋಳ, ತೊಗರಿ, ಕಡಲೆ, ಹೆಸರು ಮತ್ತಿತರ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತಿದೆ. ಆ ಎಲ್ಲ ಉತ್ಪನ್ನಗಳನ್ನೂ ಉಗ್ರಾಣ ನಿಗಮದ ಗೋದಾಮುಗಳಲ್ಲೇ ದಾಸ್ತಾನು ಮಾಡಲಾಗುತ್ತಿದೆ ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕೃಷಿ ಸಚಿವ ಬಿ.ಸಿ. ಪಾಟೀಲ, ಉಗ್ರಾಣ ನಿಗಮ ಅಧ್ಯಕ್ಷ ಯು.ಬಿ. ಬಣಕಾರ, ವ್ಯವಸ್ಥಾಪಕ ನಿರ್ದೇಶಕ ರಿಚರ್ಡ್ ವಿನ್ಸೆಂಟ್ ಡಿಸೋಜ ಉಪಸ್ಥಿತರಿದ್ದರು.

ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ ಹಾಗೂ ನೆಮ್ಮದಿ ಯೋಗ ಕೇಂದ್ರವು ನಗರದಲ್ಲಿ ಶುಕ್ರವಾರ ಆಯೋಜಿಸಿದ ಸಾಮೂಹಿಕ 108 ಸೂರ್ಯ ನಮಸ್ಕಾರ ಯಜ್ಞ ‘ಸೂರ್ಯ ಥಾನ್’ಗೆ ಅಬಕಾರಿ ಸಚಿವ ಕೆ. ಗೋಪಾಲಯ್ಯ ಚಾಲನೆ ನೀಡಿದರು. ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ನೆ.ಲ.ನರೇಂದ್ರ ಬಾಬು, ಹೇಮಲತಾ ಗೋಪಾಲಯ್ಯ, ಮಹಾಲಕ್ಷ್ಮೀ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎನ್. ಜಯರಾಮ್, ವೆಂಕಟೇಶಮೂರ್ತಿ, ಯೋಗ ಗುರು ಮುಕುಂದ ರಾವ್ ಇದ್ದರು.

ಸಂಕ್ಷಿಪ್ತ ಸುದ್ದಿ

ಇದೇ 27ರಂದು ರಂಗೋಲಿ ಸ್ಪರ್ಧೆ

ಬೆಂಗಳೂರು: ಹೃದಯವಾಹಿನಿ ಮಂಗಳೂರು ಮತ್ತು ಎಂಟರ್‌ಪ್ರೈಸಸ್ ಬೆಂಗಳೂರು ಸಹಯೋಗದಲ್ಲಿ ಇದೇ 27ರಂದು ರಾಷ್ಟ್ರೀಯ ಕನ್ನಡ ಸಂಸ್ಕೃತಿ ಸಮ್ಮೇಳನ ಆಯೋಜಿಸಲಾಗಿದೆ.

ಇದರ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 9ರಿಂದ 10ರವರೆಗೆ ರಂಗೋಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. 16ರಿಂದ 60 ವರ್ಷದೊಳಗಿನ ಯುವತಿಯರು ಹಾಗೂ ಮಹಿಳೆಯರು ಇದರಲ್ಲಿ ಪಾಲ್ಗೊಳ್ಳಬಹುದು. ಆಸಕ್ತರು ಇದೇ 25ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗೆ 9886510087 ಗೆ ಸಂಪರ್ಕಿಸಬಹುದು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವ ನಗರದ ವಿವಿಧ ಪ್ರದೇಶಗಳಲ್ಲಿ ಶನಿವಾರ (ಫೆ.20) ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಾವೇರಿನಗರ, ಅಯ್ಯಪ್ಪನಗರ 1ನೇ ಬ್ಲಾಕ್ ಇಂದ 4ನೇ ಬ್ಲಾಕ್, ಸ್ವತಂತ್ರ ಪಾಳ್ಯ, ಚಿಕ್ಕದೇವಸಂದ್ರ, ಗ್ರಾಫೈಟ್ ರಸ್ತೆ, ಎಲ್ ಆ್ಯಂಡ್ ಟಿ, ಜೆನಿಸಿನ್, ಮಣಿಪಾಲ್ ಆಸ್ಪತ್ರೆ, ಶಾಂತಿನಿಕೇತನ್ ಅಪಾರ್ಟ್‌ಮೆಂಟ್, ಆರ್.ಎಚ್.ಬಿ ಕಾಲೊನಿ, ಜಿ.ಸಿ ಪಾಳ್ಯ, ಹೂಡಿಮುಖ್ಯ ರಸ್ತೆ, ರಾಜಪಾಳ್ಯ, ಕನ್ಯಾಕುಮಾರಿ ಸಾಫ್ಟ್‌ವೇರ್, ಎಬಿಬಿ ಟೆಕ್ ಪಾರ್ಕ್, ಫೀನಿಕ್ಸ್ ಮಾಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅಂಬಯ್ಯ ನುಲಿಗೆ ‘ಶಿವಲಿಂಗ ಪ್ರಶಸ್ತಿ’

ಬೆಂಗಳೂರು: ವಚನಜ್ಯೋತಿ ಬಳಗವು ನೀಡುವ ‘ಶಿವಲಿಂಗ ಪ್ರಶಸ್ತಿ’ಗೆ ಅಂಬಯ್ಯ ನುಲಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಸೋಮವಾರ (ಫೆ.22) ಸಂಜೆ 5 ಗಂಟೆಗೆ ಸಂಸ ರಂಗ ಬಯಲು ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಸ್ಕಾಂ–ಗ್ರಾಹಕ ಸಂವಾದ ಇಂದು

ಬೆಂಗಳೂರು: ಪ್ರತಿ ತಿಂಗಳು ಮೂರನೇ ಶನಿವಾರ ಗ್ರಾಹಕರೊಂದಿಗೆ ಸಂವಾದ ಸಭೆ ನಡೆಸಲು ಬೆಸ್ಕಾಂ ಮುಂದಾಗಿದೆ. ಈ ಬಾರಿಯ ಸಭೆ 20ರಂದು ಹಮ್ಮಿಕೊಳ್ಳಲಾಗಿದ್ದು, ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ ನಡೆಯಲಿದೆ ಎಂದು ಅದು ಹೇಳಿದೆ.

ಬೆಸ್ಕಾಂ ಎಲ್ಲ ಉಪವಿಭಾಗಗಳಲ್ಲಿ ಈ ಸಂವಾದ ಸಭೆ ನಡೆಯಲಿದ್ದು, ವಿದ್ಯುತ್ ಪೂರೈಕೆ ಸಂಬಂಧಿಸಿದ ದೂರುಗಳನ್ನು ನೇರವಾಗಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬಹುದು ಎಂದು ಬೆಸ್ಕಾಂ ಹೇಳಿದೆ.

‘ಜನವಿರೋಧಿ ನೀತಿ: ಸರ್ಕಾರಗಳ ವಿರುದ್ಧ ಹೋರಾಟ ಅನಿವಾರ್ಯ’

ಬೆಂಗಳೂರು:‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳಿಂದ ಜನರು ತತ್ತರಿಸಿದ್ದಾರೆ. ಇವುಗಳ ವಿರುದ್ಧ ಬೃಹತ್ ಹೋರಾಟಕ್ಕೆ ಸಜ್ಜಾಗಬೇಕಿದೆ’ ಎಂದು ಸಾಮಾಜಿಕ ಅಭಿವೃದ್ಧಿ ರಂಗದ ಸಂಸ್ಥಾಪಕ ಅಧ್ಯಕ್ಷ ಟಿ.ಎಲ್.ರಂಗನಾಥ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,‘ದೇಶದಾದ್ಯಂತ ಬೆಲೆ ಏರಿಕೆ, ಅವೈಜ್ಞಾನಿಕ ಟೋಲ್ ಶುಲ್ಕ, ಜಿಎಸ್‌ಟಿ ಹಾಗೂ ದಂಡಗಳಿಂದ ಜನರ ಮೇಲೆ ಹೊರೆ ಬಿದ್ದಿದೆ. ಲಾಕ್‌ಡೌನ್‌ನಿಂದ ಲಕ್ಷಾಂತರ ಜನ ನಿರುದ್ಯೋಗಿಗಳಾದರು. ಈಗ ಮತ್ತೆ ಅಗತ್ಯ ವಸ್ತುಗಳ ಬೆಲೆ ಏರಿಸಿ, ಗಾಯದ ಮೇಲೆ ಬರೆ ಎಳೆದಿದೆ’ ಎಂದು ದೂರಿದರು.

‘ಇಂತಹ ಜನವಿರೋಧಿ ನೀತಿಗಳನ್ನು ತರುತ್ತಿರುವ ಸರ್ಕಾರಗಳ ವಿರುದ್ಧ ಹೋರಾಡಲು ರಾಜ್ಯದಾದ್ಯಂತ ಪ್ರವಾಸ ಕೈಗೊಂಡು, ಹೋರಾಟದ ರೂಪರೇಷೆ ಸಿದ್ಧಗೊಳಿಸಲಾಗುವುದು’ ಎಂದರು.



ರೈತ ಚಳವಳಿ: ಎರಡು ಪುಸ್ತಕ ಬಿಡುಗಡೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ. ಷರೀಫಾ ಮತ್ತು ಯಮುನಾ ಗಾಂವ್ಕರ್ ಸಂಪಾದಿಸಿದ ‘ಹೊನ್ನಾರು’ ಕವನ ಸಂಕಲನ ಹಾಗೂ ಎಚ್. ಆರ್. ನವೀನ್ ಕುಮಾರ್ ಅವರ ‘ಕದನ ಕಣ’ ಕೃತಿಯು ಶನಿವಾರ ಸಂಜೆ 5 ಗಂಟೆಗೆ ಆನ್‌ಲೈನ್‌ನಲ್ಲಿ ಬಿಡುಗಡೆಯಾಗಲಿದೆ.

ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಕಾಯ್ದೆಯನ್ನು ವಿರೋಧಿಸಿ ದೆಹಲಿಯಲ್ಲಿ ರೈತರು ನಡೆಸುತ್ತಿರುವ ಚಳವಳಿ ಮೇಲೆ ಈ ಕೃತಿಗಳು ಕೇಂದ್ರೀಕೃತವಾಗಿವೆ.

‘ಹೊನ್ನಾರು’ ಕವನ ಸಂಕಲನದಲ್ಲಿ ಕನ್ನಡದ ಹಿರಿಯ ಲೇಖಕರ ಕವಿತೆಗಳು, ಹೋರಾಟಗಾರರ ಹಾಡುಗಳು ಮತ್ತು ಹೊಸ ಕವಿಗಳ ಹೊಸ ಭಾವಗಳಿವೆ. ‘ಕದನ ಕಣ’ ಕೃತಿಯು ಸಚಿತ್ರ ಅನುಭವ ಕಥನ. ದೆಹಲಿಯಿಂದ ಭೌಗೋಳಿಕವಾಗಿ ಸಾಕಷ್ಟು ದೂರದಲ್ಲಿರುವ ಕರ್ನಾಟಕವು ರೈತ ಚಳವಳಿಗೆ ಗಂಭೀರವಾಗಿ ಸ್ಪಂದಿಸುತ್ತಿರುವುದು ಕುತೂಹಲದ ಸಂಗತಿ ಎಂದು ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮದ ಲಿಂಕ್: https://us02web.zoom.us/j/87675570684

ನ್ಯಾಯಕ್ಕಾಗಿ ಕಣ್ವ ಠೇವಣಿದಾರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಣ್ವ ಸಮೂಹ ಸಂಸ್ಥೆಯವರು ಹೆಚ್ಚಿನ ಬಡ್ಡಿ ನೀಡುವುದಾಗಿ ನಂಬಿಸಿ, ಠೇವಣಿದಾರರ ₹650 ಕೋಟಿ ಲೂಟಿ ಮಾಡಿ ತಲೆ ಮರೆಸಿಕೊಂಡಿದ್ದು, ನ್ಯಾಯ ದೊರಕಿಸಿಕೊಡಬೇಕು’ ಎಂದು ಶ್ರೀ ಕಣ್ವ ಸೌಹಾರ್ದ ಠೇವಣಿದಾರರ ಕಲ್ಯಾಣ ಸಂಘದ ಅಧ್ಯಕ್ಷ ನಾರಾಯಣ ಗೌಡ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಠೇವಣಿದಾರರು ವಂಚನೆ ಸಂಬಂಧ ಹಲವು ಠಾಣೆಗಳಲ್ಲಿ ದೂರು ನೀಡಿದರೂ ನ್ಯಾಯ ಸಿಗಲಿಲ್ಲ. ಹಣ ಕಳೆದುಕೊಂಡವರ ಜೀವನ ದುಸ್ತರವಾಗಿದೆ. ಈ ಹಗರಣ ಕುರಿತು ಉನ್ನತ ಮಟ್ಟದ ತನಿಖೆ ನಡೆಯಬೇಕು’ ಎಂದು ಒತ್ತಾಯಿಸಿದರು.

‘ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪಕರು, ಏಜೆಂಟರು ಮತ್ತು ಸಿಬ್ಬಂದಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಂಡು, ಠೇವಣಿದಾರರಿಗೆ ನ್ಯಾಯ ನೀಡಬೇಕು’ ಎಂದು ಮನವಿ ಮಾಡಿದರು.

ತುರಹಳ್ಳಿ ಕಿರು ಅರಣ್ಯ ಪ್ರದೇಶಕ್ಕೆ ಬೆಂಕಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಇಲ್ಲಿನ ತುರಹಳ್ಳಿ ಕಿರು ಅರಣ್ಯ ಪ್ರದೇಶಕ್ಕೆ ಬೆಂಕಿ ತಗುಲಿ ಸುಮಾರು 4 ಎಕರೆ ಅರಣ್ಯ ಪ್ರದೇಶ ಅಗ್ನಿಗೆ ಆಹುತಿಯಾಗಿದೆ.

ಗಾಣಿಗರಪಾಳ್ಯದ ಬಳಿಯಿರುವ ಶನಿ ದೇವಾಲಯದ ಹಿಂದಿರುವ ತುರಹಳ್ಳಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಈ ಘಟನೆಯಿಂದ ಅಲ್ಲಿನ ಯಾವುದೇ ಪ್ರಾಣಿಗಳಿಗೆ ಹಾನಿಯಾಗಿಲ್ಲ ಎಂದು ಕಗ್ಗಲೀಪುರ ಅರಣ್ಯ ವಲಯಾಧಿಕಾರಿ ಗೋಪಾಲ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಗಲಭೆ: ನಷ್ಟ ಪರಿಹಾರ ಕೋರಲು ಮುಂದಾದ ಅಖಂಡ ಶ್ರೀನಿವಾಸಮೂರ್ತಿ

ಪರಿಹಾರ ಕೋರಿದವರು ಮೂರೇ ಮಂದಿ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2020ರ ಆಗಸ್ಟ್ 11ರಂದು ನಡೆದ ಗಲಭೆಯಲ್ಲಿ ಹಾನಿಗೀಡಾದ ಆಸ್ತಿಗಳು
- ಆಸ್ತಿ ನಷ್ಟಕ್ಕೆ ಸಂಬಂಧಿಸಿ ಪೊಲೀಸ್ ಠಾಣೆಗಳಲ್ಲಿ 50 ಪ್ರಕರಣಗಳು ದಾಖಲಾಗಿವೆ
- ಅರ್ಜಿ ಸಲ್ಲಿಕೆಯಾದ ಬಳಿಕ ಮತ್ತೊಮ್ಮೆ ಸ್ಥಳಕ್ಕೆ ಭೇಟಿ

ಬೆಂಗಳೂರು: ನಗರದ ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ 2020ರ ಆಗಸ್ಟ್ 11ರಂದು ನಡೆದ ಗಲಭೆಯಲ್ಲಿ ಹಾನಿಗೀಡಾದ ಆಸ್ತಿಗಳ ಮಾಲೀಕರ ಪೈಕಿ ಮೂರು ಮಂದಿ ಮಾತ್ರ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದು ಘಟನೆಯ ಕ್ಲೇಮ್ ಕಮಿಷನರ್ ಆಗಿರುವ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೈಕೋರ್ಟ್ ಆದೇಶದಂತೆ ಕ್ಲೇಮ್ ಕಮಿಷನರ್ ನೇಮಕ ಮಾಡಲಾಗಿದೆ. ಜನವರಿ 21ರಿಂದ ಬಾಲಬ್ರೂಯಿ ಅತಿಥಿ ಗೃಹದಲ್ಲಿ ನಮ್ಮ ಕಚೇರಿ ಕೆಲಸ ಮಾಡುತ್ತಿದೆ. ಫೆಬ್ರುವರಿ 28ರವರೆಗೂ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಈವರೆಗೆ ಮೂರು ಅರ್ಜಿಗಳು ಮಾತ್ರ ಬಂದಿವೆ' ಎಂದರು.

ಮಾಹಿತಿ ಕೊರತೆ ಅಥವಾ ಬೇರೆ ಕಾರಣಗಳಿಂದ ಜನರು ಅರ್ಜಿ ಸಲ್ಲಿಸದೇ ಇರಬಹುದು. ಘಟನೆಯಲ್ಲಿ ಆಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗಳಲ್ಲಿ 50 ಪ್ರಕರಣಗಳು ದಾಖಲಾಗಿವೆ. ಅಂತಹ ಎಲ್ಲರೂ ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಗಲಭೆಯಲ್ಲಿ ತೊಂದರೆಗೊಳಗಾದ ಸ್ಥಳೀಯ ಶಾಸಕ ಅಖಂಡ ಶ್ರೀನಿವಾಸಮೂರ್ತಿ ತಮ್ಮನ್ನು ಭೇಟಿಮಾಡಿದ್ದು, ನಷ್ಟ ಪರಿಹಾರ ಕೋರಿ ಅರ್ಜಿ ಸಲ್ಲಿಸುವುದಾಗಿ ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಅರ್ಜಿ ಸಲ್ಲಿಕೆಗೆ ನೀಡಿರುವ ಕಾಲಾವಕಾಶವನ್ನು ವಿಸ್ತರಿಸಲಾಗುವುದು. ಪೊಲೀಸ್ ಠಾಣೆಗಳಲ್ಲೂ ಸಭೆ ನಡೆಸಿ ಜನರಿಗೆ ಮಾಹಿತಿ ನೀಡಲಾಗುವುದು. ಪೊಲೀಸ್ ಠಾಣೆಗಳಲ್ಲಿ ಲಭ್ಯವಿರುವ ದಾಖಲೆಗಳನ್ನೂ ವಿಚಾರಣೆ ವೇಳೆ ಆಧಾರವಾಗಿ ಬಳಸಿಕೊಳ್ಳಲಾಗುವುದು. ಈಗಾಗಲೇ ಒಮ್ಮೆ ಸ್ಥಳ ಪರಿಶೀಲನೆ ನಡೆಸಲಾಗಿದೆ. ಅರ್ಜಿ ಸಲ್ಲಿಕೆಯಾದ ಬಳಿಕ ಮತ್ತೊಮ್ಮೆ ಸ್ಥಳಕ್ಕೆ ಭೇಟಿ ನೀಡಲಾಗುವುದು ಎಂದರು.

ಅರ್ಜಿಯೊಂದಿಗೆ ನಷ್ಟಕ್ಕೀಡಾಗಿರುವ ಆಸ್ತಿಗೆ ಸಂಬಂಧಿಸಿದ ದಾಖಲೆ, ಆಸ್ತಿ ನಷ್ಟವಾಗಿರುವ ಕುರಿತು ಪೊಲೀಸ್ ಠಾಣೆಗೆ ದೂರು ನೀಡಿದ್ದಲ್ಲಿ ಎಫ್‌ಐಆರ್ ಪ್ರತಿ, ವಿಡಿಯೊ ತುಣುಕು ಸೇರಿದಂತೆ ಹಲವು ದಾಖಲೆಗಳನ್ನು ಸಲ್ಲಿಸಬೇಕು. ಆ ಬಳಿಕ ನಷ್ಟಕ್ಕೀಡಾದ ಆಸ್ತಿಗಳ ಮೌಲ್ಯಮಾಪನ ನಡೆಸಿ ಹೈಕೋರ್ಟ್‌ಗೆ ವರದಿ ಸಲ್ಲಿಸಲಾಗುವುದು. ಅದನ್ನು ಆಧರಿಸಿ ಗಲಭೆಗೆ ಕಾರಣವಾದ ವ್ಯಕ್ತಿ ಅಥವಾ ಸಂಘಟನೆಗಳಿಂದ ನಷ್ಟ ವಸೂಲಿಗೆ ನ್ಯಾಯಾಲಯ ಆದೇಶ ಹೊರಡಿಸಲಿದೆ ಎಂದು ಕೆಂಪಣ್ಣ ತಿಳಿಸಿದರು.

ಕಚೇರಿಗೆ 17 ಸಿಬ್ಬಂದಿಯನ್ನು ಒದಗಿಸಲಾಗಿದೆ. ಆಸ್ತಿಗಳ ಮೌಲ್ಯಮಾಪನಕ್ಕೆ ಅಗತ್ಯವಿರುವ ಮೌಲ್ಯಮಾಪಕರ ನೇಮಕಕ್ಕೆ ನಂತರದಲ್ಲಿ ಪ್ರಸ್ತಾವ ಸಲ್ಲಿಸಲಾಗುವುದು ಎಂದರು.

ಸುದ್ದಿ 2 ನಿಮಿಷ

ಹನಿಯೂರು: ಜಿಲ್ಲಾಧಿಕಾರಿಗಳಿಂದ ಇಂದು ಗ್ರಾಮವಾಸ್ತವ್ಯ

ಯಲಹಂಕ: ಹೆಸರಘಟ್ಟ ಹೋಬಳಿ ಹನಿಯೂರು ಗ್ರಾಮದಲ್ಲಿ ಫೆಬ್ರುವರಿ 20ರಂದು (ಶನಿವಾರ) ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ನೇತೃತ್ವದಲ್ಲಿ ಗ್ರಾಮವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಕೆ.ನರಸಿಂಹಮೂರ್ತಿ ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ಗ್ರಾಮದ ಕುಂದುಕೊರತೆಗಳ ಬಗ್ಗೆ ಪರಿಶೀಲಿಸಲು ಮತ್ತು ಸರ್ಕಾರದ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಿಳಿಸುವುದು ಕಾರ್ಯಕ್ರಮದ ಉದ್ದೇಶ. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದರು.

ಗ್ರಾಮದಲ್ಲಿ ಸಸಿನೆಡುವುದರ ಜೊತೆಗೆ ಕೆರೆ, ಸ್ಮಶಾನ ಮತ್ತು ಗುಂಡುತೋಪು ಒತ್ತುವರಿ ತೆರವು ಹಾಗೂ ಕೆರೆ ಹೂಳುತೆಗೆಯುವ ಕಾರ್ಯಾಚರಣೆ ನಡೆಸಲಾಗುವುದು. ಅಲ್ಲದೆ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸವಲತ್ತುಗಳನ್ನು ವಿತರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಪತ್ರಕರ್ತೆಯರಿಗೆ ನೆರವಾದ ಸೆಲ್ಕೊ

ಬೆಂಗಳೂರು: ಕೋವಿಡ್‌ನಿಂದ ಆರ್ಥಿಕ ಸಂಕಷ್ಟದಲ್ಲಿದ್ದ ಪತ್ರಕರ್ತೆಯರಿಗೆ ಸೆಲ್ಕೊ ಸಂಸ್ಥೆಯು ರೊಟ್ಟಿ ತಯಾರಿಸುವ ಯಂತ್ರವನ್ನು ಉಚಿತವಾಗಿ ವಿತರಿಸಿದೆ.

ಕರ್ನಾಟಕ ಪತ್ರಕರ್ತೆಯರ ಸಂಘದ ಮನವಿಯ ಮೇರೆಗೆ ಸಂಘದ ಪದಾಧಿಕಾರಿಗಳನ್ನು ಭೇಟಿಯಾಗಿದ್ದ ಸೆಲ್ಕೊ ಸೋಲಾರ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್ ಹೆಗಡೆ ಅವರು ಐವರು ಪತ್ರಕರ್ತೆಯರಿಗೆ ಫೆಲೋಷಿಪ್ ನೀಡುವ ಮೂಲಕ ಸಂಕಷ್ಟಕ್ಕೆ ಮಿಡಿದಿದ್ದಾರೆ.

'ಉದ್ಯೋಗ ಕಂಡುಕೊಳ್ಳಲು ಆಶಿಸಿದ ಪತ್ರಕರ್ತೆಯೊಬ್ಬರಿಗೆ 'ರೋಟಿ ಮೇಕರ್" ಯಂತ್ರವನ್ನು ಉಚಿತವಾಗಿ ಸೆಲ್ಕೊ ನೀಡಿದೆ. ಪತ್ರಕರ್ತೆಯರ ಸಂಘ ನೀಡಿದ ಆರ್ಥಿಕ ಸಹಾಯದಿಂದ ಪತ್ರಕರ್ತೆಯೊಬ್ಬರ ಮನೆಗೆ ಸೌರದೀಪಗಳನ್ನು ಅಳವಡಿಸಲಾಗಿದೆ' ಎಂದು ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಶಾಂತಲಾ ಧರ್ಮರಾಜ್ ತಿಳಿಸಿದರು.

'ಮುಂಬರುವ ದಿನಗಳಲ್ಲೂ ಸಹ ಸೆಲ್ಕೊ ಜೊತೆ ಸಮಾಜಮುಖಿ ಕೆಲಸಗಳಿಗಾಗಿ ಸಂಘ ಕೈಜೋಡಿಸಲಿದೆ' ಎಂದರು.

ಕುದುರೆಗೆರೆ ಕೃಷ್ಣಮೂರ್ತಿ ಅವರನ್ನು ಕಾಂಗ್ರೆಸ್ ಮುಖಂಡರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಅಭಿನಂದಿಸಿದರು.

ಬೆಟ್ಟಹಲಸೂರು: ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಅವಿರೋಧ ಆಯ್ಕೆ

ಯಲಹಂಕ: ಜಾಲಾ ಹೋಬಳಿ ಬೆಟ್ಟಹಲಸೂರು ಗ್ರಾಮಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಕುದುರೆಗೆರೆ ಕೃಷ್ಣಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಉಪಾಧ್ಯಕ್ಷರಾಗಿದ್ದ ನಾರಾಯಣಸ್ವಾಮಿ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಕೃಷ್ಣಮೂರ್ತಿ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾಗಿತ್ತು.

ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಬಿ.ಕೆ. ಮಂಜುನಾಥಗೌಡ, ತಾಲ್ಲೂಕು ಪಂಚಾಯಿತಿ ಸದಸ್ಯ ಉದಯಶಂಕರ್, ಗ್ರಾಮಪಂಚಾಯಿತಿ ಸದಸ್ಯರಾದ ನರಸೇಗೌಡ, ಲಕ್ಷ್ಮೀ ಅಣ್ಣೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸವಿತಾ ಮಹರ್ಷಿ ಜಯಂತ್ಯುತ್ಸವ

'ಸವಿತಾ ಸಮಾಜ ಮುಖ್ಯವಾಹಿನಿಗೆ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿ ಮುಂದುವರಿದಿರುವ ಸಮುದಾಯಗಳೇ ಈಗ ಮೀಸಲಾತಿಗಾಗಿ ಹೋರಾಟ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಸವಿತಾ ಸಮಾಜ ಮುಖ್ಯವಾಹಿನಿಗೆ ಬರುವ ಅಗತ್ಯವಿದೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸವಿತಾ ಮಹರ್ಷಿ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

'ಹಿಂದುಳಿದ ಸಮಾಜ ಶಿಕ್ಷಣದಿಂದ ವಂಚಿತರಾಗಬಾರದು. ಉನ್ನತ ಶಿಕ್ಷಣ ಪಡೆಯಲು ಅವಶ್ಯವಿರುವ ಸಾಲಸೌಲಭ್ಯಗಳನ್ನು ಸರ್ಕಾರದಿಂದ ಪಡೆದುಕೊಂಡು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಇತ್ತೀಚೆಗೆ ನಾದಸ್ವರ ಕಾರ್ಯಕ್ರಮಗಳು ಕಡಿಮೆಯಾಗಿವೆ. ನಾದಸ್ವರದ ಮೂಲಕವೇ ಸರ್ಕಾರಿ ಕಾರ್ಯಕ್ರಮ ಆರಂಭಿಸಲು ಆದ್ಯತೆ ನೀಡುವಂತೆ ಮನವಿ ಮಾಡುತ್ತೇನೆ. ಖಾಸಗಿ ಕಾರ್ಯಕ್ರಮಗಳಿಗೂ ನಾದಸ್ವರ ಬಳಕೆ ಹೆಚ್ಚಾದರೆ ಸಮಾರಂಭಕ್ಕೂ ಮೆರಗು ಬರಲಿದೆ. ಸಮಾಜದ ಜನರಿಗೆ ಉದ್ಯೋಗ ಸಿಗುವ ಜೊತೆಗೆ ಕಲೆಯ ಪರಂಪರೆಯೂ ಉಳಿಯಲಿದೆ' ಎಂದರು.

ಕಾರ್ಯಕ್ರಮದಲ್ಲಿ ಅರವಿಂದ ಲಿಂಬಾವಳಿ, ಉದಯ್ ಗರುಡಾಚಾರ್ ಅವರು ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ನರೇಶ್ ಇತರರು ಇದ್ದರು
ಪ್ರಜಾವಾಣಿ ಚಿತ್ರ

'ನಿಗಮ ಮಂಡಳಿಗೆ ಹೆಚ್ಚಿನ ಅನುದಾನ ನೀಡಬೇಕು ಮತ್ತು ಹಿಂದಿನ ವರ್ಷದ ಜಯಂತ್ಯುತ್ಸವಗಳಿಗೆ ಬಾಕಿ ಉಳಿಸಿಕೊಂಡಿರುವ ಅನುದಾನವನ್ನು ಕೂಡ ಆದಷ್ಟು ಬೇಗ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದರು.

ವಸತಿ ಸಚಿವ ವಿ. ಸೋಮಣ್ಣ, 'ಪೂರ್ವಜರು ನೀಡಿರುವ ಪದ್ಧತಿಯನ್ನು ಅಳವಡಿಸಿಕೊಳ್ಳುವ ಜೊತೆಗೆ ಹಳ್ಳಿಗಾಡಿನಲ್ಲಿರುವ ಸಮುದಾಯದ ಜೀವನಮಟ್ಟವನ್ನು ಸುಧಾರಿಸಬೇಕಿದೆ' ಎಂದರು.

ಕರ್ನಾಟಕ ಸವಿತ ಸಮಾಜದ ಅಧ್ಯಕ್ಷರಾದ ನರೇಶ್, 'ಸಮಾಜವು ವಾದ್ಯ ಕಲೆ, ನಾದಸ್ವರ ಮತ್ತು ಡೋಲು ಸಂಗೀತವನ್ನು ಪಾರಂಪರಿಕವಾಗಿ ನುಡಿಸಿಕೊಂಡು ಬರಲಾಗುತ್ತಿದೆ. ನಾದಸ್ವರ ಮತ್ತು ಡೋಲು ನುಡಿಸಲು ಇಲಾಖೆಯಲ್ಲಿ ಪ್ರಾಮುಖ್ಯತೆ ನೀಡಬೇಕು' ಎಂದು ಕೋರಿದರು.

'ಸವಿತಾ ಮಹರ್ಷಿ ಜಯಂತಿ ಆಚರಣೆಗೆ ಹಿಂದಿನ ವರ್ಷದ ಅನುದಾನ ಕೂಡ ಬಿಡುಗಡೆ ಮಾಡಿಲ್ಲ. ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಜಯಂತಿ ಆಚರಣೆಗೆ ಹೆಚ್ಚಿನ ಅನುದಾನ ನೀಡಿದರೆ, ವಿಜೃಂಭಣೆಯಿಂದ ಆಚರಿಸಲು ಸಾಧ್ಯವಾಗಲಿದೆ' ಎಂದರು.

'ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ತ್ಯಾಗರಾಜರ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಇದೇ ರೀತಿಯಲ್ಲಿ ರಾಜ್ಯದಲ್ಲಿಯೂ ತ್ಯಾಗರಾಜರ ಆಚರಣೆಗೆ ಸರ್ಕಾರ ಮುಂದಾಗಬೇಕು' ಎಂದು ಮನವಿ ಮಾಡಿದರು.

ಶಾಸಕ ಉದಯ ಗರುಡಾಚಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ನಾಟಕ ಅಕಾಡೆಮಿ ಅಧ್ಯಕ್ಷ ಭೀಮಸೇನ, ಕೆಪಿಎಸ್‌ಸಿ ಸದಸ್ಯ ಲಕ್ಷ್ಮೀ ನಾರಾಯಣ ಉಪಸ್ಥಿತರಿದ್ದರು.

ಪ್ರತಿಭಟನೆ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಸದಸ್ಯರು ಮೌರ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗಣರಾಜ್ಯೋತ್ಸವ ಹಿಂಸಾಚಾರ: 200 ಮಂದಿ ಭಾವಚಿತ್ರ ಬಿಡುಗಡೆ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ದಿನದಂದು ನಡೆದ ಹಿಂಸಾಚಾರದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ 200 ಮಂದಿಯ ಭಾವಚಿತ್ರಗಳನ್ನು ದೆಹಲಿ ಪೊಲೀಸರು ಶುಕ್ರವಾರ ಬಿಡುಗಡೆ ಮಾಡಿದ್ದಾರೆ.

ದೆಹಲಿಯಲ್ಲಿ ಜನವರಿ 26ರಂದು ನಡೆದ ಟ್ರ್ಯಾಕ್ಟರ್ ರ‍್ಯಾಲಿಗೆ ಸಂಬಂಧಿಸಿದಂತೆ ಎಲ್ಲ ವಿಡಿಯೊಗಳು ಮತ್ತು ಚಿತ್ರಗಳನ್ನು ಪರಿಶೀಲಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಭಾವಚಿತ್ರದಲ್ಲಿ ಇರುವವರನ್ನು ಗುರುತಿಸುವ ಕಾರ್ಯ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಹೊಸ ಕೃಷಿ ಕಾಯ್ದೆಗಳನ್ನು ವಿರೋಧಿಸಿ ನಡೆಸಿದ ಟ್ರ್ಯಾಕ್ಟರ್ ಪರೇಡ್ ಸಂದರ್ಭದಲ್ಲಿ ರೈತರು ಮತ್ತು ಪೊಲೀಸರ ನಡುವೆ ಸಂಘರ್ಷ ನಡೆದಿತ್ತು. ಹಲವರು ಕೆಂಪುಕೋಟೆ ಪ್ರವೇಶಿಸಿ ಧಾರ್ಮಿಕ ಧ್ವಜ ಹಾರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು.

ಹಿಂದೂ ಸಲಹಾ ಸಮಿತಿ ಹೆಸರಿನಲ್ಲಿ ವಂಚನೆ: ಬಂಧನ

ಬೆಂಗಳೂರು: ಕೇಂದ್ರ ಸರ್ಕಾರದ ಹಿಂದೂ ಸಲಹಾ ಸಮಿತಿ ಹಾಗೂ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹೆಸರು ಹೇಳಿಕೊಂಡು ಸಾರ್ವಜನಿಕರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ರಾಘವೇಂದ್ರ ಸರ್ವಂ ಹಾಗೂ ಆತನ ಸಹಚರ ರಾಜೇಶ್‌ನನ್ನು ಶಂಕರಪುರ ಪೊಲೀಸರು ಬಂಧಿಸಿದ್ದಾರೆ.

'ವಿಶ್ವ ಹಿಂದೂ ಪರಿಷತ್ ಸಂಘಟನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ್ ದೂರು ನೀಡಿದ್ದರು. ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರ ಜೊತೆ ಫೋಟೊ ತೆಗೆಸಿಕೊಂಡಿದ್ದ ಆರೋಪಿ ರಾಘವೇಂದ್ರ, ಅದೇ ಫೋಟೊಗಳನ್ನು ಸಾರ್ವಜನಿಕರಿಗೆ ತೋರಿಸಿ ವಂಚಿಸುತ್ತಿದ್ದ' ಎಂದೂ ಮೂಲಗಳು ಹೇಳಿವೆ.

'ವಿಎಚ್‌ಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದರು. ಅದನ್ನು ತಿಳಿದುಕೊಂಡಿದ್ದ ರಾಘವೇಂದ್ರ, ನಕಲಿ ಗುರುತಿನ ಚೀಟಿ ಬಳಸಿಕೊಂಡು ಅಲೋಕ್‌ಕುಮಾರ್ ಅವರನ್ನು ಭೇಟಿಯಾಗಿ ಫೋಟೊ ತೆಗೆಸಿಕೊಂಡಿದ್ದ. ಇದು ತಿಳಿಯುತ್ತಿದ್ದಂತೆ ದೂರುದಾರ ಬಸವರಾಜ್ ಪ್ರಶ್ನಿಸಿದ್ದರು. ಅಷ್ಟಕ್ಕೆ ರಾಘವೇಂದ್ರ, ಬಸವರಾಜ್‌ಗೆ ಕರೆ ಮಾಡಿ ಬೆದರಿಸಿದ್ದಾನೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ರೈಲ್ವೆ ಕೆಲಸದ ಆಮಿಷ: ₹ 10 ಲಕ್ಷ ವಂಚನೆ

ಬೆಂಗಳೂರು: ರೈಲ್ವೆ ಇಲಾಖೆಯಲ್ಲಿ 'ಸಿ' ಹಾಗೂ 'ಡಿ' ದರ್ಜೆ ಕೆಲಸ ಕೊಡಿಸುವುದಾಗಿ ಹೇಳಿ ₹ 10 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಂಚನೆಗೀಡಾಗಿರುವ ಹುಬ್ಬಳ್ಳಿ ನಿವಾಸಿ ಅನಿಲ್ ಕುಮಾರ್ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ದಿಲೀಪ್ ಅಡಿವೆಪ್ಪ ಗಸ್ತಿ (40) ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ನೇಹಿತರೊಬ್ಬರ ಮೂಲಕ 2017ರಲ್ಲಿ ಅನಿಲ್‌ಕುಮಾರ್ ಅವರಿಗೆ ಆರೋಪಿ ದಿಲೀಪ್ ಪರಿಚಯವಾಗಿತ್ತು. ರೈಲ್ವೆ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳು ನನಗೆ ಪರಿಚಯವೆಂದು ಹೇಳಿದ್ದ ಆರೋಪಿ, ₹ 10 ಲಕ್ಷ ಕೊಟ್ಟರೆ ಕೆಲಸ ಕೊಡಿಸುವುದಾಗಿ ಭರವಸೆ ನೀಡಿದ್ದ. ಅದನ್ನು ನಂಬಿದ್ದ ಅನಿಲ್‌ಕುಮಾರ್, ಹಂತ ಹಂತವಾಗಿ ಆರೋಪಿಗೆ ಹಣ ನೀಡಿದ್ದರು' ಎಂದೂ ತಿಳಿಸಿವೆ.

'ಹಣ ಪಡೆದರೂ ಆರೋಪಿ ಕೆಲಸ ಕೊಡಿಸಿರಲಿಲ್ಲ. ಹಣವನ್ನೂ ವಾಪಸು ನೀಡಿರಲಿಲ್ಲ. ನೊಂದ ಅನಿಲ್‌ಕುಮಾರ್ ದೂರು ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

11 ನಾಡ ಬಂದೂಕು ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ಮಾರಾಟ ಮಾಡಲು ತರಲಾಗಿದ್ದ 11 ನಾಡ ಬಂದೂಕುಗಳನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸರು ಜಪ್ತಿ ಮಾಡಿದ್ದು, ಆ ಸಂಬಂಧ ಲಿಂಗಾಚಾರಿ ಎಂಬುವರನ್ನು (58) ಬಂಧಿಸಿದ್ದಾರೆ.

'ರಾಮನಗರ ಜಿಲ್ಲೆಯ ಕನಕಪುರದ ಮಹಾರಾಜ್ ಕಟ್ಟೆಯ ನಿವಾಸಿ ಲಿಂಗಾಚಾರಿ, ತನ್ನ ಬಳಿ ಬಂದೂಕು ಇಟ್ಟುಕೊಂಡು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ. ಅದೇ ವೇಳೆ ದಾಳಿ ಮಾಡಿ ಆತನನ್ನು ಬಂಧಿಸಲಾಗಿದೆ. ಆತನಿಂದ 11 ನಾಡ ಬಂದೂಕು (ಸಿಂಗಲ್ ಬ್ಯಾರಲ್) ಹಾಗೂ ಬಂದೂಕಿನ ಬಿಡಿ ಭಾಗಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬೈಕ್‌ನಲ್ಲಿ ನಗರಕ್ಕೆ ಬಂದಿದ್ದ ಆರೋಪಿ, ಬನಶಂಕರಿ ಮೂರನೇ ಹಂತದ ಇಟ್ಟಮಡು ಬಳಿ ನಿಂತಿದ್ದ. ಬಂದೂಕುಗಳನ್ನು ಪ್ಲಾಸ್ಟಿಕ್ ಚೀಲದಿಂದ ಮುಚ್ಚಿಕೊಂಡಿದ್ದ. ಅನುಮಾನಗೊಂಡ ಸ್ಥಳೀಯರೊಬ್ಬರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದಾಗ ಆರೋಪಿ ಸಿಕ್ಕಿಬಿದ್ದ' ಎಂದೂ ಅವರು ತಿಳಿಸಿದರು.

ಜಪ್ತಿ ಮಾಡಲಾದ ಬಂದೂಕುಗಳು ಹಾಗೂ ಆರೋಪಿ ಲಿಂಗಾಚಾರಿ

'ನಗರದಲ್ಲಿ ಕೆಲವರಿಗೆ ಬಂದೂಕು ಮಾರಾಟ ಮಾಡಲು ಬಂದಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ. ಯಾರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಅವರು ಹೇಳಿದರು.

'ಕಬ್ಬಿಣದ ಬ್ಯಾರಲ್ ಕೊಳವೆಗಳು, ಮದ್ದು ತುಂಬಲು ಬಳಸುವ ಸರಳುಗಳು, ಕಬ್ಬಿಣದ ಇಕ್ಕಳ ಹಾಗೂ ಇತರೆ ವಸ್ತುಗಳೂ ಆರೋಪಿ ಬಳಿ ಸಿಕ್ಕಿವೆ. ಆರೋಪಿಯೇ ಬಂದೂಕು ತಯಾರಿ ಮಾಡುತ್ತಿದ್ದ ಅನುಮಾನವೂ ಇದೆ' ಎಂದೂ ತಿಳಿಸಿದರು.

ಮಹಿಳೆಯ ಚಿನ್ನದ ಸರ ಕಸಿದು ಪರಾರಿ

ಯಲಹಂಕ: ದ್ವಿಚಕ್ರವಾಹನದಲ್ಲಿ ಬಂದ ದುಷ್ಕರ್ಮಿಗಳಿಬ್ಬರು ಮಹಿಳೆಯೊಬ್ಬರ ಕಣ್ಣಿಗೆ ಖಾರದ ಪುಡಿ ಎರಚಿ, ಆಕೆಯ ಗುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಸಿದುಕೊಂಡು ಪರಾರಿಯಾಗಿರುವ ಘಟನೆ ಜಕ್ಕೂರು ಗ್ರಾಮದಲ್ಲಿ ಗುರುವಾರ ನಡೆದಿದೆ.

ರೇಖಾ ಎಂಬ ಮಹಿಳೆಯು, ಜಕ್ಕೂರು ವೃತ್ತದಿಂದ ತರಕಾರಿ ತೆಗೆದುಕೊಂಡು ರಾತ್ರಿ ಸುಮಾರು 8.30ರ ಹೊತ್ತಿನಲ್ಲಿ ನಡೆದುಕೊಂಡು ಮನೆಗೆ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಕಪ್ಪುಬಣ್ಣದ ನೋಂದಣಿ ಸಂಖ್ಯೆಯಿಲ್ಲದ ಡಿಯೋ ಹೋಂಡಾ ಸ್ಕೂಟರ್‌ನಲ್ಲಿ ಹೆಲ್ಮೆಟ್ ಧರಿಸಿದ್ದ ಇಬ್ಬರು ಈಕೆಯನ್ನು ಹಿಂಬಾಲಿಸಿಕೊಂಡು ಬಂದಿದ್ದಾರೆ.

ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರಿನ 8ನೇ ಸಿ ಕ್ರಾಸ್‌ನಲ್ಲಿ ಎದುರಿಗೆ ಬಂದ ದುಷ್ಕರ್ಮಿಗಳು, ವಿಳಾಸ ಕೇಳುವ ನೆಪದಲ್ಲಿ ಆಕೆಯನ್ನು ತಡೆದು, ಕಣ್ಣಿಗೆ ಖಾರದಪುಡಿ ಎರಚಿದ್ದಾರೆ. ಪ್ರತಿರೋಧ ಒಡ್ಡಿದಾಗ ತಳ್ಳಿದ್ದಾರೆ. ಆಕೆಯು ಕೆಳಗೆ ಬಿದ್ದಾಗ ಕುತ್ತಿಗೆಯಲ್ಲಿದ್ದ ಸುಮಾರು 48 ಗ್ರಾಂ ತೂಕದ ಚಿನ್ನದ ಸರ, ಮೊಬೈಲ್ ಫೋನ್ ಮತ್ತು ಪರ್ಸ್ ಕಸಿದುಕೊಂಡು ಪರಾರಿಯಾಗಿದ್ದಾರೆ.

ಇದಕ್ಕೂ ಮುನ್ನ ಇದೇ ಗ್ರಾಮದ ಮತ್ತೊಂದು ಮನೆಯ ಬಳಿ ಬಂದಿದ್ದ ಈ ದುಷ್ಕರ್ಮಿಗಳು, ವಿಳಾಸಕೇಳುವ ನೆಪದಲ್ಲಿ ಮಹಿಳೆಯೊಬ್ಬರನ್ನು ಮಾತನಾಡಿಸಿ, ಕುಡಿಯಲು ನೀರು ಕೇಳಿದ್ದಾರೆ. ಆಕೆಯು ಕಾಂಪೌಂಡ್ ಒಳಗಿನಿಂದಲೇ ನೀರು ಕೊಟ್ಟಿದ್ದಾರೆ. ನಂತರ ದೂರದಲ್ಲಿ ವ್ಯಕ್ತಿಯೊಬ್ಬರು ಈ ದೃಶ್ಯವನ್ನು ಗಮನಿಸುತ್ತಿದ್ದುದು ಇವರ ಅರಿವಿಗೆ ಬಂದು ಅಲ್ಲಿಂದ ಕಾಲ್ಕಿತ್ತಿದ್ದಾರೆ. ನಂತರ ಈ ಕೃತ್ಯ ಎಸಗಿದ್ದು, ಅವರ ಎಲ್ಲ ಚಲನವಲನಗಳು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿವೆ.

ಮೃತ ಪೊಲೀಸರ ಕುಟುಂಬಕ್ಕೆ ತಲಾ ₹ 30 ಲಕ್ಷ ಪರಿಹಾರ

'ಕೋವಿಡ್: 99 ಪೊಲೀಸರ ಸಾವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೊರೊನಾ ಯೋಧರಾಗಿ ಕೆಲಸ ಮಾಡಿದ್ದ 99 ಪೊಲೀಸರು, ಸೋಂಕು ತಗುಲಿ ಮೃತಪಟ್ಟಿದ್ದಾರೆ. ಅವರೆಲ್ಲರ ಕುಟುಂಬಕ್ಕೆ ಮುಖ್ಯಮಂತ್ರಿ ಕಡೆಯಿಂದ ತಲಾ ₹ 30 ಲಕ್ಷ ಪರಿಹಾರ ಮಂಜೂರಾಗಿದೆ. ಕುಟುಂಬಕ್ಕೆ ಸಿಗಬೇಕಾದ ಅನುಕಂಪದ ಕೆಲಸ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ತಿಳಿಸಿದರು.

ಕೋರಮಂಗಲದಲ್ಲಿರುವ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಸೇವಾ ಕವಾಯತ್‌ನಲ್ಲಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಮೃತ ಪೊಲೀಸರ ಅವಲಂಬಿತರಿಗೆ ಕೆಲಸ ನೀಡುವ ವೇಳೆಯಲ್ಲಿ, ಗಂಡ–ಹೆಂಡತಿ ಹಾಗೂ ಮಕ್ಕಳನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಆದರೆ, ಇನ್ನು ಮುಂದೆ ಸಹೋದರ ಹಾಗೂ ಸಹೋದರಿ ಸೇರಿ ಕುಟುಂಬದ ಇತರೆ ಸದಸ್ಯರನ್ನೂ ಪರಿಗಣಿಸಲು ನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ' ಎಂದರು.

ಸೇವಾ ಕವಾಯತ್‌ನಲ್ಲಿ ಭಾಗವಹಿಸಲು ಬಂದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರನ್ನು ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್‌ಕುಮಾರ್ ಹೂಗುಚ್ಛ ನೀಡಿ ಸ್ವಾಗತಿಸಿದರು

'ಕೊರೊನಾ ಸೋಂಕು ಇನ್ನೂ ಹೋಗಿಲ್ಲ. ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿತ್ಯವೂ ಜಾಗೃತರಾಗಿ ಇರಬೇಕು. ಪರಸ್ಪರ ಅಂತರ ಕಾಯ್ದುಕೊಂಡು, ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು.'

'ಪೊಲೀಸರಿಗೆ ಕೊರೊನಾ ಲಸಿಕೆ ನೀಡುವ ಕೆಲಸ ನಡೆದಿದ್ದು, ಇದುವರೆಗೂ ಶೇ 50ರಷ್ಟು ಸಿಬ್ಬಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ವಾಸಕ್ಕೆ ಯೋಗ್ಯವಲ್ಲದ ಶಿಥಿಲಗೊಂಡಿರುವ ವಸತಿಗೃಹಗಳನ್ನು ನೆಲಸಮ ಮಾಡಿ, ಹೊಸ ವಸತಿಗೃಹ ನಿರ್ಮಿಸುವ ಗುರಿ ಇದೆ' ಎಂದೂ ತಿಳಿಸಿದರು.

2,600 ಸಿಬ್ಬಂದಿ ಸೇವೆಗೆ ಸೇರ್ಪಡೆ: 'ಕೆಎಸ್‌ಆರ್‌ಪಿಗಾಗಿ ಈಗಾಗಲೇ 2,600 ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಅವರೆಲ್ಲರೂ ತರಬೇತಿ ಪಡೆಯುತ್ತಿದ್ದು, ಮುಂದಿನ ಎರಡು ತಿಂಗಳಿನಲ್ಲಿ ಅವರ ಸೇವೆ ಲಭ್ಯವಾಗಲಿದೆ' ಎಂದು ಪ್ರವೀಣ್ ಸೂದ್ ಹೇಳಿದರು.

'ವರ್ಷದ ತರಬೇತಿ ಮುಗಿಸಿ ಹಲವು ಅಭ್ಯರ್ಥಿಗಳು, ಕೆಎಸ್‌ಆರ್‌ಪಿ, ಡಿಎಆರ್, ಸಿಎಆರ್ ಹಾಗೂ ಇತರೆ ಪಡೆಗಳಲ್ಲಿ ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಆ ಪೈಕಿ ಹಲವರು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ನಾಗರಿಕ (ಸಿವಿಲ್) ಸೇವೆಗೆ ಆಯ್ಕೆಯಾಗುತ್ತಿದ್ದಾರೆ. ಅಂಥವರಿಗೆ ಪುನಃ ತರಬೇತಿ ನೀಡುವ ಅವಶ್ಯಕತೆ ಇರುವುದಿಲ್ಲ. ಹೀಗಾಗಿ, ಮೂರ್ನಾಲ್ಕು ತಿಂಗಳ ತರಬೇತಿ ನೀಡಿ ಸೇವೆಗೆ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದೂ ತಿಳಿಸಿದರು.

'ಪಡೆಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿಸುವುದಕ್ಕಾಗಿ ನೇಮಕಾತಿಯಲ್ಲಿ ಮಹಿಳೆಯರಿಗಾಗಿ ಶೇ 25ರಷ್ಟು ಮೀಸಲಾತಿ ನೀಡಲಾಗಿದೆ. ಸಮವಸ್ತ್ರ ಕಿಟ್‌ಗಾಗಿ ಈ ಬಾರಿ ₹ 45 ಕೋಟಿ ಮೀಸಲಿರಿಸಲಾಗಿದೆ' ಎಂದರು.

ಡೆಕ್ಕನ್ ಅರ್ಬನ್ ಬ್ಯಾಂಕ್ ವಹಿವಾಟಿಗೆ ನಿರ್ಬಂಧ

ಮುಂಬೈ: ಕರ್ನಾಟಕ ಮೂಲದ ಡೆಕ್ಕನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಹೊಸದಾಗಿ ಸಾಲ ನೀಡುವುದು ಅಥವಾ ಠೇವಣಿಗಳನ್ನು ಸ್ವೀಕರಿಸುವುದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ವಿಧಿಸಿದೆ.

ಆರು ತಿಂಗಳ ಕಾಲ ಉಳಿತಾಯ ಖಾತೆಯಿಂದ ಗ್ರಾಹಕರು ₹1,000ಕ್ಕಿಂತ ಹೆಚ್ಚು ಹಣವನ್ನು ಪಡೆಯದಂತೆ ಸೂಚಿಸಲಾಗಿದೆ. ಪರವಾನಗಿ ಇಲ್ಲದೆಯೇ ಬ್ಯಾಂಕ್ ಹೊಸದಾಗಿ ಯಾವದೇ ರೀತಿ ಹೂಡಿಕೆಗಳನ್ನು ಮಾಡುವಂತಿಲ್ಲ ಎಂದು ನಿರ್ದೇಶನ ನೀಡಲಾಗಿದೆ.

ಹಣಕಾಸು ಪರಿಸ್ಥಿತಿ ಸುಧಾರಿಸುವವರೆಗೆ ಈ ಕ್ರಮಗಳು ಮುಂದುವರಿಯಲಿವೆ. ಈ ನಿರ್ಬಂಧಗಳ ನಡುವೆಯೂ ಬ್ಯಾಂಕ್ ಎಂದಿನಂತೆ ವಹಿವಾಟು ನಡೆಸಬಹುದು. ಮುಂದಿನ ಪರಿಸ್ಥಿತಿಗಳನ್ನು ಪರಿಶೀಲಿಸಿ ಈ ನಿರ್ಬಂಧಗಳನ್ನು ಮಾರ್ಪಾಡು ಮಾಡಬಹುದು ಎಂದು ಆರ್‌ಬಿಐ ತಿಳಿಸಿದೆ.

₹ 11.21 ಲಕ್ಷ ಮೌಲ್ಯದ ಆಭರಣ ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಇಬ್ಬರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗಂಗೊಂಡನಹಳ್ಳಿ ನಿವಾಸಿ ಚಾಂದ್ ಪಾಷಾ (46) ಹಾಗೂ ಮೊಹಮ್ಮದ್ ಆರೀಫ್ (24) ಬಂಧಿತರು. ಅವರಿಬ್ಬರಿಂದ ₹ 11.21 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಂಗೇರಿ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು, ಫೆ. 2ರಂದು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಬೇರೆ ಊರಿಗೆ ಹೋಗಿದ್ದರು. ಫೆ. 4ರಂದು ಊರಿನಿಂದ ವಾಪಸು ಬಂದು ನೋಡಿದಾಗಲೇ, ಮನೆಯಲ್ಲೇ ಕಳ್ಳತನ ನಡೆದಿದ್ದು ಗಮನಕ್ಕೆ ಬಂದಿತ್ತು.'

ಪೊಲೀಸರು ಜಪ್ತಿ ಮಾಡಿದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ

'ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗುರುತಿಸಿದ್ದ ಆರೋಪಿಗಳು, ಹಿಂಬಾಗಿಲು ಮೀಟಿ ಒಳಗೆ ನುಗ್ಗಿದ್ದರು. ಮನೆಯಲ್ಲೆಲ್ಲ ಹುಡುಕಾಡಿ, ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಕದ್ದುಕೊಂಡು ಹೋಗಿದ್ದರು' ಎಂದೂ ತಿಳಿಸಿದರು.

'ಆರೋಪಿಗಳು ನಾಲ್ಕು ಕಡೆಗಳಲ್ಲಿ ಕಳ್ಳತನ ಮಾಡಿರುವುದು ಗೊತ್ತಾಗಿದೆ' ಎಂದೂ ಪೊಲೀಸರು ಹೇಳಿದರು.

'ಎಪಿಎಂಸಿ ಪುನರ್ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಮುಂದಿನ ಬಜೆಟ್ ನಂತರ ಅನುದಾನ ಲಭ್ಯತೆ ನೋಡಿಕೊಂಡು ಅವಶ್ಯವಿರುವ ಕಡೆ ಹಲವು ಎಪಿಎಂಸಿಗಳನ್ನು ಪುನರ್ ಅಭಿವೃದ್ಧಿಪಡಿಸಲಾಗುವುದು' ಎಂದು ಕೃಷಿ ಮಾರುಕಟ್ಟೆ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ತಾವರೆಕೆರೆಯಲ್ಲಿ ಎಪಿಎಂಸಿ ಮಾರುಕಟ್ಟೆಯನ್ನು ₹2.70ಕೋಟಿ ವೆಚ್ಚದಲ್ಲಿ ಪುನರ್ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಎಪಿಎಂಸಿ ಮೂಲಕ ರೈತರಿಗೆ ಉಪಯೋಗವಾಗುವಂತಹ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ ಎಂದರು.

ತಾವರೆಕೆರೆ ಗ್ರಾಮಪಂಚಾಯತಿ ಅಧ್ಯಕ್ಷ ಟಿ.ಎಲ್.ಕೆಂಪೇಗೌಡ, 'ಇಲ್ಲಿನ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಲು ಸಚಿವರು ತುರ್ತಾಗಿ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ರೈತರಿಗೆ ಕುಡಿಯುವ ನೀರು, ಶೌಚಾಲಯ, ವಿಶ್ರಾಂತಿ ಗೃಹ, ಅಂಗಡಿ ಮಳಿಗೆ, ವಿದ್ಯುತ್, ವಿಶಾಲವಾದ ಪ್ರಾಂಗಣ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ' ಎಂದು ಹೇಳಿದರು.

ನಗರದ ಕಬ್ಬನ್ ರಸ್ತೆಯಲ್ಲಿ ಸುರಿವ ಮಳೆಯಲ್ಲಿಯೇ ಸಾಗಿದ ಸಾರ್ವಜನಿಕರು (ಎಡಚಿತ್ರ) ಮಳೆಯಿಂದ ಆಶ್ರಯ ಪಡೆಯಲು ಓಡುತ್ತಿರುವ ಯುವಕ

ನಗರದ ಹಲವೆಡೆ ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಪ್ರದೇಶಗಳಲ್ಲಿ ಶುಕ್ರವಾರ ಸಂಜೆ ಜೋರು ಮಳೆ ಸುರಿಯಿತು. ಅಲ್ಲಲ್ಲಿ ಗುಡುಗು–ಸಿಡಿಲಿನ ಅಬ್ಬರವೂ ಇತ್ತು.

ಬೆಳಿಗ್ಗೆಯಿಂದಲೇ ನಗರದಲ್ಲಿ ಮೋಡ ಕವಿದ ಹಾಗೂ ಚಳಿ ವಾತಾವರಣವಿತ್ತು. ಸಂಜೆ 5ರ ನಂತರ ಹಲವೆಡೆ ಜಿಟಿ ಜಿಟಿಯಾಗಿ ಮಳೆ ಸುರಿಯಲಾರಂಭಿಸಿತು. ಕೆಲ ನಿಮಿಷಗಳಲ್ಲೇ ಮಳೆ ಜೋರಾಗಿ ಸುರಿದು, ರಸ್ತೆಯಲ್ಲೇ ನೀರು ಹರಿಯುವಂತಾಯಿತು.

ಮೆಜೆಸ್ಟಿಕ್, ಗಾಂಧಿನಗರ, ಕಾರ್ಪೊರೇಷನ್ ವೃತ್ತ, ಚಾಮರಾಜಪೇಟೆ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ವಿದ್ಯಾರಣ್ಯಪುರ, ಬಿಇಎಲ್ ವೃತ್ತ, ಗೊರಗುಂಟೆಪಾಳ್ಯ, ಯಶವಂತಪುರ, ಪೀಣ್ಯ, ಜಾಲಹಳ್ಳಿ, ಬನಶಂಕರಿ, ಕತ್ತಿರುಪ್ಪೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಅಬ್ಬರ ಜೋರಾಗಿತ್ತು. ಪ್ರಮುಖ ರಸ್ತೆಗಳಲ್ಲಿ ಎರಡು ಅಡಿಯಷ್ಟು ನೀರು ಹರಿಯಿತು.

ಯಶವಂತರದ ರಸ್ತೆಯಲ್ಲಿ ಜಲಾವೃತಗೊಂಡಿದ್ದರಿಂದ ವಾಹನ ಸವಾರರು ಪರದಾಡುವಂತಾಯಿತು –ಪ್ರಜಾವಾಣಿ ಚಿತ್ರಗಳು

ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ನೀರಿನಲ್ಲೇ ಕೆಟ್ಟು ನಿಂತವು.

ಸಂಜೆ ಕೆಲಸ ಮುಗಿಸಿ ಬಹುತೇಕರು ಮನೆಯತ್ತ ಹೊರಟಿದ್ದರು. ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನಗಳು ನಿಧಾನವಾಗಿ ಸಂಚರಿಸಿದವು. ಮೆಜೆಸ್ಟಿಕ್, ಯಶವಂತಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ವಾಹನಗಳ ದಟ್ಟಣೆಯೂ ಉಂಟಾಯಿತು.

'ನಗರದ ಬಹುತೇಕ ಕಡೆ ಮಳೆ ಆಗಿದೆ. ರಸ್ತೆಯಲ್ಲಿ ನೀರು ನಿಂತಿದ್ದ ದೂರುಗಳು ಬಿಟ್ಟರೆ, ಬೇರೆ ಯಾವ ದೂರುಗಳು ಬಂದಿಲ್ಲ. ಅಂಥ ಕಡೆಗಳಲ್ಲಿ ಸಿಬ್ಬಂದಿ ತ್ವರಿತವಾಗಿ ಕಾರ್ಯಾಚರಣೆ ನಡೆಸಿ ನೀರು ಮುಂದಕ್ಕೆ ಹೋಗಲು ದಾರಿ ಮಾಡಿಕೊಟ್ಟಿದ್ದಾರೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ಜನಸೇವಕ' ಕಾರ್ಯಕ್ರಮಕ್ಕೆ ಚಾಲನೆ

ಮನೆ ಬಾಗಿಲಿಗೆ ಸರ್ಕಾರಿ ಸೇವೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸಕಾಲ ಯೋಜನೆಯಡಿ 'ಜನಸೇವಕ' ಕಾರ್ಯಕ್ರಮಕ್ಕೆ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು.

ಯಶವಂತಪುರ ಕ್ಷೇತ್ರದ ಉಳ್ಳಾಲ ವಾರ್ಡ್‌ನಲ್ಲಿ ಯೋಜನೆಗೆ ಚಾಲನೆ ನೀಡಿದ ಸಕಾಲ ಮಿಷನ್ ಸಚಿವ ಎಸ್. ಸುರೇಶ್ ಕುಮಾರ್, 'ಸಾರ್ವಜನಿಕರ ಮನೆ ಬಾಗಿಲಿಗೆ ಸರ್ಕಾರಿ ಸೇವೆಗಳನ್ನು ತಲುಪಿಸುವುದು ಯೋಜನೆಯ ಉದ್ದೇಶವಾಗಿದೆ' ಎಂದರು.

'ಈ ಕಾರ್ಯಕ್ರಮವನ್ನು ರಾಜಧಾನಿಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಜಾರಿಗೊಳಿಸಲಾಗಿದ್ದು, ನಂತರ ರಾಜ್ಯದ ಇತರೆಡೆಗಳಲ್ಲಿ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು' ಎಂದು ಅವರು ಹೇಳಿದರು.

'ಹಿರಿಯ ನಾಗರಿಕರು ಸೇರಿದಂತೆ ಸಾರ್ವಜನಿಕರು ಕಚೇರಿಯಿಂದ ಕಚೇರಿಗೆ ಅಲೆಯುವುದು ಮತ್ತು ಮಧ್ಯವರ್ತಿಗಳ ಹಾವಳಿ ತಪ್ಪಲಿದೆ' ಎಂದರು.

'ಬೆಂಗಳೂರು ಒನ್ ಮಾದರಿಯಲ್ಲಿ ಗ್ರಾಮ ಒನ್ ಸೇವೆಯನ್ನು ಶೀಘ್ರದಲ್ಲಿ ಜಾರಿಗೊಳಿಸಲಾಗುವುದು' ಎಂದು ಅವರು ಹೇಳಿದರು.

ಕ್ಷೇತ್ರದ ಶಾಸಕರೂ ಆದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, 'ಆಧಾರ್, ಮತದಾರರ ಗುರುತಿನ ಚೀಟಿ, ಪಹಣಿಯಂತ ಅಗತ್ಯ ಸೇವೆಗಳಿಗಾಗಿ ಸರ್ಕಾರಿ ಕಚೇರಿಗೆ ಅಲೆದಾಡುತ್ತಿದ್ದ ಜನರಿಗೆ ಈ ಸೇವೆ ಅತ್ಯಂತ ಉಪಯುಕ್ತವಾಗಿದೆ' ಎಂದರು.

ಸಾಂಕೇತಿಕವಾಗಿ ಯಶವಂತಪುರ ಕ್ಷೇತ್ರದ ಮೂವರು ಫಲಾನುಭವಿಗಳ ಮನೆಗೆ ಹೋಗಿ ಅವರು ಕೋರಿದ್ದ ಸೇವೆಗಳ ದಾಖಲಾತಿಗಳನ್ನು ಸಚಿವರಿಬ್ಬರು ನೀಡಿದರು. ಜನಸೇವಕ್ ಯೋಜನಾ ನಿರ್ದೇಶಕಿ ಸಿಂಧೂ, ಬಿಬಿಎಂಪಿ ಜಂಟಿ ಆಯುಕ್ತ ನಾಗರಾಜ್, ಎಇಇ ದಯಾನಂದ್, ಆರ್.ಒ ದಯಾನಂದ್, ಎಆರ್‌ಒ ದೇವರಾಜ್ ಬಿಜೆಪಿ ಮುಖಂಡರಾದ ಅನಿಲ್ ಕುಮಾರ್, ನಿಶಾಂತ್ ಸೋಮಶೇಖರ್, ಬಿಜೆಪಿ ಅಲ್ಪಸಂಖ್ಯಾತರ ಮಹಿಳಾ ಪ್ರಧಾನ ಕಾರ್ಯದರ್ಶಿ ಸಬಿಹಾ ಅಂಜುಂ, ಮಹೇಂದ್ರ ಕಿರಣ್ ಉಪಸ್ಥಿತರಿದ್ದರು.

ಜನಸೇವಕ ಯೋಜನೆಯು ರಾಜಾಜಿನಗರ, ಮಹದೇವಪುರ, ಬೊಮ್ಮನಹಳ್ಳಿ, ದಾಸರಹಳ್ಳಿ, ಯಶವಂತಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಅನುಷ್ಠಾನಗೊಂಡಿದೆ.

ಫಲಾನುಭವಿಯೊಬ್ಬರಿಗೆ ಸರ್ಕಾರಿ ಸೇವೆಯ ದಾಖಲೆಯೊಂದನ್ನು ನೀಡುವ ಮೂಲಕ ಸಚಿವ ಸುರೇಶ್ ಕುಮಾರ್ ಜನಸೇವಕ ಯೋಜನೆಗೆ ಚಾಲನೆ ನೀಡಿದರು. ಸಚಿವ ಎಸ್‌.ಟಿ.ಸೋಮಶೇಖರ್ ಇದ್ದಾರೆ

ಯಾವ ಸೇವೆಗಳು ಲಭ್ಯ ?

ಆಧಾರ್ ಕಾರ್ಡ್, ಜಾತಿ/ ಆದಾಯ ಪ್ರಮಾಣ ಪತ್ರ, ವೃದ್ಧಾಪ್ಯ ವೇತನ, ಅಂಗವಿಕಲ/ ವಿಧವಾ ಪಿಂಚಣಿ, ಸಂಧ್ಯಾ ಸುರಕ್ಷಾ ಯೋಜನೆ ಸೇರಿದಂತೆ ಹಾಗೂ ಕಂದಾಯ ಇಲಾಖೆಯ 21 ಸೇವೆಗಳು, ಕರ್ನಾಟಕ ಕಟ್ಟಡ ಮತ್ತು ಕಾರ್ಮಿಕ ಕಲ್ಯಾಣ ಮಂಡಳಿ ಸೇವೆಗಳು, ಬಿಬಿಎಂಪಿ ವ್ಯಾಪ್ತಿಯ 18 ಸೇವೆಗಳು.

ಅಂಗವಿಕಲ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಯೋಜನೆಗಳು, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಸೇವೆಗಳು, ಪೊಲೀಸ್ ಇಲಾಖೆಯ ಪ್ರಮುಖ 3 ಸೇವೆಗಳು, ಬಿಪಿಎಲ್ ಪಡಿತರ ಚೀಟಿ, ಇ-ಸ್ಟ್ಯಾಂಪ್, ಸಾರಿಗೆ ಇಲಾಖೆ ಮತ್ತು ಇನ್ನಿತರೆ ಇಲಾಖೆಯ ಸೇವೆಗಳು 'ಜನಸೇವಕ'ದ ಅಡಿ ದೊರೆಯುತ್ತವೆ.

ಮಾಹಿತಿಗೆ, 080-44554455, www.janasevaka.karnataka.gov.in

ಬೋನಿಗೆ ಬಿದ್ದ ಹೆಣ್ಣು ಚಿರತೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಗಡಿ ಗ್ರಾಮ ನಾರಾಯಣಪುರ ಹತ್ತಿರ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಒಂದೂವರೆ ವರ್ಷದ ಹೆಣ್ಣು ಚಿರತೆ ಬಿದ್ದಿದೆ.

ಹಲವು ದಿನಗಳಿಂದ ಈ ಭಾಗದಲ್ಲಿ ಚಿರತೆ ಓಡಾಟ ಹೆಚ್ಚಾಗಿದ್ದು, ಈ ಬಗ್ಗೆ ಸ್ಥಳೀಯರು ಅರಣ್ಯ ಇಲಾಖೆಗೆ ದೂರು ನೀಡಿದ್ದರು. ಇಲಾಖೆ ಕೆಲವು ದಿನಗಳ ಹಿಂದೆ ಬೋನು ಇರಿಸಿತ್ತು. ಗುರುವಾರ ರಾತ್ರಿ ಚಿರತೆ ಬೋನಿಗೆ ಬಿದ್ದಿದೆ.

ಅದರಂಗಿ ಅರಣ್ಯವು ನೆಲಮಂಗಲ ಹಾಗೂ ಮಾಗಡಿ ತಾಲ್ಲೂಕುಗಳಿಗೆ ಹೊಂದಿಕೊಂಡಂತೆ ಇದ್ದು, ಇತ್ತೀಚಿನ ದಿನಗಳಲ್ಲಿ ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ಈ ಭಾಗದಲ್ಲಿನ ಗ್ರಾಮಗಳ ಜನರು, ದನಗಾಹಿಗಳು ಹಾಗೂ ಕುರಿ ಮೇಕೆ ಮೇಯಿಸುವವರಿಗೆ ಭಯ ಮೂಡಿಸುತ್ತಿವೆ. ರಾತ್ರಿ ವೇಳೆ ಗ್ರಾಮಗಳಿಗೆ ನುಗ್ಗಿ ಕರು, ಮೇಕೆ, ಕುರಿಗಳನ್ನು ತಿನ್ನುತ್ತಿದ್ದರಿಂದ ಜನ ದಿಗಿಲುಗೊಂಡಿದ್ದರು.

ಸೆರೆ ಸಿಕ್ಕಿರುವ ಚಿರತೆಯನ್ನು ಬನ್ನೇರುಘಟ್ಟ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ. ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ಚೇತನ್ ನಾಯಕ್, ಅರಣ್ಯ ರಕ್ಷಕ ಶ್ರೀನಾಥ್ ಹಾಗೂ ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ಬೋನಿನಲ್ಲಿ ಸೆರೆಯಾಗಿರುವ ಚಿರತೆ

ಬೆಂಗಳೂರು ರೇಸ್

'ಸ್ಕ್ರುಪಲ್ಸ್' ಗೆಲ್ಲುವ ನಿರೀಕ್ಷೆ

'ದಿ ಶೆರ್ಲಾಕ್ ಬೆಂಗಳೂರು ಜುವೆನೈಲ್ ಮಿಲಿಯನ್' ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಸ್ಕ್ರುಪಲ್ಸ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಗಜೇಬೊ ಟಾಕ್ 2, ಜೈ ವಿಕ್ರಮ್ 9, ಅಜೀಮ್ಮಿ ಪ್ರಿನ್ಸೆಸ್ 7

2ನೇ ರೇಸ್: ಸ್ಟಾರ್ ಹಾಪ್ಪರ್ 8, ಏರೋಸ್ಪೀಡ್ 4, ಬರೊನೆಸ್ 12

3ನೇ ರೇಸ್: ಪೋರ್ಟ್ ಆಫ್ ಬ್ಯೂಟಿ 7, ಇಂಡಿಯನ್ ಡೆಮೊಕ್ರಾಟ್ 12, ಟೋಕಿಯೊ ರೋಸ್ 2

4ನೇ ರೇಸ್: ಹೊಕಾಯ್ಡೊ 6, ಫಸ್ಟ್ ಇಂಪ್ರೆಷನ್ 8, ಅಲೆಕ್ಸಾಂಡ್ರೆ ಡುಮಸ್ 1

5ನೇ ರೇಸ್: ಕರ್ನಲ್ ಹಾರ್ಟ್ 6, ನಾರ್ದರನ್ ಅಲಯನ್ಸ್ 1, ಆಟೊಮ್ಯಾಟಿಕ್ 2

6ನೇ ರೇಸ್: ಸ್ಕ್ರುಪಲ್ಸ್ 9, ಪೆಕನ್‌ವುಡ್ 7, ಕೂಲ್ ರೈಡರ್ 2

7ನೇ ರೇಸ್: ಅಮೇಜಿಂಗ್ ಬ್ಲೇಝ್ 1, ರೀಡೌಟಬಲ್ 2, ಸೀಕ್ರೆಟ್ ಸೋರ್ಸ್ 3

8ನೇ ರೇಸ್: ಗ್ರಿಫಿನ್ 3, ಚೈನ್ ಆಫ್ ಥಾಟ್ಸ್ 6, ಕ್ರಿಮ್ಸನ್ ಹಾರ್ಟ್ 1

ಉತ್ತಮ ಬೆಟ್: ಗ್ರಿಫಿನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

'ಎನ್‌ಡಿಆರ್‌ಎಫ್‌ಗೆ ಗರುಡ ಏರೋಸ್ಪೇಸ್ ನೆರವು'

ಬೆಂಗಳೂರು: 'ಉತ್ತರಾಖಂಡದಲ್ಲಿ ನೀರ್ಗಲ್ಲು ಕುಸಿತದ ಪರಿಣಾಮ ಸಂಭವಿಸಿದ ಪ್ರವಾಹ ದುರಂತದಲ್ಲಿ ಸಿಲುಕಿಕೊಂಡವರು ಹಾಗೂ ಮೃತ ದೇಹಗಳನ್ನು ಪತ್ತೆ ಮಾಡಲು ನಮ್ಮ ತಂಡವು ಎನ್‌ಡಿಆರ್‌ಎಫ್‌ಗೆ ನೆರವಾಗುತ್ತಿದೆ' ಎಂದು ಗರುಡ ಏರೋಸ್ಪೇಸ್ ಸಂಸ್ಥೆಯ ಉಪಾಧ್ಯಕ್ಷ ಶಾಶ್ವತ್ ಜೈನ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ತಿಂಗಳ ಮೊದಲ ವಾರ ನಮಗೆ ಎನ್‌ಡಿಆರ್‌ಎಫ್‌ನಿಂದ ಕರೆ ಬಂದಿತ್ತು. ಹೀಗಾಗಿ ನಾಲ್ಕು ಸದಸ್ಯರನ್ನೊಳಗೊಂಡ ತಂಡವನ್ನು ಉತ್ತರಾಖಂಡಕ್ಕೆ ಕಳುಹಿಸಿದ್ದೆವು' ಎಂದರು.

PUBLIC NOTICE

Our clients are investigating the title of all that piece and parcel of lands all situated at **Jakkur Plantation Village, Yelahanka Hobli, Bangalore North Taluk** morefully set out in the Schedule below and hereinafter referred to as **"Schedule Property"** from its present owners M/s. Deccan Aviation Turbine Overhaul Private Limited **("Owners")**.

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owners or objecting to such transaction with our clients, should write to the undersigned within **fifteen days** from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our clients shall proceed on the basis that there are no claims of whatsoever nature with regard to the Schedule Property.

SCHEDULE

All that piece and parcel of residentially converted lands bearing **Survey No.6 and Survey No.7** situated at **Jakkur Plantation Village, Yelahanka Hobli, Bangalore North Taluk,** together measuring in all about 01 Acre and 39 ½ Guntas.

Item No.	Survey Nos.	Total Extent A	Total Extent G	Boundaries East	Boundaries West	Boundaries North	Boundaries South
1.	Sy. No. 6	00	39 ¾	Sy.No.1 A, Block 14	Portion of Sy. No.7	Portion of Sy.No.6	Govt. Flying Training School
2.	Sy. No. 7	00	39 ¾	Portion of Sy.No.6	Govt. Flying Training School	Portion of Sy. No.7 and Road	Govt. Flying Training School
Total Extent		01	39 ½				

Together with easementary right of way in the road measuring approximately 40 feet wide formed in Survey No. 7, 8 and (earlier Survey No. 1) leading from the Schedule Property to NH7.

R. Sunitha, Advocate
Anup S Shah Law Firm, No. 34, 7th Cross, Vasanthnagar,
Cunningham Road, Bangalore - 560 052. Phone: 91-80-42423000

ಮಹಿಳಾ ಫುಟ್‌ಬಾಲ್: ಬೆಂಗಳೂರು ಯುನೈಟೆಡ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರ್ಷಿತ ಮತ್ತು ಪೂರ್ಣಿಮ ಗಳಿಸಿದ ತಲಾ ಎರಡು ಗೋಲುಗಳ ಬಲದಿಂದ ಬೆಂಗಳೂರು ಯುನೈಟೆಡ್ ತಂಡ ಭರ್ಜರಿ ಗೆಲುವು ದಾಖಲಿಸಿತು. ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ರಾಜ್ಯ ಮಹಿಳಾ ಲೀಗ್‌ನ ಶುಕ್ರವಾರದ ಪಂದ್ಯದಲ್ಲಿ ಈ ತಂಡ ಬೆಂಗಳೂರು ಸಾಕರ್ ಗ್ಯಾಲಕ್ಸಿಯನ್ನು 6–0 ಗೋಲುಗಳ ಅಂತರದಲ್ಲಿ ಮಣಿಸಿತು.

19ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಯುನೈಟೆಡ್‌ಗೆ ಸ್ಯಾನ್‌ಫಿದಾ ಮುನ್ನಡೆ ತಂದುಕೊಟ್ಟರು. ಹರ್ಷಿತ 22 ಮತ್ತು 31ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. 44ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಅಮೂಲ್ಯ ಮುನ್ನಡೆ ಹೆಚ್ಚಿಸಿದರು. 80ನೇ ನಿಮಿಷ ಮತ್ತು ಇಂಜುರಿ ಅವಧಿಯಲ್ಲಿ ಪೂರ್ಣಿಮಾ ಎರಡು ಗೋಲುಗಳನ್ನು ಗಳಿಸಿ ಎದುರಾಳಿ ತಂಡಕ್ಕೆ ಮತ್ತಷ್ಟು ಸಂಕಷ್ಟ ತಂದೊಡ್ಡಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಬ್ರೇವ್ಸ್ ತಂಡ ಸುಶ್ಮಿತಾ ಜಾಧವ್ (21ನೇ ನಿಮಿಷ) ಗಳಿಸಿದ ಏಕೈಕ ಗೋಲಿನಿಂದ ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ ತಂಡವನ್ನು ಮಣಿಸಿತು. ಮಾತೃ ಪ್ರತಿಷ್ಠಾನ ಮತ್ತು ಕಿಕ್‌ಸ್ಟಾರ್ಟ್ ಎಫ್‌ಸಿ, ರೆಬೆಲ್ಸ್ ವಿಮೆನ್ ಎಫ್‌ಸಿ ಮತ್ತು ಸ್ಲ್ಯಾಂಜರ್ಸ್ ಬೆಳಗಾಂ ಎಫ್‌ಸಿ ತಂಡಗಳು 1–1 ಗೋಲಿನಿಂದ ಡ್ರಾ ಮಾಡಿಕೊಂಡವು.

ಕಿಕ್‌ಸ್ಟಾರ್ಟ್‌ಗಾಗಿ ಕಾವ್ಯ (11ನೇ ನಿ, ಪೆನಾಲ್ಟಿ) ಮತ್ತು ಮಾತೃ ಪ್ರತಿಷ್ಠಾನಕ್ಕಾಗಿ ಕರುಣಾ (14ನೇ ನಿ, ಪೆನಾಲ್ಟಿ) ಗೋಲು ಗಳಿಸಿದರೆ ಸ್ಲ್ಯಾಂಜರ್ಸ್ ಪರ ಅಂಜಲಿ (53ನೇ ನಿ) ಮತ್ತು ರೆಬಲ್ಸ್‌ಗಾಗಿ ನಿಸೀಲಿಯಾ (57ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು.

ಎರಡು ದಿನ ವಿರಾಮವಿದ್ದು ಸೋಮವಾರ ಬೆಳಿಗ್ಗೆ ಒಂಬತ್ತು ಗಂಟೆಗೆ ರೆಬೆಲ್ಸ್ ಮತ್ತು ಬೆಂಗಳೂರು ಸಾಕರ್ಸ್ ಗ್ಯಾಲಕ್ಸಿ, 11 ಗಂಟೆಗೆ ಬೆಂಗಳೂರು ಯುನೈಟೆಡ್ ಮತ್ತು ಮಾತೃ ಪ್ರತಿಷ್ಠಾನ ತಂಡಗಳು ಸೆಣಸಲಿವೆ.

ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಯ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹1 ಕೋಟಿ ಮೊತ್ತದ ಚೆಕ್ ಅನ್ನು ಸಂಸ್ಥೆಯ ಅಧ್ಯಕ್ಷ ಸಿ.ಮುನಿಕೃಷ್ಣ ಅವರು ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರಿಗೆ ಹಸ್ತಾಂತರಿಸಿದರು. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್, ಸಂಸ್ಥೆಯ ನಿರ್ದೇಶಕ ಎಚ್‌.ಆರ್‌.ತೀರ್ಥಲಿಂಗಪ್ಪ, ವೀರೇಶ್ ಸಂಗಳದ, ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ.ಪೂಜಾರಿ ಇದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಟಿ.ಬಿ.ಸರ್ಕಲ್ ಹತ್ತಿರ ತುಮಕೂರು ರಸ್ತೆ, ದೊಡ್ಡಬಳ್ಳಾಪುರ–561203
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂ: 080–29799416
ಇ–ಮೇಲ್: apmc.dbpur@gmail.com

ಕ್ರಮ ಸಂಖ್ಯೆ/ಕೃಉಮಾಸ/ದೊ/ಪ್ರಕಟಣೆ/419/2020–21 ದಿನಾಂಕ : 19–02–2021

ಸಂಕ್ಷಿಪ್ತ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ದೊಡ್ಡಬಳ್ಳಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಲಾಗಿರುವ 500 ಮೆ.ಟನ್ ಸಾಮರ್ಥ್ಯದ ಗೋದಾಮುಗಳನ್ನು ಮಾಹೆಯಾನ ಲೀವ್ ಆಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ 11 ತಿಂಗಳ ಅವಧಿಗೆ ಪ್ರತಿ ಸಾರಿ ನವೀಕರಿಸಿಕೊಳ್ಳುವ ಷರತ್ತಿಗೊಳಪಟ್ಟು ನಿಯಮಾನುಸಾರ 55 ತಿಂಗಳ ಅವಧಿಗೆ ಹಂಚಿಕೆ ಮಾಡಲು ಆಸ್ತಿ ಹಂಚಿಕೆ ನಿಯಮಾವಳಿಗಳು 2004 ರ ನಿಯಮ (6) ರ ಪ್ರಕಾರ ಸಮಿತಿಯಲ್ಲಿ ನೋಂದಣಿಯನ್ನು ಮಾಡಿಸಿರುವ/ಮಾಡಿಸುವ ಖರೀದಿದಾರರ ಮತ್ತು ದಲ್ಲಾಲರ ಲೈಸೆನ್ಸ್‌ಗಳನ್ನು ಪಡೆದುಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿರುವ ಅರ್ಹಪೇಟೆ ಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಾರುಕಟ್ಟೆ ಪ್ರಾಂಗಣದಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವ 500 ಮೆ.ಟನ್ ಸಾಮರ್ಥ್ಯದ ಗೋದಾಮುಗಳ ವಿವರ

1) ಹಂಚಿಕೆ ಮಾಡಲು ಉದ್ದೇಶಿಸಿರುವ ಗೋದಾಮುಗಳ ಸಂಖ್ಯೆ: ಎ) **500 ಮೆ.ಟನ್–01, ಬಿ) 500 ಮೆ.ಟನ್–02, ಸಿ) 500 ಮೆ.ಟನ್–03, 2)** ಪ್ರತಿ ಗೋದಾಮುವಿನ ಅಳತೆ (ಚ.ಮೀಟರ್‌ಗಳಲ್ಲಿ) **30x16, 3)** ಪ್ರತಿ ಗೋದಾಮುವಿನ ವಿಸ್ತೀರ್ಣ [ಚದರ ಅಡಿಗಳಲ್ಲಿ]: **5164.80 4)** ಪ್ರತಿ ಗೋದಾಮಿಗೆ ನಿರ್ದೇಶಕರಿಂದ ಅನುಮೋದಿತವಾಗಿರುವ ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕ: (ರೂ.ಗಳಲ್ಲಿ) : **35,950.00 5)** ಪ್ರತಿ ಗೋದಾಮಿಗೆ ಸಲ್ಲಿಸಬೇಕಾದ ಪ್ರಾರಂಭಿಕ ಮುಂಗಡ ಠೇವಣಿ (ರೂ.ಗಳಲ್ಲಿ) (2 ತಿಂಗಳ ಲೀವ್ ಅಂಡ್ ಲೈಸೆನ್ಸ್ ಶುಲ್ಕ) : **71,900.00.**

1) ಹಂಚಿಕೆ ಪಡೆಯಲು ಇಚ್ಛಿಸುವ ಲೈಸೆನ್ಸ್ ಹೊಂದಿದ ಪೇಟೆಕಾರ್ಯಕರ್ತರು **ದಿನಾಂಕ: 22.02.2021 ರಿಂದ ದಿನಾಂಕ 09.03.2021** ರೊಳಗಾಗಿ ನೋಂದಣಿ ಶುಲ್ಕ ರೂ500=00ಗಳನ್ನು (ಮರುಪಾವತಿಸುವುದಿಲ್ಲ) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ ಈ ಹೆಸರಿಗೆ ಡಿಡಿ/ನಗದು ಪಡೆದು ಈ ಕಛೇರಿಗೆ ಸಲ್ಲಿಸಿ ನೊಂದಣಿ ಮಾಡಿಕೊಳ್ಳತಕ್ಕದ್ದು. 2) ಹಂಚಿಕೆ ಪಡೆಯಲು ಇಚ್ಛಿಸುವ ನೋಂದಾಯಿತ ಅರ್ಹ ಪೇಟೆ ಕಾರ್ಯಕರ್ತರು **ರೂ.500/–** ಅರ್ಜಿ ಶುಲ್ಕವನ್ನು ಕಾರ್ಯದರ್ಶಿಯವರ ಹೆಸರಿನಲ್ಲಿ ಡಿ.ಡಿ/ನಗದು ಪಡೆದು ಈ ಕಛೇರಿಗೆ ಪಾವತಿಸಿ ಅರ್ಜಿ ನಮೂನೆ–3 ಹಾಗೂ ಷರತ್ತುಗಳ ವಿವರಗಳನ್ನು **ದಿನಾಂಕ: 22.02.2021 ರಿಂದ ದಿನಾಂಕ: 24.03.2021 ರ ಸಂಜೆ 5.30 ಗಂಟೆಯವರೆಗೆ** ಪಡೆಯಬಹುದು. ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ: 09.04.2021 ರ ಸಂಜೆ 5.30 ಗಂಟೆಯವರೆಗೆ.** 3) ಕಳೆದ ಮೂರು ವರ್ಷಗಳ ಅಂದರೆ, **2017–18, 2018–19 & 2019–20 ನೇ** ಸಾಲುಗಳಲ್ಲಿ ಸಮಿತಿಗೆ ಪಾವತಿಸಿರುವ ಮಾರುಕಟ್ಟೆ ಶುಲ್ಕ ಅಥವಾ ಬಳಕೆದಾರರ ಶುಲ್ಕದ ವಿವರಗಳನ್ನು ಕಡ್ಡಾಯವಾಗಿ ಮೊಹರು ಮತ್ತು ಸಹಿಯೊಂದಿಗೆ ಅರ್ಜಿಯ ಜೊತೆ ಸಲ್ಲಿಸತಕ್ಕದ್ದು. 4) ಸಮಿತಿಯು ಅಂಗಡಿಯ ಗೋದಾಮುಗಳ ಹಂಚಿಕೆಯನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. 5) ಹೆಚ್ಚಿನ ವಿವರಗಳನ್ನು ಮತ್ತು ಅರ್ಜಿಯೊಂದಿಗೆ ಸಲ್ಲಿಸಬೇಕಾದ ಇತರೆ ದಾಖಲೆಗಳ ಮಾಹಿತಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ ಇಲ್ಲಿ ರಜಾ ದಿನ ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ
ಸಹಿ/– ಅಧ್ಯಕ್ಷರು, ಕೃಉಮಾಸ, ದೊಡ್ಡಬಳ್ಳಾಪುರ

ವಾಸಾಸಂಇ/ಬೆಂ.ಗ್ರಾ/ಶಿರಡಿ ಸಾಯಿ/358/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ತೋಟಗಾರಿಕೆ ಇಲಾಖೆ)
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯ ವಲಯ), ಕೋಲಾರ
ಸಂಖ್ಯೆ:ಹಿಸತೋನಿ:ರಾವ:ಕೋ:ಸತೋಅ:01:2020–21 ದಿನಾಂಕ: 16.02.2021

ಫಸಲಿನ ಟೆಂಡರ್ ಕಂ ಬಹಿರಂಗ /ಇ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣ್ಣಿನ ವ್ಯಾಪಾರಿಗಳಿಗೆ ತಿಳಿಸುವುದೇನೆಂದರೆ 2021 ನೇ ಸಾಲಿನಲ್ಲಿ ತೋಟಗಾರಿಕೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಕೋಲಾರ ರವರ ಅಧೀನದ ಈ ಕೆಳಕಂಡ ವಿವಿಧ ತೋಟಗಾರಿಕೆ ಕ್ಷೇತ್ರದಲ್ಲಿ ಬೆಳೆದಿರುವ ಸಪೋಟ, ಮಾವು, ತೆಂಗು, ಹಲಸು, ಗೋಡಂಬಿ, ಫಸಲನ್ನು ಕೆಳಗೆ ತಿಳಿಸಿರುವ ದಿನಾಂಕ ಮತ್ತು ವೇಳೆಯಲ್ಲಿ ಬಹಿರಂಗ ಹರಾಜು/ಇ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಕ್ರ. ಸಂ	ಬಹಿರಂಗ ಹರಾಜು ಮುಖಾಂತರ ಹರಾಜು ನಡೆಯುವ ತೋಟಗಾರಿಕೆ ಕ್ಷೇತ್ರ	ಫಸಲಿನ ಹೆಸರು	ಫಸಲಿನ ಅವಧಿ	ಮುಂಗಡ ಠೇವಣಿ ಮೊತ್ತ (ರೂ, ಗಳಲ್ಲಿ)	ಬಹಿರಂಗ ಹರಾಜು ನಡೆಯುವ ಸ್ಥಳ	ದಿನಾಂಕ ಮತ್ತು ವೇಳೆ
1	ಹೊಗಳಗೆರೆ ತೋಟಗಾರಿಕೆ ಕ್ಷೇತ್ರ ಶ್ರೀನಿವಾಸಪುರ ॥ತಾ॥	ಸಪೋಟ ಕರಿಬೇವು	01–01–2021 ರಿಂದ 30–06–2021	1000	ಹೊಗಳಗೆರೆ ತೋಟಗಾರಿಕೆ ಕ್ಷೇತ್ರ	03–03–2021 ಬೆಳಗ್ಗೆ 11:30 ಗಂಟೆ
		ಗೋಡಂಬಿ ಹಲಸು	01–01–2021 ರಿಂದ 31–12–2021	1000	ಹೊಗಳಗೆರೆ ತೋಟಗಾರಿಕೆ ಕ್ಷೇತ್ರ	03–03–2020 ಬೆಳಗ್ಗೆ 12:00 ಗಂಟೆ
2	ಜೋಡಿವಮ್ಮಸಂದ್ರ ತೋಟಗಾರಿಕೆ ಕ್ಷೇತ್ರ ಮುಳಬಾಗಿಲು ॥ತಾ॥	ಸಪೋಟ	01–01–2021 ರಿಂದ 30–06–2021	1000	ಜೋಡಿವಮ್ಮಸಂದ್ರ ತೋಟಗಾರಿಕೆ ಕ್ಷೇತ್ರ	03–03–2021 ಮಧ್ಯಾಹ್ನ 2:30 ಗಂಟೆ
		ತೆಂಗು ಹಲಸು	01–01–2021 ರಿಂದ 31–12–2021			
3	ಜಿಲ್ಲಾ ನರ್ಸರಿ, ಕೋಲಾರ ತಾಲ್ಲೂಕು	ಸಪೋಟ	01–01–2021 ರಿಂದ 30–06–2021	1000	ಜಿಲ್ಲಾ ನರ್ಸರಿ, ಕೋಲಾರ	04–03–2021 ಮಧ್ಯಾಹ್ನ 12:00 ಗಂಟೆ
		ತೆಂಗು	01–01–2021 ರಿಂದ 31–12–2021			
4	ಕುಪ್ಪನಹಳ್ಳಿ ತೋಟಗಾರಿಕೆ ಕ್ಷೇತ್ರ ಬಂಗಾರಪೇಟೆ ॥ತಾ॥	ಸಪೋಟ	01–01–2021 ರಿಂದ 30–06–2021	1000	ಕುಪ್ಪನಹಳ್ಳಿ ತೋಟಗಾರಿಕೆ ಕ್ಷೇತ್ರ	04–03–2021 ಮಧ್ಯಾಹ್ನ 2:30 ಗಂಟೆ
		ಮಾವು ತೆಂಗು	01–01–2021 ರಿಂದ 31–12–2021			
5	ತಾಲ್ಲೂಕು ನರ್ಸರಿ ಶ್ರೀನಿವಾಸಪುರ	ತೆಂಗು	01–01–2021 ರಿಂದ 31–12–2021	1000	ತಾಲ್ಲೂಕು ನರ್ಸರಿ ಶ್ರೀನಿವಾಸಪುರ	04–03–2021 ಮಧ್ಯಾಹ್ನ 12:30 ಗಂಟೆ
6	ದೊಡ್ಡಶಿವಾರ ತೋಟಗಾರಿಕೆ ಕ್ಷೇತ್ರ ಮಾಲೂರು ॥ತಾ॥	ಸಪೋಟ	01–01–2021 ರಿಂದ 30–06–2021	1000	ದೊಡ್ಡಶಿವಾರ ತೋಟಗಾರಿಕೆ ಕ್ಷೇತ್ರ	06–03–2021 ಮಧ್ಯಾಹ್ನ 12:30 ಗಂಟೆ
		ಮಾವು ಹಲಸು	01–01–2021 ರಿಂದ 31–12–2021			
7	ಚವ್ವೇನಹಳ್ಳಿ ತೋಟಗಾರಿಕೆ ಕ್ಷೇತ್ರ ಮಾಲೂರು ॥ತಾ॥	ಸಪೋಟ	01–01–2021 ರಿಂದ 30–06–2021	1000	ಚವ್ವೇನಹಳ್ಳಿ ತೋಟಗಾರಿಕೆ ಕ್ಷೇತ್ರ	06–03–2021 ಮಧ್ಯಾಹ್ನ 3:00 ಗಂಟೆ
		ತೆಂಗು	01–01–2021 ರಿಂದ 31–12–2021			

ಕ್ರ ಸಂ	ಇ–ಹರಾಜು ಮುಖಾಂತರ ಹರಾಜು ನಡೆಯುವ ತೋಟಗಾರಿಕೆ ಕ್ಷೇತ್ರ	ಫಸಲಿನ ಹೆಸರು	ಫಸಲಿನ ಅವಧಿ	ಠೇವಣಿ ಮೊತ್ತ (ರೂ.ಗಳಲ್ಲಿ)	ಇ–ಹರಾಜು ಮುಕ್ತಾಯಗೊಳ್ಳುವ ದಿನಾಂಕ ಮತ್ತು ವೇಳೆ Live Action
8	ಹೊಗಳಗೆರೆ ತೋಟಗಾರಿಕೆ ಕ್ಷೇತ್ರ ಶ್ರೀನಿವಾಸಪುರ ॥ತಾ॥	ಮಾವು	01–01–2021 ರಿಂದ 31–12–2021	30000	08–03–2021, ಬೆಳಗ್ಗೆ 11:00 ಗಂಟೆಯಿಂದ ಸಂಜೆ 4 ಗಂಟೆ
9	ಜೋಡಿವಮ್ಮಸಂದ್ರ ತೋಟಗಾರಿಕೆ ಕ್ಷೇತ್ರ ಮುಳಬಾಗಿಲು ॥ತಾ॥	ಮಾವು		30000	09–03–2021 ಬೆಳಗ್ಗೆ 11:00 ಗಂಟೆ ಯಿಂದ ಸಂಜೆ 4 ಗಂಟೆ
10	ಮಾವು ಉತ್ಕೃಷ್ಟ ಕೇಂದ್ರ ಹೊಗಳಗೆರೆ ಶ್ರೀನಿವಾಸಪುರ ॥ತಾ॥	ಮಾವು		10000	10–03–2021 ಬೆಳಗ್ಗೆ 11:00 ಗಂಟೆ ಯಿಂದ ಸಂಜೆ 4 ಗಂಟೆ

ಈ ಮೇಲ್ಕಂಡ ಫಸಲಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಲು ಬಿಡ್ಡುದಾರರು ಕಛೇರಿ ವೇಳೆಯಲ್ಲಿ ಹಿ.ಸ.ತೋ.ನಿ (ರಾವ), ಕೋಲಾರರವರನ್ನು ಇ–ಮೇಲ್: sadhsskolar@gmail.com ಹಾಗೂ ಸಂಬಂಧಿಸಿದ ತೋಟಗಾರಿಕೆ ಕ್ಷೇತ್ರದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಕ್ರ.ಸಂ.08, 09 ಮತ್ತು 10 ಇ–ಹರಾಜಿನಲ್ಲಿ ಭಾಗವಹಿಸುವವರು ಇ–ಹರಾಜು ಮೊತ್ತವು ಇಲಾಖಾ ಅಂದಾಜು ಮೊತ್ತಕ್ಕಿಂತ ಕಡಿಮೆ ಇದ್ದಲ್ಲಿ ಮರು ಇ–ಹರಾಜು/ ಹರಾಜನ್ನು ನಡೆಸಲಾಗುವುದು. ನಮೂದಿಸಿರುವ ತೋಟಗಾರಿಕೆ ಕ್ಷೇತ್ರಗಳಿಗೆ ಪ್ರತ್ಯೇಕವಾಗಿ ಇ–ಪೋರ್ಟಲ್ ನಲ್ಲಿ ಠೇವಣಿ ಖಾತೆಯಲ್ಲಿ ಠೇವಣಿ ಇಡಬೇಕು **(https://eproc.karnataka.gov.in) E-portal auction fees** ನ್ನು ಆನ್‌ಲೈನ್ ಮೂಲಕ ಪಾವತಿಸಬೇಕು.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯ ವಲಯ), ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 399/ಎಂ.ಸಿ.ಎ/2020–21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದೇವರಕೆರೆಯಲ್ಲಿ 'ಸಕ್ಕರ್‌ಮೌತ್' ವಿದೇಶಿ ತಳಿಯ ಮೀನು ಪತ್ತೆ ● ಜೀವಿ–ಪರಿಸರ ವ್ಯವಸ್ಥೆಗೆ ಮಾರಕ

ಆತಂಕ ತಂದಿರುವ 'ಅಮೆಜಾನ್ ಅತಿಥಿ'

ಪ್ರಜಾವಾಣಿ ವಾರ್ತೆ

ದೇವರ ಕೆರೆಯಲ್ಲಿ ಕಂಡು ಬಂದ ಸಕ್ಕರ್‌ಮೌತ್ ಮೀನು

ಬೆಂಗಳೂರು: ಇಸ್ರೊ ಬಡಾವಣೆಯ ದೇವರಕೆರೆಯಲ್ಲಿ 'ಸಕ್ಕರ್ ಮೌತ್' ಎಂಬ ವಿದೇಶಿ ತಳಿಯ ಮೀನುಗಳು ಪತ್ತೆಯಾಗಿರುವುದು ಪರಿಸರ ಕಾರ್ಯಕರ್ತರ ಆತಂಕಕ್ಕೆ ಕಾರಣವಾಗಿದೆ.

ಈ ಕೆರೆಯನ್ನು ಬಿಬಿಎಂಪಿ ಪುನರುಜ್ಜೀವನಗೊಳಿಸುತ್ತಿದೆ. ಕಾಮಗಾರಿಗಾಗಿ ಕೆರೆಯನ್ನು ಇತ್ತೀಚೆಗೆ ಸಂಪೂರ್ಣ ಖಾಲಿ ಮಾಡಲಾಗಿತ್ತು.

'ಕೆರೆಯ ನೀರು ಸಂಪೂರ್ಣ ಬತ್ತುತ್ತಿದ್ದಂತೆಯೇ ಮೀನನ್ನು ತೆಗೆದುಕೊಂಡು ಹೋಗಲು ಕೆಲವರು ಬಂದರು. ಆದರೆ, ಈ ಮೀನು ತಿನ್ನಲಾಗದು ಎಂಬ ಕಾರಣಕ್ಕೆ ಬಿಟ್ಟು ಹೋದರು. ನಾವೂ ಈ ಮೀನುಗಳನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟಿದ್ದೆವು. ತಜ್ಞರು ಬಂದು ಮಾಹಿತಿ ನೀಡಿದ ಬಳಿಕವಷ್ಟೇ ಈ ಮೀನುಗಳು ಅಪಾಯಕಾರಿ ಎಂಬುದು ಅರಿವಾಯಿತು' ಎಂದು ದೇವರ ಕೆರೆ ಸಂರಕ್ಷಣಾ ವೇದಿಕೆಯ ಹರೀಶ್ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಹೈಪೋಸ್ಟೊಮಸ್ ಪ್ಲೆಕೊಸ್ಟೊಮಸ್ (Hypostomus plecostomus) ಎಂಬ ವೈಜ್ಞಾನಿಕ ಹೆಸರನ್ನು ಹೊಂದಿರುವ ಸಕ್ಕರ್‌ಮೌತ್ ಮೀನುಗಳು ದಕ್ಷಿಣ ಅಮೆರಿಕದ ಅಮೆಜಾನ್ ಮೂಲದವು. ಇವುಗಳನ್ನು 'ಆರ್ಮೋರ್ಡ್ ಕ್ಯಾಟ್‌ಫಿಶ್' ಎಂದೂ ಕರೆಯುತ್ತಾರೆ. ಇವು 16ರಿಂದ 20 ಇಂಚುಗಳಷ್ಟು ಉದ್ದಕ್ಕೂ ಬೆಳೆಯುತ್ತವೆ. ಇವುಗಳು ಮರಿಗಳಿದ್ದಾಗ ಮಾತ್ರ ಕೊಕ್ಕರೆ ಅಥವಾ ನೀರುಕಾಗೆಗಳು ತಿನ್ನಬಲ್ಲವು. ಬೆಳೆದಂತೆ ಇವುಗಳ ಚರ್ಮ ಕಠಿಣವಾಗುವುದರಿಂದ ಬಲಿತ ಮೀನುಗಳನ್ನು ಹಕ್ಕಿಗಳಾಗಲೀ ಬೇರೆ ಮೀನುಗಳಾಗಲೀ ತಿನ್ನಲಾಗದು. ಇವು ಒಮ್ಮೆಲೆ ನೂರಾರು ಮೊಟ್ಟೆಗಳನ್ನಿಟ್ಟು ಮರಿಗಳನ್ನು ಮಾಡುತ್ತವೆ. ಹಾಗಾಗಿ ಇವುಗಳ ಸಂತತಿಯೂ ಬಲುಬೇಗ ವೃದ್ಧಿಸುತ್ತದೆ' ಎನ್ನುತ್ತಾರೆ ಮೀನಿನ ಪರಿಣತರಾದ ಆರ್.ದೀಪಕ್.

'ಆಫ್ರಿಕಾದ ಕ್ಯಾಟ್ ಫಿಷ್ (ಆನೆ ಮೀನು) ಹಾಗೂ ಟಿಲಾಪಿಯಾ (ಜುಲೇಬಿ ಮೀನು) ಮೀನುಗಳಂತೆಯೇ ತೆರದಲ್ಲಿ ಸಕ್ಕರ್‌ಫಿಶ್ ಕೂಡಾ ಆಕ್ರಮಣಕಾರಿ. ಇವು ತಾವು ಬದುಕುಳಿಯಲು ಇತರ ಮೀನುಗಳನ್ನು ತಿನ್ನುವುದಷ್ಟೇ ಅಲ್ಲ, ಪ್ರತಿಕೂಲ ಪರಿಸ್ಥಿತಿ ಎದುರಾದರೆ ಕೆರೆಯ ಗಿಡಗಂಟಿಗಳನ್ನೂ ತಿಂದು ತೇಗಬಲ್ಲವು. ಇವುಗಳ ಈ ಆಕ್ರಮಣಕಾರಿ ಪ್ರವೃತ್ತಿ ಇಡೀ ಕೆರೆಯ ಜೀವಿ–ಪರಿಸರ ವ್ಯವಸ್ಥೆಯನ್ನೇ ಹದಗೆಡಿಸಬಲ್ಲುದು. ಇವುಗಳಿರುವ ಕೆರೆಗಳಲ್ಲಿ ಬೇರೆ ಮೀನುಗಳೂ ಕ್ರಮೇಣ ನಶಿಸುತ್ತವೆ' ಎಂದು ಅವರು ವಿವರಿಸಿದರು.

'ದೇವರ ಕೆರೆಯಲ್ಲಿ ಮೀನುಗಳು ಸತ್ತು ಬಿದ್ದಿರುವ ಚಿತ್ರ ನೋಡಿ ಇವು ಕ್ಯಾಟ್‌ಫಿಶ್ (ಆನೆ ಮೀನು) ಇರಬಹುದು ಎಂದೇ ಭಾವಿಸಿದ್ದೆ. ಇಲ್ಲಿಗೆ ಬಂದು ಕೂಲಂಕಷವಾಗಿ ಗಮನಿಸಿದ ಬಳಿಕವಷ್ಟೇ ಇವು ಸಕ್ಕರ್‌ಮೌತ್ ಮೀನುಗಳೆಂಬುದು ತಿಳಿಯಿತು. ಈ ಮೀನು ಯಾವುದೇ ಕೆರೆಯನ್ನು ಸೇರಿಕೊಂಡರೂ ಅಲ್ಲಿನ ಪರಿಸರ ವ್ಯವಸ್ಥೆಯ ವಿನಾಶ ಕಟ್ಟಿಟ್ಟ ಬುತ್ತಿ. ಈ ಮೀನುಗಳನ್ನು ಹಕ್ಕಿಗಳೂ ತಿನ್ನುವುದಿಲ್ಲ. ನಾಯಿಗಳೂ ಮೂಸುವುದಿಲ್ಲ. ಹಾಗಾಗಿ ಕೆರೆಯಲ್ಲಿ ಅಷ್ಟೊಂದು ಸಂಖ್ಯೆಯಲ್ಲಿ ಮೀನು ಸತ್ತು ಬಿದ್ದಿದ್ದರೂ ಗಿಡುಗ, ಹದ್ದು ಮೊದಲಾದ ಹಕ್ಕಿಗಳು ಕೆರೆಯ ಬಳಿ ಇಲ್ಲಿ ಕಾಣಿಸಿಕೊಂಡಿಲ್ಲ' ಎಂದು ಬಿಬಿಎಂಪಿಯ ಜೀವವೈವಿಧ್ಯ ಸಮಿತಿಯ ಸದಸ್ಯ ವಿಜಯ್ ನಿಶಾಂತ್ ತಿಳಿಸಿದರು.

'ಸುಪ್ತಾವಸ್ಥೆಯಲ್ಲಿ ವರ್ಷಗಟ್ಟಲೆ ಬದುಕುಳಿಯಬಲ್ಲವು'

'ಈ ಮೀನುಗಳ ಸುಪ್ತಾವಸ್ಥೆಯಲ್ಲಿ ವರ್ಷಗಟ್ಟಲೆ ಬದುಕುಳಿಯಬಲ್ಲವು. ನೀರಿನ ಮೇಲೂ ಉಸಿರಾಡುವ ಸಾಮರ್ಥ್ಯ ಹೊಂದಿರುವ ಈ ಮೀನುಗಳು ತೆವಳಿಕೊಂಡು ಹೋಗಿ ಬೇರೆ ಕೆರೆಕಟ್ಟೆಗಳನ್ನು ಸೇರಿಕೊಳ್ಳುವ ಸಾಮರ್ಥ್ಯ ಹೊಂದಿವೆ. ಸ್ವಲ್ಪವೇ ನೀರು ಅಥವಾ ನೀರು ಸಿಕ್ಕರೂ ಇವು ಬದುಕುಳಿಯುತ್ತವೆ. ಮೋರಿಯಲ್ಲಿ ಹರಿಯುವ ಕೊಳಚೆಯಲ್ಲೂ ಜೀವಿಸಬಲ್ಲುವು' ಎನ್ನುತ್ತಾರೆ ದೀಪಕ್.

'ಕೆರೆಯ ನೀರನ್ನು ಸಂಪೂರ್ಣ ಖಾಲಿ ಮಾಡಿ ಈ ಮೀನುಗಳನ್ನು ನಾಶಪಡಿಸಲಾಗಿದೆ. ಸದ್ಯಕ್ಕೆ ಈ ಕೆರೆಯಲ್ಲಿ ಈ ಮೀನು ಕಾಣಿಸಿಕೊಳ್ಳುವ ಸಾಧ್ಯತೆ ಕಡಿಮೆ' ಎಂದು ಅವರು ತಿಳಿಸಿದರು.

'ಕೆರೆಗೆ ಸೇರಿಕೊಂಡಿದ್ದು ಹೇಗೆ?'

'ಸಕ್ಕರ್‌ಮೌತ್ ಜಾತಿಯ ಮೀನುಗಳನ್ನು ಅಕ್ವೇರಿಯಂಗಳಲ್ಲೂ ಸಾಕುತ್ತಾರೆ. ಅಕ್ವೇರಿಯಂನಲ್ಲಿ ಸಾಕಿರುವ ಮೀನನ್ನು ಯಾರಾದರೂ ತಂದು ಕೆರೆಯಲ್ಲಿ ಬಿಟ್ಟಿರುವ ಸಾಧ್ಯತೆ ಇದೆ' ಎನ್ನುತ್ತಾರೆ ಸ್ವತಃ ಅಕ್ವೇರಿಯಂ ತಜ್ಞರಾಗಿರುವ ದೀಪಕ್.

ಸುದ್ದಿ 2 ನಿಮಿಷ

'ರಾಜಕೀಯ ಪಕ್ಷಗಳು ಎಸ್‌ಒಪಿ ಪಾಲಿಸಬೇಕು'

ಬೆಂಗಳೂರು: ರಾಜಕೀಯ ಪಕ್ಷಗಳು ರ‍್ಯಾಲಿಗಳ ಸಂದರ್ಭದಲ್ಲಿ ಕಡ್ಡಾಯವಾಗಿ ಕೋವಿಡ್ ಮಾರ್ಗದರ್ಶಿ ಸೂತ್ರಗಳನ್ನು-(ಎಸ್‌ಒಪಿ) ಪಾಲಿಸಬೇಕು ಎಂದು ಹೈಕೋರ್ಟ್ ಹೇಳಿದೆ. ನ್ಯಾಯಾಲಯಕ್ಕೆ ಹಾಜರಾಗುವಂತೆ ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಅವರಿಗೆ ಮತ್ತೆ ನೋಟಿಸ್ ಜಾರಿಗೊಳಿಸಿದೆ.

ಲೆಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ರಾಜಕೀಯ ಪಕ್ಷಗಳು ರ‍್ಯಾಲಿ ಅಥವಾ ಸಭೆಗಳನ್ನು ನಡೆಸುವಾಗ ತಮ್ಮ ಕಾರ್ಯಕರ್ತರಿಗೆ ಕೋವಿಡ್ ನಿಯಮ ಪಾಲಿಸಲು ಸೂಚನೆ ನೀಡಬೇಕು. ಈ ಸಂಬಂಧ ಪಿಐಎಲ್‌ಗೆ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಮಾ.1ಕ್ಕೆ ಮುಂದೂಡಿತು.

ಸ್ವಚ್ಛತಾ ಕಿಟ್ ವಿತರಣೆಗೆ ಚಾಲನೆ

ಬೆಂಗಳೂರು: ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಒರಾಕಲ್ ಕಂಪನಿಯ ಸಹಭಾಗಿತ್ವದಲ್ಲಿ ರಾಜ್ಯದಾದ್ಯಂತ 36,000 ಆಶಾ ಕಾರ್ಯಕರ್ತೆಯರಿಗೆ ಆರೋಗ್ಯ ಹಾಗೂ ಸ್ವಚ್ಛತಾ ಕಿಟ್ ವಿತರಿಸುವ ಅಭಿಯಾನಕ್ಕೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಗುರುವಾರ ಚಾಲನೆ ನೀಡಿದರು.

ಕೈಗವಸು, ಮಾಸ್ಕ್, ಸ್ಯಾನಿಟೈಸರ್, ಸೋಪು, ಸ್ಯಾನಿಟರಿ ನ್ಯಾಪ್‌ಕಿನ್ ಸೇರಿದಂತೆ ಸ್ವಚ್ಛತೆಗೆ ಸಂಬಂಧಿಸಿದ ಹಲವು ಪರಿಕರಗಳನ್ನು ಕಿಟ್‌ನಲ್ಲಿ ನೀಡಲಾಗಿದೆ. ರಾಜ್ಯದ ಎಲ್ಲ ಆಶಾ ಕಾರ್ಯಕರ್ತೆಯರಿಗೂ ಈ ಕಿಟ್ ವಿತರಿಸಲಾಗುತ್ತದೆ. ಒರಾಕಲ್ ಕಂಪನಿಯ ಸಾಮಾಜಿಕ ಹೊಣೆಗಾರಿಕೆ ನಿಧಿಯ ನೆರವಿನಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆಯು ಈ ಕಾರ್ಯಕ್ರಮ ಹಮ್ಮಿಕೊಂಡಿದೆ.

ದೆಹಲಿ ಹೈಕೋರ್ಟ್‌ಗೆ ಸ್ವಾಮಿ ಮನವಿ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದ ಆದೇಶವನ್ನು ಬಿಜೆಪಿ ಸಂಸದ ಸುಬ್ರಹ್ಮಣಿಯನ್ ಸ್ವಾಮಿ ದೆಹಲಿ ಹೈಕೋರ್ಟ್‌ನಲ್ಲಿ ಶುಕ್ರವಾರ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ಇತರರ ವಿರುದ್ಧದ ಪ್ರಕರಣದಲ್ಲಿ ಕಾನೂನು ಕ್ರಮ ಜರುಗಿಸಲು ಸಾಕ್ಷ್ಯಗಳ ವಿಚಾರಣೆ ಆರಂಭಿಸಬೇಕು ಎಂಬ ಸ್ವಾಮಿ ಅವರು ಮಾಡಿದ ಮನವಿಯನ್ನು ವಿಚಾರಣಾ ನ್ಯಾಯಾಲಯವು ತಿರಸ್ಕರಿಸಿತ್ತು.

ಸ್ವಾಮಿ ಅವರ ಅರ್ಜಿಯು ಅಪರಾಧ ದಂಡಸಂಹಿತೆಯ ಸೆಕ್ಷನ್ 244ರ ಅಡಿ ಹೇಳಿದಂತೆ, ಈ ಪ್ರಕರಣದಲ್ಲಿ ಎಲ್ಲಾ ವಿವರವಾದ ಪರಿಶೀಲನೆಗಳು ಮುಗಿದ ಬಳಿಕ ಸಾಕ್ಷ್ಯಗಳನ್ನು ಪರಿಗಣಿಸಲಾಗುವುದು ಎಂದು ಫೆಬ್ರುವರಿ 11ರಂದು ವಿಚಾರಣಾ ನ್ಯಾಯಾಲಯವು ಹೇಳಿತ್ತು. ಈ ಆದೇಶದಿಂದ ಅಸಮಾಧಾನಗೊಂಡಿರುವ ಸ್ವಾಮಿ, ದೆಹಲಿ ಹೈಕೋರ್ಟ್‌ನಲ್ಲಿ ಅದನ್ನು ಪ್ರಶ್ನಿಸಿದ್ದಾರೆ.

ಬೆಂಗಳೂರು ಚಿತ್ರೋತ್ಸವ: ಲಾಂಛನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಲಾಂಛನ ಅನಾವರಣಗೊಳಿಸಿದರು. ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ನಟಿಯರಾದ ಶ್ರುತಿ, ತಾರಾ ಅನೂರಾಧಾ ಮತ್ತಿತರರು ಇದ್ದರು

ಬೆಂಗಳೂರು: 'ಭಾರತೀಯ ಪ್ರದರ್ಶನ ಕಲೆಗಳ ಮಹತ್ವ' ಎಂಬ ವಿಷಯದ ಅಡಿಯಲ್ಲಿ ಮಾರ್ಚ್ 24ರಿಂದ 31ರವರೆಗೆ 13ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ ನಡೆಯಲಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಚಿತ್ರೋತ್ಸವದ ದಿನಾಂಕವನ್ನು ಅಂತಿಮಗೊಳಿಸಲಾಯಿತು. 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಲಾಂಛನವನ್ನೂ ಮುಖ್ಯಮಂತ್ರಿ ಇದೇ ಸಭೆಯಲ್ಲಿ ಅನಾವರಣಗೊಳಿಸಿದರು.

ಬಳಿಕ ಮಾತನಾಡಿದ ಯಡಿಯೂರಪ್ಪ, 'ಕೋವಿಡ್ ಮಾರ್ಗಸೂಚಿಗಳಿಗೆ ಅನುಸಾರವಾಗಿ ಚಿತ್ರೋತ್ಸವ ನಡೆಸಬೇಕು. ಈ ಬಾರಿ ಬೆಂಗಳೂರು ಚಿತ್ರೋತ್ಸವಕ್ಕೆ ಅಂತರರಾಷ್ಟ್ರೀಯ ಚಲನಚಿತ್ರ ನಿರ್ಮಾಪಕರ ಒಕ್ಕೂಟದ (ಎಫ್‌ಐಎಪಿಎಫ್) ಮಾನ್ಯತೆ ದೊರಕುವ ನಿರೀಕ್ಷೆ ಇದೆ. ಈಗಾಗಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಬೆಂಗಳೂರು ಚಿತ್ರೋತ್ಸವಕ್ಕೆ ಇದು ಹೆಮ್ಮೆಯ ಸಂಗತಿಯಾಗಲಿದೆ' ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆ ಸಚಿವ ಸಿ.ಸಿ. ಪಾಟೀಲ ಮಾತನಾಡಿ, 'ರಾಜಾಜಿನಗರದ ಒರಾಯನ್ ಮಾಲ್‌ನ ಪಿವಿಆರ್ ಚಿತ್ರಮಂದಿರದ 11 ಪರದೆಗಳಲ್ಲಿ 50ಕ್ಕೂ ಹೆಚ್ಚು ದೇಶಗಳ 200 ಅತ್ಯುತ್ತಮ ಸಿನಿಮಾಗಳನ್ನು ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುವುದು' ಎಂದು ತಿಳಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಮಾತನಾಡಿ, 'ಏಷ್ಯನ್ ಸಿನಿಮಾ, ಭಾರತೀಯ ಸಿನಿಮಾ (ಚಿತ್ರ ಭಾರತಿ) ಮತ್ತು ಕನ್ನಡ ಸಿನಿಮಾ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ವಿಶ್ವ ಸಿನಿಮಾ, ಸಿಂಹಾವಲೋಕನ, ಗ್ರ್ಯಾಂಡ್ ಕ್ಲಾಸಿಕ್, ಅಗಲಿರುವ ವಿಶ್ವದ, ಭಾರತದ ಮತ್ತು ಕನ್ನಡ ಚಿತ್ರಂಗದ ಗಣ್ಯರ ಸ್ಮರಣೆ, ಅಂತರರಾಷ್ಟ್ರೀಯ ಸಿನಿಮಾ ವಿಮರ್ಶಕರ ಒಕ್ಕೂಟದ ಪ್ರಶಸ್ತಿ ವಿಭಾಗ ಸೇರಿದಂತೆ ಹಲವು ಪ್ರಶಸ್ತಿಗಳನ್ನು ನೀಡಲಾಗುವುದು' ಎಂದರು.

ಅತ್ಯುತ್ತಮ ಸಿನಿಮಾ ಪ್ರದರ್ಶನದ ಜತೆಗೆ ದೇಶ ಮತ್ತು ವಿದೇಶಗಳ ಪ್ರಸಿದ್ಧ ನಿರ್ದೇಶಕರು, ಕಲಾವಿದರು, ತಂತ್ರಜ್ಞರೊಂದಿಗೆ ಸಂವಾದಗಳೂ ನಡೆಯಲಿವೆ. ಕನ್ನಡ ಸಿನಿಮಾ ರಂಗದ ಸೃಜನಶೀಲ ಮುಖಗಳನ್ನು ಇತರ ರಾಷ್ಟ್ರಗಳಿಗೆ ಪರಿಚಯಿಸುವ ಕೆಲಸವೂ ಆಗಲಿದೆ ಎಂದು ಹೇಳಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್, ನಟಿಯರಾದ ಶ್ರುತಿ, ತಾರಾ ಅನೂರಾಧಾ, ಚಲನಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ವಾರ್ತಾ ಇಲಾಖೆ ಕಾರ್ಯದರ್ಶಿ ಅಂಜುಂ ಪರ್ವೇಜ್, ಆಯುಕ್ತ ಪಿ.ಎಸ್.ಹರ್ಷ ಉಪಸ್ಥಿತರಿದ್ದರು.

ಪುಟ್ಟಣ್ಣ ಕಣಗಾಲ್ ಮನೆ ಸಂರಕ್ಷಣೆಗೆ ಸಮ್ಮತಿ

ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಮನೆಯನ್ನು ಸ್ಮಾರಕವನ್ನಾಗಿ ಮಾಡಿ, ಪುನರುಜ್ಜೀವನಗೊಳಿಸುವ ಯೋಜನೆಗೆ ಪ್ರಸ್ತಾವ ಸಲ್ಲಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಾರ್ತಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸಚಿವ ಸಿ.ಸಿ. ಪಾಟೀಲ ಅವರು ಪುಟ್ಟಣ್ಣ ಕಣಗಾಲ್ ಅವರ ಮನೆಯನ್ನು ಸ್ಮಾರಕವನ್ನಾಗಿ ಪರಿವರ್ತಿಸುವ ಕುರಿತು ಪ್ರಸ್ತಾಪಿಸಿದಾಗ ಮುಖ್ಯಮಂತ್ರಿ ಸಮ್ಮತಿಸಿದರು. ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಹೆಚ್ಚುವರಿಯಾಗಿ ₹ 7.5 ಕೋಟಿ ಅನುದಾನ ಮಂಜೂರು ಮಾಡಬೇಕೆಂಬ ಪ್ರಸ್ತಾವಕ್ಕೂ ಒಪ್ಪಿಗೆ ನೀಡಿದರು.

ಚಿತ್ರಾವಳಿ

ಮಹದೇವಪುರ ಕ್ಷೇತ್ರದ ವರ್ತೂರು ಗ್ರಾಮದಲ್ಲಿ ರಥಸಪ್ತಮಿ ಅಂಗವಾಗಿ ಶುಕ್ರವಾರ ನಡೆದ ಚನ್ನರಾಯಸ್ವಾಮಿ ಬ್ರಹ್ಮ ರಥೋತ್ಸವದ ನೋಟ

ಹಳೆ ಮೈಸೂರು ರಸ್ತೆಯ ಮಿನರ್ವ ಮಿಲ್ ಬಳಿ ಗ್ರೇಟ್ ಸಪರೇಟರ್ ಕಾಮಗಾರಿ ನಡೆಯುತ್ತಿದೆ –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ತಾಯ್ನುಡಿ ದಿನದ ಅಂಗವಾಗಿ 'ಮಾಹಿತಿ ತಂತ್ರಜ್ಞಾನ ಮತ್ತು ಕನ್ನಡ' ಕಾರ್ಯಾಗಾರ ಹಾಗೂ 'ಬೆರಳ ತುದಿಯ ಬೆರಗು' ಪುಸ್ತಕ ಬಿಡುಗಡೆ: ಅತಿಥಿಗಳು–ಆರ್.ಪೂರ್ಣಿಮಾ, ಅರ್ಚನಾ ಸುರಾನಾ, ಎಂ.ಆರ್.ಭವಾನಿ, ವತ್ಸಲಾ ಮೋಹನ್, ಟಿ.ಜಿ.ಶ್ರೀನಿಧಿ, ಆಯೋಜನೆ–ಸುರಾನಾ ಕಾಲೇಜು, ಸ್ಥಳ–ಕಾಲೇಜು ಸಭಾಂಗಣ, ಸೌತ್‌ಎಂಡ್ ವೃತ್ತ, ಬೆಳಿಗ್ಗೆ10

ಉದ್ಯೋಗ ಮೇಳ: ಆಯೋಜನೆ–ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಸ್ಥಳ–ಸರ್ಕಾರಿ ಪ್ರಥಮ ದರ್ಜೆ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೇಜು, ದಿಣ್ಣೂರು ಮುಖ್ಯರಸ್ತೆ, ಆರ್.ಟಿ.ನಗರ, ಬೆಳಿಗ್ಗೆ 10

ಜಾಣಗೆರೆ ವೆಂಕಟರಾಮಯ್ಯ ಅವರ 'ಜಲಯುದ್ಧ' ಕಾದಂಬರಿ ಬಿಡುಗಡೆ: ಹಂಪ ನಾಗರಾಜಯ್ಯ, ಅತಿಥಿಗಳು–ವೂಡೇ ಪಿ.ಕೃಷ್ಣ, ಬೈರಮಂಗಲ ರಾಮೇಗೌಡ, ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ–ಬಸವರಾಜ ಕಲ್ಗುಡಿ, ಆಯೋಜನೆ–ಸಾಹಿತ್ಯ ಸಂಗಮ ಟ್ರಸ್ಟ್, ಜಾಣಗೆರೆ ಪತ್ರಿಕೆ ಪ್ರಕಾಶನ, ಸ್ಥಳ–ಗಾಂಧಿಭವನ, ಬೆಳಿಗ್ಗೆ 11

ದಲಿತ ಚಳವಳಿಯ ಜಿಲ್ಲಾ ಹಾಗೂ ರಾಜ್ಯ ಪದಾಧಿಕಾರಿಗಳ ಕಾರ್ಯಾಗಾರ, ದುರ್ಗಂ ಸುಬ್ಬಾರಾವ್ ಅವರ 'ಅಂಬೇಡ್ಕರ್ ಸಿದ್ಧಾಂತ' ಪುಸ್ತಕ ಬಿಡುಗಡೆ: ಅಧ್ಯಕ್ಷತೆ–ಎನ್.ವೆಂಕಟೇಶ್, ಭಾಗವಹಿಸುವವರು–ಮಾವಳ್ಳಿ ಶಂಕರ್, ವಿ.ನಾಗರಾಜ್, ಲಕ್ಷ್ಮೀನಾರಾಯಣ ನಾಗವಾರ, ತುಕಾರಾಂ, ಹುಲ್ಕೆರೆ ಮಹಾದೇವ್, ಸಿ.ಜಿ.ಶ್ರೀನಿವಾಸನ್, ಶೋಭಾ ಕಟ್ಟಿಮನಿ, ಆಯೋಜನೆ–ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಜಂಟಿ ವೇದಿಕೆ, ಸ್ಥಳ–ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

'ಹೊನ್ನಾರು ಒಕ್ಕಲು' ಹಾಗೂ 'ಕದನ ಕಣ' ಪುಸ್ತಕ ಬಿಡುಗಡೆ ಹಾಗೂ ದೆಹಲಿ ಗಡಿಯ ರೈತರೊಂದಿಗೆ ಕನ್ನಡ ಮನಸ್ಸುಗಳು ಕುರಿತು ಚರ್ಚೆ: ಮಾತನಾಡುವವರು–ಪ್ರೊ.ಪುರುಷೋತ್ತಮ ಬಿಳಿಮಲೆ, ಕೇಸರಿ ಹರವು, ವಿಜು ಕೃಷ್ಣನ್, ಆಯೋಜನೆ–ಪುಸ್ತಕ ಪ್ರೀತಿ ತಿಂಗಳ ಮಾತುಕತೆ, ಕ್ರಿಯಾ ಸಮಿತಿ, ಸಂಜೆ 5 (ಆನ್‌ಲೈನ್)

ಸಂತ ಕವಿ ಸರ್ವಜ್ಞ ಜಯಂತಿ: ಉದ್ಘಾಟನೆ–ಬಿ.ಎಸ್.ಯಡಿಯೂರಪ್ಪ, ಅಧ್ಯಕ್ಷತೆ–ಅರವಿಂದ ಲಿಂಬಾವಳಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

'ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು'

ಪ್ರಜಾವಾಣಿ ವಾರ್ತೆ

ಬಸವನಪುರ ವಾರ್ಡ್‌ನಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ಸಾರ್ವಜನಿಕರ ಸಮಸ್ಯೆ ಆಲಿಸಿದರು. ಪಾಲಿಕೆ ಮಾಜಿ ಸದಸ್ಯರಾದ ಬಿ.ಎನ್‌.ಜಯಪ್ರಕಾಶ್, ಶ್ರೀಕಾಂತ್ ಇದ್ದರು

ಕೆ.ಆರ್.ಪುರ: ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜು ಹೇಳಿದರು.

ಕೆ.ಆರ್.ಪುರ ಸಮೀಪದ ಬಸವನಪುರ ವಾರ್ಡ್‌ನಲ್ಲಿ ₹20 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಸೀಗೆಹಳ್ಳಿ ಗ್ರಾಮದ ಫ್ರೆಂಡ್ಸ್ ಲೇಔಟ್, ನಂದೀಶ್ವರ ಬಡಾವಣೆ, ತಿಪ್ಪಯ್ಯ ಬಡಾವಣೆ, ಕುವೆಂಪು ಬಡಾವಣೆ ಹಾಗೂ ದೇವಸಂದ್ರದಲ್ಲಿ ರಸ್ತೆ, ಒಳಚರಂಡಿ ಕಾಮಗಾರಿ ಅಭಿವೃದ್ಧಿಗೆ ಚಾಲನೆ ನೀಡಲಾಯಿತು.

ಪಾಲಿಕೆ ಮಾಜಿ ಸದಸ್ಯರಾದ ಬಿ.ಎನ್.ಜಯಪ್ರಕಾಶ್, ಶ್ರೀಕಾಂತ್, ಶ್ರೀರಾಮುಲು, ಡಿ.ಜಿ.ಶಿವಕುಮಾರ್, ಮುಖಂಡರಾದ ಡಿ.ಕೆ.ದೇವೇಂದ್ರ, ಉದಯಕುಮಾರ್, ರಂಗಸ್ವಾಮಿ, ಸುಂದರ್, ಗುತ್ತಿಗೆದಾರ ರಂಗಸ್ವಾಮಿ, ನಾಗೇಶ್ ಇದ್ದರು.

'ಸ್ವ ಉದ್ಯೋಗಕ್ಕಾಗಿ ಸಾಲ'

ಬೆಂಗಳೂರು: ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಸ್ವಯಂ ಉದ್ಯೋಗ ಮತ್ತು ಸಣ್ಣ ಉದ್ದಿಮೆಗಳನ್ನು ಆರಂಭಿಸಲು ಸಾಲ ಮತ್ತು ಸಬ್ಸಿಡಿಯನ್ನು ಅತ್ಯಂತ ಸರಳ ರೀತಿಯಲ್ಲಿ ವಿತರಿಸುವ ವ್ಯವಸ್ಥೆ ಜಾರಿ ಮಾಡಲಾಗಿದೆ ಎಂದು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಶ್ರೀಮಂತ ಪಾಟೀಲ ಹೇಳಿದರು.

ಫಲಾನುಭವಿಗಳಿಗೆ ₹ 5 ಲಕ್ಷದಿಂದ ₹20 ಲಕ್ಷದವರೆಗೆ ಸಾಲವನ್ನು ಅಲ್ಪಸಂಖ್ಯಾತರ ಕಲ್ಯಾಣ ನಿಗಮದ ವತಿಯಿಂದ ನೀಡಲಾಗುವುದು ಎಂದು ಗುರುವಾರ ತಿಳಿಸಿದರು.

ಸಾಕಷ್ಟು ಕಠಿಣ ನಿಯಮಗಳ ಕಾರಣದಿಂದ ಹಿಂದೆ ಬ್ಯಾಂಕಿನಿಂದ ಸಾಲ ಪಡೆಯುವುದು ಕಷ್ಟವಾಗಿತ್ತು. ಈಗ ಅತ್ಯಂತ ಸರಳವಾಗಿ ಅವರಿಗೆ ತಲುಪಿಸುವ ಕೆಲಸ ಮಾಡುತ್ತೇವೆ. ಇಂತಹ ಉದ್ಯೋಗಗಳನ್ನು ನಡೆಸಲು ಕೇಂದ್ರ ಸರ್ಕಾರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮೊಬೈಲ್ ರಿಪೇರಿಯಿಂದ ಹಿಡಿದು, ಪ್ಲಂಬಿಂಗ್ ಕೆಲಸದವರೆಗೆ ಹಲವು ಕಸಬುಗಳಿಗೆ ಸಾಕಷ್ಟು ಬೇಡಿಕೆ ಇದೆ ಎಂದರು.

ಮನವಿ ರಾಜ್ಯದ ಗಡಿ ಪ್ರದೇಶದ ಅಭಿವೃದ್ಧಿಗೆ 2021–22ನೇ ಸಾಲಿನ ಬಜೆಟ್‌ನಲ್ಲಿ ₹ 500 ಕೋಟಿಯ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿ ಗಡಿನಾಡು ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು ಮತ್ತು ಅಥಣಿ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಗುರುವಾರ ಮನವಿ ಸಲ್ಲಿಸಿತು. ಪಶುಸಂಗಪನಾ ಸಚಿವ ಪ್ರಭು ಬಿ.ಚವ್ಹಾಣ ಇದ್ದರು

ಹಿರಿಯ ಮುಖಂಡ ಪಿ.ಜಿ.ಆರ್. ಸಿಂಧ್ಯ ಅಭಿಮತ

'ರಾಷ್ಟ್ರಗೀತೆ ಅರ್ಥವಾದಲ್ಲಿ ಮರಾಠರನ್ನು ದೂಷಿಸುವುದಿಲ್ಲ'

ಪ್ರಜಾವಾಣಿ ವಾರ್ತೆ

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಕಲಾವಿದ ಅಕ್ಷಯ್ ಜಾಲಿಹಾಳ್ ಅವರು ರಂಗೋಲಿಯಲ್ಲಿ ಶಿವಾಜಿ ಅವರ ಭಾವಚಿತ್ರ ಬಿಡಿಸಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಾಷ್ಟ್ರಗೀತೆಯನ್ನು ಅರ್ಥ ಮಾಡಿಕೊಳ್ಳದವರು ಇಲ್ಲಿರುವ ಮರಾಠರನ್ನು ದೂಷಿಸುತ್ತಿದ್ದಾರೆ. ನಮ್ಮನ್ನು ಹೊರಗಿನವರು ಎಂದು ಕರೆದಾಗ ಮನಸ್ಸಿಗೆ ನೋವಾಗುತ್ತದೆ' ಎಂದು ಹಿರಿಯ ಮುಖಂಡ ಪಿ.ಜಿ.ಆರ್. ಸಿಂಧ್ಯ ಬೇಸರ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಶುಕ್ರವಾರ ಆಯೋಜಿಸಿದ 'ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಕರ್ನಾಟಕದ ಮೂಲ ನಿವಾಸಿಗಳು ಮರಾಠಿಗರು. ವಿರೋಧಿಸುವವರು ಇತಿಹಾಸವನ್ನು ಓದಿ ತಿಳಿದುಕೊಳ್ಳಬೇಕು. ನಾವು ಈ ದೇಶ, ರಾಜ್ಯಕ್ಕೆ ದುಡಿದಿದ್ದೇವೆ. ಬೆಂಗಳೂರನ್ನು ಕಟ್ಟಿದ್ದೇವೆ. ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತೇವೆ. ಕನ್ನಡ ಸಂಘಟನೆಗಳು ಕರ್ನಾಟಕದ ಮರಾಠರನ್ನು ಹೊರಗಡೆಯವರು ಎನ್ನಬಾರದು. ನಾವು ಇಲ್ಲಿನ ಮೂಲ ನಿವಾಸಿಗಳು. ಬೆಳಗಾವಿಯಲ್ಲಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಮನಸ್ಸನ್ನು ಪರಿವರ್ತಿಸಬೇಕು. ಮಹಾಜನ್ ವರದಿ ಅನುಷ್ಠಾನವಾಗಬೇಕು. ಈ ಸಂಬಂಧ ಬೆಂಗಳೂರಿನಲ್ಲಿ ಒಂದು ದಿನ ಧರಣಿ ಮಾಡಲು ತೀರ್ಮಾನ ಮಾಡಿದ್ದೇನೆ' ಎಂದು ತಿಳಿಸಿದರು.

ಇಲ್ಲಿನ ಮರಾಠಿಗರು ಕನ್ನಡಿಗರು: ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ, 'ಕರ್ನಾಟಕದಲ್ಲಿರುವ ಮರಾಠಿಗರು ಕನ್ನಡಿಗರು. ಉತ್ತರ ಕರ್ನಾಟಕದ ಅನೇಕ ಭಾಗ, ಮೈಸೂರು ಸೇರಿದಂತೆ ಹಲವೆಡೆ ಮರಾಠಿಗರು ಇದ್ದಾರೆ. ಅವರ ಆಡುಭಾಷೆ ಮರಾಠಿ ಆದರೂ ಮೂಲ ಕರ್ನಾಟಕ. ಈ ನಾಡನ್ನು ಕಟ್ಟಲು ಎಲ್ಲ ಸಮಾಜಗಳೂ ಕೊಡುಗೆ ನೀಡಿವೆ. ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಮಂಡಳಿಗಳಿವೆ. ಅದೇ ರೀತಿ, ಇಲ್ಲಿನ ಮರಾಠಿಗರಿಗೂ ಸರ್ಕಾರವು ಮಂಡಳಿ ಸ್ಥಾಪಿಸಿದೆ. ಶಿವಾಜಿ ಮಹಾರಾಜರ ವಿಚಾರಧಾರೆ ಅನುಸಾರ ರಾಷ್ಟ್ರೀಯ ಸಂಘಟನೆಗಳು ಕೆಲಸ ಮಾಡುತ್ತಿದೆ. ಅವರ ವಿಚಾರಧಾರೆಯನ್ನು ಇನ್ನಷ್ಟು ಪ್ರಚಾರ ಮಾಡಬೇಕಿದೆ' ಎಂದು ತಿಳಿಸಿದರು.

ಇಲಾಖೆಯ ನಿರ್ದೇಶಕ ಎಸ್. ರಂಗಪ್ಪ ಮಾತನಾಡಿ, 'ಸ್ವಾತಂತ್ರದ ರುಚಿಯನ್ನು ಭಾರತೀಯರಿಗೆ ಮೊಟ್ಟ ಮೊದಲು ಪರಿಚಯಿಸಿದ್ದು ಶಿವಾಜಿ. ಅವರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ' ಎಂದು ತಿಳಿಸಿದರು.

ಎಫ್‌ಕೆಸಿಸಿಐ ಸಂವಾದದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿಕೆ

ಜಿಲ್ಲೆಗೊಂದು 'ಫುಡ್ ಪಾರ್ಕ್' ಸ್ಥಾಪನೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಲ್ಲೆಗೊಂದು 'ಫುಡ್ ಪಾರ್ಕ್' ನಿರ್ಮಿಸಬೇಕೆಂದು ಕೈಗಾರಿಕೋದ್ಯಮಿಗಳು ಬೇಡಿಕೆ ಇಟ್ಟಿದ್ದಾರೆ. ಈ ಕುರಿತು ಚಿಂತನೆ ನಡೆಸಿದ್ದು, ಮುಖ್ಯಮಂತ್ರಿ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ' ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಗುರುವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಕೃಷಿಯನ್ನು ರೈತೋದ್ಯಮ ಮಾಡುವುದು ನಮ್ಮ ಕನಸು. ಇದು ಸಾಕಾರಗೊಳ್ಳಬೇಕಾದರೆ ಎಫ್‌ಕೆಸಿಸಿಐ ನಮ್ಮ ಜೊತೆ ಕೈಜೋಡಿಸಬೇಕು. ಯುವ ಸಮುದಾಯ ನಗರಗಳತ್ತ ವಲಸೆ ಹೋಗುತ್ತಿದೆ. ಹೀಗಾಗಿ ಹಳ್ಳಿಗಳು ವೃದ್ಧಾಶ್ರಮಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಕೃಷಿಯನ್ನು ಲಾಭದಾಯಕಗೊಳಿಸುವ ಮೂಲಕ ಯುವಕರು ಕೃಷಿಯಿಂದ ವಿಮುಖರಾಗದಂತೆ ತಡೆಯಬೇಕಿದೆ' ಎಂದರು.

'ರೈತರಿಗೆ ಆಹಾರ ಸಂಸ್ಕರಣೆ ಮತ್ತು ಮಾರುಕಟ್ಟೆ ತರಬೇತಿ ನೀಡಲು ಮುಂದಾಗಿದ್ದೇವೆ. ಮೈಸೂರಿನಲ್ಲಿ ನಡೆಯುತ್ತಿರುವ ತರಬೇತಿ ಕಾರ್ಯಕ್ರಮದಲ್ಲಿ ಪ್ರತಿ ವಾರ ಪ್ರತಿ ಜಿಲ್ಲೆಯಿಂದ 50 ಮಂದಿ ರೈತರು ಭಾಗವಹಿಸುತ್ತಿದ್ದಾರೆ' ಎಂದು ತಿಳಿಸಿದರು.

'ಹಾಲು ಉತ್ಪಾದಕರ ಸಹಕಾರ ಸಂಘಗಳ ಮಾದರಿಯಲ್ಲಿ ಪ್ರತಿ ಗ್ರಾಮದಲ್ಲೂ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಸ್ಥಾಪನೆಯಾಗಬೇಕು. ಕೋವಿಡ್ ಸಮಯದಲ್ಲಿ ಅನೇಕ ಯುವಕರು ನಗರಗಳಿಂದ ಹಳ್ಳಿಗಳಿಗೆ ಹೋಗಿ ನೆಲೆಸಿದ್ದಾರೆ. ಅಂತಹವರು ಇಂತಹ ಸಂಘಗಳಲ್ಲಿ ಸಕ್ರಿಯರಾಗಬೇಕು. ಹಾಗಾದಲ್ಲಿ ರೈತರ ಆದಾಯ ದ್ವಿಗುಣಗೊಳಿಸಬಹುದು' ಎಂದು ಹೇಳಿದರು.

'ನವೆಂಬರ್‌ನಲ್ಲಿ 'ರೈತರೊಂದಿಗೆ ಒಂದು ದಿನ' ಎಂಬ ಕಾರ್ಯಕ್ರಮ ಶುರುಮಾಡಿದ್ದೆವು. ಇದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಈ ಕಾರ್ಯಕ್ರಮದ ಭಾಗವಾಗಿ ಪ್ರತಿ ಜಿಲ್ಲೆಗೂ ಭೇಟಿ ನೀಡಿ ಆಧುನಿಕ ಕೃಷಿ ಪದ್ಧತಿಗಳು, ಆಹಾರ ಸಂಸ್ಕರಣೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ನುಡಿದರು.

ವಿಧಾನ ಪರಿಷತ್ ಸದಸ್ಯ ವೈ.ಎ.ನಾರಾಯಣ ಸ್ವಾಮಿ, ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ.ಸುಂದರ್ ಹಾಗೂ ಇತರರು ಇದ್ದರು.

ಎಲ್ಲಿದೆರೀ ಕೋವಿಡ್...

ಸಂವಾದದ ವೇಳೆ ಸಚಿವರು ಕರವಸ್ತ್ರದಿಂದ ಪದೇ ಪದೇ ಮುಖ ಒರೆಸಿಕೊಳ್ಳುತ್ತಿದ್ದರು. ಕೊಠಡಿಯಲ್ಲಿದ್ದ ಎ.ಸಿ.ಕೆಲಸ ಮಾಡುತ್ತಿಲ್ಲ ಎಂಬುದನ್ನು ಮನಗಂಡ ಅವರು ಎ.ಸಿ. ಹಾಕಿಲ್ವಾ ಎಂದು ಕೇಳಿದರು. ಈ ವೇಳೆ ಮಧ್ಯಪ್ರವೇಶಿಸಿದ ನಾರಾಯಣ ಸ್ವಾಮಿ 'ಕೋವಿಡ್ ಇದೆಯಲ್ಲ ಸರ್' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪಾಟೀಲ 'ಎಲ್ಲಿದೆರೀ ಕೋವಿಡ್. ಜೀರಿಗೆ, ಅರಿಶಿಣ ತಿನ್ನೋರಿಗೆ ಕೋವಿಡ್ ಬರಲ್ಲ' ಎಂದರು.

ಪರಸ್ಪರ ಪೂರಕವಾಗಿರದ ಕಾಯ್ದೆಯಿಂದ ಸಾರ್ವಜನಿಕರಿಗೆ ಹೊರೆ: ನಗರ ಯೋಜನಾ ತಜ್ಞರ ಅಭಿಮತ

ಪಾರ್ಕಿಂಗ್–ಬಿಬಿಎಂಪಿ ಕಾಯ್ದೆ ಹೊಂದಾಣಿಕೆ ಕೊರತೆ

● ಪ್ರವೀಣ್ ಕುಮಾರ್ ಪಿ.ವಿ.

ನೆಟ್ಟಕಲ್ಲಪ್ಪ ವೃತ್ತದ ಬಳಿಯ ರತ್ನ ವಿಲಾಸ ರಸ್ತೆಯಲ್ಲಿ ಫುಟ್‌ಪಾತ್‌ನಲ್ಲಿ ವಾಹನಗಳು ನಿಲುಗಡೆ ಮಾಡಿರುವುದು –ಪ್ರಜಾವಾಣಿ ಚಿತ್ರ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾರಿಯಾಗಲಿರುವ ವಾಹನ ನಿಲುಗಡೆ ನೀತಿ 2.0 ಹಾಗೂ 2020ರ ಬಿಬಿಎಂಪಿ ಕಾಯ್ದೆ ಹೆಚ್ಚೂ ಕಡಿಮೆ ಒಟ್ಟೊಟ್ಟಿಗೆ ರೂಪುಗೊಂಡವುಗಳು. ಬಿಬಿಎಂಪಿ ಕಾಯ್ದೆ 2020 ಜಾರಿಯಾದ ಬಳಿಕ ಅಂತಿಮಗೊಂಡ 'ಪಾರ್ಕಿಂಗ್ ನೀತಿ 2.0'ರಲ್ಲಿ ಈ ಕಾಯ್ದೆಗೆ ಸಂಬಂಧಿಸಿದ ಸ್ಪಷ್ಟ ಉಲ್ಲೇಖಗಳೇ ಇಲ್ಲ.

ಈ ನೀತಿಗೆ ಪೂರಕವಾಗಿ ಬಿಬಿಎಂಪಿ ಕಾಯ್ದೆಯಲ್ಲೇ ಸ್ಪಷ್ಟ ರೂಪರೇಷೆಗಳನ್ನು ಅಳವಡಿಸಿಕೊಳ್ಳಲು ಅವಕಾಶವಿತ್ತು. ಆದರೆ, ಬಿಬಿಎಂಪಿ ಕಾಯ್ದೆ ಪಾರ್ಕಿಂಗ್ ವ್ಯವಸ್ಥೆಯನ್ನು ಸರಿದಾರಿಗೆ ತರುವ ಬಗ್ಗೆ ಮೌನ ವಹಿಸುತ್ತದೆ. ಇವೆರಡೂ ಒಂದಕ್ಕೊಂದು ಪೂರಕವಾಗಿರುತ್ತಿದ್ದರೆ ಪಾರ್ಕಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಇನ್ನೂ ಸುಲಭವಾಗುತ್ತಿತ್ತು. ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) ರೂಪಿಸಿರುವ ಪಾರ್ಕಿಂಗ್ ನೀತಿಯ ಕೆಲ ನ್ಯೂನತೆ ಸರಿಪಡಿಸದೇ ಹೋದರೆ ಭವಿಷ್ಯದಲ್ಲಿ ಬಿಕ್ಕಟ್ಟುಗಳು ಸೃಷ್ಟಿಯಾಗಬಹುದು ಎನ್ನುತ್ತಾರೆ ನಗರ ಯೋಜನಾ ತಜ್ಞರು.

'ಈ ನೂತನ ಪಾರ್ಕಿಂಗ್ ನೀತಿಯ ಕಂಡಿಕೆ 2.5 ಮತ್ತು 2.6ರಲ್ಲಿ 1976ರ ಕೆಎಂಸಿ ಕಾಯ್ದೆಯ ಸೆಕ್ಷನ್ 349, 350 ಮತ್ತು 351ರ ಉಪವಿಧಿಗಳನ್ನು ಮತ್ತು 1993ರ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಉಪಬಂಧಗಳನ್ನು ಉಲ್ಲೇಖಿಸಲಾಗಿದೆ. ಹೊಸ ಪಾರ್ಕಿಂಗ್ ನೀತಿಯ ಪ್ರಕಾರ ಸ್ಥಳೀಯ ಪ್ರದೇಶಗಳ ವಾಹನ ನಿಲುಗಡೆ ಯೋಜನೆಗೆ ಸ್ಥಳ ಗುರುತಿಸುವಿಕೆ ಮತ್ತು ವಿನ್ಯಾಸ ರಚನೆ ಸಿದ್ಧಪಡಿಸುವುದು ಡಲ್ಟ್‌ನ ಜವಾಬ್ದಾರಿ. ವಲಯ ಕಾರ್ಯಪಡೆಯ ಮೂಲಕ ಏರಿಯಾ ಪಾರ್ಕಿಂಗ್ ಯೋಜನೆಗಳನ್ನು (ಎಪಿಪಿ) ಸಿದ್ಧಪಡಿಸಿ ಅನುಷ್ಠಾನಗೊಳಿಸುವ ಜವಾಬ್ದಾರಿ ಬಿಬಿಎಂಪಿಯದು. ಬಿಬಿಎಂಪಿ ಕಾಯ್ದೆಯ ಸೆಕ್ಷನ್ 107ರ ಪ್ರಕಾರ ವಾಹನ ನಿಲುಗಡೆಗೆ ಸ್ಥಳಗಳನ್ನು ಕಲ್ಪಿಸುವುದು ಮತ್ತು ನಿರ್ವಹಿಸುವುದು ಬಿಬಿಎಂಪಿಯ ಪ್ರಮುಖ ಕರ್ತವ್ಯ. ಇದು ಬಿಟ್ಟರೆ ಕೆಎಂಸಿ ಕಾಯ್ದೆಯ ಸೆಕ್ಷನ್ 349, 350 ಮತ್ತು 351ರ ಉಪಬಂಧಗಳನ್ನು ಬಿಬಿಎಂಪಿ ಕಾಯ್ದೆಯಲ್ಲಿ ನಮೂದಿಸಿಯೂ ಇಲ್ಲ ಅಥವಾ ಯಾವುದೇ ಉಪವಿಧಿಗಳನ್ನೂ ಕಲ್ಪಿಸಿಲ್ಲ. ಕೆಎಂಸಿ ಕಾಯ್ದೆ 1976 ಈಗ ಬಿಬಿಎಂಪಿಗೆ ಅನ್ವಯಿಸುವುದಿಲ್ಲ' ಎಂದು ಗೊಂದಲಗಳನ್ನು ಅವರು ಎಳೆಎಳೆಯಾಗಿ ಬಿಚ್ಚಿಟ್ಟರು.

ಬಿಬಿಎಂಪಿ ಕಾಯ್ದೆ ಬಡಕಲು ಬಿಂಬ? 7

'ಬಿಬಿಎಂಪಿ ಕಾಯ್ದೆಯ ಸೆಕ್ಷನ್ 215ರಲ್ಲಿ ವಲಯ ಆಯುಕ್ತರಿಗೆ, ಪೊಲೀಸ್ ಸಹಾಯದೊಂದಿಗೆ ಕೆಲವು ರಸ್ತೆಗಳಲ್ಲಿ ಕೆಲವು ರೀತಿಯ ವಾಹನ ಸಂಚಾರವನ್ನು ನಿರ್ಬಂಧಿಸುವ ಅಧಿಕಾರವನ್ನು ನೀಡಲಾಗಿದೆ. ಇದಕ್ಕೂ ಪಾರ್ಕಿಂಗ್ ನೀತಿಗೂ ಅಥವಾ ಪಾರ್ಕಿಂಗ್ ಶುಲ್ಕ ನಿಗದಿಗೂ ಯಾವುದೇ ಸಂಬಂಧವಿದೆಯೆಂದು ಅನಿಸುವುದಿಲ್ಲ' ಎನ್ನುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕ ಸಿ.ಆರ್.ರವೀಂದ್ರ.

'ಪಾರ್ಕಿಂಗ್ ಯೋಜನೆಯ ಅನುಷ್ಠಾನದ ಬಂಡವಾಳ ವೆಚ್ಚವನ್ನು ಭರಿಸಲು ಮೂಲ ಸೌಕರ್ಯ ಸೆಸ್‌ನಿಂದ ಗಳಿಸಿದ ಆದಾಯವನ್ನು ಬಿಬಿಎಂಪಿ ಬಳಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಕಾರಣಾಂತರಗಳಿಂದ ಇದರ ಅನುಷ್ಠಾನ ಸಾಧ್ಯವಾಗಿಲ್ಲ. ಈ ಬಂಡವಾಳ ವೆಚ್ಚವನ್ನು ಪಾರ್ಕಿಂಗ್ ಶುಲ್ಕದ ಪರಿಷ್ಕರಣೆಯಿಂದ ಬಳಸಲಾಗುವುದು ಎಂದು ಪಾರ್ಕಿಂಗ್ ನೀತಿಯಲ್ಲಿ ವ್ಯಕ್ತಪಡಿಸಲಾಗಿದೆ. ಇದು ಸಾರ್ವಜನಿಕರ ಮೇಲೆ ಹೊರೆಯಾಗುತ್ತದೆ ಮತ್ತು ಇದು ಸರಿಯಾದ ಕ್ರಮವಲ್ಲ' ಎಂದರು.

ಕರ್ನಾಟಕ ಪೊಲೀಸ್ ಕಾಯ್ದೆಯ ಅನುಸಾರ ವಾಹನ ಸಂಚಾರ, ಸಾರ್ವಜನಿಕ ವಾಹನ ನಿಲುಗಡೆ ನಿಯಂತ್ರಣ ಮತ್ತು ನಿರ್ವಹಣೆ ಸಂಚಾರ ಪೊಲೀಸರ ಜವಾಬ್ದಾರಿ ಮತ್ತು ಕಾರ್ಯ ವ್ಯಾಪ್ತಿಗೆ ಬರುತ್ತದೆ. ಬಿಬಿಎಂಪಿ ಅಧಿಕಾರಿಗಳಿಗೆ ಈ ಅಧಿಕಾರವನ್ನು ನೀಡಲಾಗದು. ವಾಹನ ನಿಲುಗಡೆಗೆ ಸಂಬಂಧಿಸಿದ ದಂಡದ ದರಗಳನ್ನು ಮೋಟಾರ್ ವಾಹನಗಳ ಕಾಯ್ದೆಯನುಸಾರ ನಿಗದಿಪಡಿಸಲಾಗುತ್ತದೆ. ಈ ದರಗಳಿಗೆ ಸ್ವಲ್ಪ ಆಡಳಿತ ವೆಚ್ಚವನ್ನು ಸೇರಿಸಿಕೊಂಡು, ಪೊಲೀಸ್ ಇಲಾಖೆಯು ದಂಡ ವಸೂಲಿ ಜವಾಬ್ದಾರಿ ಮತ್ತು ಅಧಿಕಾರವನ್ನು ಹೊಂದಿದೆ.

'ಈ ದಂಡ ವಸೂಲಿಯಿಂದ ಬಂದ ವರಮಾನವನ್ನು ರಾಜ್ಯದ ಸಂಚಿತ ನಿಧಿಗೆ, ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ ಈ ವರಮಾನದ ಸ್ವಲ್ಪ ಭಾಗವನ್ನು ಬಿಬಿಎಂಪಿಗೆ ರಾಜ್ಯ ಸರ್ಕಾರವು ಅನುದಾನದ ರೂಪದಲ್ಲಿ ನೀಡಿ, ಈ ಅನುದಾನವನ್ನು ಪಾರ್ಕಿಂಗ್ ಶುಲ್ಕದೊಂದಿಗೆ ಬಂಡವಾಳ ವೆಚ್ಚ ಅಥವಾ ನಿರ್ವಹಣಾ ವೆಚ್ಚಕ್ಕೆ ಸರಿದೂಗಿಸಿಕೊಂಡು ಬಿಬಿಎಂಪಿ ತನ್ನ ಆಯವ್ಯಯದ ಅಂದಾಜು ವೆಚ್ಚದಲ್ಲಿ ಭರಿಸಿಕೊಳ್ಳಬೇಕು. ಇದರಿಂದ ಸಾರ್ವಜನಿಕರ ಮೇಲೆ ಹೊರೆಯಾಗುವುದಿಲ್ಲ. ಇದನ್ನು ಬಿಟ್ಟು ವಾಹನ ನಿಲುಗಡೆಗೆ ಮೂಲಸೌಕರ್ಯ ಒದಗಿಸುವ ವೆಚ್ಚವನ್ನು ಪಾರ್ಕಿಂಗ್ ಶುಲ್ಕ ಪರಿಷ್ಕರಣೆಯಿಂದ ಭರಿಸಬಹುದು ಎಂದು ನಿರ್ಣಯಿಸಿದರೆ, ಜನರಿಗೆ ಸಹಿಸಲಾಗದ ಹೊರೆಯಾಗುವುದರಲ್ಲಿ ಸಂಶಯವಿಲ್ಲ' ಎಂಬುದು ತಜ್ಞರ ಅಭಿಪ್ರಾಯ.

'ಪೊಲೀಸ್ ಅಧಿಕಾರಿಗಳು ವಲಯ ಆಯುಕ್ತರ ಸಹಕಾರದೊಂದಿಗೆ ಈ ಜವಾಬ್ದಾರಿಯನ್ನು ನಿರ್ವಹಿಸುವುದು ವಾಡಿಕೆ. ಆದರೆ, ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 215 ರಲ್ಲಿ ವಲಯ ಆಯುಕ್ತರಿಗೆ, ಪೊಲೀಸ್ ಸಹಾಯದೊಂದಿಗೆ ಕೆಲವು ರಸ್ತೆಗಳಲ್ಲಿ ಕೆಲವು ರೀತಿಯ ವಾಹನ ಸಂಚಾರವನ್ನು ನಿರ್ಭಂಧಿಸುವ ಅಧಿಕಾರವನ್ನು ನೀಡಲಾಗಿದೆ. ಇಂತಹ ಉಪಬಂಧವನ್ನು ಕಲ್ಪಿಸಿರುವುದರಿಂದ ಗೊಂದಲ ಸೃಷ್ಟಿಯಾಗಬಹುದೇನೋ ಎಂದು ಭಾಸವಾಗುತ್ತಿದೆ' ಎನ್ನುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕ ಪಿ.ಜಿ.ಶೆಣೈ.

'ರಸ್ತೆಗಳ ಶೇ 40ರಷ್ಟು ಜಾಗ ಪಾರ್ಕಿಂಗ್‌ಗೆ ಬಳಕೆ'

ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ನೋಂದಾಯಿತ ವಾಹನಗಳ ಸಂಖ್ಯೆ 81 ಲಕ್ಷ ದಾಟಿದೆ. 10 ವರ್ಷಗಳ ಅವಧಿಯಲ್ಲಿ ವಾಹನಗಳ ವಾರ್ಷಿಕ ಬೆಳವಣಿಗೆ ದರ ಶೇ 10 ದಾಟಿದೆ. ನಗರದ ರಸ್ತೆಗಳ ಶೇ 40ರಷ್ಟು ಸ್ಥಳವನ್ನು ವಾಹನ ನಿಲುಗಡೆಗಾಗಿ ಆಕ್ರಮಿಸಲಾಗಿದೆ. ಪಾರ್ಕಿಂಗ್‌ಗಾಗಿ ಮೀಸಲಿಟ್ಟ ತಾಣಗಳ ಕೊರತೆಯಿಂದಾಗಿ ನಿರ್ಮಾಣವಾಗಿರುವ ಪರಿಸ್ಥಿತಿ ಇದು. ಆದ್ದರಿಂದ, ಸಾರ್ವಜನಿಕರ ವಾಹನ ನಿಲುಗಡೆಗೆ ಹೆಚ್ಚುವರಿ ಸ್ಥಳಗಳ ವ್ಯವಸ್ಥೆ ಮಾಡುವುದು ಅನಿವಾರ್ಯ ಎನ್ನುತ್ತದೆ ಪಾರ್ಕಿಂಗ್ ನೀತಿ.

'3 ಸಾವಿರ ಕೃಷಿ ಡಿಪ್ಲೊಮಾ ಅಭ್ಯರ್ಥಿಗಳ ನೇಮಕ'

ಪ್ರಜಾವಾಣಿ ವಾರ್ತೆ

ಬೀದರ್: 'ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೃಷಿ ಡಿಪ್ಲೊಮಾ ಪಡೆದ 3 ಸಾವಿರ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

'10 ತಿಂಗಳ ಅವಧಿಗೆ 2 ಗ್ರಾಮ ಪಂಚಾಯಿತಿಗೆ ಒಬ್ಬರನ್ನು ನೇಮಕ ಮಾಡಿಕೊಳ್ಳಲು ಯೋಜಿಸಲಾಗಿದೆ. ಇವರು 3 ತಿಂಗಳು ಬೆಳೆ ಸಮೀಕ್ಷೆ ಹಾಗೂ ಉಳಿದ 7 ತಿಂಗಳು ಕೃಷಿ ಇಲಾಖೆಯ ವಿವಿಧ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲಿದ್ದಾರೆ' ಎಂದು ಇಲ್ಲಿ ಹೇಳಿದರು.

'ಕೃಷಿ ಡಿಪ್ಲೊಮಾ ಅಭ್ಯರ್ಥಿಗಳಿಗೆ ತಾಂತ್ರಿಕ ಜ್ಞಾನ ಇರುವ ಕಾರಣ ಬೆಳೆ ಸಮೀಕ್ಷೆ ಸಮರ್ಪಕವಾಗಿ ನಡೆಯಲಿದೆ. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಲಾಭ ಹೆಚ್ಚಿನ ರೈತರಿಗೆ ಮುಟ್ಟಿಸಲು ಅನುಕೂಲವೂ ಆಗಲಿದೆ' ಎಂದರು.

'3,266 ರೈತ ಮಿತ್ರ ಹುದ್ದೆ ಭರ್ತಿ, ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಪದವಿಗಳಲ್ಲಿ ರೈತರ ಮಕ್ಕಳಿಗೆ ಸದ್ಯ ಇರುವ ಶೇ 40 ರಷ್ಟು ಮೀಸಲಾತಿಯನ್ನು ಶೇ 50ಕ್ಕೆ ಹೆಚ್ಚಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಹೇಳಿದರು.

'ರೈತರಿಗೆ ಈಗಿನ 25 ಎಚ್.ಪಿ ಸಬ್ಸಿಡಿಯನ್ನು 40 ಎಚ್.ಪಿಗೆ ಹೆಚ್ಚಿಸಲಾಗುವುದು. ರೈತರು ಆಕಸ್ಮಿಕ ಮರಣ ಹೊಂದಿದಾಗಲೂ ₹ 5 ಲಕ್ಷ ಪರಿಹಾರ ಒದಗಿಸುವ ಹಾಗೂ ಬಣವೆಗೆ ಬೆಂಕಿ ತಗುಲಿ ಹಾನಿ ಸಂಭವಿಸಿದಾಗ ಇನ್ನೂ ಹೆಚ್ಚಿನ ಪರಿಹಾರ ಕಲ್ಪಿಸುವ ಪ್ರಸ್ತಾವಗಳು ಸರ್ಕಾರದ ಮುಂದಿವೆ' ಎಂದು ತಿಳಿಸಿದರು.

ರೌಡಿಶೀಟರ್ ಮೇಲೆ ಗುಂಡು

ಶಿವಮೊಗ್ಗ: ನಗರದ ಅನುಪಿನಕಟ್ಟೆ ಬಳಿ ಶುಕ್ರವಾರ ರೌಡಿಶೀಟರ್ ದೀಪು ಮೇಲೆ ಪೊಲೀಸರು ಗುಂಡು ಹಾರಿಸಿದ್ದು, ತೀವ್ರವಾಗಿ ಗಾಯಗೊಂಡ ಆತನನ್ನು ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ರೌಡಿ ಬಚ್ಚನ್ ತನ್ನ ಸಹಚರರ ಮೂಲಕ ಶಿವಮೊಗ್ಗದ ವ್ಯಾಪಾರಿಗೆ ಹಣಕ್ಕಾಗಿ ಬೇಡಿಕೆ ಇಟ್ಟಿದ್ದನು. ಹಣಕೊಡದೇ ವ್ಯಾಪಾರಿ ಪೊಲೀಸರಿಗೆ ದೂರು ನೀಡಿದ್ದ ಕಾರಣ ಕುಪಿತಗೊಂಡ ಆತನ ತಂಡ ಅವರ ಮೇಲೆ ಹಲ್ಲೆ ನಡೆಸಿತ್ತು. ಈ ಗುಂಪಿನ ನೇತೃತ್ವ ವಹಿಸಿದ್ದ ದೀಪುವನ್ನು ಬಂಧಿಸಲು ಹೋದಾಗ ಪೊಲೀಸರ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ತುಂಗಾನಗರ ಇನ್‌ಸ್ಪೆಕ್ಟರ್ ದೀಪಕ್ ರಿವಾಲ್ವಾರ್‌ನಿಂದ ಕಾಲಿಗೆ ಗುಂಡು ಹಾರಿಸಿದ್ದಾರೆ.

10 ಲಕ್ಷ ಮೊಕದ್ದಮೆ ಕೈಬಿಡಲು ನಿರ್ಧಾರ: ತಮಿಳುನಾಡು ಸಿ.ಎಂ

ತೆಂಕಾಸಿ, ತಮಿಳುನಾಡು (ಪಿಟಿಐ): ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ನಿಯಮಗಳ ಉಲ್ಲಂಘನೆ ಹಾಗೂ ಸಿಎಎ ವಿರೋಧಿ ಪ್ರತಿಭಟನೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ದಾಖಲಿಸಿದ್ದ ಸುಮಾರು 10 ಲಕ್ಷ ಪ್ರಕರಣಗಳನ್ನು ಕೈಬಿಡಲಾಗುವುದು ಎಂದು ಮುಖ್ಯಮಂತ್ರಿ ಕೆ.ಪಳನಿಸ್ವಾಮಿ ಹೇಳಿದ್ದಾರೆ.

ಹಿಂಸಾಚಾರದಲ್ಲಿ ಭಾಗಿ, ಕರ್ತವ್ಯನಿರ್ವಹಿಸಲು ಪೊಲೀಸರಿಗೆ ಅಡ್ಡಿ ಪಡಿಸಿರುವುದು ಸೇರಿದಂತೆ ಕೆಲವು ನಿರ್ದಿಷ್ಟ ಪ್ರಕರಣಗಳನ್ನು ಹೊರತುಪಡಿಸಿ ಉಳಿದೆಲ್ಲ ಪ್ರಕರಣಗಳನ್ನು ಕೈಬಿಡಲಾಗುವುದು ಎಂದು ಅವರು ತಿಳಿಸಿದರು.

ಶಿರಸಿ– ಕುಮಟಾ ರಾಷ್ಟ್ರೀಯ ಹೆದ್ದಾರಿ: ಬೆಂಗಳೂರಿನ ಯು.ಸಿ.ಎಂ ಆಕ್ರೋಶ

'ಅನುಮತಿಗೂ ಮೊದಲೇ ಕಾಮಗಾರಿ'

● ಸದಾಶಿವ ಎಂ.ಎಸ್.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಸಲುವಾಗಿ ಶಿರಸಿ ಸಮೀಪ ಗಿಡ, ಮರಗಳನ್ನು ತೆರವು ಮಾಡುತ್ತಿರುವುದು

ಪ್ರಜಾವಾಣಿ ವಿಶೇಷ

ಕಾರವಾರ: ಶಿರಸಿ-ಕುಮಟಾ ನಡುವಿನ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ (ಸಂಖ್ಯೆ 766ಇ) ಮರಗಳನ್ನು ತೆರವು ಮಾಡುತ್ತಿರುವುದು ಪರಿಸರವಾದಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಅಂತಿಮ ಅನುಮತಿ ಸಿಗುವ ಮೊದಲೇ ಕಾಮಗಾರಿ ಆರಂಭಿಸಲಾಗಿದೆ ಎಂದು ಬೆಂಗಳೂರಿನ 'ಯುನೈಟೆಡ್ ಕನ್ಸರ್ವೇಷನ್ ಮೂವ್‌ಮೆಂಟ್' (ಯು.ಸಿ.ಎಂ) ಸಂಘಟನೆಯು ದೂರಿದೆ.

ಹೆದ್ದಾರಿ ವಿಸ್ತರಣೆಗಾಗಿ ಮರಗಳನ್ನು ತೆರವು ಮಾಡದಂತೆ 2020ರ ಡಿ.22ರಂದು ರಾಜ್ಯ ಹೈಕೋರ್ಟ್‌ನಲ್ಲಿ ಸಂಘಟನೆಯು ಅರ್ಜಿ ಸಲ್ಲಿಸಿತ್ತು. ಅದನ್ನು ಆಧರಿಸಿ ನ್ಯಾಯಾಲಯವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್.ಎಚ್.ಎ.ಐ) ಜನವರಿ 5ರಂದು ನೋಟಿಸ್ ಜಾರಿ ಮಾಡಿತ್ತು. ಅರಣ್ಯ ಸಚಿವಾಲಯವು ಕಾಮಗಾರಿಗೆ 2020ರ ಸೆ.23ರಂದು ನೀಡಿದ ಮೊದಲ ಹಂತದ ಅನುಮತಿಯನ್ನೇ ಮುಂದಿಟ್ಟುಕೊಂಡು ಕಾಮಗಾರಿ ಆರಂಭಿಸಲಾಗಿದೆ. ಆದರೆ, ಮರಗಳನ್ನು ಕತ್ತರಿಸುವ ಮೊದಲು ಎನ್.ಎಚ್.ಎ.ಐ ಹಾಗೂ ಅರಣ್ಯ ಇಲಾಖೆಯು ಹೈಕೋರ್ಟ್‌ನಿಂದ ಅನುಮತಿ ಪಡೆದಿಲ್ಲ ಎಂದು ಆರೋಪಿಸಿದೆ.

ತರಾತುರಿಯಲ್ಲಿ ಮರಗಳನ್ನು ಕಡಿದು ಹಾಕುವುದು ನ್ಯಾಯಾಲಯಕ್ಕೆ ಅಗೌರವ ತೋರಿದಂತಾಗುತ್ತದೆ. ಈ ಎಲ್ಲ ಅಂಶಗಳೂ ಎರಡೂ ಇಲಾಖೆಗಳ ಅಧಿಕಾರಿಗಳಿಗೆ ತಿಳಿದಿದೆ. ಆದರೂ ಕಾಮಗಾರಿ ಮುಂದುವರಿಸಿರುವುದು ಸರಿಯಲ್ಲ. ಮರಗಳನ್ನು ತೆರವು ಮಾಡುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಸಂಘಟನೆಯು ಆಗ್ರಹಿಸಿದೆ.

ಒಟ್ಟು 58.92 ಕಿ.ಮೀ. ರಾಜ್ಯ ಹೆದ್ದಾರಿಯನ್ನು ₹ 440.16 ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಕೇಂದ್ರ ಸರ್ಕಾರದ 'ಸಾಗರಮಾಲಾ' ಯೋಜನೆಯಡಿ ತಡಸ- ಬೇಲೆಕೇರಿ ಸಂಪರ್ಕಿಸುವ ರಸ್ತೆ ಇದಾಗಿದೆ. ಶಿರಸಿ ಮತ್ತು ಹೊನ್ನಾವರ ಅರಣ್ಯ ವಲಯದಲ್ಲಿ ಈ ರಸ್ತೆ ಸಾಗುತ್ತದೆ.

ರಸ್ತೆಯು ಹಾದುಹೋಗುವ ಪ್ರದೇಶವು ಪಶ್ಚಿಮಘಟ್ಟವಾಗಿದ್ದು, ಅಮೂಲ್ಯ ಪ್ರಾಕೃತಿಕ ಸಂಪತ್ತನ್ನೊಳಗೊಂಡಿದೆ. ಹಾಗಾಗಿ ರಸ್ತೆ ವಿಸ್ತರಣೆ ಮಾಡದಂತೆ ಪರಿಸರವಾದಿಗಳು ಆಕ್ಷೇಪ ವೆತ್ತಿದ್ದರು. ಇದರಿಂದ ಎರಡು ವರ್ಷಗಳ ಹಿಂದೆ ಗುತ್ತಿಗೆ ಆಗಿದ್ದರೂ ಕಾಮಗಾರಿ ವಿಳಂಬವಾಗಿತ್ತು. ಬಳಿಕ ರಸ್ತೆ ವಿಸ್ತರಣೆಯ ಪ್ರಮಾಣವನ್ನು ಕಡಿಮೆ ಮಾಡಿದ ಎನ್.ಎಚ್.ಎ.ಐ, ಪುನಃ ಕೇಂದ್ರ ಅರಣ್ಯ ಸಚಿವಾಲಯಕ್ಕೆ ಅರ್ಜಿ ಸಲ್ಲಿಸಿತು. ಈ ಪ್ರಸ್ತಾವಕ್ಕೆ 2020ರ ಸೆ.19ರಂದು ಸಚಿವಾಲಯವು ಒಪ್ಪಿಗೆ ನೀಡಿತ್ತು.

ತೆರವಿಗೆ ಗುರುತಿಸಲಾದ ಮರಗಳು

5,702 ಮರಗಳು — ಶಿರಸಿ ಅರಣ್ಯ ವಿಭಾಗ

3,800 ಮರಗಳು — ಹೊನ್ನಾವರ ವಿಭಾಗ

'ಸೂಚನೆ ಬಂದಿಲ್ಲ'

'ಹೆದ್ದಾರಿ ವಿಸ್ತರಣೆಗೆ ಮರಗಳ ಕಟಾವು ಪ್ರಕ್ರಿಯೆ ಕುರಿತು ಬೆಂಗಳೂರಿನ ಸಂಘಟನೆಯೊಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ಮಾಹಿತಿ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಕಟಾವು ಕೆಲಸವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದರೆ, ನ್ಯಾಯಾಲಯದಿಂದ ನಮಗೆ ಈವರೆಗೆ ಯಾವುದೇ ಸೂಚನೆ ಬಂದಿಲ್ಲ. ಕಾನೂನು ಕ್ರಮಗಳ ಬಗ್ಗೆ ತಜ್ಞರ ಜತೆ ಚರ್ಚಿಸಿ ಕೆಲಸ ಮುಂದುವರಿಸುವ ಕುರಿತು ನಿರ್ಧರಿಸಲಾಗುವುದು' ಎಂದು ಶಿರಸಿಯ ಅರಣ್ಯ ಉಪ ಸಂರಕ್ಷಣಾಧಿಕಾರಿ ಎಸ್.ಜಿ.ಹೆಗಡೆ ತಿಳಿಸಿದ್ದಾರೆ.

ಹೊನ್ನಾವರ ವಲಯದ ಅರಣ್ಯ ಉಪ ಸಂರಕ್ಷಣಾಧಿಕಾರಿ ಗಣಪತಿ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

'ಸ್ಮಾರ್ಟ್' ಕಾಮಗಾರಿ ನಗರದ ಅರಮನೆ ರಸ್ತೆಯಲ್ಲಿ 'ಸ್ಮಾರ್ಟ್ ಸಿಟಿ'ಯೋಜನೆಯಡಿಯಲ್ಲಿ ಬೃಹತ್ ಕಾಮಗಾರಿ ನಡೆಯುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ - ಪ್ರಜಾವಾಣಿ ಚಿತ್ರ

ವಿದ್ಯುತ್ ಕಂಬಕ್ಕೆ ಲಾರಿ ಡಿಕ್ಕಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಅಡೇಪೇಟೆಯಲ್ಲಿ ಲಾರಿಯೊಂದು ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದ್ದರಿಂದ ಕಂಬ ಮುರಿಯಿತು.

ಪರಿಣಾಮ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಯಿತು.

'ಪಟ್ಟಣದ ಪ್ರಮುಖ ಮಾರುಕಟ್ಟೆ ಅಡೇಪೇಟೆ ತುಂಬಾ ಇಕ್ಕಟ್ಟಾಗಿದೆ. ರಸ್ತೆಯ ಭಾಗವನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಇಂತಹ ಅನಾಹುತಗಳು ಸಂಭವಿಸುತ್ತಲೇ ಇರುತ್ತವೆ. ಸರಕು ತುಂಬಿದ ಲಾರಿಗಳು ಬರುತ್ತಲೇ ಇರುತ್ತವೆ. ಎದುರು ಇನ್ನೊಂದು ವಾಹನ ಬಂದರೆ ದಟ್ಟಣೆ ಉಂಟಾಗುತ್ತದೆ. ಏಕಮುಖ ರಸ್ತೆ ಮಾಡಿದರೆ ಅನಾಹುತಗಳು ತಪ್ಪುತ್ತವೆ' ಎಂದು ಸ್ಥಳೀಯರಾದ ರುದ್ರೇಶ್ ಹೇಳಿದರು.

ವಿಷಯ ತಿಳಿದ ಬೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಬಂದು ದುರಸ್ತಿ ಕಾರ್ಯ ಕೈಗೊಂಡು, ವಿದ್ಯುತ್ ಪೂರೈಕೆಗೆ ವ್ಯವಸ್ಥೆ ಮಾಡಿದರು.

ಗಡಿಯಲ್ಲಿ ಸಮೀಕ್ಷೆ: ಮಹಾರಾಷ್ಟ್ರ ನಡೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಡಿ ಪ್ರದೇಶದಲ್ಲಿ ಮಹಾರಾಷ್ಟ್ರ ಸರ್ಕಾರವು ನಡೆಸುತ್ತಿರುವ ಅನ್ಯ ಭಾಷಿಗರ ಸಮೀಕ್ಷೆಯನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಗೆಳೆಯರ ಬಳಗ ಖಂಡಿಸಿವೆ.

'ಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿರುವ ಮಹಾರಾಷ್ಟ್ರದ ಜತ್ತ, ಅಕ್ಕಲಕೋಟೆ ಹಾಗೂ ದಕ್ಷಿಣ ಸೊಲ್ಲಾಪುರದ ಗಡಿ ಭಾಗದಲ್ಲಿ ಅನ್ಯ ಭಾಷಿಕರ ಸಮೀಕ್ಷೆ ನಡೆಸಲು ಮಹಾರಾಷ್ಟ್ರ ಸರ್ಕಾರವು ಅಲ್ಲಿನ ಕೆಲ ಗ್ರಾಮ ಪಂಚಾಯಿತಿಗಳಿಗೆ ಆದೇಶ ನೀಡಿರುವ ಕ್ರಮ ಖಂಡನೀಯ. ಅಲ್ಲಿನ ಸರ್ಕಾರದ ಇಂತಹ ಪ್ರಯತ್ನವು ಅಸಂಗತ ಮತ್ತು ಅಪ್ರಸ್ತುತ. ಸೌಹಾರ್ದ, ಸೌಜನ್ಯ ಮತ್ತು ಸಾಮರಸ್ಯ ಭಾವದಿಂದ ತಮ್ಮ ಬದುಕನ್ನು ರೂಪಿಸಿಕೊಂಡಿರುವ ಅಲ್ಲಿನ ಸ್ವಾಭಿಮಾನಿ ಕನ್ನಡಿಗರಿಗೆ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಬದ್ಧತೆಯನ್ನು ನೀಡಬೇಕಾದದ್ದು ಆ ಸರ್ಕಾರದ ಸಂವಿಧಾನಾತ್ಮಕ ಕರ್ತವ್ಯ' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ತಿಳಿಸಿದ್ದಾರೆ.

'ಅನಗತ್ಯವಾಗಿ ಆಗಾಗ ಗಡಿ ಭಾಗದಲ್ಲಿನ ಕನ್ನಡಿಗರ ಸ್ವಾಭಿಮಾನ ಕೆಣಕುವ ಇಂತಹ ಕಾರ್ಯಗಳಿಗೆ ಮಹಾರಾಷ್ಟ್ರ ಸರ್ಕಾರ ಮುಂದಾಗಬಾರದು. ಭಾಷಾ ಸಾಮರಸ್ಯ ಮತ್ತು ಸಹಬಾಳ್ವೆಯೇ ಗಡಿ ಭಾಗದ ಜನರ ಸಾಮಾಜಿಕ ಭದ್ರತೆಗೆ ಪ್ರಮುಖ ಸಾಧನ ಎಂಬುದನ್ನು ಮಹಾರಾಷ್ಟ್ರ ಸರ್ಕಾರ ಅರಿತುಕೊಳ್ಳಬೇಕು. ಮಹಾರಾಷ್ಟ್ರ ಗಡಿ ಭಾಗದಲ್ಲಿನ ನಮ್ಮ ಕನ್ನಡಿಗರ ಭಾವನೆಗಳಿಗೆ ಮತ್ತು ಅವರ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸಬೇಕು' ಎಂದು ಹೇಳಿದ್ದಾರೆ.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, 'ಮಹಾರಾಷ್ಟ್ರ ಸರ್ಕಾರದ ನಡೆ ಹಲವು ಗುಮಾನಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಸಂವಿಧಾನವು ದೇಶದ ಪ್ರಜೆಗಳಿಗೆ ನೀಡಿದ ಮೂಲಭೂತ ಹಕ್ಕನ್ನು ಕಸಿದುಕೊಳ್ಳುವ ಹುನ್ನಾರವಾಗಿದೆ. ಕೇಂದ್ರ ಗೃಹ ಸಚಿವಾಲಯವು ತಕ್ಷಣ ಮಧ್ಯ ಪ್ರವೇಶಿಸಿ, ಈ ಸಂವಿಧಾನ ವಿರೋಧಿ ಆದೇಶವನ್ನು ರದ್ದುಪಡಿಸಬೇಕು. ಕನ್ನಡಿಗರ ಸಹನೆಯನ್ನು ನಿರಂತರವಾಗಿ ಕೆಣಕುತ್ತಿರುವ ಉದ್ಧವ್ ಠಾಕ್ರೆ ಸರ್ಕಾರಕ್ಕೆ ಇಲ್ಲಿನ ರಾಜ್ಯ ಸರ್ಕಾರವು ಅಧಿಕೃತವಾಗಿ ಪ್ರತಿಭಟನೆ ಸಲ್ಲಿಸಬೇಕು. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಸಮಾಜದ ಸ್ವಾಸ್ಥ್ಯ ಕದಡುತ್ತಿರುವ ಶಿವಸೇನೆ ನೇತೃತ್ವದ ಸರ್ಕಾರಕ್ಕೆ ಎಚ್ಚರಿಸುವಂತೆ ಮನವಿ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

ಜ್ಞಾನಭಾರತಿಯಲ್ಲಿ ಕೆಂಪೇಗೌಡರ ಭವನ: ಅಶ್ವತ್ಥನಾರಾಯಣ ಭರವಸೆ

ಪ್ರಜಾವಾಣಿ ವಾರ್ತೆ

ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಇತರ ಅಧಿಕಾರಿಗಳು ಇದ್ದರು.

ಬೆಂಗಳೂರು: ಜ್ಞಾನಭಾರತಿಯ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ ಭವನ ನಿರ್ಮಾಣ ಹಾಗೂ ನಗರದ ಉಲ್ಲಾಳ ಜಂಕ್ಷನ್‌ನಲ್ಲಿ ಶೀಘ್ರವೇ ಸಬ್‌ವೇ ನಿರ್ಮಿಸಲು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಕೈಗೊಳ್ಳಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಉನ್ನತ ಅಧಿಕಾರಿಗಳ ಜೊತೆಗೆ ಅವರು ಶುಕ್ರವಾರ ಸಭೆ ನಡೆಸಿದರು.

'ಜ್ಞಾನಭಾರತಿ ಆವರಣದಲ್ಲಿ ಕೆಂಪೇಗೌಡರ ಭವನ ನಿರ್ಮಾಣ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಮೂರು ಎಕರೆ ಜಾಗ ನೀಡಲಾಗಿದೆ. ಇದರಲ್ಲಿ ಅಧ್ಯಯನ ಕೇಂದ್ರ, ಡಿಜಿಟಲ್ ಗ್ರಂಥಾಲಯ ಸೇರಿದಂತೆ ಕೆಂಪೇಗೌಡರಿಗೆ ಸಂಬಂಧಿಸಿದ ಎಲ್ಲ ಮಾಹಿತಿ ಲಭ್ಯವಾಗಲಿದೆ. ಈ ಯೋಜನೆಗೆ ಪಾಲಿಕೆ ಎರಡು ಹಂತಗಳಲ್ಲಿ ತಲಾ ₹50 ಕೋಟಿ ನೀಡಲಿದೆ. ಏಪ್ರಿಲ್ ವೇಳೆಗೆ ಕಾಮಗಾರಿ ಆರಂಭವಾಗಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

'ವಾಹನ ದಟ್ಟಣೆ ಕಿರಿಕಿರಿ ಎದುರಿಸುತ್ತಿರುವ ಉಲ್ಲಾಳ ಜಂಕ್ಷನ್‌ನಲ್ಲಿ ಸಬ್‌ವೇ ನಿರ್ಮಾಣ ಹಾಗೂ ಜಲಮಂಡಳಿಯು ತ್ಯಾಜ್ಯ ನಿರ್ವಹಣಾ ಘಟಕಗಳ (ಎಸ್‌ಟಿಪಿ) ನಿರ್ಮಾಣಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜಾಗ ನೀಡುವ ಬಗ್ಗೆ ಶೀಘ್ರವೇ ಕ್ರಮ ಕೈಗೊಳ್ಳ ಬೇಕು' ಎಂದು ಕುಲಪತಿ ಕೆ.ಆರ್.ವೇಣುಗೋಪಾಲ್ ಅವರಿಗೆ ಸೂಚಿಸಿದರು.

'ಮಲ್ಲೇಶ್ವರ ವ್ಯಾಪ್ತಿಯಲ್ಲಿ ಜಲಮಂಡಳಿಯ ಕೊಳವೆಗಳು ಹಳೆಯದಾಗಿ ನೀರು ಸೋರಿಕೆಯಾಗುತ್ತಿದ್ದು, ಇವುಗಳನ್ನು ತೆರವುಗೊಳಿಸಿ ಹೊಸ ಕೊಳವೆಗಳನ್ನು ಅಳವಡಿಸುವ ಯೋಜನೆಗೆ ₹70 ಕೋಟಿ ವೆಚ್ಚ ಆಗಬಹುದು. ನಗರೋತ್ಥಾನ ಯೋಜನೆಯಡಿ ₹20 ಕೋಟಿ ಹಣವನ್ನು ಪಾಲಿಕೆಯಿಂದ ಕೊಡಿಸಲಾಗುವುದು' ಎಂದು ಅಶ್ವತ್ಥನಾರಾಯಣ ಹೇಳಿದರು.

'ಸ್ಯಾಂಕಿ ಕೆರೆಯ ಟ್ಯಾಂಕ್‌ಬಂಡ್ ರಸ್ತೆಯನ್ನು ವಿಸ್ತರಣೆ ಮಾಡುವುದಕ್ಕೆ ನ್ಯಾಯಾಲಯದಲ್ಲಿದ್ದ ತಡೆಯಾಜ್ಞೆ ನಿವಾರಣೆಯಾಗಿದ್ದು, ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ಮೇಕ್ರಿ ವೃತ್ತದಿಂದ ಬಿಡಿಎ ಜಂಕ್ಷನ್‌ವರೆಗಿನ ಬಳ್ಳಾರಿ ರಸ್ತೆ ವಿಸ್ತರಣೆಯಿಂದ ದಟ್ಟಣೆ ತಗ್ಗಲಿದೆ. ಮುಂದಿನ ಆರು ತಿಂಗಳಿನಲ್ಲಿ ನಗರದಲ್ಲಿ ಒಂದು ಲಕ್ಷ ಬೀದಿದೀಪಗಳನ್ನು ಅಳವಡಿಸಲಾಗುವುದು. ಮಲ್ಲೇಶ್ವರದಲ್ಲೂ ಈ ಯೋಜನೆ ಜಾರಿಯಾಗಲಿದೆ' ಎಂದರು.

ಐಐಎಸ್ಸಿಗೆ ನೋಟಿಸ್: ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿದ್ದು, ನೋಟಿಸ್ ನೀಡುವುದಾಗಿ ಪಾಲಿಕೆ ಆಯುಕ್ತ ಮಂಜುನಾಥ ಪ್ರಸಾದ್ ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಚಿತ್ರಾವಳಿ

ಹೆಸರಘಟ್ಟ ಸಮೀಪ ವಡೇರಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ವೆಂಕಟಲಕ್ಷ್ಮಮ್ಮ ಮತ್ತು ಉಪಾಧ್ಯಕ್ಷರಾಗಿ ಎಂ. ವಿಶ್ವನಾಥ್ ಅಧಿಕಾರ ಸ್ವೀಕರಿಸಿದರು. ನೂತನ ಸದಸ್ಯರು ಇದ್ದರು.

ಪರಿಸರ ಕಾರ್ಯಕರ್ತೆ ದಿಶಾ ರವಿ ಅವರನ್ನು ದೆಹಲಿ ಪೊಲೀಸರು ಅಕ್ರಮವಾಗಿ ಬಂಧಿಸಿದ್ದು ಈ ಕುರಿತು ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ವಕೀಲರು, ರೈತ ಸಂಘಟನೆಗಳು ಹಾಗೂ ಕಾರ್ಮಿಕರ ಒಕ್ಕೂಟಗಳ ನಿಯೋಗ ಗೃಹಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿತು.

ಲಖನೌನಲ್ಲಿ ನಡೆದ ಅಖಿಲ ಭಾರತ ಕೇರಂ ಪಂದ್ಯಾವಳಿಯ ಅಂತಿಮ ಸುತ್ತಿನ ಡಬಲ್ಸ್ ವಿಭಾಗದಲ್ಲಿ ವಿಜೇತರಾದ ರಾಜ್ಯ ಅಂಚೆ ಇಲಾಖೆಯ ಜೆ.ಎನ್. ಶಾಮಸುಂದರ್ ಹಾಗೂ ಬಿ.ರಾಜೇಶ್ ಅವರನ್ನು ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್ ಅವರು ಅಭಿನಂದಿಸಿದರು. ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳಾದ ಜೆ.ಸಂತೋಷ್ ಕುಮಾರ್, ಕೆ.ರವೀಂದ್ರನ್, ಶಿಯೂಲಿ ಬರ್ಮನ್, ಜಿ.ಡಿ.ಭಟ್ ಇದ್ದರು.

ರಾಜೀವ್ ಗಾಂಧಿ ವಸತಿ ನಿಗಮದ ಅಡಿ 'ನನ್ನ ಮನೆ' ಯೋಜನೆಯಡಿ ಯಲಹಂಕ ಸಮೀಪದ ಹುಣಸಮಾರನಹಳ್ಳಿ ಹಾಗೂ ಮಾರೇನಹಳ್ಳಿ ಬಳಿ ನಿರ್ಮಿಸಲಾಗುವ ವಸತಿಗೃಹಗಳ ಕಾಮಗಾರಿಗೆ ಸಂಬಂಧಿಸಿದಂತೆ ವಸತಿ ಸಚಿವ ವಿ.ಸೋಮಣ್ಣ ಶುಕ್ರವಾರ ಸಭೆ ನಡೆಸಿದರು. ಶಾಸಕ ಕೃಷ್ಣ ಬೈರೇಗೌಡ, ವಸತಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಸಿಂಧು ಬಿ. ರೂಪೇಶ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಇದ್ದರು.

ಆರ್‌ಎಸ್‌ಎಸ್ ಸರಕಾರ್ಯವಾಹ ಸುರೇಶ್ ಸೋನಿ ಸಲಹೆ

'ವೈವಿಧ್ಯದ ಸರಳೀಕರಣ ಬೇಡ'

ಪ್ರಜಾವಾಣಿ ವಾರ್ತೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ಸುರೇಶ್ ಸೋನಿ (ಮಧ್ಯ) ಪುಸ್ತಕಗಳನ್ನು ಬಿಡುಗಡೆಗೊಳಿಸಿದರು. ಗ್ಲೋಬಲ್ ಎಡ್ಜ್ ಸಾಫ್ಟ್‌ವೇರ್ ಸ್ಥಾಪಕ ಎಂ.ಪಿ.ಕುಮಾರ್, ಧರಂಪಾಲ್ ಕ್ಲಾಸಿಕ್ ಸೀರಿಸ್‌ನ ಸಂಪಾದಕ ಡಾ.ಜೆ.ಕೆ. ಬಜಾಜ್, ಲೇಖಕ ಎಸ್‌ಆರ್‌ರಾಮಸ್ವಾಮಿ ಮತ್ತು ಡಾ.ಎಂ.ಡಿ. ಶ್ರೀನಿವಾಸ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ವೈವಿಧ್ಯವನ್ನು ಸರಳೀಕರಿಸಲು ಹೋಗಬಾರದು. ಅದನ್ನು ಹಾಗೆಯೇ ಉಳಿಸಿಕೊಂಡರೆ ಅದು ನಮ್ಮನ್ನು ಏಕರೂಪದ ಕಡೆಗೆ ಕೊಂಡೊಯ್ಯುತ್ತದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ಸುರೇಶ್ ಸೋನಿ ಶುಕ್ರವಾರ ತಿಳಿಸಿದರು.

ಗಾಂಧಿವಾದಿ ಧರಂಪಾಲ್ ಜನ್ಮಶತಾಬ್ದಿ ವರ್ಷದ ಅಂಗವಾಗಿ ರಾಷ್ಟ್ರೋತ್ಥಾನ ಪರಿಷತ್ ಹಮ್ಮಿಕೊಂಡಿದ್ದ ಐದು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಧರಂಪಾಲ್ ಅನೇಕ ಮಹತ್ವದ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂರಕ್ಷಿಸಿಡಲಾಗಿದೆ. ಧರಂಪಾಲ್ ಸಾಹಿತ್ಯವನ್ನು ಜನರಿಗೆ ತಲುಪಿಸಬೇಕಿದ್ದು, ಅವುಗಳನ್ನು ಸಣ್ಣ ಸಣ್ಣ ಪುಸ್ತಕಗಳನ್ನಾಗಿ ಮಾಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದ ಮಕ್ಕಳಿಗೆ ವಿತರಿಸಬೇಕಿದೆ. ವಿಶ್ವವಿದ್ಯಾಲಯ, ಅಕಾಡೆಮಿ ಹಾಗೂ ಕೌನ್ಸಿಲ್‌ಗಳಲ್ಲಿರುವವರು ಅಧ್ಯಯನ ನಡೆಸಿ ದಾಖಲೆಗಳಲ್ಲಿ ಅಡಕವಾಗಿರುವ ಅಂಶಗಳನ್ನು ಮುಂದಿನ ಪೀಳಿಗೆಗೆ ಹೇಗೆ ತಲುಪಿಸಬಹುದು ಎಂಬುದರ ಬಗ್ಗೆ ಚಿಂತನೆ ನಡೆಸಬೇಕಿದೆ' ಎಂದರು.

'ಭಾರತವನ್ನು ನಿರ್ಮಿಸುವ ಮೊದಲು ಅದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಧರಂಪಾಲ್ ಯಾವಾಗಲೂ ಹೇಳುತ್ತಿದ್ದರು. ಈ ಪುಸ್ತಕಗಳನ್ನು ಹೊರತರುವ ಮೂಲಕ ನಾವು ಈ ದಿಶೆಯಲ್ಲಿ ಹೆಜ್ಜೆ ಇಟ್ಟಿದ್ದೇವೆ' ಎಂದು ಹೇಳಿದರು.

'ಧರಂಪಾಲ್ ಕ್ಲಾಸಿಕ್ ಸೀರಿಸ್' ಮೂಲಕ ಹೊರ ತಂದಿರುವ 'ಪಂಚಾಯತ್ ರಾಜ್ ಆ್ಯಸ್ ದಿ ಬೇಸಿಸ್ ಆಫ್ ಇಂಡಿಯನ್ ಪಾಲಿಟಿ', 'ಇಂಡಿಯನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಇನ್ ದಿ ಎಯಿಟಿಂತ್ ಸೆಂಚುರಿ', 'ಸಿವಿಲ್ ಡಿಸ್‌ಒಬಿಡಿಯನ್ಸ್ ಆ್ಯಂಡ್ ಇಂಡಿಯನ್ ಟ್ರೆಡಿಷನ್', 'ದಿ ಬ್ಯುಟಿಫುಲ್ ಟ್ರೀ' ಹಾಗೂ 'ಭಾರತೀಯ ಚಿತ್ತ ಮಾನಸ್ ಆ್ಯಂಡ್ ಕಲಾ' ಪುಸ್ತಕಗಳ ಕುರಿತು ಇವುಗಳ ಸಂಪಾದಕರಾದ ಡಾ.ಜೆ.ಕೆ.ಬಜಾಜ್ ಮಾಹಿತಿ ನೀಡಿದರು.

ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಡಾ.ಕೆ.ವಿಜಯ ರಾಘವನ್, ಜಲಗಾಂವ್‌ನ ಗಾಂಧಿ ಸಂಶೋಧನಾ ಪ್ರತಿಷ್ಠಾನದ ಡಾ.ಗೀತಾ ಧರಂಪಾಲ್ ಅವರು ವಿಡಿಯೊ ಸಂದೇಶದ ಮೂಲಕ ಧರಂಪಾಲ್ ಅವರ ಕೊಡುಗೆಗಳನ್ನು ಸ್ಮರಿಸಿದರು.

‘ಅಮರ ಮಧುರ ಪ್ರೇಮ’ ಸ್ಪರ್ಧೆ: ಪೂರ್ಣಿಮಾಗೆ ಬಂಪರ್ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರೇಮಿಗಳ ದಿನಾಚರಣೆ’ಯ ಅಂಗವಾಗಿ ‘ಪ್ರಜಾವಾಣಿ’ ಏರ್ಪಡಿಸಿದ್ದ ಪೂರ್ಣಿಮಾ ‘ಅಮರ ಮಧುರ ಪ್ರೇಮ’ ಹಾಡಿನ ಸಾಲು ಗುರುತಿಸುವ ಸ್ಪರ್ಧೆಯಲ್ಲಿ ದಾವಣಗೆರೆ ಜಿಲ್ಲೆ ಚನ್ನಗಿರಿಯ ನಿವಾಸಿ ಪೂರ್ಣಿಮಾ ಅವರು ಬಂಪರ್ ಬಹುಮಾನ ವಿಜೇತ-ರಾಗಿದ್ದಾರೆ.

ಭಾಗವಹಿಸಿ, ಸರಿಯುತ್ತರ ಕಳುಹಿಸಿದ್ದ ಸ್ಪರ್ಧಿಗಳಲ್ಲಿ ಲಕ್ಕಿ ಡ್ರಾ ಮೂಲಕ ವಿಜೇತರನ್ನು ಆಯ್ಕೆ ಮಾಡಲಾಯಿತು. ಬಂಪರ್ ಬಹುಮಾನವಾಗಿ ₹ 15 ಸಾವಿರ ಮೌಲ್ಯದ ವಾಚ್ ನೀಡಲಾಗುವುದು. ಉಳಿದಂತೆ, ಸ್ಪರ್ಧೆಯ ಮೂರು ದಿನ 10 ಮಂದಿ ಅದೃಷ್ಟಶಾಲಿ ವಿಜೇತರಿಗೆ ತಲಾ ₹ 500 ಮೌಲ್ಯದ ಗಿಫ್ಟ್ ಕೂಪನ್ ಅನ್ನು ನೀಡಲಾಗುತ್ತದೆ.

ಫೆಬ್ರುವರಿ 12 ರಿಂದ 14ರವರೆವಿಗೆ ನಡೆದಿದ್ದ ಈ ಸ್ಪರ್ಧೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು. ಗೀತೆಯೊಂದರ ಸಾಲನ್ನು ನೀಡಿ, ಅದರ ಮುಂದಿನ ಸಾಲು ಗುರುತಿಸುವಂತೆ ಸ್ಪರ್ಧಿಗಳಿಗೆ ಕೇಳಲಾಗಿತ್ತು. ಮೂರು ಆಯ್ಕೆಯನ್ನೂ ನೀಡಿ, ವಾಟ್ಸ್ಆ್ಯಪ್ ಮೂಲಕ ಸರಿಯುತ್ತರ ತಿಳಿಸಲು ಕೋರಲಾಗಿತ್ತು.

‘ಯತ್ನಾಳಗೆ ನಮ್ಮ ಮೇಲೆ ಪ್ರೀತಿ ಜಾಸ್ತಿ’

ಕೊಪ್ಪಳ: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ನನ್ನ ಮೇಲೆ ಬಹಳ ಪ್ರೀತಿ. ಅವರು ದೊಡ್ಡವರು ಅವರ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

‘ನಮ್ಮ ಕುಟುಂಬದ ಬಗ್ಗೆ ಯಾರೋ ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ ಅಂತೆ. ತುಂಬಾ ಸಂತೋಷ. ಅದರ ಬಗ್ಗೆ ದೆಹಲಿ ನಾಯಕರು ವಿಚಾರಣೆ ಮಾಡುತ್ತಾರೆ’ ಎಂದು ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿ-ಯಿಸಿದರು. ‘ರಾಜ್ಯದಲ್ಲಿ ಮೀಸಲಾತಿಗೆ ನಡೆಯುತ್ತಿರುವ ಹೋರಾಟಕ್ಕೆ ನಮ್ಮ ವಿರೋಧವಿಲ್ಲ. ಹೋರಾಟ ಸಹಜ. ಈ ವಿಷಯದಲ್ಲಿ ಪಕ್ಷದಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ಸಂವಿಧಾನದ ಅಡಿ ಯಾರಿಗೆ ಮೀಸಲಾತಿ ನೀಡಬೇಕು ಎಂಬುದು ಮುಖ್ಯಮಂತ್ರಿಗೆ ಬಿಟ್ಟ ವಿಚಾರ' ಎಂದರು.

‘ಬಸವಕಲ್ಯಾಣ, ಮಸ್ಕಿ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುತ್ತದೆ. ಮುಂದಿನ ಚುನಾವಣೆಯಲ್ಲಿ ನಾನು ಎಲ್ಲಿ ಅಭ್ಯರ್ಥಿಯಾಗಬೇಕು ಎಂಬುದನ್ನು ಪಕ್ಷ ನಿರ್ಣ-ಯಿಸುತ್ತದೆ’ ಎಂದು ಹೇಳಿದರು.

ತೋಟಗಾರಿಕೆ ಬೆಳೆಗೆ ಅಪಾರ ಹಾನಿ ● ಆಲಿಕಲ್ಲು ಹೊಡೆತಕ್ಕೆ ಕಂಗಾಲಾದ ಕಾಫಿ ಬೆಳೆಗಾರರು

ಕೊಡಗಿನಲ್ಲಿ ರಾಶಿ ರಾಶಿ ಆಲಿಕಲ್ಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಶುಕ್ರವಾರವೂ ಮಳೆ ಸುರಿದಿದೆ. ಕೊಡಗು, ಹಾಸನ, ಚಾಮರಾಜನಗರ, ಮೈಸೂರು ಹಾಗೂ ಮಂಡ್ಯ ಜಿಲ್ಲೆಯ ಹಲವೆಡೆ ಬಿರುಗಾಳಿ ಸಹಿತ ಬಿರುಸಿನ ಆಲಿಕಲ್ಲು ಮಳೆಯಾಗಿದೆ.

ಕೊಡಗಿನ ಶನಿವಾರಸಂತೆ ಹೋಬಳಿ ವ್ಯಾಪ್ತಿಯ ಗುಡುಗಳಲೆ, ಮುಳ್ಳೂರು, ಅಂಕನಹಳ್ಳಿ, ನಿಡ್ತ, ಹಂಡ್ಲಿ, ದುಂಡಳ್ಳಿ, ದೊಡ್ಡಳ್ಳಿಯಲ್ಲಿ ಮಳೆಯೊಂದಿಗೆ ರಾಶಿ ರಾಶಿ ಆಲಿಕಲ್ಲು ಸುರಿದಿದ್ದು, ರೈತರು ಆತಂಕಕ್ಕೀಡಾ-ಗಿದ್ದಾರೆ. ಮಡಿಕೇರಿಯಲ್ಲೂ ಒಂದು ತಾಸು ಬಿರುಸಿನ ಮಳೆಯಾಗಿದೆ. ಉತ್ತರ ಕೊಡಗಿನ ಐದಾರು ಗ್ರಾಮಗಳ ಕಾಫಿ ತೋಟ, ರಸ್ತೆ, ಮನೆಯ ಚಾವಣಿಯ ಮೇಲೆ, ತೆಂಗು, ಅಡಿಕೆ ಮತ್ತು ಬಾಳೆ ತೋಟ ಹಾಗೂ ಭತ್ತದ ಗದ್ದೆಯ ಬಯಲಿನಲ್ಲಿ ಅಪಾರ ಪ್ರಮಾಣ ಆಲಿಕಲ್ಲು ಸುರಿದಿದ್ದು, ತುಸು ಸಮಯ ಹಿಮರಾಶಿಯಂತೆ ಕಾಣಿಸಿತು.

ಅಂಕನಹಳ್ಳಿ ಸರ್ಕಾರಿ ಶಾಲಾ ಆವರಣ, ಪಶುಚಿಕಿತ್ಸಾ ಕೇಂದ್ರದ ಆವರಣ ಆಲಿಕಲ್ಲುಮಯವಾಗಿತ್ತು. ದೊಡ್ಡ ಗಾತ್ರದ ಆಲಿಕಲ್ಲು ಸುರಿದಿದ್ದರಿಂದ ಕೆಲವು ಮನೆಗಳ ಹೆಂಚುಗಳು ಒಡೆದಿದ್ದು ನಷ್ಟ ಉಂಟಾಗಿದೆ. ಬಿರುಗಾಳಿಗೆ ಬೆಳೆ ನೆಲಕಚ್ಚಿದೆ.

‘ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ಆಲಿಕಲ್ಲು ಮಳೆ ಸುರಿದಿರಲಿಲ್ಲ. ಜಿಲ್ಲೆಯ ಕೆಲವು ಭಾಗದಲ್ಲೂ ಇನ್ನೂ ರೋಬಸ್ಟಾ ಕಾಫಿ ಕೊಯ್ಲು ಪ್ರಗತಿಯ-ಲ್ಲಿದೆ. ಆಲಿಕಲ್ಲು ಹೊಡೆತಕ್ಕೆ ಬಾಳೆ, ಕಾಳು ಮೆಣಸಿನ ಬಳ್ಳಿ, ಹಸಿರು ಮೆಣಸಿನ ಕಾಯಿಗೆ ಗಿಡಕ್ಕೆ ಹಾನಿಯಾಗಿದೆ’ ಎಂದು ಎಂದು ದೊಡ್ಡಬಿಳಾಹ ಗ್ರಾಮದ ಬೆಳೆಗಾರ ಬಿ.ಎಸ್.ಮೋಹನ್ ನೋವು ತೋಡಿಕೊಂಡರು.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ, ಮೋಕಳಿ, ಸಂತೆಮರೂರು, ಶಾನುಭೋಗನಹ-ಳ್ಳಿ, ಕಣಿವೆ ಬಸಪ್ಪ ದೇವಾಲಯ, ಹುಲಿಕಲ್ ಸೇರಿದಂತೆ ಹಲವೆಡೆ ಆಲಿಕಲ್ಲು ಮಳೆಯಾಗಿದೆ. ಮಾವಿನ ಹೂವು ಉದುರಿದೆ. ಎಲೆಕೋಸು, ಸೋರೆಕಾಯಿ, ಸೌತೆ, ಮೆಣಸಿನಕಾಯಿ ಬೆಳೆಗೆ ತೀವ್ರ ಹಾನಿಯಾಗಿದೆ.

‘ಈ ರೀತಿಯ ಆಲಿಕಲ್ಲು ಮಳೆ ಆಗಿದ್ದನ್ನು ಹಿಂದೆಂದೂ ಕಂಡಿರಲಿಲ್ಲ, ಆಲಿಕಲ್ಲು ಬಿದ್ದು ಹಾನಿಯಾಗಿರುವ ತರಕಾರಿ ಬೆಳೆಗಳು ಒಂದರೆಡು ದಿನದಲ್ಲೇ ಕೊಳೆಯಲಾರಂಭಿಸುತ್ತದೆ. ಮಾವಿನ ಹೂವು ಈ ಬಾರಿ ಬಹಳ ಚೆನ್ನಾಗಿದ್ದು, ಉತ್ತಮ ಫಸಲಿನ ನಿರೀಕ್ಷೆ ಇತ್ತು. ಅಕಾಲಿಕವಾಗಿ ಬಿದ್ದ ಆಲಿಕಲ್ಲು ಮಳೆಯಿಂದ ಹೂವು ಉದುರಿ ತೀವ್ರ ನಷ್ಟವಾಗಿದೆ’ ಎಂದು ಹುಲಿಕಲ್ ಗ್ರಾಮದ ಕೃಷಿಕ ಬೇಲೂರೇಗೌಡ ನೋವು ತೋಡಿಕೊಂಡರು.

ಶನಿವಾರಸಂತೆ ಸಮೀಪದ ಅಂಕನಹಳ್ಳಿಯಲ್ಲಿ ಸುರಿದ ಆಲಿಕಲ್ಲನ್ನು ಬೊಗಸೆಯಲ್ಲಿ ಹಿಡಿದಿರುವ ಗ್ರಾಮಸ್ಥರು

ಸಕಲೇಶಪುರ ತಾಲ್ಲೂಕಿನಾ-ದ್ಯಂತ ಮಧ್ಯಾಹ್ನ ಒಂದೂವರೆ ತಾಸು ಧಾರಾಕಾರ ಮಳೆಯಾಗಿದೆ. ಒಣಗಲು ಹಾಕಿದ್ದ ಕಾಫಿ ಒದ್ದೆಯಾಗಿದ್ದು, ಇಳಿಜಾರಿನ ಕಣಗಳಲ್ಲಿ ಸಂಗ್ರಹಿಸಿದ್ದ ಬೆಳೆ ಕೊಚ್ಚಿ ಹೋಗಿದೆ.

ಚಾಮರಾಜನಗರ ಸೇರಿದಂತೆ ಜಿಲ್ಲೆಯ ಯಳಂದೂರು, ಕೊಳ್ಳೇಗಾಲ ಭಾಗದಲ್ಲಿ ಮಳೆಯಾಗಿದೆ. ಬಿಳಿಗಿರಿ ರಂಗನ ಬೆಟ್ಟ ಹಾಗೂ ಸುತ್ತಮುತ್ತಲಿನ-ಲ್ಲಿ ಬಿರುಸಿನ ಮಳೆಯಾಗಿದ್ದು, ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದೆ. ಹಲವೆಡೆ ವಿದ್ಯುತ್ ಕಂಬಗಳು ಉರುಳಿವೆ. ಮಂಡ್ಯ ಜಿಲ್ಲೆಯ ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಲವೆಡೆ ಆಲಿಕಲ್ಲು ಬಿದ್ದಿದೆ. ಮೈಸೂರು ಸೇರಿದಂತೆ ಜಿಲ್ಲೆಯ ವಿವಿಧೆಡೆ ತುಂತುರು ಮಳೆಯಾಗಿದ್ದು, ಬಿಳಿಕೆರೆಯಲ್ಲಿ ಆಲಿಕಲ್ಲಿನ ರಾಶಿ ಸುರಿದಿದೆ.

ಗುಡುಗು, ಸಿಡಿಲಿನ ಅಬ್ಬರದೊಂದಿಗೆ ಮೈಸೂರಿನಲ್ಲಿ ಧಾರಾಕಾರ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಲವೆಡೆ ಶುಕ್ರವಾರ ನಸುಕಿನಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ನಗರ ವ್ಯಾಪ್ತಿಯ ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ. ನಾಯಕನಹಟ್ಟಿ ಹೋಬಳಿಯ ನೇರಲಗುಂಟೆ ಸಮೀಪದ ಬತ್ತಯ್ಯನಹಟ್ಟಿ ಗ್ರಾಮದಲ್ಲಿ 30ಕ್ಕೂ ಹೆಚ್ಚು ಕುರಿಗಳು ಶೀತದಿಂದ ಮೃತಪಟ್ಟಿವೆ.

ಚಿತ್ರದುರ್ಗದಲ್ಲಿ 9.6 ಸೆಂ.ಮೀ ಮಳೆ ದಾಖಲಾಗಿದೆ. ಐತಿಹಾಸಿಕ ಹೊಂಡ, ಚೆಕ್‌ಡ್ಯಾಂಗಳು ಭರ್ತಿಯಾಗಿವೆ.

ತಾಲ್ಲೂಕಿನ ಸಜ್ಜನಕೆರೆ ಗ್ರಾಮದ ಹಳೆ ಮನೆಯ ಗೋಡೆಗಳು ಕುಸಿದಿವೆ.

ಚಿತ್ರದುರ್ಗದ ಗುಮಾಸ್ತರ ಕಾಲೊನಿಯಲ್ಲಿ ನದಿಯಂತೆ ಭೋರ್ಗರೆದು ಹರಿದ ಮಳೆ ನೀರು

ಮೇಲ್ಮೈ ಸುಳಿಗಾಳಿಯಿಂದ ಮಳೆ

ಮೈಸೂರು: ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ಮೇಲ್ಮೈ ಸುಳಿಗಾಳಿಯಿಂದ, ಮೋಡಗಳು ಮತ್ತು ಗಾಳಿ ಪ್ರಮಾಣ ಹೆಚ್ಚಾಗಿ ಅಕಾಲಿಕ ಮಳೆ ಬೀಳುತ್ತಿದೆ.

ಫೆ.18ರವರೆಗೂ ಅರಬ್ಬಿ ಸಮುದ್ರದಲ್ಲಿ ಈ ಸ್ಥಿತಿ ಇತ್ತು. ಕರ್ನಾಟಕದಿಂದ ಗುಜರಾತಿನವರೆಗೂ ಗಾಳಿಯ ಒತ್ತಡ ಕಡಿಮೆ ಇದೆ. ಈಗ ದಿಢೀರನೇ ಆಗಿರುವ ಬದಲಾವಣೆಯಿಂದ ಫೆ. 21ರವರೆಗೂ ಗಾಳಿ ಸಹಿತ ಮಳೆ ಬೀಳಲಿದೆ. ಸಾಮಾನ್ಯವಾಗಿ ಫೆಬ್ರುವರಿ ತಿಂಗಳಲ್ಲಿ ಈ ರೀತಿಯ ಹವಾಮಾನ ಬದಲಾವಣೆ ನಿರೀಕ್ಷಿಸಿರಲಿಲ್ಲ ಎಂದು ಹವಾಮಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಹಿರಿಯ ಸಮಾಲೋಚಕ ಡಾ.ಶ್ರೀನಿ-ವಾಸರೆಡ್ಡಿ ತಿಳಿಸಿದ್ದಾರೆ.

ಮಲ್ಲಾಪುರ ಕೆರೆ ತುಂಬಿ ಹರಿದ ಪರಿಣಾಮ ಒಂದಿಷ್ಟು ಮನೆಗಳ ಗೋಡೆಗಳಿಗೆ ಹಾನಿಯಾಗಿದೆ.

ಅಕಾಲಿಕವಾಗಿ ಸುರಿದ ಮಳೆ ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ. ರಾಗಿ ಒಕ್ಕಣೆಗೆ ಅಡ್ಡಿಯಾಗಿದ್ದು, ಕೆಲವೆಡೆ ರಾಗಿ ಹುಲ್ಲು ನೀರುಪಾಲಾಗಿದೆ. ಮೆಕ್ಕೆಜೋಳದ ಕಾಳುಗಳನ್ನು ತೆನೆಯಿಂದ ಬೇರ್ಪಡಿಸುವ ಕಾರ್ಯಕ್ಕೂ ತೊಂದರೆಯಾಗಿದೆ. 110 ಎಕರೆ ತೋಟಗಾರಿಕೆ ಬೆಳೆಗೆ ಹಾನಿಯಾಗಿದೆ.

ಹೊಸದುರ್ಗ ತಾಲ್ಲೂಕಿನಲ್ಲಿ 18 ಮನೆಗಳಿಗೆ ನೀರು ನುಗ್ಗಿದೆ. ನಾಯಕನಹಟ್ಟಿ, ಸೊಂಡೆಕೆರೆ ಹಾಗೂ ಮಲ್ಲಾಡಿಹಳ್ಳಿಯಲ್ಲಿ ತಲಾ ಒಂದೊಂದು ಮನೆಗಳು ಕುಸಿದಿವೆ.

ಶಿವಮೊಗ್ಗ ವರದಿ: ಶಿವಮೊಗ್ಗ ನಗರ, ಸಾಗರ, ತೀರ್ಥಹಳ್ಳಿ, ಹೊಸನಗರದಲ್ಲಿ ಶುಕ್ರವಾರ ಸಾಧಾರಣ ಮಳೆಯಾಗಿದೆ.

ಹುಬ್ಬಳ್ಳಿ ವರದಿ: ಹುಬ್ಬಳ್ಳಿ–ಧಾರವಾಡ, ಉತ್ತರ ಕನ್ನಡ, ಬೆಳಗಾವಿ, ಬಳ್ಳಾರಿ, ಹೊಸಪೇಟೆಯ ಕೆಲವೆಡೆ ಶುಕ್ರವಾರ ಮಳೆಯಾಗಿದೆ. ಕಾರವಾರ ಮತ್ತು ಅಂಕೋಲಾದಲ್ಲಿ ಸಂಜೆ ಆಲಿಕಲ್ಲು ಸಹಿತ ಬಿರುಸಿನ ಮಳೆಯಾಗಿದೆ.

ಹಳಿಯಾಳ ಹಾಗೂ ಕುಮಟಾದಲ್ಲಿ ಒಂದು ತಾಸಿಗೂ ಅಧಿಕ ಕಾಲ ಜೋರಾದ ಮಳೆಯಾಗಿದ್ದು, ಯಲ್ಲಾಪುರ, ಜೊಯಿಡಾ ತಾಲ್ಲೂಕಿನ ಹಲವೆಡೆ ಸಾಧಾರಣ ಮಳೆಯಾಗಿದೆ.

ಕಲ್ಯಾಣ ಕರ್ನಾಟಕದಲ್ಲಿ ಶೀತಗಾಳಿ

ಕಲಬುರ್ಗಿ: ಕಲಬುರ್ಗಿ, ಬೀದರ್, ರಾಯಚೂರು ಮತ್ತು ಕೊಪ್ಪಳದಲ್ಲಿ ಶುಕ್ರವಾರ ಇಡೀ ದಿನ ಮೋಡ ಕವಿದ ವಾತಾವರಣ, ಶೀತ ಗಾಳಿ ಬೀಸಿತು. ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಉತ್ತಮ ಮಳೆಯಾಯಿತು.

ಯಾದಗಿರಿ, ಗುರುಮಠಕಲ್‌ನ-ಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜೋಳ ಬೆಳೆಯಲಾಗಿದೆ. ತೆನೆ ಕಟ್ಟಿದ್ದು ಈ ವೇಳೆ ಮಳೆ ಹನಿಗಳು ತೆನೆಯೊಳಗೆ ಸೇರಿದರೆ ಬಿಳಿಜೋಳ ಕಪ್ಪಾಗುವ ಆತಂಕ ರೈತರಿಗೆ ಎದುರಾಗಿದೆ.

ಕಲಬುರ್ಗಿಯಲ್ಲಿ ತಾಪಮಾನ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್, ಬೀದರ್‌ನಲ್ಲಿ 14 ಡಿಗ್ರಿ ಸೆಲ್ಸಿಯಸ್ ಮತ್ತು ರಾಯಚೂರಿನಲ್ಲಿ 16 ಡಿಗ್ರಿ ಸೆಲ್ಸಿಯಸ್ ಇತ್ತು. ಎಲ್ಲಾ ಕಡೆ ಗರಿಷ್ಠ ತಾಪಮಾನ 32 ಡಿಗ್ರಿ ಸೆಲ್ಸಿಯಸ್ ಇತ್ತು.

ಮಲೆನಾಡಿನಲ್ಲಿ ವರ್ಷಧಾರೆ

ಮಂಗಳೂರು: ಕರಾವಳಿ ಹಾಗೂ ಮಲೆನಾಡಿನ ಹಲವೆಡೆ ಶುಕ್ರವಾರ ಬೆಳಗಿನ ಜಾವ ಉತ್ತಮ ಮಳೆಯಾಗಿದೆ.

ಮಂಗಳೂರಿನಲ್ಲಿ ಬೆಳಿಗ್ಗೆ ತುಂತುರು ಮಳೆ ಸುರಿಯಿತು. ಮಳೆಯಿಂದ ಭತ್ತ, ಅಡಿಕೆ ಕೃಷಿಗೆ ಹಾನಿಯಾಗಿದೆ. ಬೆಳಗಿನ ಜಾವ ಮಳೆ ಸುರಿದಿದ್ದರಿಂದ ಒಣಹಾಕಿದ ಅಡಿಕೆ ಒದ್ದೆಯಾಗಿದೆ. ಕಡೂರು ತಾಲ್ಲೂಕಿನ ವಿವಿಧೆಡೆ ಕಣದಲ್ಲಿದ್ದ ರಾಗಿ, ಕಡಲೆ ಹಾಗೂ ಆಲೂಗೆಡ್ಡೆ ಬೆಳೆಗಳು ಕೊಳೆಯುವ ಭೀತಿ ಎದುರಾಗಿದೆ. ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ವಿವಿಧೆಡೆ ಹಾಗೂ ಹೆಬ್ರಿಯ ಸುತ್ತಲಿನ ಪರಿಸರದಲ್ಲಿ ಧಾರಾಕಾರ ಮಳೆ ಸುರಿದಿದೆ.

ಪ್ರಜಾವಾಣಿ ಕನ್ನಡ ಧ್ವನಿ
‘ಕನ್ನಡ ಧ್ವನಿ’ ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ ‘ಹರಟೆ ಕಟ್ಟೆ’
ಫಾಸ್ಟ್ಯಾಗ್ ಲೋಪಗಳೇನು
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ಬಿ.ಚೆನ್ನಾರೆಡ್ಡಿ
ಕರ್ನಾಟಕ ಲಾರಿ ಮಾಲೀಕರ ಸಂಘದ ಅಧ್ಯಕ್ಷ
ಕೆ. ರಾಧಾಕೃಷ್ಣ ಹೊಳ್ಳ
ಕರ್ನಾಟಕ ಪ್ರವಾಸಿ ವಾಹನ ಆಪರೇಟರ್‌ಗಳ ಸಂಘಟನೆಯ ಅಧ್ಯಕ್ಷ
ಮಧ್ಯಾಹ್ನ 4 ಗಂಟೆಗೆ
ನೀವೂ ಆಲಿಸಿರಿ,
ಸ್ನೇಹಿತರಿಗೂ ಕೇಳಿಸಿರಿ
https://www.prajavani.net/podcast

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್– ಹಿತಾನುಭವ
ಎರಡು ಮುತ್ತಿನ ಕಥೆ!
ಸಮಾನ ಮನಸ್ಕರು ಪದ್ಮಚರಣ್ ಅವರಿಗೆ ಸನ್ಮಾನಿಸಲು ಮುಂದಾದರು. ಅದಕ್ಕೂ ಮೊದಲು ಪದ್ಮಚರಣ್ ಎರಡು ಷರತ್ತು ಹಾಕಿದರು. ಆ ಷರತ್ತುಗಳೇನು?...
https://bit.ly/3qES8Fh

ಇದೇ 22 ರಿಂದ 6–8 ತರಗತಿ ಆರಂಭ

ಬೆಂಗಳೂರು: ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆ-ಗಳಲ್ಲಿ 6 ರಿಂದ 8 ನೇ ತರಗತಿಗಳನ್ನು ಇದೇ 22 ರಿಂದ ಪೂರ್ಣ ಪ್ರಮಾಣದಲ್ಲಿ ಆರಂಭಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಬೆಂಗಳೂರು ನಗರದ ಬಿಬಿಎಂಪಿ ವ್ಯಾಪ್ತಿ ಮತ್ತು ಕೇರಳ ರಾಜ್ಯದ ಗಡಿ ಭಾಗಗಳಿಗೆ ಹೊಂದಿಕೊಂಡಿರುವ ಪ್ರದೇಶವನ್ನು ಹೊರತುಪಡಿಸಿ ಉಳಿದ ಎಲ್ಲ ಕಡೆಗಳಲ್ಲಿ ಪ್ರತಿ ದಿನ ಪೂರ್ಣಾವಧಿ ತರಗತಿಗಳು ನಡೆಯಲಿವೆ. ಈ ಎರಡೂ ಕಡೆ 8 ನೇ ತರಗತಿ ಪೂರ್ಣಾವಧಿ ನಡೆಯಲಿದೆ. ಆದರೆ, 6 ಮತ್ತು 7 ನೇ ತರಗತಿಗಳಿಗೆ ವಿದ್ಯಾಗಮ ಮುಂದುವರೆಯಲಿದೆ. ಶಾಲಾ– ಕಾಲೇಜುಗಳಿಗೆ ಈಗಾಗಲೇ ಹೊರಡಿಸಿರುವ ಕೋವಿಡ್ ಮಾರ್ಗ-ಸೂಚಿಯನ್ನು ಇಲ್ಲೂ ಪಾಲಿಸಬೇಕಾಗು-ತ್ತದೆ. ತರಗತಿಗಳ ವೇಳಾಪಟ್ಟಿಯನ್ನೂ ಹೊರಡಿಸಲಾಗಿದೆ.

ದಾಖಲಾತಿ ಅವಧಿ ವಿಸ್ತರಣೆ: 2020–21 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ದಾಖಲಾತಿ ಅವಧಿಯನ್ನು ಮಾರ್ಚ್ 31 ರವರೆಗೆ ವಿಸ್ತರಿಸಲಾಗಿದೆ. ಸಾಕಷ್ಟು ವಿದ್ಯಾರ್ಥಿಗಳು ಹೆಸರನ್ನು ನೋಂದಾಯಿಸಿ ಕೊಂಡಿಲ್ಲ. ಆದ್ದರಿಂದ ಅವಧಿ ವಿಸ್ತರಿಸಲಾಗಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಪ್ರಜಾವಾಣಿ
ಆನ್‌ಲೈನ್ ಕ್ವಿಜ್ ಚಾಂಪಿಯನ್‌ಶಿಪ್
ಗ್ರ್ಯಾಂಡ್ ಫಿನಾಲೆ ಇಂದು
7 ವಿದ್ಯಾರ್ಥಿಗಳ ನಡುವೆ ರೋಚಕ ಸ್ಪರ್ಧೆ
ಸಂಜೆ 6 ರಿಂದ 7.30ರ ವರೆಗೆ ಜೂಮ್ ಆ್ಯಪ್‌ನಲ್ಲಿ...
ಪ್ರೇಕ್ಷಕರಾಗಿ ಪಾಲ್ಗೊಳ್ಳಿ, ಸ್ಪೆಷಲ್ ಪ್ರಶ್ನೆಗಳಿಗೆ ಉತ್ತರಿಸಿ, ಬಹುಮಾನ ಗೆಲ್ಲಿ
ನೋಂದಣಿ ಮಾಡಿಕೊಂಡವರಿಗೆ zoom app ಲಿಂಕ್ ರವಾನೆ
ನೋಂದಣಿಗೆ ಲಿಂಕ್/ಕೋಡ್:
http://bit.ly/PVQUIZFINALE
ಆಲ್ ದಿ ಬೆಸ್ಟ್

ರಾಹುಲ್ ಪ್ರಶ್ನೆ

ನವದೆಹಲಿ: ‘ಒಂದು ಶ್ರೇಣಿ ಒಂದು ಪಿಂಚಣಿ’ (ಒಆರ್‌ಪಿಒ) ಕುರಿತ ಪರಿಶೀಲನೆಯು ಬಾಕಿ ಉಳಿದಿರುವ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಸಂಸದೀಯ ಸ್ಥಾಯಿ ಸಮಿತಿ ಸಭೆಯಲ್ಲಿ ರಕ್ಷಣಾ ಸಚಿವಾಲಯದ ಉನ್ನತ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

ನ್ಯಾ.ಸದಾಶಿವ ವರದಿ ಜಾರಿ ಹೋರಾಟ ಸಮಿತಿ
ನ್ಯಾ. ಸದಾಶಿವ ವರದಿ ಜಾರಿಗಾಗಿ ಮಾದಿಗ ವಿರಾಟ್ ಶಕ್ತಿ ಪ್ರದರ್ಶನ

ಮಾನ್ಯ ಸುಪ್ರೀಂಕೋರ್ಟ್ ತೀರ್ಪಿನಂತೆ ಮತ್ತು ಶಿರಾ ಉಪಚುನಾವಣೆಯಲ್ಲಿ ಮಾದಿಗರಿಗೆ ನೀಡಿದ ಭರವಸೆಯಂತೆ ಬಿಜೆಪಿ ಸರ್ಕಾರವು ಕೂಡಲೇ ಕರ್ನಾಟಕದಲ್ಲಿ ಸದಾಶಿವ ವರದಿ ಜಾರಿ ಮಾಡಿ ಒಳ ಮೀಸಲಾತಿ ನೀಡಬೇಕೆಂದು ಆಗ್ರಹಿಸಿ, ಮಾದಿಗ ಮತ್ತು ಸಂಬಂಧಿತ 47 ಜಾತಿಗಳ 10 ಲಕ್ಷ ಜನರ ಬೃಹತ್ ವಿರಾಟ್ ಶಕ್ತಿ ಪ್ರದರ್ಶನ ಮತ್ತು ಅನಿರ್ದಿಷ್ಟಾವಧಿ ಪ್ರತಿಭಟನೆ. ಕರ್ನಾಟಕ ಬಂದ್ ದಿನಾಂಕವನ್ನು ಮುಂದೆ ತಿಳಿಸಲಾಗುವುದು. ಸದಾಶಿವ ವರದಿ ಜಾರಿಮಾಡದಿದ್ದರೆ 40 ಸಾವಿರ ಮಾದಿಗ ಮತದಾರರಿರುವ ಮಸ್ಕಿ, 50 ಸಾವಿರ ಮಾದಿಗ ಮತದಾರರಿರುವ ಬಸವಕಲ್ಯಾಣದಲ್ಲಿ ಬಿಜೆಪಿಯನ್ನು ಸೋಲಿಸುತ್ತೇವೆ.

ದಿನಾಂಕ: 08.03.2021 ಬೆಳಿಗ್ಗೆ: 10.00 ಗಂಟೆಗೆ ಸ್ಥಳ: ಫ್ರೀಡಂ ಪಾರ್ಕ್, ಬೆಂಗಳೂರು

ಮಾದಿಗ ವಿರೋಧಿ ಮೇಲ್ಜಾತಿ ನಾಯಕತ್ವದ ಬಿಜೆಪಿ, ಕಾಂಗ್ರೆಸ್, ದಳಗಳು ಮಾದಿಗರಿಗೆ 70 ವರ್ಷಗಳಿಂದ ಒಳಮೀಸಲಾತಿ ನೀಡದ ಕಾರಣ ಪ್ರತಿವರ್ಷ ಮಾದಿಗರಿಗಾಗುವ ನಷ್ಟ

1 ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಕಛೇರಿ ಕಾರ್ಖಾನೆ, ಕಾರ್ಪೊರೇಷನ್, ಬೋರ್ಡ್, ನಿಗಮ, ಕಂಪನಿ, ಬ್ಯಾಂಕ್, ವಿಮಾ ಸಂಸ್ಥೆಗಳು, ರೈಲ್ವೆ ಇತ್ಯಾದಿ ಉದ್ಯೋಗ ಕ್ಷೇತ್ರಗಳಲ್ಲಿ 3 ಲಕ್ಷ ಎಸ್‌ಸಿ ನೌಕರರಿದ್ದಾರೆ. 1.50 ಲಕ್ಷ ಮಾದಿಗರು ಇರಬೇಕಾದ ಕಡೆ ಕೇವಲ 26 ಸಾವಿರ ನೌಕರರಿದ್ದಾರೆ. ಇದರಲ್ಲಿ 16 ಸಾವಿರ ಪೌರಕಾರ್ಮಿಕರು.

2 ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್, ಐಐಟಿ, ಐಎಎಂ ಮತ್ತು ಇತರ ವೃತ್ತಿಪರ ಕೋರ್ಸ್‌ಗಳು ಹಾಗೂ ವಿದೇಶಿ ವ್ಯಾಸಂಗ ನಿಧಿ, ಸ್ಕಾಲರ್‌ಶಿಪ್‌ಗಳು, ನವೋದಯ, ಮೊರಾರ್ಜಿ ಇತ್ಯಾದಿ ವಸತಿ ಶಾಲೆಗಳಲ್ಲಿ ಒಳಮೀಸಲಾತಿ ಇಲ್ಲದ ಕಾರಣ ಅಲ್ಲಿ ಮಾದಿಗರ ಪ್ರವೇಶ ಕೇವಲ ಶೇ.2ರಷ್ಟು ಮಾತ್ರವಿದೆ. ಕೆಲವು ಕೋರ್ಸ್‌ಗಳಲ್ಲಿ ಶೇ.0.2ರಷ್ಟು ಸಹ ಇಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಯೋಜನೆಗಳಲ್ಲಿ ಮಾದಿಗರು ಶೇ.1ರಷ್ಟನ್ನು ಸಹ ಪಡೆದುಕೊಳ್ಳುತ್ತಿಲ್ಲ. ಇಲ್ಲಿ ಒಳಮೀಸಲಾತಿ ಇದ್ದರೆ ಮಾದಿಗ ವಿದ್ಯಾರ್ಥಿಗಳಿಗೆ ಪ್ರತಿವರ್ಷ 5000 ಕೋಟಿ ರೂಪಾಯಿ ಸಿಗುತ್ತಿತ್ತು.

3 ಪಿಡಬ್ಲ್ಯೂಡಿ, ಬಿಬಿಎಂಪಿ ಇತ್ಯಾದಿ ಸರ್ಕಾರಿ ಕಾಮಗಾರಿಗಳ ಗುತ್ತಿಗಳಲ್ಲಿ ಇರುವ ಶೇ.25ರಷ್ಟು ಮೀಸಲಾತಿಯಲ್ಲಿ ಮಾದಿಗರಿಗೆ ಶೇ.1ರಷ್ಟು ಸಹ ಸಿಗುತ್ತಿಲ್ಲ. ಒಳಮೀಸಲಾತಿ ಇದ್ದರೆ ವಾರ್ಷಿಕ 50000 ಕೋಟಿಗೂ ಮೇಲ್ಪಟ್ಟು ಗುತ್ತಿಗೆ ಕೆಲಸ ಸಿಗುತ್ತಿತ್ತು.

4 ಚಿಲ್ಲರೆ ವೈನ್‌ಶಾಪ್, ಹೋಲ್‌ಸೇಲ್ ವೈನ್‌ಶಾಪ್, ಕೆಐಎಡಿಬಿ ಕೈಗಾರಿಕಾ ಜಮೀನುಗಳು ಮತ್ತು ಶೆಡ್‌ಗಳು, ಸೊಸೈಟಿ ನಿವೇಶನಗಳು, ಬಿಡಿಎ ಮತ್ತಿತರ ನಗರಾಭಿವೃದ್ಧಿ ಇಲಾಖೆಯ ನಿವೇಶನಗಳು, ಕೆಹೆಚ್‌ಬಿ, ಕೊಳಚೆ ನಿರ್ಮೂಲನ ಮಂಡಳಿ ಮತ್ತಿತರ ವಸತಿ ಯೋಜನೆಗಳಲ್ಲಿ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕೆಎಸ್‌ಎಫ್‌ಸಿ, ಕೇಂದ್ರ ಸರ್ಕಾರದ ವಾಣಿಜ್ಯ ಬ್ಯಾಂಕುಗಳ ಕಲ್ಯಾಣ ಯೋಜನೆಗಳು, ನಬಾರ್ಡ್ ಯೋಜನೆಗಳು ಇತ್ಯಾದಿ ಸರ್ಕಾರಿ ಆರ್ಥಿಕ ಯೋಜನೆಗಳಲ್ಲಿ ಮಾದಿಗರ ಪಾಲು ಶೇ.1ರಷ್ಟೂ ಇಲ್ಲ. ಒಳಮೀಸಲಾತಿ ಇದ್ದಿದ್ದರೆ ಪ್ರತಿವರ್ಷ ಮಾದಿಗರಿಗೆ 10000 ಕೋಟಿ ರೂಪಾಯಿಗೂ ಹೆಚ್ಚು ಸಿಗುತ್ತಿತ್ತು.

ಮಾದಿಗ ಚೈತನ್ಯ ರಥಯಾತ್ರೆ

ಮಾದಿಗ ಚೈತನ್ಯ ರಥಯಾತ್ರೆಗೆ ಅಭೂತಪೂರ್ವ ಸ್ವಾಗತ ನೀಡಿ ನಮ್ಮನ್ನು ಹರಸಿದ ತುಮಕೂರು, ಬಳ್ಳಾರಿ, ರಾಯಚೂರು, ಯಾದಗಿರಿ, ಗುಲ್ಬರ್ಗ, ಬೀದರ್, ಬಿಜಾಪುರ, ಬಾಗಲಕೋಟೆ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಗದಗ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳ ಮಾದಿಗ ತಾಯಂದಿರು, ಹೆಣ್ಣುಮಕ್ಕಳು, ಮಕ್ಕಳು, ಯುವಕರು, ಹಿರಿಯರು ಮತ್ತು ನಾಯಕರಿಗೆ ಕೋಟಿ ಕೋಟಿ ವಂದನೆಗಳು. ಬಂಧುಗಳೇ ನಿಮ್ಮನ್ನು ಪಡೆದ ನಾವೇ ಧನ್ಯರು. ಈ ಯುದ್ಧದಲ್ಲಿ ನಾವು ಗೆದ್ದೇ ಗೆಲ್ಲುತ್ತೇವೆ.

ಹೆಣ್ಣೂರು ಲಕ್ಷ್ಮೀನಾರಾಯಣ
ಮಹಾ ಸಂಚಾಲಕರು

ಈ ಚಳುವಳಿಗೆ ಧನಸಹಾಯ ಮಾಡುವ ಮಹಾನುಭಾವರು ಈ ಕೆಳಗಿನ ಖಾತೆಗಳಿಗೆ ನೀಡಿ
1. Name: Dilipkumar, Canara Bank: A/c No. 3043101010176, IFSC Code: CNRB 0003043.
2. Name: Vimalraj. N Canara Bank: A/c No. 3043101011125, Branch: Hennur Cross. IFSC Code: CNRB 0003043.

ರಥಯಾತ್ರೆಯ 4ನೇ ಹಂತ
● 01. ದಿನಾಂಕ: 20.02.2021 ಬೆಳಿಗ್ಗೆ 8ಕ್ಕೆ ಮಾಗಡಿ, 9ಕ್ಕೆ ಕುಣಿಗಲ್, 10ಕ್ಕೆ ಯಡಿಯೂರು, 11ಕ್ಕೆ ಹಿರಿಸಾವೆ, 12ಕ್ಕೆ ಚನ್ನರಾಯಪಟ್ಟಣ, 1ಕ್ಕೆ ಹೊಳೇನರಸೀಪುರ, 3ಕ್ಕೆ ಅರಕಲಗೂಡು, 4ಕ್ಕೆ ಹಾಸನ ಮತ್ತು ವಾಸ್ತವ್ಯ.
● 02. ದಿನಾಂಕ: 21.02.2021 ಬೆಳಿಗ್ಗೆ 9 ಗಂಟೆಗೆ ಹಳೆಬೀಡು, 10ಕ್ಕೆ ಬೇಲೂರು, 11 ಗಂಟೆಗೆ ಮೂಡಿಗೆರೆ, 12ಗಂಟೆ ಚಿಕ್ಕಮಗಳೂರು, 1ಕ್ಕೆ ಹುದ್ದೆಬೋರನಹಳ್ಳಿ, 2ಕ್ಕೆ ಸಕ್ಕರೆ ಪಟ್ಟಣ, 3ಕ್ಕೆ ಕಡೂರು ವಾಸ್ತವ್ಯ.
● 03. ದಿನಾಂಕ: 22.02.2021 ಬೆಳಿಗ್ಗೆ 9ಗಂಟೆಗೆ ಬಾಣವಾರ, 10ಕ್ಕೆ ಅರಸಿಕೆರೆ, 11ಕ್ಕೆ ತಿಪಟೂರು, 12ಕ್ಕೆ ತುರುವೇಕೆರೆ, 1ಕ್ಕೆ ಚಿಕ್ಕನಾಯಕನಹಳ್ಳಿ, 2ಕ್ಕೆ ಗುಬ್ಬಿ, 3ಕ್ಕೆ ತುಮಕೂರು, 5 ಗಂಟೆಗೆ ನೆಲಮಂಗಲ, ಬೆಂಗಳೂರು.

ರಥಯಾತ್ರೆಯ 5ನೇ ಹಂತ
● 01. ದಿನಾಂಕ: 24.02.2021 ಬೆಳಿಗ್ಗೆ 9ಕ್ಕೆ ಹೊಸಕೋಟೆ, 10ಕ್ಕೆ ಮುಗಬಾಳ, 11ಕ್ಕೆ ತಾವರಕೆರೆ, 12ಕ್ಕೆ ಮಾಲೂರು, 1ಕ್ಕೆ ಬಂಗಾರಪೇಟೆ, 2ಕ್ಕೆ ಕೆಜಿಎಫ್, 3ಕ್ಕೆ ಕೋಲಾರ, ವಾಸ್ತವ್ಯ.
● 07. ದಿನಾಂಕ: 25.02.2021 ಬೆಳಿಗ್ಗೆ 9ಕ್ಕೆ ಮುಳಬಾಗಿಲು, 10ಕ್ಕೆ ಶ್ರೀನಿವಾಸಪುರ, 11ಕ್ಕೆ ಚಿಂತಾಮಣಿ, 12ಕ್ಕೆ ಶಿಡ್ಲಘಟ್ಟ, 1ಕ್ಕೆ ಬಾಗೇಪಲ್ಲಿ, 2ಕ್ಕೆ ಗುಡಿಬಂಡೆ, 3ಕ್ಕೆ ಗೌರಿಬಿದನೂರು, 4ಕ್ಕೆ ಕೊರಟಗೆರೆ, 5ಕ್ಕೆ ಮಧುಗಿರಿ, 6ಕ್ಕೆ ಪಾವಗಡ, ಬೆಂಗಳೂರು.

ಕಮಲನಾಭನ್ – ನಿವೃತ್ತ ಐಪಿಎಸ್ ಅಧಿಕಾರಿ
ಪ್ರೊ.ಹರಿರಾಂ – ಹೈಕೋರ್ಟ್ ವಕೀಲರು
ಸುಬ್ಬುರಾಜು – ಉದ್ಯಮಿ
ನಾಗರಾಜು – ಉದ್ಯಮಿ
ರಾಜಶೇಖರ್ – ಉದ್ಯಮಿ
ಜನಾನಾಗಪ್ಪ – ಸಿವಿಲ್ ಇಂಜಿನಿಯರ್
ದಿಲೀಪ್ ಕುಮಾರ್ – ಪ್ರಿನ್ಸಿಪಾಲರು, ವಕೀಲರು
ಉಪೇಂದ್ರ – ಉದ್ಯಮಿ
ಅಂಬಣ್ಣ ಆರೋಲಿಕರ್ – ಪತ್ರಿಕೋದ್ಯಮಿ
ಮುನಿಕೃಷ್ಣಯ್ಯ – ಉದ್ಯಮಿ

ದೈಹಿಕ ಅಂತರ ಕಾಪಾಡಿ, ಕಡ್ಡಾಯವಾಗಿ ಮಾಸ್ಕ್ ಧರಿಸಿರಿ. ದಯವಿಟ್ಟು ನಿಮ್ಮ ಹೆಸರು, ಜಿಲ್ಲೆಯನ್ನು ಈ ವಾಟ್ಸ್ ಆಫ್ ನಂಬರಿಗೆ ಕಳುಹಿಸಿಕೊಡಿ. 80505 79593 / 80505 79594

ಮುಸಲ್ಮಾನರಿಗೆ ಪಿಎಫ್‌ಐ ಪ್ರಧಾನ ಕಾರ್ಯದರ್ಶಿ ಅನಿಸ್ ಅಹಮ್ಮದ್ ಸಲಹೆ, ವಿಡಿಯೊ ವೈರಲ್

ರಾಮಮಂದಿರಕ್ಕೆ ಒಂದೂ ಪೈಸೆ ಕೊಡಬೇಡಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ರಾಮಮಂದಿರ ನಿರ್ಮಾಣಕ್ಕೆ ಒಂದೂ ಪೈಸೆ ಕೊಡಬೇಡಿ. ಅದು ರಾಮಮಂದಿರ ಅಲ್ಲ, ಆರ್‌ಎಸ್‌ಎಸ್ ಮಂದಿರ' ಎಂದು ಪಿಎಫ್‌ಐ ಪ್ರಧಾನ ಕಾರ್ಯದರ್ಶಿ ಅನಿಸ್ ಅಹಮ್ಮದ್ ಹೇಳಿಕೆ ನೀಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಉಳ್ಳಾಲದಲ್ಲಿ ಎರಡು ದಿನಗಳ ಹಿಂದೆ ನಡೆದ 'ಯುನಿಟಿ ಮಾರ್ಚ್'ನಲ್ಲಿ ಅನಿಸ್ ಅಹಮ್ಮದ್ ಮಾಡಿರುವ ಭಾಷಣ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. 'ರಾಮಮಂದಿರ ದೇಣಿಗೆ ಸಂಗ್ರಹಿಸಲು ನಿಮ್ಮ ಮನೆ ಬಾಗಿಲಿಗೆ ಬಂದರೆ ಹಣ ಕೊಡಬೇಡಿ' ಎಂದು ಮುಸ್ಲಿಮರಿಗೆ ಹೇಳಿದ್ದಾರೆ.

'ದೇಶದಲ್ಲಿ ಶಾಂತಿ ಸ್ಥಾಪನೆಗೆ ಬಾಬ್ರಿ ಮಸೀದಿ ಜಾಗ ಬಿಟ್ಟು ಕೊಡಿ ಎಂದಿದ್ದರು. ಈಗ ಜಾಗ ಬಿಟ್ಟು ಕೊಟ್ಟಾಯ್ತು. ಆದರೆ ದೇಶದಲ್ಲಿ ಶಾಂತಿ ಸ್ಥಾಪನೆ ಆಯ್ತಾ? ಇನ್ನೂ ಮುಸ್ಲಿಮರ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ಹಿಂದೂ ವಿರೋಧಿ ಸಂಘಟನೆ ನಮ್ಮದಲ್ಲ, ಆರ್‌ಎಸ್‌ಎಸ್ ಹಿಂದೂ ವಿರೋಧಿ ಸಂಘಟನೆ' ಎಂದು ಹೇಳಿದ್ದಾರೆ. 'ಆರ್‌ಎಸ್‌ಎಸ್ ಕ್ಯಾನ್ಸರ್ ಇದ್ದ ಹಾಗೆ. ಅದು ವಾಸಿ ಆಗಲ್ಲ. ದೇಶದಲ್ಲಿ ಹಿಂದೂ ವರ್ಸಸ್ ಮುಸ್ಲಿಂ ಅಲ್ಲ, ಮುಸ್ಲಿಂ ವರ್ಸಸ್ ಆರ್‌ಎಸ್‌ಎಸ್ ಪರಿಸ್ಥಿತಿ ನಿರ್ಮಾಣ ಆಗುತ್ತಿದೆ. ಪಿಎಫ್‌ಐನ ಶತ್ರುತ್ವ ಏನೇ ಇದ್ದರೂ ಆರ್‌ಎಸ್‌ಎಸ್ ಜೊತೆ ಮಾತ್ರ' ಎಂದಿದ್ದಾರೆ.

ಅನುಮತಿ ಪಡೆಯದೇ 'ಯುನಿಟಿ ಮಾರ್ಚ್' ನಡೆಸಿರುವುದು, ಅನ್ಯ ಸಮುದಾಯದ ಭಾವನೆಗಳಿಗೆ ಧಕ್ಕೆಯಾಗುವ ರೀತಿ ಘೋಷಣೆ ಕೂಗಿರುವುದು ಹಾಗೂ ಪೊಲೀಸರ ಆದೇಶವನ್ನು ಉಲ್ಲಂಘಿಸಿ, ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಉಂಟುಮಾಡಿರುವ ಬಗ್ಗೆ ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ.

'ಪಿಎಫ್‌ಐ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ'



ಬೆಂಗಳೂರು: ಮಂಗಳೂರಿನ ಉಳ್ಳಾಲದಲ್ಲಿ ನಡೆದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಸ್ಥಾಪನಾ ದಿನಾಚರಣೆಯಲ್ಲಿ ದೇಶದ ಏಕತೆ, ಸಾರ್ವಭೌಮತೆ ಮತ್ತು ಸಂವಿಧಾನದ ವಿರುದ್ಧ ಭಾಷಣ ಮಾಡಲಾಗಿದೆ. ಸಂಘಟನೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶುಕ್ರವಾರ ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಪಿಎಫ್‌ಐ ಸಂಘಟನೆ ತನ್ನ ನೈಜ ಬಣ್ಣವನ್ನು ಮತ್ತೊಮ್ಮೆ ತೋರಿಸಿದೆ. ಸಂಘಟನೆಯ ನಾಯಕರು ದೇಶದ್ರೋಹಿ ಹೇಳಿಕೆ ನೀಡಿದ್ದು, ಸೌಹಾರ್ದ ಕೆಡಿಸುವ ರೀತಿಯಲ್ಲಿ ಮಾತನಾಡಿದ್ದಾರೆ. ದೇಶದ ಜನರನ್ನು ವಿಭಜಿಸುವುದಕ್ಕೆ ಕಾರಣವಾಗುವ ದ್ವೇಷದ ಹೇಳಿಕೆ ನೀಡಿರುವ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಆರ್‌ಎಸ್‌ಎಸ್ ಮತ್ತು ರಾಮ ಮಂದಿರ ನಿರ್ಮಾಣದ ವಿರುದ್ಧ ಪಿಎಫ್‌ಐ ಸಮಾವೇಶದಲ್ಲಿ ಹೇಳಿಕೆ ನೀಡಿದ್ದಾರೆ. ಆರ್‌ಎಸ್‌ಎಸ್ ದೇಶಪ್ರೇಮಿ ಸಂಘಟನೆ. ಆರ್‌ಎಸ್‌ಎಸ್ ಬಗ್ಗೆ ಮಾತನಾಡುವ ನೈತಿಕತೆ ಪಿಎಫ್‌ಐ ಸಂಘಟನೆಗೆ ಇಲ್ಲ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಸುಪ್ರೀಂ ಕೋರ್ಟ್ ಸಮ್ಮತಿ ನೀಡಿದೆ. ಪಿಎಫ್‌ಐ ದೇಶಕ್ಕೆ ಮಾರಕವಾದ ಸಂಘಟನೆ. ಹಣಕ್ಕಾಗಿ ದೇಶದ ವಿರುದ್ಧ ಇರುವ ವಿಚ್ಛಿದ್ರಕಾರಿ ಶಕ್ತಿಗಳ ಜತೆ ಸೇರಿರುವ ಸಂಘಟನೆ ಅದಾಗಿದೆ' ಎಂದು ತಿಳಿಸಿದರು.

ಈಗಾಗಲೇ ಪಿಎಫ್‌ಐ ಮುಖಂಡರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಘಟನೆಗೆ ಕಾರಣವಾದ ಎಲ್ಲರಿಗೂ ಶಿಕ್ಷೆಯಾಗುವಂತೆ ಕ್ರಮ ಜರುಗಿಸಲಾಗುವುದು ಎಂದರು.

'ರಾಮನ ಬಗ್ಗೆ ಮಾತಾಡಿ ಸಿದ್ದು ನೆಲದೊಳಗೆ ಹೋಗ್ತಾರೆ'

ಪ್ರಜಾವಾಣಿ ವಾರ್ತೆ

ಕೆ.ಎಸ್.ಈಶ್ವರಪ್ಪ

ರಾಯಚೂರು: 'ಸಿದ್ದರಾಮಯ್ಯ ಈ ಹಿಂದೆ ಗೋವಿನ ಬಗ್ಗೆ ಮಾತನಾಡಿದ್ದಕ್ಕೆ ಸೋತು ನೆಲಕಚ್ಚಿದರು. ಈಗ ಶ್ರೀರಾಮನ ಬಗ್ಗೆ ಯೂ ಮಾತನಾಡಿದರೆ ನೆಲದ ಒಳಗೆ ಹೋಗುತ್ತಾರೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹರಿಹಾಯ್ದರು.

'ರಾಮ ಮಂದಿರ ಕಟ್ಟಲು ಕೂಲಿ ಮಾಡುವವರೂ ತಲಾ ₹10 ನೀಡಿದ್ದಾರೆ.ಅವರುಲೆಕ್ಕಕೇಳಲಿ.ಆದರೆ,ರಾಮ ಮಂದಿರ ನಿರ್ಮಾಣದ ಲೆಕ್ಕ ಕೇಳಲು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವನು?' ಎಂದು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಏಕ ವಚನದಲ್ಲಿ ವಾಗ್ದಾಳಿ ನಡೆಸಿದರು.

'ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಗೌರವವಿಲ್ಲದೆ ವಿವಾದಿತ ಸ್ಥಳ ಎಂದಿದ್ದಾರೆ. ಮೋದಿ ಅವರ ಬಗ್ಗೆ ಏಕವಚನದಲ್ಲಿ ಮಾತನಾಡಬಹುದೆ? ರಾಮನ ಬಗ್ಗೆ ಹಗುರವಾಗಿ ಮಾತನಾಡುವ ಪ್ರವೃತ್ತಿ ಬಿಡಬೇಕು' ಎಂದರು.

'ಹಣ ನೀಡದವರ ಮನೆ ಮನೆಗೆ ಮಾರ್ಕ್ ಮಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ರಾಯಚೂರಿನಲ್ಲಿ ಯಾರ ಮನೆಗೆ ಮಾರ್ಕ್ ಮಾಡಲಾಗಿದೆ ತೋರಿಸಲಿ' ಎಂದು ಸವಾಲೆಸೆದರು.

'ಪದೇ ಪದೇ ನಾಲಿಗೆ ಹರಿಬಿಡುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಪಕ್ಷದಿಂದ ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ. ಕೇಂದ್ರದ ನಾಯಕರು ಅವರ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ' ಎಂದು ಪ್ರತಿಕ್ರಿಯಿಸಿದರು.

ನಾಗಮೋಹನ ದಾಸ್, ನೀಲಾಗೆ 'ದರ್ಶಸ್ತ್ರೀ' ಪ್ರಶಸ್ತಿ

ನಾಗಮೋಹನ

ನೀಲಾ

ವಿಲ್ಸನ್ ಕಟೀಲ್

ತುಮಕೂರು: ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್, ಸಾಮಾಜಿಕ ಹೋರಾಟಗಾರ್ತಿ ಕೆ. ನೀಲಾ ಅವರನ್ನು 'ದರ್ಶಸ್ತ್ರೀ' (ದಲಿತ, ರೈತ, ಸ್ತ್ರೀ) ಪ್ರಶಸ್ತಿಗೆ ಹಾಗೂ ಲೇಖಕ ವಿಲ್ಸನ್ ಕಟೀಲ್ ಅವರನ್ನು 'ಕೆ.ಬಿ ಕಾವ್ಯ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಈ ಮೂರು ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಹಾಗೂ ಫಲಕಗಳನ್ನು ಒಳಗೊಂಡಿವೆ. ಕವಿ ದಿವಂಗತ ಕೆ.ಬಿ. ಸಿದ್ದಯ್ಯ ಈ ಪ್ರಶಸ್ತಿ ಸ್ಥಾಪಿಸಿದ್ದು, 'ದರ್ಶಸ್ತ್ರೀ' ಟ್ರಸ್ಟ್ ಮೂಲಕ ಪ್ರತಿವರ್ಷ ಮಾರ್ಚ್‌ನಲ್ಲಿ ಪ್ರದಾನ ಮಾಡಲಾಗುತ್ತದೆ. ಮಾರ್ಚ್ 7ರಂದು ನಗರದ ಬಾಲಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡುವರು.

ಸಚಿವರ ಕಾರಿಗೆ ಬಸ್ ಡಿಕ್ಕಿ

ರಾಮನಗರ: ನೈಸ್ ರಸ್ತೆ ಬಳಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅವರ ಕಾರು ಶುಕ್ರವಾರ ಸಂಜೆ ಅಪಘಾತಕ್ಕೀಡಾಯಿತು.

ಸಚಿವರಿದ್ದ ಕಾರು ಮೈಸೂರಿನಿಂದ ಬೆಂಗಳೂರಿನತ್ತ ಹೊರಟಿತ್ತು. ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ಹಿಂತಿರುಗುವ ಸಂದರ್ಭದಲ್ಲಿ ಕಾರಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆಯಿತು. ಘಟನೆಯಲ್ಲಿ ಸಚಿವರು, ಅವರ ಕಾರು ಚಾಲಕ ಯಾವುದೇ ತೊಂದರೆ ಇಲ್ಲದೆ ಪಾರಾದರು. ಕುಂಬಳಗೂಡು ಠಾಣೆ ವ್ಯಾಪ್ತಿಯಲ್ಲಿ ಅಪಘಾತ ನಡೆದಿದೆ ಎಂದು ಪೊಲೀಸರು ತಿಳಿಸಿದರು.

ನಿಧನ ವಾರ್ತೆ

ಯಕ್ಷಗಾನ ಕಲಾವಿದ ಶ್ರೀಧರ ಭಂಡಾರಿ

ಪುತ್ತೂರು: ಹಿರಿಯ ಯಕ್ಷಗಾನ ಕಲಾವಿದ ಪುತ್ತೂರು ಶ್ರೀಧರ ಭಂಡಾರಿ (76) ಶುಕ್ರವಾರ ನಿಧನರಾದರು.

ಯಕ್ಷಗಾನ ಕ್ಷೇತ್ರದಲ್ಲಿ ಸುದೀರ್ಘ ಆರು ದಶಕಗಳ ಕಾಲ ಸೇವೆ ಸಲ್ಲಿಸಿದ್ದ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ 150ಕ್ಕೂ ಅಧಿಕ ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ.

15ನೇ ವರ್ಷಕ್ಕೆ ತಿರುಗಾಟದ ಮೇಳ ಸೇರಿ ವೃತ್ತಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದ ಅವರು, ಅಭಿಮನ್ಯು, ಬಬ್ರುವಾಹನ, ಶ್ರೀಕೃಷ್ಣ, ಅಶ್ವತ್ಥಾಮ, ಮನ್ಮಥ, ಪರಶುರಾಮ, ಲಕ್ಷ್ಮಣ, ಕುಶ-ಲವ, ಭಾನುಕೋಪ, ಮಾರ್ತಾಂಡತೇಜ, ಮುಂತಾದ ಪಾತ್ರಗಳನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥೇಶ್ವರ ಮೇಳದಲ್ಲಿ ಸುದೀರ್ಘ 45 ವರ್ಷಗಳ ಕಾಲ ಪ್ರಮುಖ ವೇಷಧಾರಿಯಾಗಿದ್ದರು.

ಯಕ್ಷಗಾನದ ಸಿಡಿಲಮರಿ, ರಂಗಸ್ಥಳದ ರಾಜ, ಯಕ್ಷನಾಟ್ಯ ಚತುರ, ಶತ ಗಣಗಳ ರಾಜ ಇತ್ಯಾದಿ ಬಿರುದುಗಳನ್ನು ಪಡೆದಿದ್ದರು. ಅವರಿಗೆ ಪತ್ನಿ, ಪುತ್ರ, ಮೂವರು ಪುತ್ರಿಯರು ಇದ್ದಾರೆ.

ಬೇಡ ಜಂಗಮ ಸಂಘಟನೆಗಳ ದ್ವಿತೀಯ ರಾಜ್ಯ ಸಮ್ಮೇಳನ

ಜನಪ್ರತಿನಿಧಿಗಳ ಗೈರು; ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಚನ್ನಗಿರಿ: 'ರಾಜ್ಯದಾದ್ಯಂತ ಬೇಡ ಜಂಗಮ ಜನಾಂಗಕ್ಕೆ ಪ್ರಮಾಣಪತ್ರ ನೀಡಬೇಕೆಂದು ಹೋರಾಟ ನಡೆಸುತ್ತಾ ಬರಲಾಗಿದೆ. ಆದರೆ ಜನಾಂಗದಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಗೈರು ಆಗಿದ್ದು, ಅವರು ಸಮಾಜದ ಬಗ್ಗೆ ಯಾವ ರೀತಿ ಕಳಕಳಿ ಹೊಂದಿದ್ದಾರೆ ಎಂಬುದನ್ನು ಸಾಬೀತು ಪಡಿಸುತ್ತದೆ. ಇಂತಹ ರಾಜಕಾರಣಿಗಳಿಗೆ ಮುಂಬರುವ ಚುನಾವಣೆಯಲ್ಲಿ ಜನಾಂಗದವರು ತಕ್ಕ ಪಾಠ ಕಲಿಸಲಿದ್ದಾರೆ' ಎಂದು ಬಸವಕಲ್ಯಾಣದ ಆಂದೋಲನ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ದ್ವಿತೀಯ ರಾಜ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಕಾರ್ಯದರ್ಶಿ ರೇಣುಕಾಚಾರ್ಯ ಹಾಗೂ ಇತರೆ ಶಾಸಕರು ಈ ಸಮ್ಮೇಳನಕ್ಕೆ ಗೈರು ಆಗಿರುವುದು ಬೇಸರ ತರುವ ಸಂಗತಿ. ಇಂತಹ ನಾಯಕರಿಗೆ ನಾವೆಲ್ಲ ತಕ್ಕ ಪಾಠ ಕಲಿಸಬೇಕಾಗಿದೆ' ಎಂದರು.

'ಬೇಡ ಜಂಗಮ ಜನಾಂಗಕ್ಕೆ ಸರ್ಕಾರ ಪ್ರಮಾಣ ಪತ್ರ ನೀಡಲು ಮುಂದಾಗದೇ ಇದ್ದರೆ, ಬಸವಕಲ್ಯಾಣ ಹಾಗೂ ಮಸ್ಕಿಯಲ್ಲಿ ನಡೆಯುವ ಉಪ ಚುನಾವಣೆ ವೇಳೆ ಈ ಜನಾಂಗದವರು ನೋಟಾಕ್ಕೆ ಮತವನ್ನು ಹಾಕಬೇಕಾಗುತ್ತದೆ. ನಿಮಗೆ ನೋಟಾ ಬೇಕಾ ಅಥವಾ ಓಟು ಬೇಕಾ ಎಂಬ ನಿರ್ಧಾರ ನಿಮಗೆ ಬಿಟ್ಟಿದ್ದು' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

'ಶಾಸಕರಾದ ರಾಜೀವ್, ಪ್ರಿಯಾಂಕ್ ಖರ್ಗೆ ಈ ಜನಾಂಗಕ್ಕೆ ಪ್ರಮಾಣಪತ್ರ ನೀಡಲು ಅಡ್ಡಿಪಡಿಸುತ್ತಿದ್ದಾರೆ ಎಂಬುದು ತಿಳಿದು ಬಂದಿದೆ. ಆದರೆ, ಯಾವ ಮರ್ಜಿಯ ಮೇಲೂ ನಾವು ನಮ್ಮ ಹಕ್ಕನ್ನು ಕೇಳುತ್ತಿಲ್ಲ. ಈಗಾಗಲೇ ಈ ಜನಾಂಗಕ್ಕೆ ಸಿಕ್ಕಿರುವ ಹಕ್ಕನ್ನು ನಮಗೆ ನೀಡಿ ಎಂಬುದು ನಮ್ಮ ಬೇಡಿಕೆ' ಎಂದು ಹೇಳಿದರು.

'ಸರ್ಕಾರಕ್ಕೆ ಮೀಸಲಾತಿಯದ್ದೇ ತಲೆಬಿಸಿ'

ಸುಧಾಕರ್

ಚಿಕ್ಕಬಳ್ಳಾಪುರ: 'ಇತ್ತೀಚೆಗೆ ರಾಜ್ಯದಲ್ಲಿ ಎಲ್ಲ ಸಮುದಾಯದವರು, ಸ್ವಾಮೀಜಿಗಳು ಏಕಾಏಕಿ ರಸ್ತೆಗಿಳಿದು ಹೋರಾಟ ಮಾಡುತ್ತಿರುವುದು ಇದೇ ಮೊದಲು. ಹಾಗಾಗಿ, ಮೀಸಲಾತಿ ವಿಚಾರ ಇದೀಗ ಸರ್ಕಾರಕ್ಕೆ ತಲೆಬಿಸಿಯಾಗಿ ಪರಿಣಮಿಸಿದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

'ನಾನು ಈ ರೀತಿ ಎಂದಿಗೂ ನೋಡಿರಲಿಲ್ಲ. ಎಲ್ಲ ಸಮುದಾಯದ ಗುರುಗಳು, ಸ್ವಾಮೀಜಿಗಳು ರಸ್ತೆಗಿಳಿದು ಪಾದಯಾತ್ರೆ ಮಾಡುತ್ತಿರುವುದು ಸರ್ಕಾರಕ್ಕೆ ಸವಾಲಿನ ಪ್ರಶ್ನೆಯಾಗಿದೆ. ಆದರೆ, ಈ ಕುರಿತು ತೀರ್ಮಾನ ತೆಗೆದುಕೊಳ್ಳಲು ಸರ್ಕಾರಕ್ಕೆ ಸಾಧ್ಯವಿಲ್ಲ' ಎಂದು ಶುಕ್ರವಾರ ಇಲ್ಲಿ ತಿಳಿಸಿದರು.

'ಯಾವ ನೆಲಗಟ್ಟಿನ ಮೇಲೆ ಮೀಸಲಾತಿ ಕಲ್ಪಿಸಬೇಕು ಎಂಬುದರ ಕುರಿತು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗಿರುವವರನ್ನು ಗುರುತಿಸುವ ಕೆಲಸ ನಡೆಯುತ್ತಿದೆ. ಕಾನೂನು ಮತ್ತು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಮೀಸಲಾತಿಯನ್ನು ನೀಡಬೇಕಾಗುತ್ತದೆ' ಎಂದರು.

ಸುಪ್ರೀಂ ಕೋರ್ಟ್ ಮಾರ್ಗದರ್ಶನದ ಅನ್ವಯ ಎಲ್ಲ ಮೀಸಲಾತಿಯ ಪ್ರಮಾಣ ಶೇಕಡ 50ರಷ್ಟು ದಾಟುವಂತಿಲ್ಲ. ಆದರೆ, ಕೇವಲ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರದಲ್ಲಿ ರಾಜಕೀಯ ಪ್ರೇರಿತವಾಗಿ ಮನಸೋ ಇಚ್ಛೆಯಿಂದ ಮೀಸಲಾತಿ ಜಾರಿಗೆ ತರಲಾಗಿತ್ತು. ಇದನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಆದರೆ, ತಮಿಳುನಾಡಿನಲ್ಲಿ ಮಾತ್ರ ಶೇಕಡ 67ರಷ್ಟು ಮೀಸಲಾತಿ ಕೊಡಲಾಗಿದೆ' ಎಂದು ವಿವರಿಸಿದರು.

'ಮೀಸಲಾತಿ: ಬಹಿರಂಗ ಮಾತಿಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಮೀಸಲಾತಿ ಹೋರಾಟದ ವಿಚಾರವಾಗಿ ಯಾರೂ ಬಹಿರಂಗವಾಗಿ ಮಾತನಾಡಬಾರದು ಎಂದು ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಶುಕ್ರವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಮೀಸಲಾತಿ ಹೋರಾಟದ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ನಡೆಸಲು ಎಲ್ಲರಿಗೂ ಹಕ್ಕಿದೆ. ವೈಜ್ಞಾನಿಕ ರೀತಿಯಲ್ಲಿ ಮೀಸಲಾತಿ ನಿಗದಿಯಾಗಬೇಕು. ಈ ವಿಚಾರದಲ್ಲಿ ಹೆಚ್ಚು ಮಾತನಾಡುವುದು ಸೂಕ್ತವಲ್ಲ. ಹೋರಾಟದ ಹಿಂದೆ ಆರ್‌ಎಸ್‌ಎಸ್ ಕೈವಾಡವಿದೆ ಎಂಬುದು ಸುಳ್ಳು ಆರೋಪ' ಎಂದರು.

'ಕಾಂಗ್ರೆಸ್, ಜೆಡಿಎಸ್‌ನಿಂದ ಬಿಜೆಪಿಗೆ ಶಾಸಕರು ಬರುತ್ತಾರೆ ಎಂಬ ವಿಚಾರ ನಾನು ಹೇಳುವಂಥದ್ದಲ್ಲ. ಯಾರನ್ನು ಸೇರಿಸಿಕೊಳ್ಳಬೇಕು ಎಂಬುದನ್ನು ಮುಖ್ಯಮಂತ್ರಿ, ನಮ್ಮ ಪಕ್ಷದ ಅಧ್ಯಕ್ಷರು ತೀರ್ಮಾನ ಮಾಡುತ್ತಾರೆ' ಎಂದು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹಾನಗರಪಾಲಿಕೆ ಕಛೇರಿಗಳು, ಎನ್.ಆರ್.ಚೌಕ, ಬೆಂಗಳೂರು – 560 002.
ಇ–ಮೇಲ್: bbmpacrecruitment@gmail.com ದೂರವಾಣಿ: 080-22975563

ಸಂ: ಸಆ(ನೇ&ವಿ)/ಪಿಆರ್/117/2020–21 **ದಿನಾಂಕ: 19.02.2021**

ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ265 ಎಂಎನ್‌ಯು 2020 **ದಿನಾಂಕ: 05.01.2021** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಹಿರಿಯ ವೈದ್ಯಾಧಿಕಾರಿ / ತಜ್ಞರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ) (ವಿಶೇಷ) ನಿಯಮಗಳು 2020ರ ನಿಯಮಗಳಡಿಯಲ್ಲಿ ಪಾಲಿಕೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರು–50, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ–70 ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿಯಿಂದ ಭರ್ತಿಮಾಡಲು ಅನುಮತಿ ನೀಡಿದ್ದು. ಈ ಸಂಬಂಧ ಪಾಲಿಕೆಯ ಅಧಿಸೂಚನೆಯನ್ನು **ದಿನಾಂಕ: 22.02.2021** ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್: **www.bbmp.gov.in** ನಲ್ಲಿ ವೀಕ್ಷಿಸಬಹುದಾಗಿದೆ.

ಸೂಚನೆ: ಅರ್ಜಿ ಸಲ್ಲಿಸಲು ಪ್ರಾರಂಭದ **ದಿನಾಂಕ: 23.02.2021.** ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 24.03.2021.** ಅರ್ಜಿ ಶುಲ್ಕ ಪಾವತಿಸಲು ಕೊನೆಯ **ದಿನಾಂಕ: 25.03.2021.**

ಸಹಿ/–
ಆಯುಕ್ತರು ಹಾಗೂ ಅಧ್ಯಕ್ಷರು, ವಿಶೇಷ ನೇಮಕಾತಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅನ್ಯ ಭಾಷಿಗರ ಸಮೀಕ್ಷೆಗೆ ಮಹಾರಾಷ್ಟ್ರ ಆದೇಶ: ವಿರೋಧ

ಪ್ರಜಾವಾಣಿ ವಾರ್ತೆ

ವಿಜಯಪುರ: ಕನ್ನಡಿಗರೇ ಅಧಿಕ ಸಂಖ್ಯೆಯಲ್ಲಿರುವ ಮಹಾರಾಷ್ಟ್ರದ ಜತ್, ಅಕ್ಕಲಕೋಟೆ ಹಾಗೂ ದಕ್ಷಿಣ ಸೊಲ್ಲಾಪುರದ ಗಡಿ ಭಾಗದಲ್ಲಿ ಅನ್ಯ ಭಾಷಿಗರ ಸಮೀಕ್ಷೆ ನಡೆಸಲು ಮಹಾರಾಷ್ಟ್ರ ಸರ್ಕಾರ ಅಲ್ಲಿಯ ಗ್ರಾಮ ಪಂಚಾಯಿತ್ಗಳಿಗೆ ಆದೇಶ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ.

‘ಮಹಾರಾಷ್ಟ್ರದ ಈ ಕ್ರಮ ಅಪ್ರಸ್ತುತ ಮತ್ತು ಖಂಡನೀಯ. ರಾಜ್ಯದ ಕನ್ನಡಿಗರೆಲ್ಲ ಇದನ್ನು ವಿರೋಧಿಸುತ್ತೇವೆ. ಅಲ್ಲಿನ ಕನ್ನಡಿಗರನ್ನು ಮಹಾರಾಷ್ಟ್ರ ಸರ್ಕಾರ ಇಂತಹ ಸಮೀಕ್ಷೆಯ ಮೂಲಕ ಹೆದರಿಸುವ ಪ್ರಯತ್ನ ಮಾಡಬಾರದು’

ಸೋಮಶೇಖರ್

ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ತಿಳಿಸಿದ್ದಾರೆ.

ಸೌಹಾರ್ದದಿಂದ, ಸೌಜನ್ಯದಿಂದ ಇರುವ ಮಹಾರಾಷ್ಟ್ರದಲ್ಲಿನ ಕನ್ನಡಿಗರಿಗೆ ಆ ಸರ್ಕಾರವು ಗೌರವ ಹಾಗೂ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಭದ್ರತೆ ನೀಡಬೇಕಾಗಿರುವುದು ಸಂವಿಧಾನಾತ್ಮಕ ಕರ್ತವ್ಯವಾಗಿದೆ. ಅನಗತ್ಯವಾಗಿ ಆಗಾಗ್ಗೆ ಗಡಿ ಭಾಗದಲ್ಲಿನ ಕನ್ನಡಿಗರ ಸ್ವಾಭಿಮಾನವನ್ನು ಕೆಣಕುವ ಕಾರ್ಯವನ್ನು ಮಹಾರಾಷ್ಟ್ರ ಸರ್ಕಾರ ಮಾಡಬಾರದು ಎಂದು ಹೇಳಿದ್ದಾರೆ.

ರಾಜ್ಯದ 28 ಲಕ್ಷ ರೈತರಿಗೆ ಸಾಲ ವಿತರಿಸಲು ಕ್ರಮ: ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್

₹20 ಸಾವಿರ ಕೋಟಿ ಬೆಳೆ ಸಾಲ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021–22 ರ ಸಾಲಿನಲ್ಲಿ 28 ಲಕ್ಷ ರೈತರಿಗೆ ₹20 ಸಾವಿರ ಕೋಟಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಬೆಳೆ ಸಾಲ ವಿತರಿಸುವ ಗುರಿ ಇದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರಿ (ಬಿ.ಡಿ.ಸಿ.ಸಿ) ಬ್ಯಾಂಕ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಾಲ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ನಿಟ್ಟಿನಲ್ಲಿ ಹೆಚ್ಚಿನ ಅನುದಾನಕ್ಕಾಗಿ ನಬಾರ್ಡ್‌ಗೆ ಮನವಿ ಸಲ್ಲಿಸಲಾಗಿದೆ. ರೈತರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

‘ಈ ಸಾಲಿನಲ್ಲಿ 24.50 ಲಕ್ಷ ರೈತರಿಗೆ ₹15,300 ಕೋಟಿ ಸಾಲ ವಿತರಣೆ ಗುರಿ ಹಾಕಿಕೊಳ್ಳಲಾಗಿತ್ತು. ಈವರೆಗೆ 22,02,931 ಲಕ್ಷ ರೈತರಿಗೆ ₹13,739.28 ಕೋಟಿ ಸಾಲ ವಿತರಿಸಲಾಗಿದೆ. ಮಾರ್ಚ್ 31 ರೊಳಗೆ ನೂರಕ್ಕೆ ನೂರು ಗುರಿ ತಲುಪುತ್ತೇವೆ’ ಎಂಬುದಾಗಿ ಅವರು ವಿಶ್ವಾಸ ವ್ಯಕ್ತಪಡಿಸಿದರು.

‘ಸಹಕಾರ ಇಲಾಖೆಯಲ್ಲಿ ಸುಗಮವಾಗಿ ಕಾರ್ಯ ನಿರ್ವಹಿಸಲು ಕಾಯ್ದೆಯಲ್ಲಿ ಯಾವುದೇ ತೊಡಕುಗಳಿದ್ದರೆ ಅದನ್ನು ನನ್ನ ಅಥವಾ ಇಲಾಖೆಯ ಗಮನಕ್ಕೆ ತಂದರೆ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಕಾಯ್ದೆಗೆ ತಿದ್ದುಪಡಿ ತರಲಾಗುವುದು’ ಎಂದು ಅವರು ಭರವಸೆ ನೀಡಿದರು.

21 ಡಿಸಿಸಿ ಬ್ಯಾಂಕ್‌ಗಳಲ್ಲಿ ಸರ್ಕಾರದ ಷೇರು ಬಂಡವಾಳ ಹೂಡಲು ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿದ್ದಾರೆ. ಪ್ರತಿ ಬ್ಯಾಂಕ್‌ಗಳಿಗೆ ತಲಾ ₹10 ಲಕ್ಷ ಹೂಡಿಕೆ ಮಾಡುವ ಚಿಂತನೆ ಇದೆ. ಈ ಕುರಿತು ಶೀಘ್ರವೇ ನಿರ್ಧಾರವನ್ನು ಪ್ರಕಟಿಸಲಾಗುವುದು ಎಂದು ಸೋಮಶೇಖರ್ ಹೇಳಿದರು.

5 ಸಾವಿರ ಜನರಿಗೆ ಉದ್ಯೋಗ: ಹಾಲು ಒಕ್ಕೂಟ ಸೇರಿ ಸಹಕಾರ ಇಲಾಖೆಯ ಹಲವು ಅಂಗ ಸಂಸ್ಥೆಗಳಿಂದ ಕೋವಿಡ್ ಸಂದರ್ಭದಲ್ಲಿ 5 ಸಾವಿರ ಉದ್ಯೋಗ ಸೃಷ್ಟಿ ಮಾಡುವಂತೆ ಆದೇಶ ನೀಡಲಾಗಿತ್ತು. ಈಗ ಬೆಂಗಳೂರು ಹಾಲು ಒಕ್ಕೂಟದಿಂದ 279 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಇದೇ ರೀತಿ ಹಲವು ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಕಲಬುರ್ಗಿ ಡಿಸಿಸಿ ಬ್ಯಾಂಕ್ ಹೊರತುಪಡಿಸಿ ಉಳಿದ ಎಲ್ಲ ಬ್ಯಾಂಕ್‌ಗಳೂ ರೈತರಿಗೆ ಸಮರ್ಪಕವಾಗಿ ಸಾಲ ನೀಡುವ ಮತ್ತು ಇನ್ನಿತರ ಯೋಜನೆಗಳನ್ನು ತಲುಪಿಸುವ ಕಾರ್ಯವನ್ನು ಮಾಡುತ್ತಿವೆ. ಇದೀಗ ಕಲಬುರ್ಗಿ ಡಿಸಿಸಿ ಬ್ಯಾಂಕ್‌ಗೆ ಸುಮಾರು ₹200 ಕೋಟಿ ಅನುದಾನ ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಇದರಿಂದ ಆ ಭಾಗದ ರೈತರಿಗೆ ಹಲವು ಯೋಜನೆಗಳನ್ನು ತಲುಪಿಸಲು ಸಾಧ್ಯವಾಗುತ್ತದೆ ಎಂದು ಸೋಮಶೇಖರ್ ತಿಳಿಸಿದರು.

ಮುಖ್ಯಾಂಶಗಳು

- ಹೆಚ್ಚಿನ ಅನುದಾನಕ್ಕಾಗಿ ನಬಾರ್ಡ್‌ಗೆ ಮನವಿ
- ಮಾರ್ಚ್ 31 ರೊಳಗೆ ನೂರರಷ್ಟು ಸಾಧನೆಯ ಗುರಿ
- ಡಿಸಿಸಿ ಬ್ಯಾಂಕ್‌ಗಳಲ್ಲಿ ಷೇರು ಬಂಡವಾಳ ಹೂಡಿಕೆ

ವೆಬ್‌ಸೈಟ್ ಅನಾವರಣ

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ವೆಬ್‌ಸೈಟ್ ಅನ್ನು ಸಚಿವ ಎಸ್.ಟಿ.ಸೋಮಶೇಖರ್ ಅವರು ಅನಾವರಣಗೊಳಿಸಿದರು. ಜೊತೆಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುವ ಸಾಲ ವಿತರಣೆ, ಸೌಲಭ್ಯ, ಸೇವೆಗಳು ಸೇರಿದಂತೆ ಇನ್ನಿತರ ಮಾಹಿತಿಗಳನ್ನು ಅಧಿಕಾರಿಗಳಿಂದ ಪಡೆದುಕೊಂಡರು.


ಸೋಮಶೇಖರ್

ರಥ ಎಳೆದ ನಾರಿಯರು

ಗದಗ ಜಿಲ್ಲೆಯ ರೋಣದ ಮುಗಳಿ ಗ್ರಾಮದಲ್ಲಿ ಕಾಳಿಕಾದೇವಿ ದೇಗುಲದ 14ನೇ ವಾರ್ಷಿಕೋತ್ಸವದ ಅಂಗವಾಗಿ ಶುಕ್ರವಾರ ಜರುಗಿದ ರಥೋತ್ಸವದಲ್ಲಿ ಮಹಿಳೆಯರೇ ಸೇರಿ ರಥ ಎಳೆದರು

ರಾಜ್ಯಕ್ಕೆ ಎಸ್‌ಡಿಆರ್‌ಎಂಎಫ್ ನಿಧಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಮುಂದಿನ ಐದು ವರ್ಷಗಳಿಗೆ ಎಸ್‌ಡಿಆರ್‌ಎಂಎಫ್ (ರಾಜ್ಯ ಪ್ರಾಕೃತಿಕ ವಿಪತ್ತು ನಿರ್ವಹಣಾ ನಿಧಿ) ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಿದೆ.

14 ನೇ ಹಣಕಾಸು ಆಯೋಗ ರಾಜ್ಯಕ್ಕೆ ₹300 ಕೋಟಿ ನಿಗದಿ ಮಾಡಿತ್ತು. 15ನೇ ಹಣಕಾಸು ಆಯೋಗ ಈ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಲು ಶಿಫಾರಸು ಮಾಡಿದ್ದು, ಅದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಅದರ ಅನ್ವಯ 2022ಕ್ಕೆ ₹1,054 ಕೋಟಿಗೆ ಹೆಚ್ಚಿಸಲಾಗಿದೆ. ಇದರಿಂದ ₹754 ಕೋಟಿ ಹೆಚ್ಚಾದಂತಾಗಿದೆ. 2023ಕ್ಕೆ ₹1,107 ಕೋಟಿ, 2024ಕ್ಕೆ ₹1,162 ಕೋಟಿ ಮತ್ತು 2025ಕ್ಕೆ ₹1,220 ಕೋಟಿ ಹಾಗೂ 2026 ಕ್ಕೆ ಆ ಮೊತ್ತ ₹1,281 ಕೋಟಿಗೆ ನಿಗದಿ ಮಾಡಲಾಗಿದೆ.

ಅಲ್ಲದೆ, ಎನ್‌ಡಿಆರ್‌ಎಫ್ ಅಡಿ ಸಾಮರ್ಥ್ಯವೃದ್ಧಿಗಾಗಿ ₹5,000 ಕೋಟಿ ಅನುದಾನ ನೀಡಲಾಗುವುದು. ಇದರಡಿ ರಾಜ್ಯದ ಅಗ್ನಿ ಶಾಮಕ ಸೇವೆಗಳನ್ನು ಆಧುನೀಕರಿಸಬೇಕು. ಇದಕ್ಕಾಗಿ ರಾಜ್ಯ ಸರ್ಕಾರ ಶೇ 10 ಹಣ ನೀಡಲು ಸೂಚಿಸಲಾಗಿದೆ.

ಎನ್‌ಡಿಆರ್‌ಎಫ್ ಮತ್ತು ಎನ್‌ಡಿಎಂಎಫ್ ಅಡಿ ನೀಡುವ ನೆರವಿಗೆ ರಾಜ್ಯ ಸರ್ಕಾರವೂ ಪಾಲನ್ನು ಸೇರಿಸಬೇಕು. ₹250 ಕೋಟಿವರೆಗೆ ನೆರವು ಪಡೆದರೆ ರಾಜ್ಯ ಶೇ 10, ₹500 ಕೋಟಿವರೆಗೆ ನೆರವು ಪಡೆದರೆ ಶೇ 20, ₹500 ಕೋಟಿ ಮತ್ತು ಮೇಲ್ಪಟ್ಟರೆ ರಾಜ್ಯ ಸರ್ಕಾರ ಶೇ 25 ರಷ್ಟು ಭರಿಸಬೇಕು. ರಾಜ್ಯಗಳು ಅಗತ್ಯಕ್ಕಿಂತ ಹೆಚ್ಚು ಖರ್ಚು ಮಾಡುವುದನ್ನು ತಡೆಯಲು ಮತ್ತು ಬೇಕಾಬಿಟ್ಟಿ ಬೇಡಿಕೆಗಳನ್ನು ಸಲ್ಲಿಸುವುದಕ್ಕೆ ಕಡಿವಾಣ ಹಾಕಲು ಈ ವಿಧಾನ ಅನುಸರಿಸಲು 15 ನೇ ಹಣಕಾಸು ಆಯೋಗ ಶಿಫಾರಸು ಮಾಡಿದೆ ಎಂದು ಕಂದಾಯ ಇಲಾಖೆಯ ಮೂಲಗಳು ತಿಳಿಸಿವೆ.

ಮಾರ್ಚ್ 20ರಿಂದ ರೈತ ಸಮಾವೇಶ

ಪ್ರಜಾವಾಣಿ ವಾರ್ತೆ

ಚುಕ್ಕಿ ನಂಜುಂಡಸ್ವಾಮಿ

ಬೆಂಗಳೂರು: ‘ದೆಹಲಿಯಲ್ಲಿನ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಹಾಗೂ ರಾಜ್ಯದಲ್ಲಿ ರೈತ ಚಳವಳಿ ಸಜ್ಜುಗೊಳಿಸಲು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ಮಾರ್ಚ್ 20ರಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೈತರ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುವುದು’ ಎಂದು ರೈತ ಸಂಘದ ನಾಯಕಿ ಚುಕ್ಕಿ ನಂಜುಂಡಸ್ವಾಮಿ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಮಾರ್ಚ್ 20ರಂದು ಶಿವಮೊಗ್ಗದಲ್ಲಿ ಮೊದಲ ಸಮಾವೇಶ ನಡೆಯಲಿದೆ. 21ರಂದು ಹಾವೇರಿ, 22ರಂದು ಬೆಳಗಾವಿಯಲ್ಲಿ ನಡೆಯಲಿದೆ. ಸಮಾವೇಶಗಳಲ್ಲಿ ಭಾರತೀಯ ಕಿಸಾನ್ ಯೂನಿಯನ್‌ನ ವಕ್ತಾರ ರಾಕೇಶ್ ಟಿಕಾಯತ್ ಹಾಗೂ ರಾಷ್ಟ್ರೀಯ ಕಾರ್ಯದರ್ಶಿ ಯುದ್ಧವೀರ್ ಸಿಂಗ್ ಭಾಗಿಯಾಗಲಿದ್ದಾರೆ’ ಎಂದು ಹೇಳಿದರು.

‘ರೈತ ಚಳವಳಿ ಕಟ್ಟಲು ಇದು ಸುಸಂದರ್ಭ. ಎಲ್ಲರನ್ನೂ ಒಗ್ಗೂಡಿಸುವ ಸಮಯ ಬಂದಿದೆ. ಎಲ್ಲ ಅಡೆತಡೆಗಳನ್ನು ಮೀರಿ ರೈತರು ಹಾಗೂ ರೈತ ಮಹಿಳೆಯರು ದೆಹಲಿಯಲ್ಲಿ ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಅವರಿಗೆ ರೈತರ ಪ್ರತೀಕವಾದ ಹಸಿರು ಶಾಲುಗಳನ್ನು ರಾಜ್ಯದಿಂದ ರವಾನಿಸಲಾಗುವುದು. ಈ ಮೂಲಕ ರೈತರು ಒಬ್ಬಂಟಿಯಲ್ಲ ಎಂಬ ಸಂದೇಶದೊಂದಿಗೆ ಅವರ ಪರ ನಿಲ್ಲಲಿದ್ದೇವೆ’ ಎಂದೂ ಅವರು ಹೇಳಿದರು.

ದಿಶಾ ರವಿ ಸುಸಂಸ್ಕೃತ ಕುಟುಂಬದವರು: ‘ಪರಿಸರ ಕಾರ್ಯಕರ್ತೆ ದಿಶಾ ರವಿ ಸುಸಂಸ್ಕೃತ ಮನೆತನಕ್ಕೆ ಸೇರಿದವರು. ಆದರೆ, ಅವರನ್ನು ಈ ವ್ಯವಸ್ಥೆ ನಡೆಸಿಕೊಂಡಿರುವ ರೀತಿ ಸರಿಯಲ್ಲ. ದೆಹಲಿ ಪೊಲೀಸರು ಯಾವುದೇ ಸೂಚನೆ ನೀಡದೆ, ಮನೆಗೆ ನುಗ್ಗಿ ದಾಖಲೆಗಳನ್ನು ಕೇಳಿದ್ದಾರೆ. ಒತ್ತಾಯದಿಂದ ದಿಶಾರ ಸಹಿ ಪಡೆದಿದ್ದಾರೆ. ಆದರೆ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಗೃಹ ಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪೊಲೀಸರು ಕಾನೂನು ಪಾಲಿಸಿದ್ದಾಗಿ ಸಮರ್ಥಿಸಿಕೊಂಡಿದ್ದಾರೆ’ ಎಂದು ರೈತ ಮುಖಂಡ ಕೆ.ಟಿ. ಗಂಗಾಧರ್ ಬೇಸರ ವ್ಯಕ್ತಪಡಿಸಿದರು.

‘ದಿಶಾ ಬಗ್ಗೆ ತಿಳಿದುಕೊಳ್ಳದೆ, ಆಕೆಯ ಹಾಗೂ ಕುಟುಂಬದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಕೆಟ್ಟದಾಗಿ ಬಿಂಬಿಸಲಾಗುತ್ತಿದೆ. ರಾಜ್ಯದ ಹೆಮ್ಮೆಯ ಪುತ್ರಿಯನ್ನು ಈ ರೀತಿ ನಡೆಸಿಕೊಂಡಿರುವುದು ಖಂಡನೀಯ’ ಎಂದರು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.
ಸಂಖ್ಯೆ: ಉಗ್ರಾಣ/82/2021–22 ದಿನಾಂಕ :18.02.2021
ಇ–ಟೆಂಡರ್ ಅಧಿಸೂಚನೆ
2021–22ನೇ ಸಾಲಿಗಾಗಿ ಸಾರ್ವಜನಿಕ ಆಸ್ಪತ್ರೆ ಯಲಬುರ್ಗಾ ಮತ್ತು ಸಮುದಾಯ ಆರೋಗ್ಯ ಕೇಂದ್ರ ಮುನಿರಾಬಾದ, ತಾವರಗೇರಾ, ಕಾರಟಗಿ, ಕುಕನೂರು ಮತ್ತು ಶ್ರೀರಾಮನಗರ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ಧಪಡಿಸಿದ ಆಹಾರ ಟೀ, ಕಾಫೀ, ಬಾಳೆಹಣ್ಣು, ಮತ್ತು ಕೋಳಿಮೊಟ್ಟೆಯನ್ನು ದಿನಕ್ಕೆ ಎರಡು ಬಾರಿ ಸರಬರಾಜು ಮಾಡಲು ಇ–ಟೆಂಡರ್ ಕರೆಯಲಾಗಿದೆ. (https.eproc.karnataka.gov.in)
1)ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ : **17.03.2021 ರಂದು ಸಾಯಂಕಾಲ 5–00 ಗಂಟೆಯೊಳಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **19.03.2021 ರಂದು ಬೆಳಿಗ್ಗೆ 11–00 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **22.03.2021ರಂದು ಬೆಳಿಗ್ಗೆ 11–00 ಗಂಟೆಗೆ.**
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಕೊಪ್ಪಳ
ಡಿಐಪಿಆರ್/ಕೊಪ್ಪಳ/398/ಎಂಸಿಎ/2020–21

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ದೂರವಾಣಿ.ಸಂ: 08182–226565 E-mail : itstaff ulb shimoga1@yahoo.in
No :ಶಿಮನಪಾ/ಆ.ವಿ/ಸಿ.ಆರ್/ಬ.ರೇ/01/2020–21 ದಿನಾಂಕ:17.02.2021
ಪತ್ರಿಕಾ ಪ್ರಕಟಣೆ
ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆಯ ಘಟಕದಲ್ಲಿ ಸುಮಾರು ವರ್ಷಗಳಿಂದ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯವನ್ನು ಬಯೋ–ರೆಮಿಡಿಯೇಷನ್/ಬಯೋ ಮೈನಿಂಗ್ ಪದ್ಧತಿಯ ಮೂಲಕ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸೂಕ್ತ/ಅರ್ಹ ಸಂಸ್ಥೆಗಳಿಂದ ಈಗಾಗಲೇ ಆಸಕ್ತಿ ವ್ಯಕ್ತಪಡಿಸುವಿಕೆ (**Expression of Interest**) ಸಂಸ್ಥೆಗಳಿಂದ ದಿನಾಂಕ : 12.02.2021ರವರೆಗೆ ಪಡೆದಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ತಾಂತ್ರಿಕ ಸಮಿತಿಯಲ್ಲಿ ಅರ್ಹ ಸಂಸ್ಥೆಗಳನ್ನು ಅನುಮೋದಿಸಿ, ಪ್ರಸ್ತಾವನೆ ಸಲ್ಲಿಸುವಿಕೆ (**Request for Proposal**) ಪಡೆಯಲು ಪತ್ರಿಕಾ ಪ್ರಕಟಣೆಯನ್ನು ನೀಡಿದೆ.

Milestones	Time and Dates
Issue of RFP Document to Bidders	17.02.2021
Last date for issue of RFP	03.03.2021 upto 4.00 PM
Last Date for receipt of proposals and Opening of the RFP	04.03.2021 upto 4.00 PM

• ಪ್ರಸ್ತಾವನೆ ಸಲ್ಲಿಸುವಿಕೆ (**Request for Proposal**) ಯನ್ನು ದಿನಾಂಕ : 17.02.2021 ರಿಂದ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸುವುದು.
• ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ ಇವರಲ್ಲಿ ವಿಚಾರಿಸಬಹುದಾಗಿದೆ.
ಸೂಚನೆ : ಈಗಾಗಲೇ ಆಸಕ್ತಿ ವ್ಯಕ್ತಪಡಿಸುವಿಕೆ (**Expression of Interest**) ನಲ್ಲಿ ಭಾಗವಹಿಸಿರುವ ಸಂಸ್ಥೆಗಳಿಗೆ ಮಾತ್ರ ಪ್ರಸ್ತಾವನೆ ಸಲ್ಲಿಸುವಿಕೆ (**Request for Proposal**) ರಲ್ಲಿ ಅವಕಾಶವಿರುತ್ತದೆ.
ವಾ.ಸಾ.ಸಂ.ಇ./ಶಿ/ನಂ.97–02 ಝೇಂಕಾರ್/2020–21
ಸಹಿ/–ಆಯುಕ್ತರು ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂಖ್ಯೆ.ತುಮಪಾ/ತಾಂಶಾ/ಸಿಆರ್/16/2020–21 ದಿನಾಂಕ:16.02.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯ (ಎಂಜಿಎನ್‌ವಿವೈ) ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka .gov.in ಮುಖಾಂತರ ಅಲ್ಪಾವಧಿ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumakurucity. mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.
ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ. (1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **16.02.2021** ರಿಂದ ದಿನಾಂಕ:**08.03.2021**ರವರೆಗೆ (2) ಪ್ರಿ–ಬಿಡ್ ಮಿಟಿಂಗ್ ದಿನಾಂಕ:**23.02.2021** ಬೆಳಗ್ಗೆ 11.00 ಗಂಟೆಗೆ (3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **08.03.2021** ರಂದು ಸಾಯಂಕಾಲ 4.30 ಗಂಟೆವರೆಗೆ (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **09.03.2021** ಸಾಯಂಕಾಲ 4.35 ಗಂಟೆಗೆ. (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **12.03.2021**ರ ಬೆಳಗ್ಗೆ 11.00 ಗಂಟೆಗೆ (6) ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು. **ಕಾಮಗಾರಿಯ ಹೆಸರು:** ತುಮಕೂರು ಮಹಾನಗರಪಾಲಿಕೆ ಪ್ರಸ್ತುತ ಕಟ್ಟುತ್ತಿರುವ ಕಟ್ಟಡಕ್ಕೆ ಬಾಕಿ ಹೆಚ್ಚುವರಿ ಹಣ ಮೀಸಲಿಡುವುದು (ಎರಡನೇ ಅಂತಸ್ತು ಸಭಾಂಗಣ ಭಾಗ–3) ಅಂದಾಜು ಮೊತ್ತ **ರೂ.275.00** ಲಕ್ಷಗಳಲ್ಲಿ. ಇಎಂಡಿ ಮೊತ್ತ **ರೂ.412500/–**ಗಳಲ್ಲಿ.
ಸಹಿ/– ಕಾರ್ಯಪಾಲಕ ಅಭಿಯಂತರರು ತುಮಕೂರು ಮಹಾನಗರ ಪಾಲಿಕೆ, ತುಮಕೂರು
DIPR/TUM/439/MCA/2020-21

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗ:ಲೋಇ:ಪಿಬಿ– :ವಿವಿಧ/2020–21/4978 ದಿನಾಂಕ : 18–02–2021
ಟೆಂಡರ್ ಅವಧಿ ವಿಸ್ತರಣೆ
ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ನಂ: 4874 ದಿ:– 16–02–2021 ರಲ್ಲಿ ಕರೆಯಲಾದ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕರೆಯಲಾದ (ವ ಇ (1) 134986 (2) 134987 (3) 135598 (4) 135597) ಕಾಮಗಾರಿಗಳ ಟೆಂಡರ್ ಅವಧಿಯನ್ನು ವಿಸ್ತರಿಸಲಾಗಿದ್ದು ಪರಿಷ್ಕೃತ ವೇಳಾಪಟ್ಟಿ ಈ ಮುಂದಿನಂತಿರುತ್ತದೆ. ಪ್ರೀ ಬಿಡ್ ಮಿಟಿಂಗ್ ದಿನಾಂಕ : **22–02–2021** ಪ್ರಶ್ನೋತ್ತರ ದಿನಾಂಕ : **23–02–2021** ಟೆಂಡರ್ ಸಲ್ಲಿಸುವ ದಿನಾಂಕ : **26–02–2021** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **27–02–2021** ಆರ್ಥಿಕ ಬಿಡ್ ತೆರೆಯುವ ದಿನಾಂಕ:– **01–03–2021**
ಹೆಚ್ಚಿನ ವಿವರಗಳಿಗಾಗಿ ಲೋಕೋಪಯೋಗಿ ಇಲಾಖೆಯ ಇ-ಪ್ರೊಕ್ ವೆಬ್‌ಸೈಟನಲ್ಲಿ ನೋಡಿಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಗದಗ, ವಿಭಾಗ, ಗದಗ
ವಾಸಾಸಂಇ/ಗದಗ/ಎಂ.ಸಿ.ಎ/511/2020–21

ನಗರಸಭಾ ಕಾರ್ಯಾಲಯ, ಹಾಸನ.
ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ.
ದೂ.ಸಂ: 08172–268276, Email: commn_hassan@yahoo.com
ನಂ.ನಸಹಾ/ಇಂ.ವಿ/15ನೇ ಹಣಕಾಸು/2020–21 ದಿನಾಂಕ: 18.02.2021
ಟೆಂಡರ್ ತಿದ್ದುಪಡಿ ಪ್ರಕಟಣೆ : ಇ ಪ್ರೊಕ್ಯೂರ್‌ಮೆಂಟ್ ಮೂಲಕ
ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2020–21ನೇಸಾಲಿನ 15ನೇ ಹಣಕಾಸು ಅನುದಾನದಡಿ ಟೆಂಡರ್ ಪ್ರಕಟಣೆ ಸಂಖ್ಯೆ:ನಸಹಾ/ಇಂ.ವಿ/15ನೇ ಹಣಕಾಸು/ 2020–21, ದಿನಾಂಕ:05.02.2021 ರಲ್ಲಿ ಕಾಮಗಾರಿ ನಿರ್ವಹಣೆಗಾಗಿ ಇಂಡೆಂಟ್ ಸಂಖ್ಯೆ:CMCHASSAN/AEEEnv/CR02/2020-21 ರಲ್ಲಿ ಟೆಂಡರ್ ಪ್ರಕಟಣೆ ಪ್ರಕಟಿಸಿದ್ದು, ಸದರಿ ಪ್ರಕಟಣೆಯನ್ನು ಈ ಕೆಳಕಂಡಂತೆ ಟೆಂಡರ್ ತಿದ್ದುಪಡಿ ಪ್ರಕಟಣೆ ಮಾಡಲಾಗಿದ್ದು, ಈ ಕೆಳಕಂಡಂತೆ ಓದಿಕೊಳ್ಳಲು ಕೋರಿದೆ. 1)Pre bid meeting date and time: 22.02.2021,15.00. 2)Last date and time for receipt of tenders: 24.02.2021, 17.30. 3)Last date and time for tender queries/clarifications: 23.02.2021, 16.30. 4)Date and time for opening of technical bid: 25.02.2021, 17.35. 5)Date and time for opening of financeial bid: 01.03.2021, 12.00
ಸಹಿ/–ಪೌರಾಯುಕ್ತರು, ನಗರಸಭೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/654/2020–21
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೆ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು. ದೂ: 080–22122856
ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 60/2020–21 ದಿನಾಂಕ: 18–02–2021
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000 ರನ್ವಯ ಹಾಗೂ ಕೆಡಬ್ಲ್ಯೂ–3 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**http://eproc.karnataka.gov.in**) ಮೂಲಕ ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರೊಸೆಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.
ಕ್ರ.ಸಂ. 1. ಕಾಮಗಾರಿಯ ಹೆಸರು: ಮೈಸೂರಿನ ಕೆ.ಆರ್.ಎಸ್. ರಸ್ತೆ ಯಲ್ಲಿರುವ ಇಎಸ್‌ಐ ಸಿಬ್ಬಂದಿ ವಸತಿಗೃಹಗಳ ಪ್ರಾಂಗಣದಲ್ಲಿ ಸೆಪ್ಟಿಕ್ ಟ್ಯಾಂಕ್, ಪಂಪ್ ಹೌಸ್ ನಿರ್ಮಾಣ ಮತ್ತು ಒಳಚರಂಡಿ ಮಾರ್ಗಗಳ ಪೂರೈಕೆ. **KPWD/2020-21/BD/WORK_INDENT128477 Call-2. ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ:** 57,16,003.39 **ಇಎಂಡಿ ಮೊತ್ತ (ರೂ.ಗಳಲ್ಲಿ):** ರೂ. 1,14,500/– **(ಇ–ಪೇಮೆಂಟ್ ಮೂಲಕ ರೂ.50,000 ಮತ್ತು ಬ್ಯಾಂಕ್ ಗ್ಯಾರಂಟಿ ಮೂಲಕ ರೂ.64,500/–). ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ):** 3 ತಿಂಗಳು (ಮಳೆಗಾಲ ಸೇರಿ) **ಗುತ್ತಿಗೆದಾರರ ದರ್ಜೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು. **ಮೀಸಲಾತಿ ಹಂಚಿಕೆ:** ಇತರೆ
1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: **19–02–2021 ರಿಂದ 26–02–2021ರವರೆಗೆ.** 2. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: **26–02–2021 ಸಂಜೆ 4.00 ಗಂಟೆಯವರೆಗೆ.** 3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: **01–03–2021 ರಂದು ಸಂಜೆ 4.30ಕ್ಕೆ** ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**http://eproc.karnataka.gov.in**) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು
ವಾಸಾಸಂಇ/2855/ಅಲಕ್‌ನಂದ/2020-21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ಶಾಶಾ–3/.ಟೆಂಡರ್.ಅಧಿಸೂಚನೆ/2020–21/7056 ದಿನಾಂಕ:19.02.2021
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಲೆಕ್ಕ ಶೀರ್ಷಿಕೆ 5054 ಅಪೆಂಡಿಕ್ಸ–ಇ ಯೋಜನೆಯಡಿಯಲ್ಲಿ (01) ಕಾಮಗಾರಿಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ. 441.36 ಲಕ್ಷಗಳು ಗರಿಷ್ಠ ರೂ. 441.36 ಲಕ್ಷಗಳು. 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ನೊಂದಾಯಿತ ಗುತ್ತಿಗೆದಾರರಾಗಿರಬೇಕು. 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಡಿಕ್ಲೆರೆಶನ ಸರಕಾರ ಆದೇಶದಂತೆ ಪ್ರೀ ಬಿಡ್ ಮಿಟಿಂಗ: 24/02/2021 (11.00 ಗಂಟೆ). 5) ಟೆಂಡರ ಬಗ್ಗೆ ಮಾಹಿತಿ ಹಾಗು ಸಷಪಷ್ಟೀಕರಣ ಕೋರುವ ಕೊನೆಯ ದಿನಾಂಕ : 25/02/2021 (17.30 ಗಂಟೆ). 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 26/02/2021 (16.00 ಗಂಟೆ). 7) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ: 01/03/2021 (16.30 ಗಂಟೆ). 8) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ : 03/03/2021 (16.30 ಗಂಟೆ). 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/941/ಎಂ.ಸಿ.&ಎ/2020–21

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಸರಗೂರು
ಸರಗೂರು ತಾಲ್ಲೂಕು, ದೂರವಾಣಿ: 08228–265532
ಈ–ಮೇಲ್: itstaff_ulb_sargur@yahoo.com, Website: www.sargurtown.gov.in
ಸಂಖ್ಯೆ : ಸ.ಪ.ಪಂ.ಕಾ.ಸ/15ನೇ ಹ.ಕಾ.ಯೋ–20–21/ಪಿಆರ್–58/2020–21/ ದಿನಾಂಕ : 15.02.2021
ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಸರಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2020–21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–1 ಹಾಗೂ ಕೆ..ಡಬ್ಲ್ಯೂ–2ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಕಾಮಗಾರಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಾಲ್‌ನ http://eproc.karnataka.nic.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.
1. ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿನಾಂಕ : 0303.2021 ಸಂಜೆ 5.30 ಗಂಟೆಯವರೆಗೆ.
2. ಟೆಂಡರ್ ತೆರೆಯುವ ದಿನಾಂಕ : 05.03.2021ರ ಬೆಳಿಗ್ಗೆ 11.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಲಾವಧಿ (ಮಳೆಗಾಲವನ್ನು ಹೊರತುಪಡಿಸಿ)
1	DMA/2020-21/ OW/WORK_INDENT112356	12.00	4ನೇ ದರ್ಜೆ ಹಾಗೂ ಮೇಲ್ಪಟ್ಟು	04 ತಿಂಗಳು
2	DMA/2020-21/ OW/WORK_INDENT112384	20.30	3ನೇ ದರ್ಜೆ ಹಾಗೂ ಮೇಲ್ಪಟ್ಟು	06 ತಿಂಗಳು
3	DMA/2020-21/ OW/WORK_INDENT112358	7.65	4ನೇ ದರ್ಜೆ ಹಾಗೂ ಮೇಲ್ಪಟ್ಟು	03 ತಿಂಗಳು
4	DMA/2020-21/ OW/WORK_INDENT113240	18.23	4ನೇ ದರ್ಜೆ ಹಾಗೂ ಮೇಲ್ಪಟ್ಟು	03 ತಿಂಗಳು
5	DMA/2020-21/ OW/WORK_INDENT113366 (Reserved for ST Category Contractors)	4.05	4ನೇ ದರ್ಜೆ ಹಾಗೂ ಮೇಲ್ಪಟ್ಟು	03 ತಿಂಗಳು
6	DMA/2020-21/ RD/WORK_INDENT112357 (Reserved for SC Category Contractors)	4.05	4ನೇ ದರ್ಜೆ ಹಾಗೂ ಮೇಲ್ಪಟ್ಟು	03 ತಿಂಗಳು
7	DMA/2020-21/ OW/WORK_INDENT113365	1.01	4ನೇ ದರ್ಜೆ ಹಾಗೂ ಮೇಲ್ಪಟ್ಟು	03 ತಿಂಗಳು

ಸೂಚನೆ : 1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http:eproc.karnataka.nic.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. **2**. 12% ಜಿ.ಎಸ್.ಟಿ ತೆರಿಗೆಯನ್ನು ಪ್ರತ್ಯೇಕವಾಗಿ ಕಾಮಗಾರಿಯ ಬಿಲ್ಲಿನಲ್ಲಿ ಸೇರಿಸಲಾಗುವುದು.
ಸಹಿ/– ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತಿ, ಸರಗೂರು.
ವಾಸಾಸಂಇ/ಮೈಸೂರು/ಶಿರಡಿ ಸಾಯಿ/1029/2020–21
ಸಹಿ/– ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಸರಗೂರು
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ವಿಭಾಗ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/2020–21/2306 ದಿ:–16/02/2021
ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಗೆ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಈ ಕೆಳಗಿನ ಕಾಮಗಾರಿಗಳ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಾಕ್ಯೂರ್‌ಮೆಂಟ್ ಪೋರ್ಟ್‌ಲ್ http://eproc.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು, ಹೆಚ್ಚಿನ ವಿವರಗಳಿಗೆ ಸದರಿ ಕಚೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂ:08399–240143 ರಿಂದ ಮಾಹಿತಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೂವಿನಹಡಗಲಿ ಕಾರ್ಯಾಲಯ ಇ–ಮೇಲ್ eepwdhoovinahadagali@gmail.com ಮೂಲಕ ಅಥವಾ ಖುದ್ದಾಗಿ ಕಚೇರಿಯಲ್ಲಿ ತಾಂತ್ರಿಕ ಸಹಾಯಕರು ಹಾಗೂ ಲೆಕ್ಕ ಅಧೀಕ್ಷಕರು ಇವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	KPWD/2020-21/RD/WORK_INDENT132731	150.00	10	KPWD/2020-21/RD/WORK_INDENT135335	150.00
2	KPWD/2020-21/RD/WORK_INDENT132780	115.00	11	KPWD/2020-21/RD/WORK_INDENT135334	110.00
3	KPWD/2020-21/RD/WORK_INDENT132781	100.00	12	KPWD/2020-21/RD/WORK_INDENT135333	110.00
4	KPWD/2020-21/RD/WORK_INDENT135344	50.00	13	KPWD/2020-21/RD/WORK_INDENT135336	30.00
5	KPWD/2020-21/RD/WORK_INDENT135342	100.00	14	KPWD/2020-21/RD/WORK_INDENT135340	50.00
6	KPWD/2018-19/RD/WORK_INDENT97254	100.00	15	KPWD/2020-21/RD/WORK_INDENT135339	90.00
7	KPWD/2020-21/BD/WORK_INDENT134305	180.00	16	KPWD/2020-21/RD/WORK_INDENT135338	55.40
8	KPWD/2020-21/BD/WORK_INDENT120302	100.00			
9	KPWD/2020-21/BD/WORK_INDENT130113	150.00			

ಅ) ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **06/03/2021 ರಂದು 16.00 ಗಂಟೆಯ ವರೆಗೆ.** ಆ) ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ: **08/03/2021 ರಂದು 16.00 ಗಂಟೆಯ ವರೆಗೆ.** ಇ) ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ: **09/03/2021 ರಂದು 16.30 ಗಂಟೆಗೆ.** ಈ) ಅರ್ಥಿಕ ಬಿಡ್ ತೆರೆಯುವ ದಿನಾಂಕ:: **ನಂತರ ತಿಳಿಸುವುದು.**
NOTE: 1. 12.00% GST will be added to the contract amount. **2**. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು E-procurement Portal ನಲ್ಲಿ ನೋಡಿಕೊಳ್ಳಬಹುದು
ಡಿಐಪಿಆರ್/ಬಳ್ಳಾರಿ/392/ಎಂಸಿಎ/2020–21 ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ಹೂವಿನ ಹಡಗಲಿ.

ಜನಪ್ರಿಯತೆ, ಆರ್ಥಿಕತೆ ಎಲ್ಲವೂ ಇವೆ

ಯೂಟ್ಯೂಬ್ ಅಡುಗೆ ಚಾನೆಲ್‌ನಲ್ಲಿ

ಸುಕೃತ ಎಸ್.

ಅಡುಗೆ ಕಲಿಯುವುದು ಈಗ ಸುಲಭ. ಫೇಸ್‌ಬುಕ್, ಯೂಟ್ಯೂಬ್‌ಗಳಲ್ಲಿನ ನೂರಾರು ಚಾನೆಲ್‌ಗಳು ನಮ್ಮ ಅಡುಗೆ ಕಲಿಯುವ ಉತ್ಸಾಹಕ್ಕೆ ನೀರೆರೆಯುತ್ತಿವೆ. ಹಿಂದೆಲ್ಲಾ, ಟಿ.ವಿ.ಗಳಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ಬರುತ್ತಿದ್ದ ಅಡುಗೆ ಕಾರ್ಯಕ್ರಮಕ್ಕೆ ಕೈಯಲ್ಲಿ ಪೇಪರ್, ಪೆನ್ನು ಹಿಡಿದು ಕಾಯುತ್ತಾ ಕೂರುತ್ತಿದ್ದೆವು. ಈಗ ಬೆರಳ ತುದಿಗೆ ಸಾವಿರಾರು ರೆಸಿಪಿಗಳು ಸಾಲುಗಟ್ಟಿವೆ.

ಲಾಕ್‌ಡೌನ್ ಸಮಯದಲ್ಲಿ ಅಡುಗೆ ಚಾನೆಲ್‌ಗಳ ಸಂಖ್ಯೆ ಒಂದೇ ಸಮನೆ ಹೆಚ್ಚಾಯಿತು. ಇದಕ್ಕೆ ಕಾರಣಗಳು ಹಲವಾರು. ಮನೆಯೊಳಗೇ ಇದ್ದ ಜನ ಶುಚಿಯಾದ, ರುಚಿಯಾದ ಅಡುಗೆಗಳ ಕಡೆ ಮುಖ ಮಾಡಿದರು. ಹೊಸ ರುಚಿ, ಸಾಂಪ್ರದಾಯಿಕ ಅಡುಗೆ ಎಂದೆಲ್ಲ ಸಂಭ್ರಮಿಸಿದರು. ಲಭ್ಯವಿರುವ ಸಾಮಗ್ರಿಗಳಿಂದ, ಬಹಳ ಕಡಿಮೆ ಸಮಯದಲ್ಲೇ ರುಚಿಕರ ಅಡುಗೆ ತಯಾರಿಸುವ ಕಡೆಗೆ ಜನರು ಹೆಚ್ಚು ಆಸಕ್ತರಾದರು. ಅಂತರ್ಜಾಲದಲ್ಲಿ ತಡಕಾಡುತ್ತಲೇ ಶೆಲ್ಫ್‌ಗಳಲ್ಲಿರುವ ಅಡುಗೆ ಸಾಮಗ್ರಿಗಳನ್ನು ಹೊಂದಿಸಿಕೊಂಡರು; ಯೂಟ್ಯೂಬ್ ಚಾನೆಲ್ ನೋಡುತ್ತ ತರಕಾರಿ ಹೆಚ್ಚತೊಡಗಿದರು. ಈ ಅವಶ್ಯಕತೆಗೆ ತಕ್ಕಂತೆ ಹಲವು ಯೂಟ್ಯೂಬ್ ಚಾನೆಲ್‌ಗಳು ಹುಟ್ಟಿಕೊಂಡವು. ಹೊಸ ಚಾನೆಲ್‌ಗಳ ಜೊತೆಗೆ ಲಾಕ್‌ಡೌನ್‌ಗೂ ಮುಂಚೆಯೇ ಪ್ರಾರಂಭಿಸಿದ್ದ ಚಾನೆಲ್‌ಗಳಿಗೂ ಹೆಚ್ಚು ಹೆಚ್ಚು ವ್ಯೂಸ್ ಬಂದವು.

> ಕಳೆದ ವರ್ಷ ಲಾಕ್‌ಡೌನ್ ಶುರುವಾದಾಗ ಯೂಟ್ಯೂಬ್ ಅಡುಗೆ ಚಾನೆಲ್‌ಗಳ ಸಂಖ್ಯೆ ಒಮ್ಮೆಲೇ ಹೆಚ್ಚಾಯಿತು. ಹವ್ಯಾಸವನ್ನು ಕೆಲವರು ಉದ್ಯಮವನ್ನಾಗಿ ಪರಿವರ್ತಿಸಿಕೊಂಡರು. ಹಲವು ಗೃಹಿಣಿಯರು ಜನಪ್ರಿಯತೆಯನ್ನೂ ಪಡೆದುಕೊಂಡರು.

ಹೆಚ್ಚು ವ್ಯೂಸ್

‘ಲಾಕ್‌ಡೌನ್ ಆಗುವುದಕ್ಕೂ ಮೊದಲೇ ನಾನು ಚಾನೆಲ್ ಪ್ರಾರಂಭಿಸಿದ್ದೆ. ಆದರೆ, ಲಾಕ್‌ಡೌನ್ ಸಮಯದಲ್ಲಿ ಹೆಚ್ಚು ವ್ಯೂಸ್ ಬಂದವು. ನನ್ನ ಅಡುಗೆ ವಿಡಿಯೊಗಳು ಹೆಚ್ಚು ಶೇರ್ ಕೂಡ ಆದವು’ ಎನ್ನುತ್ತಾರೆ ‘ಮನೆ ಅಡುಗೆ ವಿಥ್ ವೇದಾ’ ಎನ್ನುವ ತಮ್ಮದೇ ಯೂಟ್ಯೂಬ್ ಚಾನೆಲ್ ನಡೆಸುತ್ತಿರುವ ವೇದಾವತಿ ಎಚ್.ಎಸ್.

ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವೂ ಇದೆ. ‘ಲಾಕ್‌ಡೌನ್‌ನಲ್ಲಿ ಬರುತ್ತಿದ್ದ ವ್ಯೂಸ್‌ಗೆ ಹೋಲಿಸಿದರೆ, ಈಗ ಬರುತ್ತಿರುವ ವ್ಯೂಸ್ ಅಷ್ಟಿಲ್ಲ. ಜನರು ಈಗ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ’ ಎನ್ನುತ್ತಾರೆ ‘ರಂಜುಸ್ ಹೋಮ್ಲಿ ಫುಡ್’ ಅಡುಗೆ ಚಾನೆಲ್ ನಡೆಸುತ್ತಿರುವ ರಂಜಿತ ಎನ್. ಶೆಟ್ಟಿ.

ವೇದಾವತಿ ಎಚ್.ಎಸ್.

ಲಾಕ್‌ಡೌನ್ ಸಮಯದಲ್ಲಿ ಹಲವು ಮಹಿಳೆಯರು ಹವ್ಯಾಸಕ್ಕಾಗಿ ಚಾನೆಲ್ ಪ್ರಾರಂಭಿಸಿದರು. ಜನರ ಪ್ರತಿಕ್ರಿಯೆ, ವ್ಯೂಸ್ ಬಂದ ಕಾರಣ, ಅನ್‌ಲಾಕ್ ಬಳಿಕ ಇದನ್ನೇ ಉದ್ಯೋಗವಾಗಿಸಿಕೊಂಡರು. ಕೆಲವರು ಹೆಚ್ಚು ಹೂಡಿಕೆ ಮಾಡಿ, ಉತ್ತಮ ಗುಣಮಟ್ಟದ ಕ್ಯಾಮೆರಾ, ಪಾತ್ರೆ ಖರೀದಿ, ವಿಡಿಯೊಗಳ ಎಡಿಟಿಂಗ್‌ಗೆ ಸಂಬಂಧಿಸಿದ ಸಾಫ್ಟ್‌ವೇರ್‌ಗಳಿಗೆ ಗಮನ ನೀಡಿದರು. ಕೆಲವರು ಇದರೊಂದಿಗೆ ಕೇಟರಿಂಗ್ ಕೂಡ ಪ್ರಾರಂಭಿಸಿದರು.

> ಮನೆಯಲ್ಲೇ ಕೂತು ಯಾವುದೇ ಸ್ವಂತಿಕೆ ಇಲ್ಲದೇ ಗೃಹ ಕಾರ್ಯಗಳಲ್ಲಿ ಮಾತ್ರ ತೊಡಗಿಸಿಕೊಳ್ಳುತ್ತಿದ್ದ ಹಲವು ಮಹಿಳೆಯರು, ಲಾಕ್‌ಡೌನ್ ಸಮಯದಲ್ಲಿ ಸ್ವಂತದ ಅಡುಗೆ ಚಾನೆಲ್ ಪ್ರಾರಂಭಿಸಿ ಈಗ ಉದ್ಯೋಗಸ್ಥರಾಗಿದ್ದಾರೆ. ಅಸ್ಮಿತೆ ಗಳಿಸಿಕೊಂಡಿದ್ದಾರೆ.

ತಂತ್ರಜ್ಞಾನದ ಮಾಹಿತಿಯೂ ಮುಖ್ಯ

ಚಾನೆಲ್ ಪ್ರಾರಂಭಿಸುವುದು ಎಂದರೆ ಸುಲಭದ ಮಾತಲ್ಲ. ಹಲವು ತಯಾರಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ತಂತ್ರಜ್ಞಾನದ ಮಾಹಿತಿಯೂ ಬೇಕಾಗುತ್ತದೆ.

‘ನಮ್ಮದೇ ಚಾನೆಲ್ ಪ್ರಾರಂಭಿಸಲು ಎಡಿಟಿಂಗ್ ಸಹ ಬಹುಮುಖ್ಯ ಪಾತ್ರ ವಹಿಸುತ್ತದೆ. ಜನರನ್ನು ಸೆಳೆಯಲು ಇದೂ ಕೂಡ ಅತ್ಯಂತ ಮುಖ್ಯ’ ಎನ್ನುತ್ತಾರೆ ವೇದಾವತಿ. ‘ನಮ್ಮ ವಿಡಿಯೊಗಳನ್ನು ಎಡಿಟ್ ಮಾಡಲು ತುಂಬಾ ಹಣ ಖರ್ಚು ಮಾಡಬೇಕಾಗಿಲ್ಲ. ಮೊಬೈಲ್‌ಗಳಲ್ಲೇ ಉತ್ತಮ ಎಡಿಟಿಂಗ್ ಆ್ಯಪ್‌ಗಳು ಸಿಗುತ್ತವೆ. ಕ್ಯಾಮೆರಾ ಕೆಲಸವನ್ನೂ ನಮ್ಮ ಮೊಬೈಲ್‌ಗಳೇ ಮಾಡುತ್ತವೆ’ ಎನ್ನುತ್ತಾರೆ ರಂಜಿತ.

ವಿಡಿಯೊಗಳು ತುಂಬಾ ಉದ್ದ ಇರಬಾರದು ಎನ್ನುವುದು ಹಲವರ ಅಭಿಪ್ರಾಯ. ಆದಷ್ಟು 5 ನಿಮಿಷದೊಳಗೇ ನಮ್ಮ ಅಡುಗೆಯನ್ನು ತೋರಿಸಬೇಕು. ಇದು ಸವಾಲಿನ ಕೆಲಸವೂ ಹೌದು ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ವೇದಾವತಿ ಹಾಗೂ ರಂಜಿತ.

‘ಚಾನೆಲ್ ಪ್ರಾರಂಭಿಸಲು ತುಂಬಾ ತಾಳ್ಮೆ ಬೇಕು. ನಾಳೆಗೆ ವ್ಯೂಸ್ ಸಿಗುತ್ತವೆ ಎಂದಲ್ಲ. ಹಾಗೆಯೇ ಹೆಚ್ಚು ಬಂಡವಾಳ ಹೂಡಿಕೆ ಮಾಡಿ ಚಾನೆಲ್ ಪ್ರಾರಂಭಿಸಲು ಮುಂದಾಗಬಾರದು. ವ್ಯೂಸ್, ಶೇರ್, ಜನರ ಪ್ರತಿಕ್ರಿಯೆ ನೋಡಿಕೊಂಡು, ಹಂತ ಹಂತವಾಗಿ ಮುಂದುವರೆಯಬೇಕು’ ಎಂದು ಕಿವಿಮಾತು ಹೇಳುತ್ತಾರೆ ರಂಜಿತ.

ಹ್ಯಾಕರ್ಸ್ ಇದ್ದಾರೆ, ಎಚ್ಚರಿಕೆ!

ನಮ್ಮ ಚಾನೆಲ್‌ಗಳನ್ನು ಹ್ಯಾಕ್ ಮಾಡುತ್ತಾರೆ. ನಂತರ, ಆ ಚಾನೆಲ್ ನಮ್ಮ ಕೈತಪ್ಪಿ ಹೋಗುತ್ತದೆ. ನಾವು ಅಪ್‌ಲೋಡ್ ಮಾಡಿದ ವಿಡಿಯೊಗಳು ಸಹ ನಮಗೆ ಸಿಗುವುದಿಲ್ಲ. ನಮ್ಮ ಚಾನೆಲ್ ಹೆಸರಲ್ಲಿ ಯಾವುದೊ ಕೆಟ್ಟ ಕೆಟ್ಟ ಅಭಿರುಚಿಯ ವಿಡಿಯೊಗಳನ್ನು ಅಪ್‌ಲೋಡ್ ಮಾಡಲಾಗುತ್ತದೆ. ಆದ್ದರಿಂದ ಸ್ವಲ್ಪ ಎಚ್ಚರಿಕೆಯಿಂದ ಇರಬೇಕಾಗುತ್ತದೆ.

ರಂಜಿತ ಎನ್. ಶೆಟ್ಟಿ

ಬಂಗುಡೆ ಪುಳಿಮುಂಚಿ, ಒಣ ಸೀಗಡಿ ಚಟ್ನಿ

ದಿವ್ಯಾ ಪೊಳಲಿ

ನಳಪಾಕ

ಬಂಗುಡೆ ಪುಳಿಮುಂಚಿ

ಬೇಕಾಗುವ ಸಾಮಗ್ರಿಗಳು: ಬಂಗುಡೆ ಮೀನು– ಅರ್ಧ ಕೆ.ಜಿ., ಕೆಂಪುಮೆಣಸು–13, ಕೊತ್ತಂಬರಿ –2 ಟೇಬಲ್ ಚಮಚ, ಜೀರಿಗೆ– ಅರ್ಧ ಚಮಚ, ಸಾಸಿವೆ– ಕಾಲು ಚಮಚ, ಮೆಂತ್ಯೆ – ಕಾಲು ಚಮಚ, ಓಮ– ಅರ್ಧ ಚಮಚ, ಅರಿಸಿನಪುಡಿ– ಅರ್ಧ ಚಮಚ, ಬೆಳ್ಳುಳ್ಳಿ– 4 ಎಸಳು, ಈರುಳ್ಳಿ – ಸಣ್ಣ ಗಾತ್ರದ್ದು 2, ಹುಣಸೆಹಣ್ಣು– ಒಂದು ಲಿಂಬೆ ಗಾತ್ರದ್ದು, ಸ್ವಲ್ಪ ಕರಿಬೇವು, ಶುಂಠಿ, ಹಸಿಮೆಣಸು– 1 ಚಮಚ,

ತಯಾರಿಸುವ ವಿಧಾನ: ಕೆಂಪುಮೆಣಸು, ಕೊತ್ತಂಬರಿ, ಜೀರಿಗೆ, ಸಾಸಿವೆ, ಮೆಂತ್ಯೆ, ಓಮ ಇವುಗಳನ್ನು ಎಣ್ಣೆ ಹಾಕದೇ ಹುರಿಯಬೇಕು. ಹುರಿದ ಸಾಮಗ್ರಿಗಳನ್ನು ಈರುಳ್ಳಿ, ಬೆಳ್ಳುಳ್ಳಿ, ಅರಿಸಿನ, ಹುಣಸೆಹಣ್ಣು ಮತ್ತು ನೀರು ಹಾಕಿ ಚೆನ್ನಾಗಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು. ಬಿಸಿ ಮಾಡಿದ ಬಾಣಲೆಗೆ ಎರಡು ಚಮಚ ಎಣ್ಣೆ ಹಾಕಿ, ಕರಿಬೇವು ಮತ್ತು ಹೆಚ್ಚಿದ ಈರುಳ್ಳಿ ಹಾಕಿ ಬಾಡಿಸಬೇಕು. ಈರುಳ್ಳಿ ಕಂದು ಬಣ್ಣ ಬಂದ ಮೇಲೆ ರುಬ್ಬಿಕೊಂಡ ಮಸಾಲೆಯನ್ನು ಸೇರಿಸಬೇಕು. ಬೇಕಾದ ಹದಕ್ಕೆ ನೀರು ಹಾಕಿ ಕುದಿಸಬೇಕು. ಜಜ್ಜಿದ ಶುಂಠಿ ಮತ್ತು ಹಸಿಮೆಣಸನ್ನು ಸೇರಿಸಬೇಕು. ರುಚಿಗೆ ತಕ್ಕಷ್ಟು ಉಪ್ಪು ಹಾಕಬೇಕು.

ಮಸಾಲೆ ಕುದಿ ಬಂದ ಮೇಲೆ ತೊಳೆದಿಟ್ಟ ಬಂಗುಡೆ ಮೀನನ್ನು ಹಾಕಬೇಕು. ಬಾಣಲೆಯ ಬಾಯಿ ಮುಚ್ಚಿ ಚಿಕ್ಕ ಉರಿಯಲ್ಲಿ ಐದು ನಿಮಿಷ ಮೀನನ್ನು ಬೇಯಿಸಿದರೆ ಪುಳಿಮುಂಚಿ ತಿನ್ನಲು ರೆಡಿಯಾಗುತ್ತದೆ. ನೀರು ದೋಸೆ ಮತ್ತು ಊಟ ಜೊತೆಗೆ ತಿನ್ನಲು ಇದು ರುಚಿಕರವಾಗಿರುತ್ತದೆ.

ಒಣ ಸೀಗಡಿ ಚಟ್ನಿ

ಬೇಕಾಗುವ ಸಾಮಗ್ರಿಗಳು: ಒಣ ಸೀಗಡಿ– ಅರ್ಧ ಕಪ್, ಒಣಮೆಣಸು– 3, ಹುಣಸೆಹಣ್ಣು, ಬೆಳ್ಳುಳ್ಳಿ– 2, ಅರಿಸಿನ – ಅರ್ಧ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ತೆಂಗಿನತುರಿ– ಅರ್ಧ ಕಪ್

ತಯಾರಿಸುವ ವಿಧಾನ: ಮೊದಲು ಒಣ ಸೀಗಡಿಯನ್ನು ಸ್ವಲ್ಪ ಹುರಿಯಬೇಕು. ನೀರು ಹಾಕದೇ ಕೆಂಪು ಮೆಣಸು, ಸ್ವಲ್ಪ ಹುಣಸೆಹಣ್ಣು, ಬೆಳ್ಳುಳ್ಳಿ, ಅರಿಸಿನ, ಉಪ್ಪು, ತೆಂಗಿನತುರಿಯನ್ನು ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು. ಈ ಮಸಾಲೆಯನ್ನು ಒಂದು ಪಾತ್ರೆಗೆ ಹಾಕಿಟ್ಟುಕೊಂಡು ನಂತರ ಹುರಿದ ಸೀಗಡಿಯನ್ನು ಸೇರಿಸಿದರೆ, ಚಟ್ನಿ ತಯಾರಾಗುತ್ತದೆ.

ಕಪ್ಪು ಪಾಂಫ್ರೆಟ್ ಸಾರು

ಬೇಕಾಗುವ ಸಾಮಗ್ರಿಗಳು: ಕಪ್ಪು ಪಾಂಫ್ರೆಟ್ ಮೀನು – 500 ಗ್ರಾಂ, ಒಣಮೆಣಸು–12, ಕೊತ್ತಂಬರಿ–2 ಚಮಚ, ಜೀರಿಗೆ–ಅರ್ಧ ಚಮಚ, ಸಾಸಿವೆ– ಕಾಲು ಚಮಚ, ಓಮ– ಕಾಲು ಚಮಚ, ಮೆಂತ್ಯೆ– ಕಾಲು ಚಮಚ, ಈರುಳ್ಳಿ– ಎರಡು, ಹುಣಸೆಹಣ್ಣು– ಒಂದು ಲಿಂಬೆ ಗಾತ್ರದ್ದು, ಟೊಮೆಟೊ– 1, ಹಸಿಮೆಣಸು– 1, ಶುಂಠಿ– 1 ಇಂಚು, ಬೆಳ್ಳುಳ್ಳಿ– 6 ಎಸಳು

ತಯಾರಿಸುವ ವಿಧಾನ: ಒಣಮೆಣಸು, ಕೊತ್ತಂಬರಿ ಬೀಜ, ಜೀರಿಗೆ, ಸಾಸಿವೆ, ಮೆಂತ್ಯೆ, ಓಮ ಇವುಗಳನ್ನು ಎಣ್ಣೆ ಹಾಕದೇ ಹುರಿಯಬೇಕು. ಹುರಿದ ಸಾಮಗ್ರಿಗಳನ್ನು ನೀರು ಬೆರೆಸಿ ತೆಂಗಿನಕಾಯಿ, ಅರಿಸಿನ, ಹುಣಸೆಹಣ್ಣು, ಬೆಳ್ಳುಳ್ಳಿ, ಈರುಳ್ಳಿ ಸೇರಿಸಿ ಮಿಕ್ಸಿಯಲ್ಲಿ ಪೇಸ್ಟ್ ಮಾಡಿಕೊಳ್ಳಬೇಕು. ಬಾಣಲೆಗೆ ಮಸಾಲೆಯನ್ನು ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಬೇಕು. ನಂತರ ಟೊಮೆಟೊ, ಕತ್ತರಿಸಿದ ಈರುಳ್ಳಿ, ಹಸಿಮೆಣಸು, ಜಜ್ಜಿದ ಶುಂಠಿ ಸೇರಿಸಬೇಕು. ಸಾರು ಕುದಿ ಬರುವಾಗ ತೊಳೆದಿಟ್ಟ ಮೀನನ್ನು ಹಾಕಬೇಕು. ಎರಡು ನಿಮಿಷ ಜೋರಾದ ಉರಿಯಲ್ಲಿ ಮೀನನ್ನು ಬೇಯಿಸಬೇಕು. ನಂತರ ಸ್ಟೌ ಬಂದ್ ಮಾಡಿ, ಬಾಣಲೆಯ ಮುಚ್ಚಳವನ್ನು ಮುಚ್ಚಿಡಬೇಕು. ಹತ್ತು ನಿಮಿಷದ ನಂತರ ಮುಚ್ಚಳ ತೆಗೆದರೆ, ರುಚಿಯಾದ ಪಾಂಫ್ರೆಟ್ ಸಾರು ಸವಿಯಲು ಸಿದ್ಧವಾಗಿರುತ್ತದೆ.

ಪ್ರಜಾವಾಣಿ ನೋಡಿಯಾ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸ್ತ್ರೀಯರ ಲೈಂಗಿಕತೆಯ ಸ್ವರೂಪ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

• ಪತ್ನಿ ಒಂದೇ ಭಂಗಿಯಲ್ಲಿ ಲೈಂಗಿಕ ಕ್ರಿಯೆಯನ್ನು ಇಷ್ಟಪಡುತ್ತಾಳೆ. 2-3 ನಿಮಿಷಗಳಲ್ಲಿ ಅವಳಿಗೆ ತೃಪ್ತಿಯಾಗುತ್ತದೆ. ನಂತರ ಉತ್ಸಾಹ ಕಳೆದುಕೊಳ್ಳುತ್ತಾಳೆ. ಆದರೆ ದಿನದಲ್ಲಿ ಬಾರಿಬಾರಿ ಲೈಂಗಿಕ ತೃಪ್ತಿ ಬೇಕು ಎಂದು ಹಂಬಲಿಸುತ್ತಾಳೆ. ಅವಳಿಗೆ ಲೈಂಗಿಕ ತೃಪ್ತಿಯ ವೇಳೆಯನ್ನು ಹೆಚ್ಚಿಸಲು ಆಗುತ್ತಿಲ್ಲ. ಪರಿಹಾರ ತಿಳಿಸಿ.

ಬಸವರಾಜ್, ಧಾರವಾಡ

ಪ್ರಶ್ನೆ ಅಪೂರ್ಣವಾಗಿದೆ. ನಿಮ್ಮಿಬ್ಬರ ವಯಸ್ಸು ಇತ್ಯಾದಿ ವಿವರಗಳಿದ್ದರೆ ಸಹಾಯವಾಗುತ್ತಿತ್ತು. ಸಾಮಾನ್ಯವಾಗಿ ಸ್ತ್ರೀಯರು ಕಾಮಸುಖದ ಉತ್ತುಂಗವನ್ನು (ಭಾವಪ್ರಾಪ್ತಿ- ಆರ್ಗಸಮ್) ಒಮ್ಮೆ ತಲುಪಿದ ಮೇಲೆ ಅವರ ದೇಹ, ಮನಸ್ಸು ಪ್ರತಿಕ್ರಿಯೆ ಮುಂದುವರೆಸುವುದನ್ನು ಕಡಿಮೆ ಮಾಡುತ್ತವೆ. ಆದರೆ ಕಾಮಾಸಕ್ತಿ ಕಡಿಮೆಯಾಗಿರುತ್ತದೆ ಎಂದೇನಲ್ಲ. ಒಂದೇ ಕೂಟದಲ್ಲಿ ಸ್ತ್ರೀಯರಿಗೆ ಹಲವಾರು ಬಾರಿ ಭಾವಪ್ರಾಪ್ತಿಯಾಗುವ ಸಾಧ್ಯತೆಗಳಿರುತ್ತವೆ. ಆದರೆ ಎರಡು ಉತ್ತುಂಗಗಳ ನಡುವಿನ ಸಮಯ ಇಂತಿಷ್ಟೇ ಎಂದು ಹೇಳಲಾಗುವುದಿಲ್ಲ. ಪತ್ನಿಗೆ ತೃಪ್ತಿಯಾದ ಮೇಲೆಯೂ ನಿಮಗೆ ಸ್ಖಲನವಾಗಿರದಿದ್ದರೆ, ಸ್ವಲ್ಪ ನಿಧಾನಿಸಿ ಅಪ್ಪುಗೆ, ಚುಂಬನ, ಪ್ರೀತಿಯ ಮಾತುಗಳನ್ನು ಮುಂದುವರಿಸಿ. ಒಂದೆರಡು ನಿಮಿಷಗಳಲ್ಲಿ ಅವರ ಕಾಮಾಸಕ್ತಿ ಮತ್ತೆ ಮರಳುವ ಸಾಧ್ಯತೆಗಳಿರುತ್ತವೆ. ಹೀಗೆ ಒಂದೇ ಕೂಟದಲ್ಲಿ ಅವರು ಪೂರ್ಣ ತೃಪ್ತರಾಗಬಹುದು. ನೀವು ಇತ್ತೀಚೆಗೆ ಮದುವೆಯಾಗಿದ್ದರೆ ಒಂದೇ ದಿನದಲ್ಲಿ ಮತ್ತೆಮತ್ತೆ ಸೇರಬೇಕೆನ್ನುವ ಕಾಮಾಸಕ್ತಿ ಸಹಜವಾದದ್ದು. ನಿಮ್ಮನ್ನು ಹತ್ತಿರ ಕರೆಯುವುದು ಕೇವಲ ಕೂಟದ ಆಹ್ವಾನವಾಗಿರದೆ ಒಡನಾಟದ ಬೇಡಿಕೆಯೂ ಇರಬಹುದು. ಹಾಗಾಗಿ ಇಬ್ಬರೂ ಸರಸವಾಗಿ ಕಳೆಯುವ ಸಮಯವನ್ನು ಸಾಧ್ಯವಿರುವಷ್ಟು ಹೆಚ್ಚುಮಾಡಿ.

• ವಯಸ್ಸು 24. ಮೊದಲಿನಿಂದ ಸಾಮಾನ್ಯ ವಿದ್ಯಾರ್ಥಿ. ಎಂಎಸ್‌ಸಿ ಓದುತ್ತಿದ್ದೇನೆ. ಉತ್ತಮ ಅಂಕಗಳನ್ನು ಪಡೆಯುತ್ತಿದ್ದರೂ ಆತ್ಮವಿಶ್ವಾಸದ ಕೊರತೆಯಿದೆ. ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳುವ ಮೊದಲು ನನ್ನಿಂದ ಸಾಧ್ಯವೇ ಎಂದು ಅನುಮಾನಿಸುತ್ತೇನೆ. ಮಧ್ಯೆ ಸ್ವಲ್ಪ ಹೆಚ್ಚುಕಡಿಮೆಯಾದರೂ ಭಯವಾಗುತ್ತದೆ. ಸರ್ಕಾರಿ ನೌಕರಿಗೆ ಸೇರಲು ಬಯಸುತ್ತೇನೆ. ಭಯದಿಂದ ಓದಲಾಗುತ್ತಿಲ್ಲ. ಇಲ್ಲಿಯವರೆಗೆ ಅದೃಷ್ಟದಿಂದ ಮೇಲೆ ಬಂದಿದ್ದೇನೆ, ಇನ್ನು ಸಾಧ್ಯವಿಲ್ಲವೆನಿಸುತ್ತದೆ. ಪರಿಹಾರವೇನು?

ಮಾನಸ, ಊರಿನ ಹೆಸರಿಲ್ಲ.

‘ನಾನು ಸಾಮಾನ್ಯ ವಿದ್ಯಾರ್ಥಿ, ನನ್ನ ಎಲ್ಲಾ ಸಾಧನೆಗಳೂ ಆಕಸ್ಮಿಕ, ಅದೃಷ್ಟ’ ಎಂದು ಹೇಳುತ್ತಿದ್ದೀರಿ. ನಿಮ್ಮ ಬಗೆಗೆ ನೀವೇ ಬಹಳ ಕೆಟ್ಟದಾಗಿ ಯೋಚಿಸುತ್ತಿದ್ದೀರಲ್ಲವೇ? ಏನನ್ನಾದರೂ ಸಾಧಿಸಿದವರಿಗೆಲ್ಲಾ ಆತ್ಮವಿಶ್ವಾಸವಿರುತ್ತದೆ ಅಥವಾ ಆತ್ಮವಿಶ್ವಾಸವಿದ್ದರೆ ಮಾತ್ರ ಏನನ್ನಾದರೂ ಸಾಧಿಸಬಹುದು ಎನ್ನುವುದು ಎಲ್ಲರ ತಪ್ಪುಕಲ್ಪನೆ. ಆತ್ಮವಿಶ್ವಾಸವೆಂಬ ಸಿದ್ಧವಸ್ತು ಎಲ್ಲಿದೆ? ಹಿಂಜರಿಕೆ, ಸೋಲುಗಳನ್ನು ಸಹಜವೆಂದು ಒಪ್ಪಿಕೊಂಡು ಪ್ರಯತ್ನವನ್ನು ಮುಂದುವರಿಸುತ್ತಾ ಹೋದರೆ ಆತ್ಮವಿಶ್ವಾಸ ತಾನಾಗಿಯೇ ಮೂಡುತ್ತದೆ. ಅದೃಷ್ಟವೆಂದರೆ ಏನು, ಎಲ್ಲಿ ಸಿಗುತ್ತದೆ ಎನ್ನುವುದು ಯಾರಿಗಾದರೂ ಗೊತ್ತಿದೆಯೇ? ನಮ್ಮ ಹಿಡಿತದಲ್ಲಿಲ್ಲದ ಅದರ ಕುರಿತು ಯೋಚಿಸಿದರೆ ನಮಗೇನು ಪ್ರಯೋಜನ? ನಿಮಗೆ ಆತ್ಮವಿಶ್ವಾಸದ ಕೊರತೆಯಿಲ್ಲ, ಆತ್ಮಗೌರವದ ಕೊರತೆಯಿದೆ. ಇಲ್ಲಿಯವರೆಗಿನ ಸಾಧನೆಗಳು ನಿಮ್ಮದೇ ಪ್ರಯತ್ನದ ಫಲ ಎಂದುಕೊಂಡರೆ ಏನಾಗಬಹುದು ಗೊತ್ತೇ? ಸಾಧನೆಗಳಿಗೆ ಖುಷಿಪಡುತ್ತೀರಿ. ಹಾಗೆಯೇ ಸೋಲುಗಳೂ ನಿಮ್ಮವೇ ಎಂದುಕೊಂಡರೆ ಅದರ ಜವಾಬ್ದಾರಿ ಹೊರುತ್ತೀರಿ. ಸೋಲುಗಳನ್ನು ಜೀರ್ಣಿಸಿಕೊಂಡು ಪ್ರಯತ್ನವನ್ನು ಮುಂದುವರಿಸಿ. ಅಲ್ಲಿಂದ ಬದಲಾವಣೆಗಳು ಪ್ರಾರಂಭವಾಗುತ್ತವೆ.

• 21ರ ಯುವಕ. ಅಕ್ಷರಗಳಾದ ಲ ಮತ್ತು ಳ ಗಳನ್ನು ಒಂದೇ ರೀತಿಯಾಗಿ ಉಚ್ಚರಿಸುತ್ತೇನೆ. ಯಾರ ಜೊತೆಗಾದರೂ ಮಾತನಾಡುವಾಗ ಹಿಂಸೆಯಾಗುತ್ತದೆ. ಇದರಿಂದಾ ತುಂಬಾ ನೊಂದಿದ್ದೇನೆ. ಪರಿಹಾರವೇನು?

ಊರು, ಹೆಸರು ಇಲ್ಲ.

ನಿಮ್ಮ ಸಮಸ್ಯೆ ಹುಟ್ಟಿನಿಂದಲೇ ಬಂದಿರಬಹುದು ಅಥವಾ ಬಾಲ್ಯದ ಕಲಿಕೆಯಲ್ಲಿನ ತೊಂದರೆಯಿರಬಹುದು. ಇದನ್ನು ತಿಳಿಯಲು ವಾಕ್‌ಶ್ರವಣ ತಜ್ಞರನ್ನು ಸಂಪರ್ಕಿಸಬೇಕು. ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅವರ ಸೇವೆ ಲಭ್ಯವಿರಬಹುದು. ಸಾಧ್ಯವಿದ್ದರೆ ಮೈಸೂರಿನ ವಾಕ್‌ಶ್ರವಣ ಸಂಸ್ಥೆಗೆ ಭೇಟಿಕೊಡಿ. ಹಾಗೊಮ್ಮೆ ಹುಟ್ಟಿನಿಂದ ಬಂದಿರುವ ತೊಂದರೆಯಾಗಿದ್ದರೆ ಅದು ನಿಮ್ಮ ಮಿತಿಯೆಂದು ಒಪ್ಪಿಕೊಳ್ಳಲೇಬೇಕು. ಈ ಮಿತಿಯೊಂದೇ ನಿಮ್ಮ ವ್ಯಕ್ತಿತ್ವದ ಗುರುತಾಗಿರಲು ಸಾಧ್ಯವೇ? ನಿಮ್ಮೊಳಗಿರುವ ಇತರ ಪ್ರತಿಭೆ, ಸದ್ಗುಣಗಳು ಮತ್ತು ಸಿಗುವ ಅವಕಾಶಗಳನ್ನು ಬಳಸಿಕೊಂಡು ಈ ಮಿತಿಯನ್ನು ಮೀರಲು ಸಾಧ್ಯವಿದೆ. ಅಗತ್ಯವಿದ್ದರೆ ಮನೋಚಿಕಿತ್ಸಕರನ್ನು ಭೇಟಿಯಾಗಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. ***bhoomika@prajavani.co.in***

‘ಉಬುಂಟು’ ಕೂಡಿ ನಡೆದರೆ ಹಿತವುಂಟು

ಸಮ್ಮೇಳನದಲ್ಲಿ ಉಬುಂಟು ಸದಸ್ಯೆಯರು

ಎಂ. ನವೀನ್ ಕುಮಾರ್

ಸಮಷ್ಟಿ ಪ್ರಜ್ಞೆ ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಮೌಲ್ಯ; ಪ್ರತಿಯೊಬ್ಬರ ಉನ್ನತಿಯ ಚಿಂತನೆ ಇದರ ಸಾರ. ಇದೇ ಪರಿಕಲ್ಪನೆಯಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಉದ್ಯಮಿಗಳು, ಕೈಗಾರಿಕೋದ್ಯಮಿಗಳ ಒಕ್ಕೂಟವೇ ‘ಉಬುಂಟು’. ಉದ್ಯಮ, ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಬರಲು ಇಚ್ಛಿಸುವ ಮಹಿಳೆಯರಿಗೆ ಪ್ರೇರಣೆ, ಮಾರ್ಗದರ್ಶನ ನೀಡುವುದು, ಅದಾಗಲೇ ಈ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ– ವಹಿವಾಟಿನ ಹೊಸ ಅವಕಾಶಗಳ ಬಗ್ಗೆ ಮಾಹಿತಿ ನೀಡುವುದು ಮುಖ್ಯ ಉದ್ದೇಶ. ಕೋವಿಡ್ ಸಂಕಷ್ಟದ ಕಾಲದಲ್ಲಿ ‘ಉಬುಂಟು’ ಮಹಿಳಾ ಉದ್ಯಮಿಗಳ ಬೆನ್ನೆಲುಬಾಗಿ ನಿಂತು ಕೆಲಸ ಮಾಡಿದೆ. ವ್ಯಾಪಾರ– ವಹಿವಾಟು ಸಂಪೂರ್ಣ ಸ್ತಬ್ಧವಾಗಿದ್ದ ಸಂದರ್ಭದಲ್ಲಿ ಆನ್‌ಲೈನ್ ಮಾರಾಟ ವ್ಯವಸ್ಥೆಯನ್ನು ರೂಪಿಸಿ ಯಶಸ್ಸು ಕಂಡಿದೆ.

‘ಉಬುಂಟು’ ಆಫ್ರಿಕಾ ದೇಶದ ಸಣ್ಣ ಕಥೆಯೊಂದರಲ್ಲಿ ಬರುವ ನೀತಿಪಾಠ. ‘ಅವರಿಂದಲೇ ನಾನು’, ‘ನಾವೆಲ್ಲರೂ ಇರುವುದರಿಂದಲೇ ನಾನು’ ಇದರ ತಿರುಳು. ಕರ್ನಾಟಕ, ಆಂಧ್ರಪ್ರದೇಶ, ಗೋವಾ, ತೆಲಂಗಾಣ, ಮಧ್ಯಪ್ರದೇಶದ ಮಹಿಳಾ ಉದ್ಯಮಿಗಳ ಸಂಘಟನೆಗಳನ್ನು ಒಂದುಗೂಡಿಸಿ ಒಕ್ಕೂಟ ರಚಿಸಲಾಗಿದೆ. ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಒಕ್ಕೂಟವನ್ನು ಮುನ್ನಡೆಸುತ್ತಿದ್ದಾರೆ.

ರತ್ನಪ್ರಭಾ ಅವರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ (2014–19) ಸಂದರ್ಭದಲ್ಲಿ ಇಂತಹ ಒಂದು ಚಿಂತನೆ ಮೊಳಕೆಯೊಡೆಯಿತು. ಮಹಿಳಾ ಉದ್ಯಮಿಗಳಿಗಾಗಿ ಪ್ರತ್ಯೇಕ ಕೈಗಾರಿಕಾ ನೀತಿ ಇರಲಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರ ನೀತಿಯಲ್ಲಿಯೇ ಮಹಿಳೆಯರನ್ನೂ ಸೇರಿಸಲಾಗಿತ್ತು. ಇದನ್ನು ಮನಗಂಡ ಅವರು ಮಹಿಳೆಯರಿಗೆ 2014–19ರ ಕೈಗಾರಿಕಾ ನೀತಿಯಲ್ಲಿ ಮಹಿಳಾ ಕೈಗಾರಿಕಾ ನೀತಿಯನ್ನು ರೂಪಿಸಿದರು. 2015ರಲ್ಲಿ ಆರಂಭವಾಗಿದ್ದ ಉಬುಂಟು ಸಂಘಟನೆಯನ್ನು 2019ರಲ್ಲಿ ನೋಂದಣಿ ಮಾಡಲಾಯಿತು. ಅಂದಿನಿಂದ ಅಧಿಕೃತವಾಗಿ ಚಟುವಟಿಕೆಯನ್ನು ಆರಂಭಿಸಿತು. 24 ಸಂಘಟನೆಗಳ ಸುಮಾರು 13 ಸಾವಿರ ಸದಸ್ಯೆಯರಿದ್ದಾರೆ.

ಉದ್ದೇಶ: ಉದ್ಯಮ, ಕೈಗಾರಿಕೆಗೆ ಸಂಬಂಧಿಸಿದ ಮಹಿಳಾ ಸಂಘಟನೆಗಳನ್ನು ಬಲಪಡಿಸುವುದು, ಅವರ ವ್ಯಾಪಾರ– ವಹಿವಾಟು ಸಂಪರ್ಕಗಳನ್ನು ವೃದ್ಧಿಸುವುದು, ಹೊಸ ವ್ಯಾಪಾರ ಅವಕಾಶಗಳನ್ನು ತೆರೆದಿಡುವುದು. ಆರ್ಥಿಕ ಸಹಾಯ ನೀಡುವುದು ಹಾಗೂ ಸಂಘಟನೆಯ ಸದಸ್ಯರನ್ನು ಬಲಗೊಳಿಸುವುದು.

ಕೋವಿಡ್ ಸಂಕಷ್ಟದಲ್ಲಿ ನೆರವು: ವಿಶ್ವವನ್ನೇ ಆವರಿಸಿದ್ದ ಕೋವಿಡ್ ಸಂಕಷ್ಟದ ಕಾಲದಲ್ಲಿ ಒಕ್ಕೂಟದ ಸದಸ್ಯರಿಗೆ ನೆರವು ನೀಡಿದೆ. ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಹಾಗೂ ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟಲ್ ಪ್ರೋಗ್ರಾಮ್ಸ್ (ಯುಎನ್‌ಡಿಪಿ) ಸಹಯೋಗದಲ್ಲಿ ಸಹಾಯ ಕೇಂದ್ರವನ್ನು ಆರಂಭಿಸಿತ್ತು. 100 ಮಂದಿಗೆ ಆನ್‌ಲೈನ್ ಮಾರುಕಟ್ಟೆ ತರಬೇತಿ ನೀಡಲಾಯಿತು. ಉತ್ಪನ್ನಗಳನ್ನು ಆನ್‌ಲೈನ್ ವೇದಿಕೆಯಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಿತು.

ಉಬುಂಟು ಪ್ರಯತ್ನದ ಫಲವಾಗಿ ರಾಜ್ಯದ ಐದು ಜಿಲ್ಲೆಗಳಲ್ಲಿ ‘ಮಹಿಳಾ ಉದ್ಯಮಿಗಳ ಪಾರ್ಕ್’ ಆರಂಭಿಸಲಾಗಿದೆ. ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ ನೂತನ ತಂತ್ರಜ್ಞಾನದ ಪರಿಚಯ ಮಾಡಿಕೊಡಲಾಗುತ್ತಿದೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರದರ್ಶನ ಮೇಳಗಳಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಆ ಮೂಲಕ ಮಾರುಕಟ್ಟೆ ಕಂಡುಕೊಳ್ಳಲು ಅನುಕೂಲ ಕಲ್ಪಿಸಲಾಗುತ್ತಿದೆ.

‘ಹತ್ತಾರು ಮಹಿಳಾ ಉದ್ಯಮಿಗಳ ಸಂಘಟನೆಗಳು ಇವೆ. ಆದರೆ, ಅವರು ನೇರವಾಗಿ ಸರ್ಕಾರವನ್ನು ಸಂಪರ್ಕಿಸಲು ತಮ್ಮ ಬೇಡಿಕೆ ಮುಂದಿಡುವುದು ಕಷ್ಟಸಾಧ್ಯ. ಅದೇ ಒಕ್ಕೂಟ ಇದ್ದಾಗ ಸಂಪರ್ಕ ಸಾಧಿಸುವುದು ಸುಲಭ. ಇದರಿಂದ ಸಾಕಷ್ಟು ಲಾಭವಾಗಿದೆ’ ಎನ್ನುತ್ತಾರೆ ಉಬುಂಟು ಸಂಸ್ಥಾಪಕ ಅಧ್ಯಕ್ಷೆ ರತ್ನಪ್ರಭಾ.

‘ಒಂದು ಉದ್ಯಮಕ್ಕೆ ಬೇಕಾಗಿರುವ ಕಚ್ಚಾ ವಸ್ತುವನ್ನು ಒಕ್ಕೂಟದಲ್ಲೇ ಇರುವ ಇನ್ನೊಂದು ಉದ್ಯಮದಿಂದ ಖರೀದಿಸಬಹುದು’ ಎಂದು ಅವರು ಹೇಳುತ್ತಾರೆ.

ಬಹಳಷ್ಟು ಅನುಕೂಲವಾಗಿದೆ: ‘ಉಡುಪಿಯಂತಹ ಎರಡನೇ ಹಂತದ ನಗರಗಳಲ್ಲಿ ಇರುವ ಮಹಿಳಾ ಉದ್ಯಮಿಗಳು ಹಾಗೂ ಸಂಘಟನೆಗಳಿಗೆ ಉಬುಂಟು ವರದಾನವಾಗಿದೆ. ಸರ್ಕಾರ, ವಿವಿಧ ಇಲಾಖೆಗಳೊಂದಿಗೆ ನೇರವಾಗಿ ಸಂಪರ್ಕ ಸಾಧಿಸಲು ಸಾಧ್ಯವಾಗಿದೆ’ ಎನ್ನುತ್ತಾರೆ ಉಡುಪಿಯ ಪವರ್ ಮಹಿಳಾ ಉದ್ಯಮಿಗಳ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷೆ ರೇಣು ಜಯರಾಮ್.

‘ಕೋವಿಡ್ ಸಮಯದಲ್ಲಿ ಉಬುಂಟು ವರ್ಚುವಲ್ ಸೆಮಿನಾರ್, ಸಂವಾದ ಏರ್ಪಡಿಸಿ ನಮ್ಮ ಸಮಸ್ಯೆಗಳನ್ನು ಕೇಳಿ, ಅದಕ್ಕೆ ಪರಿಹಾರ ನೀಡಿದೆ. ನಮ್ಮ ಉತ್ಪನ್ನಗಳನ್ನು ಅಮೆಜಾನ್, ಫ್ಲಿಪ್‌ಕಾರ್ಟ್ ಮೂಲಕ ಮಾರುಕಟ್ಟೆ ಮಾಡಲು ಸಾಧ್ಯವಾಗಿದೆ’ ಎನ್ನುತ್ತಾರೆ ಅವರು.

ಸುಭಾಷಿತ

ಜನ ಏನು ಹೇಳುತ್ತಾರೆ ಎಂಬುದರ ಬಗ್ಗೆ ನಾನು ಹೆಚ್ಚು ಗಮನಹರಿಸುವುದಿಲ್ಲ. ಅವರು ಏನು ಮಾಡುತ್ತಾರೆ ಎಂಬುದನ್ನು ಗಮನಿಸುತ್ತೇನೆ. ನಡತೆ ಎಂದಿಗೂ ಸುಳ್ಳು ಹೇಳುವುದಿಲ್ಲ.

–ವಿನ್‌ಸ್ಟನ್ ಚರ್ಚಿಲ್

ತುರಹಳ್ಳಿ ಕಿರು ಅರಣ್ಯಕ್ಕೆ ಶಾಶ್ವತ ರಕ್ಷಣೆ ಒದಗಿಸಿ

ಬೆಂಗಳೂರು ನಗರ ಬೆಳೆಯುತ್ತಾ ಹೋದಂತೆ ಅದರ ನೈಸರ್ಗಿಕ ಪರಿಸರದ ಮೇಲೆ ಒತ್ತಡ ಹೆಚ್ಚುತ್ತಲೇ ಇದೆ. ಇದರ ನಡುವೆಯೂ ತುರಹಳ್ಳಿ ಕಿರು ಅರಣ್ಯವು ನಗರದ 'ಆಮ್ಲಜನಕ' ಕಾರ್ಖಾನೆಯ ರೀತಿ ಕೆಲಸ ನಿರ್ವಹಿಸುತ್ತಾ ಬಂದಿದೆ. ಮಹಾನಗರದ ಸೆರಗಿನಲ್ಲೇ ಇರುವ ಈ ಕಾಡು ಈಗಲೂ ಹಲವು ವನ್ಯಜೀವಿಗಳಿಗೆ ನೆಲೆ ಒದಗಿಸುತ್ತಿದೆ. 597 ಎಕರೆಗಳಷ್ಟು ವಿಶಾಲವಾಗಿರುವ ತುರಹಳ್ಳಿ ಕಿರು ಅರಣ್ಯದಲ್ಲಿ ಜಿಂಕೆ, ಹಂದಿ, ಮುಂಗುಸಿ ಮುಂತಾದ ಸಸ್ತನಿಗಳಲ್ಲದೇ ನೂರಕ್ಕೂ ಹೆಚ್ಚು ಪ್ರಭೇದಗಳ ಪಕ್ಷಿಗಳು, 250 ಬಗೆಯ ಕ್ರಿಮಿ-ಕೀಟಗಳು, 25 ಬಗೆಯ ಸರೀಸೃಪಗಳಿರುವುದನ್ನು ಪರಿಸರತಜ್ಞರು ಗುರುತಿಸಿದ್ದಾರೆ. ಈ ಕಿರು ಅರಣ್ಯಕ್ಕೆ ಸೇರಿದ 40 ಎಕರೆ ಪ್ರದೇಶದಲ್ಲಿ ಅರಣ್ಯ ಇಲಾಖೆ ಈಗಾಗಲೇ ಒಂದು ವೃಕ್ಷೋದ್ಯಾನವನ್ನು ಅಭಿವೃದ್ಧಿಪಡಿಸಿದೆ. ಆದಾಗ್ಯೂ, ನಗರದ ಹೊರವಲಯಗಳಲ್ಲಿ 400 ಎಕರೆಗೂ ಹೆಚ್ಚು ವಿಸ್ತೀರ್ಣದಲ್ಲಿ ವೃಕ್ಷೋದ್ಯಾನ ಅಭಿವೃದ್ಧಿಪಡಿಸುವ ಯೋಜನೆಗೆ ಸರ್ಕಾರವು ತುರಹಳ್ಳಿ ಕಿರು ಅರಣ್ಯವನ್ನೇ ಆಯ್ಕೆ ಮಾಡಿಕೊಂಡಿದೆ. ನೈಸರ್ಗಿಕ ಕಾಡನ್ನು ಕಡಿದು ಅಲ್ಲಿ ಮತ್ತೆ ಮರಗಳನ್ನು ಬೆಳೆಸುವುದರ ಹಿಂದಿನ ತರ್ಕವೇನು ಎಂಬುದು ಯಕ್ಷಪ್ರಶ್ನೆ. 'ನೈಸ್' ರಸ್ತೆ ಕಾಮಗಾರಿಯಿಂದಾಗಿ ಈ ಕಿರು ಅರಣ್ಯ ಈಗಾಗಲೇ ಎರಡು ಹೋಳಾಗಿದೆ. ಇದರಿಂದ ವನ್ಯಜೀವಿಗಳ ಸಹಜ ಬದುಕಿನ ಮೇಲೆ ಬಹಳಷ್ಟು ದುಷ್ಪರಿಣಾಮ ಉಂಟಾಗಿದೆ. ವಾಹನಗಳು ಡಿಕ್ಕಿ ಹೊಡೆದು ಪ್ರತಿವರ್ಷವೂ ಹಾವುಗಳು, ಜಿಂಕೆಗಳು ಸಾಯುವುದು ವರದಿಯಾಗುತ್ತಲೇ ಇದೆ. ಕಾಡಿನ ಅಂಚಿನಲ್ಲಿ ಮನೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು ಸಹ ನಿರ್ಮಾಣವಾಗಿದ್ದು, ಅಲ್ಲಿ ಮನುಷ್ಯನ ಹಸ್ತಕ್ಷೇಪ ಹೆಚ್ಚಿದೆ. ಈ ಕಾಡಿನಲ್ಲಿ ಕಳ್ಳಬೇಟೆ ನಡೆಯುತ್ತಿರುವ ದೂರುಗಳೂ ಇವೆ. ಅಲ್ಲಿ ವೃಕ್ಷೋದ್ಯಾನ ನಿರ್ಮಿಸಿ ಮತ್ತಷ್ಟು ಮಾನವ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿದರೆ ವನ್ಯಜೀವಿಗಳ ಪರಿಸ್ಥಿತಿ ಏನಾಗಬೇಡ?

ನಿಸರ್ಗದತ್ತವಾದ ಈ ಕಾಡಿನಲ್ಲಿ ವೃಕ್ಷೋದ್ಯಾನ ನಿರ್ಮಿಸುವ ಉದ್ದೇಶದ ಯೋಜನೆಯನ್ನು ಶಾಶ್ವತವಾಗಿ ಕೈಬಿಡಬೇಕು

ಅರಣ್ಯ ಇಲಾಖೆಯು ಬೆಂಗಳೂರು ನಗರ ವಿಭಾಗಕ್ಕೆ 2013ರಿಂದ 2023ರವರೆಗೆ ಕಾರ್ಯ ಯೋಜನೆಯೊಂದನ್ನು ರೂಪಿಸಿದೆ. 30 ಡಿಗ್ರಿಗಿಂತ ಹೆಚ್ಚಿನ ಇಳಿಜಾರು ಇರುವ ಕಡೆ ಯಾವುದೇ ಮರಗಳನ್ನು ಕಡಿಯುವುದಕ್ಕೆ ಅವಕಾಶ ನೀಡಬಾರದು, ತೊರೆಗಳ ಅಕ್ಕಪಕ್ಕದಲ್ಲಿ 30 ಮೀಟರ್‌ಗಿಂತ ಹೆಚ್ಚು ಎತ್ತರಕ್ಕೆ ಬೆಳೆದ ಯಾವುದೇ ಮರವನ್ನು ಕಡಿಯುವುದಕ್ಕೆ ಪರವಾನಗಿ ನೀಡಬಾರದು ಎಂಬ ಅಂಶಗಳು ಇದರಲ್ಲಿವೆ. ಇಳಿಜಾರುಗಳಿಂದ ಕೂಡಿದ ಈ ಕಿರು ಅರಣ್ಯ ಪ್ರದೇಶದಲ್ಲಿ ಯಾವುದೇ ಮರ ಕಡಿಯಲು ಅವಕಾಶ ಇಲ್ಲ ಎನ್ನುವುದು ಅರಣ್ಯ ಇಲಾಖೆಗೆ ಗೊತ್ತಿಲ್ಲದ ಸಂಗತಿ ಏನಲ್ಲ. ಕೋವಿಡ್ ನಿಯಂತ್ರಣಕ್ಕೆ ಲಾಕ್‌ಡೌನ್ ಜಾರಿಗೊಳಿಸಿದಾಗ ಬೆಂಗಳೂರಿನ ಮಲ್ಲೇಶ್ವರ, ಜಯನಗರದಂತಹ ಪ್ರದೇಶಗಳಲ್ಲೂ ನವಿಲುಗಳು ಕಾಣಿಸಿಕೊಂಡಿವೆ. ಕೆಲವೆಡೆ ಜಿಂಕೆಗಳೂ ಕಾಣಿಸಿಕೊಂಡಿದ್ದವು. ಮನುಷ್ಯನ ಹಸ್ತಕ್ಷೇಪ ಇಲ್ಲದೇ ಹೋದರೆ ವನ್ಯಜೀವಿಗಳು ಮತ್ತೆ ನಿರ್ಭೀತಿಯಿಂದ ಓಡಾಡಬಲ್ಲವು ಎಂಬುದಕ್ಕೆ ಇದೇ ಪುರಾವೆ. ತುರಹಳ್ಳಿ ಕಿರು ಅರಣ್ಯದಲ್ಲಿ ವೃಕ್ಷೋದ್ಯಾನ ನಿರ್ಮಿಸುವುದರ ವಿರುದ್ಧ ಸಾರ್ವಜನಿಕರು ಹಾಗೂ ಪರಿಸರ ಕಾರ್ಯಕರ್ತರು ದೊಡ್ಡ ಮಟ್ಟದಲ್ಲಿ ಧ್ವನಿ ಎತ್ತಿದ ಬಳಿಕ ಅರಣ್ಯ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರ ಅಹವಾಲು ಆಲಿಸಿದ್ದಾರೆ. ಈ ಯೋಜನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಭರವಸೆ ನೀಡಿದ್ದಾರೆ. ಆದರೆ, ಈ ಯೋಜನೆಯನ್ನು ಶಾಶ್ವತವಾಗಿಯೇ ಕೈಬಿಡುವ ಅಗತ್ಯವಿದೆ. ಈ ಕಾಡಿನಲ್ಲಿ ಮುಂದೆಯೂ ಮಾನವ ಚಟುವಟಿಕೆಗೆ ಅವಕಾಶ ಕಲ್ಪಿಸಬಾರದು. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು 2002ರ ಜೀವವೈವಿಧ್ಯ ಸಂರಕ್ಷಣೆ ಕಾಯ್ದೆ ಪ್ರಕಾರ ಅರಣ್ಯಗಳನ್ನು ರಕ್ಷಿಸುವ ಹೊಣೆ ಸರ್ಕಾರದ್ದು. ತುರಹಳ್ಳಿ ಕಿರು ಅರಣ್ಯದ ಪಾಲಿಗೆ ಸರ್ಕಾರವೇ ಖಳನಾಗುವುದು ಬೇಡ. ಕಾಡುಗಳು ಸರ್ಕಾರದ ಸ್ವತ್ತಾದರೂ ಅದರ ನಿಜವಾದ ವಾರಸುದಾರರು ಜನರೇ ಆಗಿದ್ದಾರೆ. ತುರಹಳ್ಳಿಯಂತಹ ಕಿರು ಅರಣ್ಯ ಈಗಲೂ ಉಳಿದಿದೆಯೆಂದರೆ ಅದರಲ್ಲಿ ಜನರ ಹಾಗೂ ಪರಿಸರ ಕಾರ್ಯಕರ್ತರ ನಿರಂತರ ಪ್ರಯತ್ನವೂ ಅಡಗಿದೆ ಎಂಬುದು ಸ್ಫಟಿಕ ಸ್ಪಷ್ಟ. ವೃಕ್ಷೋದ್ಯಾನಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ತೋಟಗಾರಿಕಾ ಇಲಾಖೆಗೆ ಬಿಟ್ಟು, ನಶಿಸುತ್ತಿರುವ ಕಾಡುಗಳನ್ನು ಕಾಪಾಡುವುದಕ್ಕೆ ಅರಣ್ಯ ಇಲಾಖೆ ಹೆಚ್ಚಿನ ಗಮನ ವಹಿಸುವುದು ಒಳ್ಳೆಯದು. ಅಭಿವೃದ್ಧಿ ಚಿಂತನೆಗಳು ಮನುಷ್ಯ ಕೇಂದ್ರಿತವಾಗಿದ್ದರೆ ಸಾಲದು. ಅಳಿದುಳಿದ ವನ್ಯಜೀವಿಗಳ ರಕ್ಷಣೆ ಬಗ್ಗೆಯೂ ಸರ್ಕಾರ ಕಾಳಜಿ ವಹಿಸಬೇಕು.

ದಿನದ ಟ್ವೀಟ್

ಕ್ರೀಡೆ ರಕ್ತಗತವಲ್ಲ

ಕ್ರಿಕೆಟ್ ಆಡುವ ಕೌಶಲವು ರಕ್ತಗತವಾಗಿ ಬರುವುದಿಲ್ಲ. ಈ ಮಾತನ್ನು ನಾನು ಅರ್ಜುನ್ ತೆಂಡೂಲ್ಕರ್ ಅವರನ್ನು ಸಮರ್ಥಿಸುವ ನೆಲೆಯಲ್ಲಿ ಹೇಳುತ್ತಿದ್ದೇನೆ. ಮುಂಬೈ ಇಂಡಿಯನ್ಸ್‌ನಂತಹ ಖಾಸಗಿ ಫ್ರ್ಯಾಂಚೈಸಿಯು ಅವರನ್ನು ಆಯ್ಕೆ ಮಾಡಿಕೊಂಡಿರಬಹುದು. ಆದರೆ ಅಂತಿಮವಾಗಿ ಅವರು ಮೈದಾನದಲ್ಲೇ ತಮ್ಮ ಸಾಮರ್ಥ್ಯ ಸಾಬೀತುಪಡಿಸಬೇಕು. ಕ್ರೀಡೆಯಲ್ಲಿ ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿಲ್ಲ: ಉನ್ನತ ಮಟ್ಟದಲ್ಲಿ ಪ್ರತಿಭೆಯೊಂದೇ ಮುಖ್ಯವಾಗುತ್ತದೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 20-2-1996

• ಖಾಸಗಿಗೆ ಟೆಲಿಕಾಂ– ಸುಪ್ರೀಂ ಕೋರ್ಟ್ ಅಸ್ತು

ನವದೆಹಲಿ, ಫೆ. 19 (ಯುಎನ್‌ಐ, ಪಿಟಿಐ)– ಸುಪ್ರೀಂ ಕೋರ್ಟ್ ಇಂದು ಮೂಲ ದೂರಸಂಪರ್ಕ ಸೇವೆಯನ್ನು ರಾಷ್ಟ್ರದಲ್ಲಿ ಖಾಸಗೀಕರಣಗೊಳಿಸುವ ಕೇಂದ್ರದ ನೀತಿಯನ್ನು ಎತ್ತಿ ಹಿಡಿದಿದೆ.

ದೂರಸಂಪರ್ಕ ಸೇವೆಯ ಖಾಸಗೀಕರಣವನ್ನು ಪ್ರಶ್ನಿಸಿ ದೆಹಲಿ ವಿಜ್ಞಾನ ವೇದಿಕೆ, ನಾಗರಿಕ ಹಕ್ಕುಗಳ ಸಂಘಟನೆ, ನೀಲ್ಲೋಲ ಬಾಸು ಅವರ ನೇತೃತ್ವದಲ್ಲಿ ರಾಜ್ಯಸಭಾ ಸದಸ್ಯರು ಹಾಗೂ ಇತರರ ಅರ್ಜಿಗಳನ್ನು ನ್ಯಾಯಾಲಯ ವಜಾ ಮಾಡಿದೆ.

'ಇದು ಸತ್ಯಕ್ಕೆ ಸಂದ ದೊಡ್ಡ ಜಯ' ಎಂದು ತೀರ್ಪಿಗೆ ಪ್ರತಿಕ್ರಿಯೆ ನೀಡಿದ ದೂರಸಂಪರ್ಕ ಖಾತೆಯ ಸಚಿವ ಸುಖರಾಂ ಅವರು, ಖಾಸಗಿಯವರಿಗೆ ಪರವಾನಗಿ ನೀಡುವುದನ್ನು ಸರ್ಕಾರ ನಾಳೆಯಿಂದಲೇ ಮುಂದುವರಿಸಲಿದೆ ಎಂದರು.

• ರಾಜ್ಯಸಭೆಗೆ ಕೃಷ್ಣ, ಹೆಗಡೆ, ಇಬ್ರಾಹಿಂ, ಲೀಲಾದೇವಿ ಆಯ್ಕೆ

ಬೆಂಗಳೂರು, ಫೆ. 19– ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇಂದು ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ಕಾಂಗ್ರೆಸ್(ಐ)ನ ಎಸ್.ಎಂ. ಕೃಷ್ಣ, ಜನತಾದಳದ ರಾಮಕೃಷ್ಣ ಹೆಗಡೆ, ಸಿ.ಎಂ.ಇಬ್ರಾಹಿಂ ಮತ್ತು ಲೀಲಾದೇವಿ ಆರ್. ಪ್ರಸಾದ್ ಅವರು ಚುನಾಯಿತರಾಗಿದ್ದಾರೆ.

ರಾಜ್ಯಸಭಾ ಸದಸ್ಯರಾಗಿರುವ ಕೇಂದ್ರದ ನಾಗರಿಕ ವಿಮಾನಯಾನ ರಾಜ್ಯ ಸಚಿವ ಜಿ.ವೈ. ಕೃಷ್ಣನ್, ಐ.ಜಿ. ಸನದಿ, ಪ್ರಭಾಕರ್ ಕೋರೆ, ಬಿ.ಕೆ. ಹರಿಪ್ರಸಾದ್ ಅವರ ಅವಧಿ ಏಪ್ರಿಲ್ 9ರಂದು ಅಂತ್ಯವಾಗುವುದರಿಂದ ಈ ಚುನಾವಣೆ ನಡೆಯಿತು.

50 ವರ್ಷಗಳ ಹಿಂದೆ

ಶನಿವಾರ, 20-2-1971

• ವ್ಯಂಗ್ಯಚಿತ್ರ ಸಮರ

ಮದರಾಸು, ಫೆ. 19– ತಮಿಳುನಾಡಿನಲ್ಲಿ ವ್ಯಂಗ್ಯಚಿತ್ರಗಳ ಭಿತ್ತಿಪತ್ರಗಳು ಚುನಾವಣಾ ಪ್ರಚಾರವನ್ನು ರಸವತ್ತಾಗಿ ಮಾಡಿವೆ.

ಮದರಾಸಿನ ಬೀದಿಗಳಲ್ಲಿ ಗೋಡೆಗಳ ಮೇಲೆ ರಾರಾಜಿಸುತ್ತಿರುವ ಈ ಚಿತ್ರಗಳು ದಾರಿಹೋಕರ ಗಮನ ಸೆಳೆಯದೆ ಬಿಡವು. ವ್ಯಂಗ್ಯಚಿತ್ರಗಳ ಮೂಲಕ ಚುನಾವಣಾ ಪ್ರಚಾರ ತಮಿಳುನಾಡಿಗೆ ಹೊಸದು.

ಸಂಸ್ಥಾ ಕಾಂಗ್ರೆಸ್ ನಾಯಕ ಕಾಮರಾಜರು ಮಹಾರಾಜರೊಬ್ಬರನ್ನು ಓಲೈಸುತ್ತಿರುವ ಚಿತ್ರವುಳ್ಳ ಡಿಎಂಕೆ ಭಿತ್ತಿಪತ್ರ ಹೀಗೆ ಹೇಳಿದೆ: 'ರಾಷ್ಟ್ರದಲ್ಲಿ ಪ್ರತೀ 100 ಜನಕ್ಕೆ 85 ಮಂದಿ ದಿನಕ್ಕೊಂದು ರೂಪಾಯಿಯ ಮೇಲೆ ಜೀವನ ದೂಡುತ್ತಿದ್ದರೆ, ಬೆರಳೆಣಿಕೆಯಷ್ಟು ಮಾಜಿ ಅರಸರು ವರ್ಷಕ್ಕೆ ಐದು ಕೋಟಿ ರೂಪಾಯಿ ರಾಜಧನ ಪಡೆಯುತ್ತಿದ್ದಾರೆ. ಕಾಮರಾಜರು ಮಾಜಿ ಅರಸರು ಮತ್ತು ರಾಜಧನದ ಪರ. ನಾನು ಬಡವರ ಪರ. ನೀವು ಯಾವ ಕಡೆ?'

ಸಂಸ್ಥಾ ಕಾಂಗ್ರೆಸ್ಸೂ ಹಿಂದುಳಿದಿಲ್ಲ– ಈ ವ್ಯಂಗ್ಯಚಿತ್ರಗಳ ಸಮರದಲ್ಲಿ. ಅದರಲ್ಲಿ ಬಹಳ ಜನಪ್ರಿಯವಾಗಿರುವ ವ್ಯಂಗ್ಯಚಿತ್ರವೆಂದರೆ ಕರುಣಾನಿಧಿಯವರು ದಿವಂಗತ ಅಣ್ಣಾದೊರೆ ಅವರ ಚಿತ್ರದ ಮುಂದೆ ಬೇಡುತ್ತಿರುವುದು– 'ಪಕ್ಷವು ಮತ್ತೆ ಅಧಿಕಾರಕ್ಕೆ ಬಂದು, ಬಂಗ್ಲೆ, ಕಾರು ಮಾಡಿಕೊಳ್ಳದ ತಂಬಿಗಳು (ಸೋದರರು) ಅವನ್ನು ಮಾಡಿಕೊಳ್ಳಲಿ' ಎಂಬುದು ಪ್ರಾರ್ಥನೆ.

ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅನುದಾನ ಕಡಿಮೆಯಾಗಿರುವುದು ಕಳವಳಕಾರಿ

ಶಿಕ್ಷಣ: ಭರವಸೆ ಮರೆತ ಬಜೆಟ್

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಕೇಂದ್ರ ಸರ್ಕಾರ ಈ ತಿಂಗಳ ಒಂದರಂದು ಮಂಡಿಸಿದ 2021- 22ನೇ ಸಾಲಿನ ಬಜೆಟ್ ಮುಂದೆ, ಶಿಕ್ಷಣಕ್ಕೆ ಸಂಬಂಧಿಸಿದಂತೆ ಎರಡು ಪ್ರಮುಖ ಸವಾಲುಗಳಿದ್ದವು. ಒಂದು, ಅನಿರೀಕ್ಷಿತವಾಗಿ ಕಾಣಿಸಿಕೊಂಡ ಕೋವಿಡ್- 19ರ ಸಂಕಷ್ಟದ ಪರಿಣಾಮದಿಂದ ದೇಶದ ಶಿಕ್ಷಣ ವ್ಯವಸ್ಥೆಯು ಸಂಪೂರ್ಣ ಬುಡಮೇಲಾಗಿತ್ತು. ಸಾಮಾಜೀಕರಣದ ಬುನಾದಿಯಾಗಿದ್ದ ಸಾಂಪ್ರದಾಯಿಕ ತರಗತಿಕೋಣೆಯ ಕಲಿಕಾ ಪ್ರಕ್ರಿಯೆಯು ತಂತ್ರಜ್ಞಾನ ಆಧಾರಿತ ಡಿಜಿಟಲ್ ವೇದಿಕೆಗೆ ವರ್ಗಾಯಿಸಲ್ಪಡುವ ಮೂಲಕ ಶಿಕ್ಷಣದ ಮೂಲ ಆಶಯವನ್ನು ತಲೆಕೆಳಗಾಗಿಸಿತ್ತು.

ಪೂರ್ವಯೋಜಿತವಲ್ಲದ ಮತ್ತು ಎಲ್ಲರಿಗೂ ಲಭ್ಯವಿಲ್ಲದ ಈ ಆನ್‌ಲೈನ್ ಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ಅವಕಾಶವಂಚಿತ ಹಾಗೂ ಬಡವರ್ಗದ ಮಕ್ಕಳ ಕಲಿಕೆಯಲ್ಲಿ ಬಹುದೊಡ್ಡ ಅಸಮಾನತೆಯನ್ನು ಸೃಷ್ಟಿಸಿ ಕಲಿಕೆಯ ಅಂತರವನ್ನು ಹೆಚ್ಚಿಸಿತು. ಜೊತೆಗೆ ಆನ್‌ಲೈನ್ ಶಿಕ್ಷಣಕ್ಕೆ ಅಗತ್ಯವಾದ ಸಾಧನಗಳಿಲ್ಲದ ದುರ್ಬಲ ವರ್ಗಗಳ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಿಂದ ವ್ಯವಸ್ಥಿತವಾಗಿ ಹೊರಹಾಕಿತು. ಇಂತಹ ಸಂಕಷ್ಟದ ಸಂದರ್ಭದಲ್ಲಿ ಮಂಡನೆಯಾದ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ, ಅದರಲ್ಲೂ ವಿಶೇಷವಾಗಿ ಕೋವಿಡ್ ಸಾಂಕ್ರಾಮಿಕದಿಂದ ಉಂಟಾದ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಶಾಲಾ ಶಿಕ್ಷಣ ವ್ಯವಸ್ಥೆಗೆ ಹೆಚ್ಚಿನ ಅನುಕೂಲಕರವಾದ ಸಂಪನ್ಮೂಲಗಳನ್ನು ನಿರೀಕ್ಷಿಸಲಾಗಿತ್ತು.

ಎರಡು, ಕೇಂದ್ರ ಸಂಪುಟವು 2020ರ ಜುಲೈನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಮೋದಿಸಿದಾಗ ದೇಶದ ಶಿಕ್ಷಣ ರಂಗದಲ್ಲಿ ಅದು ಹೊಸ ಕ್ರಾಂತಿಗೆ ನಾಂದಿಯಾಗುವುದೆಂದು ಬಿಂಬಿಸಲಾಗಿತ್ತು. ಈ ನೀತಿಯನ್ನು ರೂಪಿಸಿದ ಶಿಕ್ಷಣ ತಜ್ಞರು, ಶಿಕ್ಷಣ ರಂಗದ ಎಲ್ಲಾ ಸಮಸ್ಯೆಗಳಿಗೆ ಇದು ದಿವ್ಯೌಷಧಿಯಾಗಲಿದೆ ಎಂದು ಭವಿಷ್ಯ ನುಡಿದಿದ್ದರು.

ನೀತಿಯ ಜಾರಿಗೆ ಬಹಳ ಮುಖ್ಯವಾಗಿ ಬೇಕಿರುವ ಹಣಕಾಸು ಸಂಪನ್ಮೂಲಗಳಿಗೆ ಸಂಬಂಧಿಸಿದ ವಿಷಯವನ್ನು ಅದು ಪ್ರಸ್ತಾಪಿಸಿತ್ತು. ಸಮಾಜದ ಭವಿಷ್ಯದ ದೃಷ್ಟಿಯಿಂದ ನಮ್ಮ ಯುವಜನರ ಗುಣಾತ್ಮಕ ಶಿಕ್ಷಣಕ್ಕೆ ಉತ್ತಮ ಹಣಕಾಸಿನ ಹೂಡಿಕೆ ಬೇಕು. ಆದರೆ, ಅದು ಇದುವರೆಗೂ ಲಭ್ಯವಾಗಿಲ್ಲ. ಆದಕಾರಣ, ಶೈಕ್ಷಣಿಕ ಹೂಡಿಕೆಯನ್ನು ಗಮನಾರ್ಹವಾಗಿ ಹೆಚ್ಚಿಸಲು ಬದ್ಧವಾಗಿರುವುದಾಗಿ ನೀತಿಯು ಘೋಷಿಸಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ಹೂಡಿಕೆಯನ್ನು ಜಿಡಿಪಿಯ ಶೇ 6ಕ್ಕೆ ತಲುಪಿಸಲು ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಕೆಲಸ ಮಾಡುತ್ತವೆ ಎಂಬ ಭರವಸೆಯನ್ನು ಸಹ ನೀಡಿತ್ತು. ದೇಶದ ಭವಿಷ್ಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ, ತಾಂತ್ರಿಕ ಪ್ರಗತಿ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವಿರುವ ಸಮಾನ ಗುಣಮಟ್ಟದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಡಲು ಇದು ಅತ್ಯಂತ ನಿರ್ಣಾಯಕವೆಂದು ನೀತಿ ಪರಿಗಣಿಸಿತ್ತು. ಮುಂದುವರಿದು, 8 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ 2030ರ ವೇಳೆಗೆ ಬಾಲ್ಯಪೂರ್ವ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದಾಗಿ ತಿಳಿಸಿತ್ತು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪರಿಣಾಮಕಾರಿ ಜಾರಿಗೆ ಸಂಪನ್ಮೂಲ ಒದಗಿಸುವ ಮೊದಲ ಬಜೆಟ್ ಇದಾಗಿತ್ತು. ಹಾಗಾಗಿ ನಿರೀಕ್ಷೆಗಳೂ ಹೆಚ್ಚಿಗೆ ಇದ್ದವು. ಆದರೆ ಈ ನೀತಿಗೆ ಸಂಬಂಧಿಸಿದ ಹೆಚ್ಚಿನ ಭರವಸೆಗಳನ್ನು ಬಜೆಟ್ ಗಾಳಿಗೆ ತೂರಿದೆ. ಈ ಕಾರಣದಿಂದ, ಈ ಬಾರಿಯ ಬಜೆಟ್‌ನಲ್ಲಿ ಶಾಲಾ ಶಿಕ್ಷಣದ ವ್ಯಾಪ್ತಿಯನ್ನು ವಸ್ತುನಿಷ್ಠವಾಗಿ ವಿಮರ್ಶಿಸಬೇಕಾಗಿದೆ.

ಕೇಂದ್ರ ಸರ್ಕಾರವು 2021-22ರ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಒಟ್ಟು ₹ 93,224 ಕೋಟಿಯನ್ನು ಮೀಸಲಿರಿಸಿದೆ. ಇದು 2020-21ರ ಬಜೆಟ್‌ನಲ್ಲಿ ಮೀಸಲಿಟ್ಟ (₹ 99,312 ಕೋಟಿ) ಹಣಕ್ಕಿಂತ ಶೇ 6.13ರಷ್ಟು ಕಡಿಮೆಯಾಗಿದೆ. ಇದರಲ್ಲಿ ಶಾಲಾ ಶಿಕ್ಷಣದ ಪಾಲು ₹ 54,874 ಕೋಟಿ. ಇದು ಕಳೆದ ಬಜೆಟ್‌ನಲ್ಲಿ ಈ ಉದ್ದೇಶಕ್ಕಾಗಿ ಮೀಸಲಿಟ್ಟಿದ್ದ ಹಣಕ್ಕೆ (₹ 59,845) ಹೋಲಿಸಿದರೆ, ಶೇಕಡ 8.3ರಷ್ಟು ಇಳಿಕೆಯಾಗಿದೆ. ಆತ್ಮನಿರ್ಭರ ಭಾರತದ ನಿರ್ಮಾಣಕ್ಕಾಗಿ ಎಲ್ಲರಿಗೂ ಶಿಕ್ಷಣ ನೀಡುವುದು ಸರ್ಕಾರದ ಅಂತಿಮ ಗುರಿ ಎಂದು ಹೇಳುತ್ತಲೇ, ಬಜೆಟ್‌ನಲ್ಲಿ ಶಿಕ್ಷಣಕ್ಕೆ ಅನುದಾನವನ್ನು ಗಣನೀಯವಾಗಿ ಕಡಿತಗೊಳಿಸಿರುವುದು ಹಲವಾರು ಪ್ರಶ್ನೆಗಳು ಮೂಡುವಂತೆ ಮಾಡಿದೆ.

ವಿಶೇಷವೆಂದರೆ, ಕೊರೊನಾ ಸಾಂಕ್ರಾಮಿಕದಿಂದಾಗಿ ದೇಶದಲ್ಲಿ ಕೋಟ್ಯಂತರ ಮಕ್ಕಳು ಶಾಲಾ ವರ್ಷವನ್ನು ಕಳೆದುಕೊಂಡು ಶಿಕ್ಷಣದಿಂದ ವಂಚಿತರಾಗಿದ್ದರು. ಇಂತಹ ಮಕ್ಕಳು ಅಗತ್ಯ ಬೆಂಬಲ ವ್ಯವಸ್ಥೆಯೊಂದಿಗೆ ಸುರಕ್ಷಿತವಾಗಿ ಶಾಲೆಗೆ ಹಿಂದಿರುಗುವುದಕ್ಕೆ ಪೂರಕವಾದ ಸಮಗ್ರ ನೀತಿಯ ಭಾಗವಾಗಿ, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ಬಜೆಟ್ ಹೆಚ್ಚಿನ ಹಣಕಾಸು ಬೆಂಬಲ ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಈ ನಿರೀಕ್ಷೆ ಸಂಪೂರ್ಣವಾಗಿ ಹುಸಿಯಾಗಿದೆ.

ಇನ್ನು, ಶಿಕ್ಷಣ ಹಕ್ಕು ಕಾಯ್ದೆಯ ಜಾರಿಗೆ ಪ್ರಮುಖ ಯೋಜನೆ ಎನಿಸಿರುವ ಸಮಗ್ರ ಶಿಕ್ಷಣ ಅಭಿಯಾನಕ್ಕೆ ಮೀಸಲಿಟ್ಟಿರುವ ಹಣ ₹ 38,751 ಕೋಟಿಯಿಂದ (2020-21) ₹ 31,050 ಕೋಟಿಗೆ (2021-22) ಇಳಿದಿದೆ. 2020-21ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಅಭಿಯಾನಕ್ಕೆ ಪರಿಷ್ಕೃತ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಮೊತ್ತದಲ್ಲಿ 2020ರ ಡಿಸೆಂಬರ್ ಅಂತ್ಯಕ್ಕೆ ಬಿಡುಗಡೆಗೊಳಿಸಿರುವ ಒಟ್ಟು ಮೊತ್ತ ₹ 19,097 ಕೋಟಿ. ಕಳೆದ ವರ್ಷದ ಈ ಬೆಳವಣಿಗೆಯನ್ನು ಆಧರಿಸಿ ನೋಡುವುದಾದರೆ, 2021- 22ರ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಹಣ ಎಷ್ಟರಮಟ್ಟಿಗೆ ಬಿಡುಗಡೆಯಾಗಬಹುದೆಂಬ ಆತಂಕವೂ ಇದೆ.

2021- 22ನೇ ಸಾಲಿಗೆ ಬಜೆಟ್‌ನಲ್ಲಿ ಶಾಲಾ ಶಿಕ್ಷಣಕ್ಕೆ ಮೀಸಲಿಟ್ಟಿರುವ ಒಟ್ಟು ₹ 54,874 ಕೋಟಿ ಮೊತ್ತದಲ್ಲಿ ₹ 44,000 ಕೋಟಿಯಷ್ಟು ಶಿಕ್ಷಣ ತೆರಿಗೆಯಿಂದಲೂ (ಸೆಸ್) ಮತ್ತು ₹ 4,800 ಕೋಟಿಯಷ್ಟು ರಾಷ್ಟ್ರೀಯ ಹೂಡಿಕೆ ನಿಧಿಯಿಂದಲೂ ಬರುತ್ತದೆ. ಬೇರೆ ಮೂಲಗಳಿಂದ ₹ 6,074 ಕೋಟಿ ಬರುತ್ತದೆ. ಇನ್ನು ಮುಂದೆ ಶಿಕ್ಷಣ ಕ್ಷೇತ್ರದ ಹೂಡಿಕೆಯು ಸೆಸ್ ಸಂಗ್ರಹ ಮತ್ತು ರಾಷ್ಟ್ರೀಯ ಹೂಡಿಕೆಯ ಆದಾಯವನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಒಂದೆಡೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಹೆಚ್ಚಿನ ಅನುದಾನವನ್ನು ಮೀಸಲಿಡುವುದಾಗಿ ಶಿಕ್ಷಣ ನೀತಿಯಲ್ಲಿ ಹೇಳುತ್ತಲೇ ಮತ್ತೊಂದೆಡೆ, ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕಾಗಿನ ಅನುದಾನವನ್ನು ಗಣನೀಯವಾಗಿ ಇಳಿಸುತ್ತಿರುವುದು ಕಳವಳಕ್ಕೆ ಎಡೆ ಮಾಡುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಬೇಕಾದರೆ ಶಿಕ್ಷಣ ಕ್ಷೇತ್ರದ ಮೇಲಿನ ಹೂಡಿಕೆಯು ಹಂತ ಹಂತವಾಗಿ ಹೆಚ್ಚಬೇಕಿದೆ. ಆದರೆ, ಶಿಕ್ಷಣ ನೀತಿಯ ಅನುಷ್ಠಾನಕ್ಕಾಗಿ ಯಾವುದೇ ವಿಶೇಷ ಅಥವಾ ಹೆಚ್ಚುವರಿ ಅನುದಾನವನ್ನು ಒದಗಿಸಲು ಬಜೆಟ್ ಸಂಪೂರ್ಣವಾಗಿ ವಿಫಲವಾಗಿದೆ. ಕೇಂದ್ರದ ಬಜೆಟ್‌ನಲ್ಲಿ ಶಿಕ್ಷಣದ ಪಾಲು ಕಡಿಮೆಯಾಗುತ್ತಿದೆ. 2015-16ರಲ್ಲಿ ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ಶೇ 3.8ರಷ್ಟನ್ನು ಮತ್ತು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ 0.49ರಷ್ಟನ್ನು ತೆಗೆದಿರಿಸಲಾಗಿತ್ತು. ಅದು 2021- 22ರಲ್ಲಿ ಕ್ರಮವಾಗಿ ಶೇ 2.7 ಹಾಗೂ ಶೇ 0.42ಕ್ಕೆ ಇಳಿದಿದೆ.

ಒಂದೆಡೆ, ರಾಷ್ಟ್ರೀಯ ಶಿಕ್ಷಣ ನೀತಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ಶಿಕ್ಷಣಕ್ಕೆ ವ್ಯಯ ಮಾಡುವ ಸಾರ್ವಜನಿಕ ಹೂಡಿಕೆಯನ್ನು ಜಿಡಿಪಿಯ ಶೇಕಡ 6ಕ್ಕೆ ತ್ವರಿತವಾಗಿ ಹೆಚ್ಚಿಸುವುದಾಗಿ ನೀಡಿದ್ದ ಭರವಸೆ ಹುಸಿಯಾಗಿದೆ. ಮತ್ತೊಂದೆಡೆ, ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಶಿಕ್ಷಣದ ಹೂಡಿಕೆಯನ್ನು ಗಣನೀಯವಾಗಿ ಕಡಿತಗೊಳಿಸುವ ಮೂಲಕ ಈ ಭರವಸೆಯು ದೂರದ ಕನಸಾಗಿ ಉಳಿಯುವಂತೆ ಮಾಡಿದೆ.

ಒಟ್ಟಾರೆ, ಬಹುಚರ್ಚಿತ ಹಾಗೂ ಬಹು ನಿರೀಕ್ಷಿತ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಆರಂಭಿಕ ನೂಕುಬಲ ನೀಡುವ ಅವಕಾಶವನ್ನು ಬಜೆಟ್ ಕಳೆದುಕೊಂಡಿದೆ. ಈ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನು ತರಲಿದೆ ಎಂದು ಪ್ರತಿಪಾದಿಸಿದವರಿಗೆ ಭಾರಿ ನಿರಾಶೆಯನ್ನು ಉಂಟುಮಾಡಿದೆ. ಈ ಕಂದರವನ್ನು ರಾಜ್ಯ ಬಜೆಟ್ ಹೇಗೆ ತುಂಬಿಕೊಡುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ಚುರುಮುರಿ

ವೀ ಟೂ ಚಳವಳಿ!

• ಎಸ್.ಬಿ.ರಂಗನಾಥ್

ಮನೆಯಾಕೆ ಬೆಳಿಗ್ಗೆ ಕಾಫಿ ಕೊಟ್ಟು, 'ತೆಗೀರಿ ಇನ್ನೂರು ರೂಪಾಯಿ' ಎಂದಾಗ ನಿಬ್ಬೆರಗಾದೆ.

'ಸ್ಟಾರ್ ಹೋಟೆಲ್‌ಗಳಲ್ಲೇ ಕಾಫಿಗೆ ನೂರು ರೂಪಾಯಿ. ಇಲ್ಲಿ ಯಾಕೆ ಡಬಲ್?' ಎಂದೆ ನಗುತ್ತಾ. 'ಕಸ ಗುಡ್ಸಿ, ಪಾತ್ರೆ ತೊಳ್ದು, ಕಾಫಿ ಮಾಡಿದ ಸರ್ವಿಸ್ ಚಾರ್ಜ್' ಎನ್ನುತ್ತಾ ಪತ್ರಿಕೆ ತೋರಿಸಿದಳು.

ತಮಿಳುನಾಡು ರಾಜಕೀಯ ಪಕ್ಷವೊಂದು ಚುನಾವಣಾ ಪ್ರಣಾಳಿಕೆಯಲ್ಲಿ, ಗೃಹಿಣಿಯರ ಮನೆಗೆಲಸಕ್ಕೆ ವೇತನ ಕೊಡುವುದನ್ನು ಜಾರಿಗೊಳಿಸುವುದಾಗಿ ಘೋಷಿಸಿತ್ತು.

'ನನ್ನ ಚೆಕ್ ಬುಕ್, ಎಟಿಎಂ ಕಾರ್ಡ್ ನಿನ್ನ ಕಸ್ಟಡಿಯಲ್ಲೇ ಇವೆಯಲ್ಲ'.

'ನಿಮ್ಮ ಚೆಕ್ಕಿಗೆ ನನ್ನ ಸಹಿ ನಡೆಯೋಲ್ಲ. ಎಟಿಎಂ ಪಿನ್ ನಂಬರ್ ಇನ್ನೂ ನಿಮ್ಹತ್ರಾನೇ ಇದೆ. ಅದಕ್ಕೇ ಪ್ರತಿಯೊಂದು ಮನೆಗೆಲ್ಸಕ್ಕೂ ದರ ನಿಗದಿ ಮಾಡ್ತಿದೀನಿ'.

'ಈಗ ಮಾಡ್ತಿರೋ ವರ್ಕ್ ಫ್ರಮ್ ಹೋಮ್ ಜೊತೆಗೆ ವರ್ಕ್ ಫಾರ್ ಹೋಮ್ನೂ ಮಾಡ್ತೀನಿ. ಮನೆಗೆಲ್ಸ ಕಲ್ಸು'.

'ಟ್ಯೂಷನ್ ಫೀ ಕೊಡ್ಬೇಕಾಗುತ್ತೆ. ತಪ್ಪಿದ್ರೆ ಕೋರ್ಟ್ ಮೆಟ್ಟಲು ಹತ್ತಿಸ್ತೀನಿ'.

'ಆಗ್ಲಿ ಮಾರಾಯ್ತೀ, ಕೋರ್ಟ್‌ಗಳೆಲ್ಲಾ ಸ್ತ್ರೀ ಪಕ್ಷಪಾತಿಗಳೂಂತ ಗೊತ್ತು'.

'ಹಾಗೇನಿಲ್ಲ, ಅವು ನ್ಯಾಯ ಪಕ್ಷಪಾತಿಗಳು. ಹಾಗಿದ್ದಿದ್ರೆ ಶಶಿಕಲಾಗೆ 10 ಕೋಟಿ ರೂಪಾಯಿ ದಂಡ, 4 ವರ್ಷ ಪರಪ್ಪನ ಅಗ್ರಹಾರದ ಆತಿಥ್ಯ ಸಿಕ್ತಿರ್ಲಿಲ್ಲ'.

'ಆಕೆ ಬಿಡುಗಡೆಯಾಗಿ ಚೆನ್ನೈಗೆ ಹೋದಾಗ ಎಂಥಾ ಸ್ವಾಗತ! ರಾಜಕೀಯ ಸಂಚಲನ! ವರ್ಮಾ ಆಕೆ ಬಗ್ಗೆ ಸಿನಿಮಾ ಮಾಡ್ತಾರಂತೆ!'

'ಹೇಗಿದೆ ಸ್ತ್ರೀ ಶಕ್ತಿ?'

'ಅಲ್ವೇ ಮತ್ತೆ? ಪ್ರಿಯಾ ರಮಣಿ ಅವರ ಮೀ ಟೂ ಪ್ರಕರಣದಲ್ಲಿ ರಾಜೀನಾಮೆ ಕೊಟ್ಟಿದ್ದ ಕೇಂದ್ರ ಸಚಿವ ಎಂ.ಜೆ.ಅಕ್ಬರ್ ದೆಹಲಿ ಕೋರ್ಟಲ್ಲಿ ಹೂಡಿದ್ದ ಮಾನನಷ್ಟ ಮೊಕದ್ದಮೆನೂ ಮೊನ್ನೆ ಬಿದ್ದು ಹೋಯ್ತಲ್ಲಾ. ಪುರುಷರಿಗೆ ಭಾರೀ ಅನ್ಯಾಯ. ನಾವೂ ಚಳವಳಿ ಪ್ರಾರಂಭಿಸ್ತೀವಿ'.

'ಎಂಥಾ ಚಳವಳೀರಿ?'

'ವೀ ಟೂ ಚಳವಳಿ'.

ಶ್ರೀಮತಿಯವರು ಧುಮುಗುಟ್ಟುತ್ತಾ ನಿರ್ಗಮಿಸಿದರು!

ಸಂಗತ

ಕಾಡಾನೆ ಕಾಟಕ್ಕಿದೆ ಪರಿಹಾರ!

ನಾಡಿಗೆ ನುಗ್ಗುವ ಆನೆಗಳ ಮಾಹಿತಿ ಪಡೆಯಲು ದಕ್ಷಿಣ ಆಫ್ರಿಕಾ ಅನುಸರಿಸುತ್ತಿರುವ ಮಾರ್ಗ ನಮಗೆ ಮಾದರಿಯಾಗಬಹುದು

• ಪ.ರಾಮಕೃಷ್ಣಶಾಸ್ತ್ರಿ

ಮಲೆನಾಡಿನಲ್ಲಿ ವನ್ಯಜೀವಿಗಳ ಜೊತೆಗಿನ ಸಂಘರ್ಷದಿಂದಾಗಿ ರೈತರ ಗೋಳು ಹೇಳತೀರದಾಗಿದೆ. ಕೃಷಿ ಭೂಮಿಗೆ ದಾಳಿಯಿಟ್ಟು, ಬಾಳೆ, ತೆಂಗು, ಅಡಿಕೆ ತೋಟಗಳನ್ನು ನೆಲಸಮ ಮಾಡಿ ಹೋಗುವ ಕಾಡಾನೆಗಳ ಹಾವಳಿಯಿಂದ ಅವರು ತತ್ತರಿಸಿ ಹೋಗಿದ್ದಾರೆ. ಯಾವುದೇ ಫಸಲನ್ನು ಕೂಡ ನಿರಾತಂಕವಾಗಿ ಮನೆಗೆ ತರುವಂತಿಲ್ಲ.

ಇನ್ನೊಂದೆಡೆ, ಪುಂಡಾನೆ ಕಾಲ್ತುಳಿತಕ್ಕೆ ಬಲಿಯಾದವರ ಕಂಬನಿಯ ಕತೆಗಳು ಮನ ಮಿಡಿಯುತ್ತಿವೆ. ಸರ್ಕಾರವು ಕೃಷಿಹಾನಿಗೆ, ಜೀವಹಾನಿಗೆ ಪರಿಹಾರವೆಂದು ಕಿಂಚಿತ್ತು ಹಣ ಕೊಡುತ್ತದೆ ನಿಜ. ಆದರೆ ಇವು ಶಾಶ್ವತ ಪರಿಹಾರಗಳಲ್ಲ. ನಿರ್ಭೀತಿಯಿಂದ, ನಿಶ್ಚಿಂತೆಯಿಂದ ಬೆಳೆ ಮಾಡಲು ರೈತನಿಗೆ ಧೈರ್ಯವೇ ಇಲ್ಲದಂತಾಗಿದೆ.

ಅರಣ್ಯನಾಶ ಹಾಗೂ ಆನೆಗಳ ಮೇವಿನ ಕೊರತೆಗೆ ಹಲವು ಕಾರಣಗಳಿವೆ. ಮನುಷ್ಯ ಮತ್ತು ವನ್ಯಮೃಗಗಳ ನಡುವಿನ ಸಂಘರ್ಷದ ವಿಷಯದಲ್ಲಿ ಒಂದು ನಿಖರ ತೀರ್ಮಾನಕ್ಕೆ ಬರಲು ಅರಣ್ಯ ಇಲಾಖೆ ಸೋತಿರುವುದು ಸುಸ್ಪಷ್ಟವಾಗಿದೆ. ಇಂತಹ ಸಮಯದಲ್ಲಿ, ಆನೆಗಳು ಬೆಳೆಯಿರುವ ತೋಟದ ಸನಿಹ ಬರುವುದನ್ನು ಮೊದಲೇ ತಿಳಿದುಕೊಂಡು, ಅವುಗಳ ಹಿಂಡನ್ನು ದೂರ ಓಡಿಸಲು ಸಾಧ್ಯವೆಂಬುದನ್ನು ದಕ್ಷಿಣ ಆಫ್ರಿಕಾದ ಭೂವಿಜ್ಞಾನಿಗಳು ಕಂಡುಕೊಂಡಿದ್ದಾರೆ. ನಮ್ಮ ಮಲೆನಾಡಿನ ರೈತರೂ ಆನೆ ಹಾವಳಿಯಿಂದ ರಕ್ಷಣೆ ಪಡೆಯಲು ಸಿಸ್ಮೋಮೀಟರ್ ಅಳವಡಿಕೆಯ ಈ ತಂತ್ರಜ್ಞಾನ ನೆರವಾದೀತೇ ಎಂಬುದು ಅಧ್ಯಯನಕ್ಕೆ ಯೋಗ್ಯವಾಗಿದೆ. ವಾಸ್ತವವಾಗಿ ಈ ಉಪಕರಣ ನೆಲದಲ್ಲಿ ಅಳವಡಿಸಿದಾಗ ಭೂಮಿಯ ಕಂಪನ ಹೆಚ್ಚುತ್ತಿರುವುದನ್ನು ಧ್ವನಿಯಂತ್ರದ ಮೂಲಕ ಬಿತ್ತರಿಸಿ, ಭೂಕಂಪದ ಅಪಾಯದಿಂದ ಪಾರಾಗುವಂತೆ ಎಚ್ಚರಿಸಲು ಬಳಕೆಯಾಗುತ್ತದೆ. ಚಂಡಮಾರುತ, ಹಿಮಕುಸಿತದಂತಹ ಅಪಾಯಕಾರಿ ಸನ್ನಿವೇಶಗಳನ್ನು ಮುಂದಾಗಿಯೇ ತಿಳಿಸುತ್ತದೆ.

ದಕ್ಷಿಣ ಆಫ್ರಿಕಾದ ಈಶಾನ್ಯದಲ್ಲಿರುವ ಅಭಯಾರಣ್ಯದಲ್ಲಿ ಬಿಳಿ ಆನೆಗಳ ವಂಶ ನಶಿಸುವುದಕ್ಕೆ ಕಾರಣ ಕಳ್ಳಬೇಟೆಗಾರರು. ಈ ಆನೆಗಳ ಸಂರಕ್ಷಣೆಗಾಗಿ ಉತ್ತರ ಕೆರೊಲಿನಾ ವಿಶ್ವವಿದ್ಯಾಲಯದ ಆಲಿವರ್ ಲ್ಯಾಂಬ್ ಅವರು ಭೂಕಂಪದ ಮುನ್ಸೂಚನೆ ನೀಡುವ ಸಿಸ್ಮೋಮೀಟರ್ ಸಾಧನಗಳನ್ನು ಅಲ್ಲಲ್ಲಿ ಅಳವಡಿಸಿದರು. ಆನೆಗಳು ನಡೆದಾಡುವಾಗ ನೆಲದಲ್ಲಿ 110 ಡೆಸಿಬಲ್ ಪ್ರಮಾಣದ ಕಂಪನವುಂಟಾಗುತ್ತದೆ. ಅಲ್ಲಿ ಅಳವಡಿಸಿದ್ದು ಭೂಕಂಪನ ತಿಳಿಸುವಂತಹ ಶಕ್ತಿಶಾಲಿ ಉಪಕರಣವಲ್ಲ. 400 ಮೀಟರ್ ದೂರದವರೆಗೆ ಈ ಧ್ವನಿಕಂಪನವನ್ನು ಒಯ್ಯಬಲ್ಲ ಸಾಮಾನ್ಯ ಉಪಕರಣ. ಅದಕ್ಕೆ ಸೂಕ್ಷ್ಮ ಮೈಕ್ರೊಫೋನ್ ಅಳವಡಿಸಿದ್ದರಿಂದ ಆನೆಗಳ ಪಾದಗಳಿಂದ ಉಂಟಾಗುವ ಕಂಪನ ದೊಡ್ಡದಾಗಿಯೇ ಕೇಳಿಸುತ್ತದೆ. ಆನೆಗಳ ಕಿವಿಗೆ ರೇಡಿಯೊ ಕಾಲರ್ ಸಿಕ್ಕಿಸುವ ಅಗತ್ಯವೇ ಇಲ್ಲದೆ, ಅವು ಎಷ್ಟಿವೆ, ಎಲ್ಲಿವೆ ಎನ್ನುವುದನ್ನು ಕುಳಿತಲ್ಲಿಂದಲೇ ತಿಳಿಯಲು ಅದು ನೆರವಾಯಿತು.

ಆನೆಗಳು ಎಲ್ಲಿವೆ ಎಂಬುದು ಗೊತ್ತಾದ ಮೇಲೆ ಅವುಗಳ ರಕ್ಷಣೆಗೂ ಧಾವಿಸಬಹುದು. ಹಿಂಡಿನಿಂದ ಬೇರ್ಪಟ್ಟ ಪುಂಡಾನೆ ಎಷ್ಟು ದೂರದಲ್ಲಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಹಿಂಡಿಗೆ ಸೇರಿಸಬಹುದು ಎಂಬುದನ್ನು ಲ್ಯಾಂಬ್ ತೋರಿಸಿಕೊಟ್ಟರು. ಬಳಿಕ ಈ ಭೂಕಂಪಸೂಚಕ ಉಪಕರಣವು ಆನೆ ಸಂರಕ್ಷಣೆಯಲ್ಲಿ ಮಹತ್ವದ ಸಹಾಯ ಮಾಡುತ್ತಿದೆ. ಇದಕ್ಕಾಗಿ 20 ಹರ್ಟ್ಸ್ ಸಂವೇದನೆಗಿಂತಲೂ ಕಡಿಮೆ ಶಕ್ತಿಯ ಉಪಕರಣಗಳನ್ನು ಸಿದ್ಧಪಡಿಸಲಾಗಿದೆ.

ಭೂಕಂಪವನ್ನು ತಿಳಿಸುವ ಸಾಧನದ ಬೆಲೆ ಲಕ್ಷಾಂತರ ರೂಪಾಯಿ ಇದೆ ಎನ್ನಲಾಗಿದೆ. ಆದರೆ ಆನೆಗಳ ಬರುವಿಕೆಯನ್ನು ತಿಳಿಸುವ ಉಪಕರಣವನ್ನು ಕೆರೊಲಿನಾದ ತಂತ್ರಜ್ಞರು ಅತ್ಯಂತ ಕಡಿಮೆ ವೆಚ್ಚದಲ್ಲಿ ತಯಾರಿಸುತ್ತಿದ್ದಾರಂತೆ. ಆನೆಗಳ ಹಿಂಡು 165 ಅಡಿ ದೂರ ತಲುಪಿದಾಗ ಅದು ಎಚ್ಚರಿಕೆಯ ಗಂಟೆಯನ್ನು ಜೋರಾಗಿ ಬಡಿಯುವ ಮೂಲಕ ಜಾಗೃತಗೊಳಿಸುತ್ತದೆ. ಅವುಗಳು ಓಡಿಕೊಂಡು ಬರುತ್ತಿವೆಯೇ ನಡೆದಾಡಿಕೊಂಡು ಬರುತ್ತಿವೆಯೇ ಎಂಬುದನ್ನು ಸುಲಭವಾಗಿ ಅರಿತು, ದೂರ ಓಡಿಸುವುದಾಗಲೀ ಬೆಳೆ ಸಂರಕ್ಷಣೆ ಮಾಡುವುದಾಗಲೀ ಸಾಧ್ಯವಿದೆ. ಭೂರೂಪ ಶಾಸ್ತ್ರ, ಮಣ್ಣಿನ ಸ್ಥಿತಿಗತಿಗೆ ಅನುಸಾರವಾಗಿ ಉಪಕರಣಗಳ ಸಂಖ್ಯೆ ಎಷ್ಟಿರಬೇಕೆಂದು ನಿರ್ಧರಿಸಬೇಕಾಗುತ್ತದೆ. ಇದೇ ಸಾಧನದಲ್ಲಿ ಶಕ್ತಿಶಾಲಿ ಮೈಕ್ರೊಫೋನ್ ಜೋಡಿಸಿಕೊಳ್ಳುವುದರಿಂದ, ಕಿಲೊಮೀಟರ್ ವ್ಯಾಪ್ತಿಯಲ್ಲಿ ಆನೆಗಳು ಬರುತ್ತಿರುವುದನ್ನು ಸಹ ತಿಳಿಯಲು ಸಾಧ್ಯವಾಗುತ್ತದೆ ಎನ್ನಲಾಗಿದೆ.

ಮಲೆನಾಡಿನ ಕಾಡಿನ ಪರಿಸರದಲ್ಲಿರುವ ಆನೆಗಳ ಆಹಾರ ಮೂಲ ಮತ್ತು ನೀರಿನ ಆಶ್ರಯದ ಸ್ಥಳಗಳಲ್ಲಿ ಸಿಸ್ಮೋಮೀಟರ್ ಅಳವಡಿಸುವ ಪ್ರಯೋಗವನ್ನು ಅರಣ್ಯ ಇಲಾಖೆ ಮಾಡಿದರೆ ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲು ಸಾಧ್ಯವೇ? ಇದು ಯೋಚಿಸಬೇಕಾದ ಸಂಗತಿ. ಸರ್ಕಾರ ಪ್ರಾಯೋಗಿಕವಾಗಿ ಈ ಸಾಧನದ ಇತಿಮಿತಿ ಮತ್ತು ಸಾಫಲ್ಯದ ಬಗೆಗೆ ವಿಜ್ಞಾನಿಗಳ ಸಲಹೆ ಪಡೆಯಲು ಮುಂದಾಗಬಹುದು. ಕಾಡಂಚಿನ ರೈತರಿಗೆ ಆನೆಗಳ ಬರುವಿಕೆಯ ಬಗೆಗೆ ಮುನ್ಸೂಚನೆ ದೊರೆತರೆ, ಅವುಗಳಿಂದ ಕೃಷಿಗೆ ಆಗುವ ಸರಿಪಡಿಸಲಾಗದ ಹಾನಿಯನ್ನು ನಿವಾರಿಸಿಕೊಳ್ಳುವುದು ಸುಲಭವೂ ಆಗಬಹುದು.

ದಕ್ಷಿಣ ಆಫ್ರಿಕಾದಲ್ಲಿ ಆನೆಗಳು ಕೃಷಿಗೆ ಮಾಡುವ ಹಾನಿಯನ್ನು ತಡೆಯಲು ಒಣಗಿದ ಆನೆಲದ್ದಿಗೆ ಒಣಮೆಣಸಿನಕಾಯಿ ಸೇರಿಸಿ ಬೆಂಕಿ ಹಚ್ಚುತ್ತಾರೆ. ಅದರ ಹೊಗೆಯಿಂದ ಕಣ್ಣಿನಲ್ಲಿ ಉರಿಯುಂಟಾಗಿ ಆನೆಗಳು ದೂರ ಓಡುತ್ತವೆ. ಇಂತಹ ಪ್ರಯೋಗಗಳ ಮೂಲಕ ಸಮಸ್ಯೆಗೊಂದು ಪರಿಹಾರ ಪಡೆಯಲು ಚಿಂತನೆಗೆ ಇದು ಸಕಾಲ.

ವಾಚಕರ ವಾಣಿ

ಷೇರುಪೇಟೆ: ಸಣ್ಣ ಹೂಡಿಕೆದಾರರ ಹಿತ ಕಾಯಲಿ

ಷೇರುಗಳ ಮೇಲಿನ ಹೂಡಿಕೆಯು ಕಂಪನಿಗಳ, ಹೂಡಿಕೆದಾರರ ಹಾಗೂ ರಾಷ್ಟ್ರದ ಆರ್ಥಿಕತೆಯ ದೃಷ್ಟಿಯಿಂದ ಸದಾ ಉತ್ತಮ ಹೂಡಿಕೆಯೇ. ಮಾರುಕಟ್ಟೆಯು ಊರ್ಧ್ವಮುಖದಲ್ಲಿರುವಾಗ ಮಾರುಕಟ್ಟೆ ಪ್ರವೇಶಿಸುವ ಕಂಪನಿಗಳೂ ಅಧಿಕ. ಆದರೆ ಪ್ರತೀ ಬಾರಿ ಹೀಗೆ ಮಾರುಕಟ್ಟೆಯು ಏರುಗತಿಯಲ್ಲಿರುವ ಸಮಯಾವಕಾಶವನ್ನು ನೋಡಿಕೊಂಡೇ ಕಂಪನಿಗಳು ತಮ್ಮ ಐಪಿಒಗಳಿಗೆ ವಿಪರೀತ ಬೆಲೆ ನಿಗದಿಪಡಿಸುವುದು ಮಾಮೂಲಿ ಆಗಿಬಿಟ್ಟಿದೆ. ಹೂಡಿಕೆದಾರರೂ ಅಂತಹ ಸಂದರ್ಭಗಳಲ್ಲಿ ಹಿಂದೆ ಮುಂದೆ ನೋಡದೆ, ಲಾಭ ಗಳಿಸುವ ಉದ್ದೇಶದಿಂದ ಅರ್ಜಿ ಸಲ್ಲಿಸುತ್ತಿರುತ್ತಾರೆ. ಲಾಭ ಬಾಚುವುದು ಮಾತ್ರ ದೊಡ್ಡ ದೊಡ್ಡ ಹೂಡಿಕೆದಾರರು ಹಾಗೂ ವಿದೇಶಿ ಸಂಸ್ಥೆಗಳು.

ಕೆಲವು ತಿಂಗಳುಗಳ ಬಳಿಕ ಹಲವಾರು ಸಂದರ್ಭಗಳಲ್ಲಿ ಐಪಿಒ ಬೆಲೆಗಿಂತಲೂ ಈ ಷೇರುಗಳು ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಾ ಸಣ್ಣ ಹೂಡಿಕೆದಾರರು ಕೈ ಸುಟ್ಟುಕೊಳ್ಳುವಂತೆ ಆಗುತ್ತದೆ. ಮಾರುಕಟ್ಟೆ ನಿಯಂತ್ರಕ ಸೆಬಿಯು ಸಣ್ಣ ಹೂಡಿಕೆದಾರರ ಹಿತವನ್ನು ರಕ್ಷಿಸಲು ಇನ್ನಷ್ಟು ಚುರುಕಾಗಬೇಕು. ಆಗಷ್ಟೇ ಆರೋಗ್ಯಕರ ಹೂಡಿಕೆಯ ವಾತಾವರಣ ನಿರ್ಮಾಣವಾದೀತು.

ಭರತ್ ಬಿ.ಎನ್., ಮೈಸೂರು

ಗೃಹಿಣಿಯರ ಪಾಲಿಗೆ ಆಶಾದಾಯಕ ಬೆಳವಣಿಗೆ

'ಮತ ಬೇಟೆಗೆ ಹೊಸ ಅಸ್ತ್ರ' ಎಂಬ ಡಾ. ಗೀತಾ ಕೃಷ್ಣಮೂರ್ತಿ ಅವರ ಲೇಖನ (ಪ್ರ.ವಾ., ಫೆ. 10) ಮಾರ್ಮಿಕವಾಗಿ ಮೂಡಿಬಂದಿದೆ. ತಮಿಳುನಾಡಿನ ಹೊಸ ರಾಜಕೀಯ ಪಕ್ಷವೊಂದು ಮಹಿಳೆಯರು ಮಾಡುವ ಮನೆಗೆಲಸವನ್ನು ಮೌಲ್ಯೀಕರಿಸಿ ಅದಕ್ಕೆ ವೇತನ ನೀಡುವ ಭರವಸೆಯನ್ನು ಇತ್ತೀಚೆಗೆ ತನ್ನ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿರುವ ವಿಚಾರದ ಬಗ್ಗೆ ಹಾಗೂ ಅದು ಉಂಟು ಮಾಡಬಹುದಾದ ದೂರಗಾಮಿ ಪರಿಣಾಮಗಳ ಬಗ್ಗೆ ಅವರು ವಸ್ತುನಿಷ್ಠವಾಗಿ ಚರ್ಚಿಸಿದ್ದಾರೆ. ತನ್ನ ಬಗ್ಗೆ ಚಿಂತಿಸದೆ ಸದಾಕಾಲ ತನ್ನ ಕುಟುಂಬಕ್ಕಾಗಿ ಗಾಣದೆತ್ತಿನಂತೆ ದುಡಿಯುವ ಗೃಹಿಣಿಯರ ಪಾಲಿಗೆ ಇದು ಆಶಾದಾಯಕ ಬೆಳವಣಿಗೆ. ಆದರೆ, ಇದರಲ್ಲೂ ಹಲವಾರು ಸಮಸ್ಯೆಗಳಿವೆ.

ಉದ್ಯೋಗಸ್ಥ ಮಹಿಳೆಗೆ ಮಣೆ ಹಾಕುವ ನಮ್ಮ ಸಮಾಜ, ಗೃಹಕೃತ್ಯವೆಸಗುವ ಗೃಹಿಣಿಯರನ್ನು ಕಡೆಗಣಿಸುತ್ತದೆ. ಅವರನ್ನು ಗೌರವದಿಂದ ಕಾಣುವಂತಹ ವಾತಾವರಣ ಇನ್ನು ಮುಂದಾದರೂ ನಿರ್ಮಾಣವಾಗಬೇಕು. ಗೃಹಕೃತ್ಯದಿಂದ ಹೈರಾಣಾದ ಮಹಿಳೆ ತನ್ನ ಆರ್ಥಿಕ ಅವಲಂಬನೆಯಿಂದ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಅವಕಾಶಗಳಿಂದ ವಂಚಿತಳಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ಅವಳಿಗೆ ಕೊಡುವ ವೇತನ ಅವಳಿಗೆ ಹೆಚ್ಚಿನ ಗೌರವವನ್ನು, ಸಮಾನತೆಯನ್ನು ಮತ್ತು ಸ್ವಾತಂತ್ರ್ಯವನ್ನು ತಂದುಕೊಟ್ಟರೆ ಅದಕ್ಕಿಂತ ಹೆಚ್ಚಿನದೇನೂ ಅವಳಿಗೆ ಬೇಕಾಗಿಲ್ಲ. ಆದರೆ, ಪುರುಷಪ್ರಧಾನ ಸಮಾಜದಲ್ಲಿ ಇದು ಸಾಧ್ಯವೇ?

ವೀಣಾ ಸುಬ್ರಹ್ಮಣ್ಯ, ಬೆಂಗಳೂರು

ಬದಲಾಗಬೇಕು ಹೋರಾಟದ ಉದ್ದೇಶ

ಎಲ್ಲ ಜಾತಿಯವರೂ ತಮಗೆ ಮೀಸಲಾತಿ ಬೇಕು, ತಮಗಾಗಿ ಪ್ರತ್ಯೇಕ ನಿಗಮ– ಪ್ರಾಧಿಕಾರ ರಚಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಹೋರಾಟಕ್ಕಿಳಿದರೆ, ಇಂತಹ ಹೋರಾಟಗಳಿಗೆ ಕೊನೆಯುಂಟೇ? ಅದರ ಬದಲು ರೈತರಿಗೆ ನೀರಾವರಿ ಸೌಕರ್ಯ, ಅವರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ, ಮಾರುಕಟ್ಟೆ ದೊರೆಯುವಂತೆ ಮಾಡಲು, ಯುವಜನರಿಗೆ ಉತ್ತಮ ವಿದ್ಯಾಭ್ಯಾಸ, ಉದ್ಯೋಗಾವಕಾಶ, ಸ್ವಉದ್ಯೋಗ ತರಬೇತಿ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಹೆಚ್ಚಳ, ನಾಡಿಗೆ ಉತ್ತಮ ಮೂಲಸೌಕರ್ಯ ದೊರೆಯುವಂತೆ ಮಾಡಲು ಎಲ್ಲಾ ಸಮಾಜದ ಸ್ವಾಮೀಜಿಗಳು, ಚಿಂತಕರು ಹೋರಾಟ ಮಾಡಬೇಕು. ಆಗ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅಲ್ಲದೆ ಅದು ದೂರದೃಷ್ಟಿಯ ಚಿಂತನೆಯ ಫಲವಾಗಿ ಮುಂದಿನ ಪೀಳಿಗೆಗೆ ದಾರಿದೀವಿಗೆಯಾಗುತ್ತದೆ.

ಮಧು ಎನ್.ಬಿ., ನಾರನಹಳ್ಳಿ, ದೊಡ್ಡಬಳ್ಳಾಪುರ

ರಾಮಮಂದಿರಕ್ಕೆ ದೇಣಿಗೆ: ಅನಗತ್ಯ ವಿವಾದ

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾರ್ಯಕ್ಕೆ ಈಗ ಇಡೀ ರಾಷ್ಟ್ರದಲ್ಲಿ ಎಲ್ಲಾ ಜಾತಿ-ಮತ ಬಾಂಧವರು ಅಭೂತಪೂರ್ವ, ಸ್ವಯಂಪ್ರೇರಿತ ಪ್ರೋತ್ಸಾಹ ನೀಡುತ್ತಿದ್ದಾರೆ. ಇದನ್ನು ಸಹಿಸದ ಕೆಲವರು ರಾಮನ ಪರ ಇರುವ ಸಂಘಟನೆಗಳ ವಿರುದ್ಧ ತಮಗಿದ್ದ ಆಕ್ರೋಶಗಳನ್ನೇ ಈಗ ತಮ್ಮ ಹುಸಿ ಆರೋಪಗಳ ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ. ರಾಮಮಂದಿರ ನಿರ್ಮಾಣ ಕಾರ್ಯಕ್ಕಾಗಿ ಅಥಣಿಯಲ್ಲಿ ಇತ್ತೀಚೆಗೆ ನಾನು ಸ್ವಯಂಪ್ರೇರಣೆಯಿಂದ ದೇಣಿಗೆ ನೀಡಿ ರಸೀದಿ ಪಡೆದಿದ್ದೇನೆ. ಆದರೆ ಈ ವಿಷಯದಲ್ಲಿ ಕೆಲವರು ಅನಗತ್ಯ ವಿವಾದ ಸೃಷ್ಟಿಸುತ್ತಿದ್ದಾರೆ.

ರಾಮಮಂದಿರ ನಿರ್ಮಾಣಕ್ಕೆ ಕಾಣಿಕೆ ನೀಡಿದವರು ಅಥವಾ ನೀಡಬೇಕೆಂಬ ಇಚ್ಛೆ ಉಳ್ಳವರು ರಾಮಮಂದಿರ ನಿರ್ಮಾಣ ಅಭಿಯಾನದಲ್ಲಿ ಸಕ್ರಿಯವಾಗಿರುವ ವಿಶ್ವ ಹಿಂದೂ ಪರಿಷತ್ತು ಅಥವಾ ಸಂಘ ಪರಿವಾರದ ವಿಶ್ವಾಸಾರ್ಹತೆಯ ಬಗ್ಗೆಯಾಗಲೀ ಸಂಗ್ರಹಿಸಲಾದ ಕಾಣಿಕೆಗಳ ಸದುಪಯೋಗದ ಬಗ್ಗೆಯಾಗಲೀ ಸಂಶಯ ವ್ಯಕ್ತಪಡಿಸಿಲ್ಲ. ತಮ್ಮ ಪ್ರಾಮಾಣಿಕತೆಯನ್ನು, ನಿಷ್ಠೆಯನ್ನು ಪ್ರಶ್ನಿಸುವುದಕ್ಕೆ ಆಸ್ಪದವಿಲ್ಲದಂತೆ ಈ ಸಂಘಟನೆಗಳು ಹಿಂದಿನಿಂದಲೂ ಸಚ್ಚಾರಿತ್ರ್ಯ ಕಾಪಾಡಿಕೊಂಡು ಬಂದಿರುವ ಇತಿಹಾಸ ಸ್ಫಟಿಕದಷ್ಟೇ ಪ್ರಚ್ಛನ್ನವಾಗಿದೆ.

ನಾವು ಎಲ್ಲೇ ಇರಲಿ, ಹೇಗೇ ಇರಲಿ ನಮ್ಮ ಭಗವಂತನ ನೆಲೆ ಸುಂದರವಾಗಿದ್ದರೆ ಅದರಂತಹ ಸಂತೋಷ ಇನ್ನೊಂದಿಲ್ಲ ಎಂಬ ನಮ್ಮ ಸಂಸ್ಕೃತಿಗೆ ಈ ರಾಮಮಂದಿರವೂ ಸೂಕ್ತ ನಿದರ್ಶನವಾಗಲಿದೆ. ಇಲ್ಲದಿದ್ದರೆ ಸಾಂಸ್ಕೃತಿಕವಾಗಿ ಬರಡಾಗಿರುವ ಎಷ್ಟೋ ಕಮ್ಯುನಿಸ್ಟ್ ರಾಷ್ಟ್ರಗಳಿಗೆ ಎದುರಾದ ದುಃಸ್ಥಿತಿಯೇ ನಮ್ಮ ದೇಶಕ್ಕೂ ಎದುರಾಗುವ ಅಪಾಯವಿದೆ. ಇತಿಹಾಸವನ್ನು ಗಮನಿಸಿದರೆ, ನಮ್ಮ ರಾಜಮಹಾರಾಜರು ಕೂಡ ಗ್ರಾಮಕ್ಕೊಂದಾದರೂ ದೇವಾಲಯವನ್ನು ನಿರ್ಮಿಸುತ್ತಿದ್ದುದು ತಿಳಿಯುತ್ತದೆ. ಅವರು ತಮ್ಮ ಸ್ವಂತ ಲಾಭ– ನಷ್ಟದ ಲೆಕ್ಕಾಚಾರದಲ್ಲಿ ಈ ದೇವಾಲಯಗಳನ್ನು ನಿರ್ಮಿಸಲಿಲ್ಲ. ಊರಿಗೆ ಒಳ್ಳೆಯದಾಗುತ್ತದೆ ಎಂಬ ಒಂದೇ ಸದಿಚ್ಛೆಯಿಂದ ಇಂತಹ ಪುಣ್ಯಕಾರ್ಯ ಕೈಗೊಂಡಿದ್ದರು ಎಂಬುದು ನಮಗೆ ಸದಾ ಮಾರ್ಗದರ್ಶಕವಾಗಬೇಕು.

ಈ ಎಲ್ಲಾ ವಿಚಾರಗಳ ಪರಿಜ್ಞಾನವಿಲ್ಲದೆ ಅಥವಾ ಪರಿಜ್ಞಾನವಿದ್ದೂ ಜಾಣ ಕುರುಡುತನವನ್ನು ಶ್ರೀರಾಮನ ವಿಚಾರದಲ್ಲಿ ಪ್ರದರ್ಶಿಸುತ್ತಾ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾದರೆ, ಹಿಂದೆ ರಾವಣನಿಗೆ ಉಂಟಾದ ದುರ್ಗತಿಯೇ ಎದುರಾದೀತು ಎಂಬ ವಿವೇಕ ಇದ್ದರೆ ಒಳ್ಳೆಯದು.

ಲಕ್ಷ್ಮಣ ಸವದಿ, ಉಪಮುಖ್ಯಮಂತ್ರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ನ್ಯಾಯ'ಕ್ಕಾಗಿ ಅಲಕ್ಷಿತ ಸಮುದಾಯಗಳ ಕೂಗು

ಮೀಸಲು ಹೋರಾಟಗಳ ಸಾಲು ಸಾಲು

ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ನಡೆದ ಪಾದಯಾತ್ರೆ –ಪ್ರಜಾವಾಣಿ ಚಿತ್ರ

• ವಿ.ಎಸ್. ಸುಬ್ರಹ್ಮಣ್ಯ

ರಾಜ್ಯದಲ್ಲಿ ಜನಸಂಖ್ಯೆ, ರಾಜಕೀಯ ಮತ್ತು ಸಾಮಾಜಿಕವಾಗಿ ಪ್ರಬಲವಾಗಿರುವ ಕುರುಬ, ಪಂಚಮಸಾಲಿ ಮತ್ತು ಒಕ್ಕಲಿಗ ಸಮುದಾಯಗಳು ಹೆಚ್ಚಿನ ಮೀಸಲಾತಿಗೆ ಆಗ್ರಹಿಸಿ ಹೋರಾಟಕ್ಕೆ ಇಳಿದಿವೆ.

ದಶಕಗಳಿಂದ ನನೆಗುದಿಗೆ ಬಿದ್ದಿರುವ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಹಂಚಿಕೆ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣದ ಹೆಚ್ಚಳದ ಬೇಡಿಕೆಗಳೂ ಹಿಂದಿಗಿಂತ ಹೆಚ್ಚು ಬಲ ಪಡೆದಿವೆ. ಈ ಎಲ್ಲವುಗಳ ಬೆನ್ನಲ್ಲೇ ದಿನಕ್ಕೊಂದರಂತೆ ಹೊಸ ಹೊಸ ಸಮುದಾಯಗಳು ಮೀಸಲಾತಿಯಲ್ಲಿ ಬದಲಾವಣೆಗೆ ಬೇಡಿಕೆ ಮಂಡಿಸುತ್ತಿವೆ. ಇದು ಮೀಸಲಾತಿ ಸೌಲಭ್ಯದ ಅನುಷ್ಠಾನದಲ್ಲಿ ಶತಮಾನದ ಇತಿಹಾಸವಿರುವ ರಾಜ್ಯದಲ್ಲಿ ಗೊಂದಲ ಮತ್ತು ಹೊಸ ಬಿಕ್ಕಟ್ಟು ಸೃಷ್ಟಿಗೆ ನಾಂದಿ ಹಾಡಿದಂತೆ ಕಾಣಿಸುತ್ತಿದೆ.

ರಾಜಕೀಯ, ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕವಾಗಿ ಪ್ರಬಲವಾಗಿರುವ ಸಮುದಾಯಗಳು ಈಗ ಇರುವುದಕ್ಕಿಂತಲೂ ಹಿಂದುಳಿದಿರುವ ಜಾತಿಗಳ ಪಟ್ಟಿಗೆ ಸೇರಿಸಬೇಕು ಎಂಬ ಬೇಡಿಕೆಯನ್ನು ಸರಣಿಯೋಪಾದಿಯಲ್ಲಿ ಮಂಡಿಸುತ್ತಿರುವುದು ರಾಜ್ಯ ಸರ್ಕಾರದ ಪಾಲಿಗೆ ತಲೆನೋವಾಗಿ ಪರಿಣಮಿಸಿದೆ. ಮಠಾಧೀಶರು, ರಾಜಕಾರಣಿಗಳು ನೇರವಾಗಿ ಮೀಸಲಾತಿ ಹೋರಾಟದ ಅಖಾಡಕ್ಕೆ ಇಳಿದಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿದ್ದರೂ ಅಂಚಿನಲ್ಲೇ ಉಳಿದಿರುವ ಹಲವು ಜಾತಿ, ಉಪ ಜಾತಿಗಳ ಜನರು 'ಬಲಿಷ್ಠ' ಸಮುದಾಯಗಳ ನಡೆಯಿಂದ ಕಂಗಾಲಾಗಿದ್ದಾರೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ರಾಜ್ಯದಲ್ಲಿ ಶೇಕಡ 50ರಷ್ಟು ಮೀಸಲಾತಿ ಜಾರಿಯಲ್ಲಿದೆ. ಸದ್ಯದ ಸ್ಥಿತಿಯಲ್ಲಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಅವಕಾಶಗಳಿಲ್ಲ. ವಿವಿಧ ಸಮುದಾಯಗಳು ಮುಂದಿಟ್ಟಿರುವ ಬೇಡಿಕೆಯನ್ನು ಈಡೇರಿಸಬೇಕಾದರೆ ಇರುವ ಶೇ 50ರ ಮೀಸಲಾತಿಯ ಹಂಚಿಕೆಯಲ್ಲಿ ಬದಲಾವಣೆ ಮಾಡಬೇಕಿದೆ. ಮೀಸಲಾತಿ ಪಟ್ಟಿಯಲ್ಲಿ ವಿವಿಧ ಪ್ರವರ್ಗಗಳಿಗೆ ಪ್ರಬಲ ಸಮುದಾಯಗಳನ್ನು ಸೇರಿಸಿದಲ್ಲಿ ಸಾಮಾಜಿಕ ನ್ಯಾಯದ ಸಮೀಕರಣವೇ ಬದಲಾಗಬಹುದು ಎಂಬ ಆತಂಕವೂ ದಟ್ಟವಾಗುತ್ತಿದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಉಪ್ಪಾರ, ಗಾಣಿಗ, ಗಂಗಾಮತಸ್ಥ, ಸವಿತಾ ಸಮಾಜ, ಮಡಿವಾಳ ಮತ್ತಿತರ ಸಣ್ಣ ಸಮುದಾಯಗಳು ಕೂಡ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಹೋರಾಟಕ್ಕೆ ಸಜ್ಜಾಗುತ್ತಿವೆ.

ಪರಿಶಿಷ್ಟ ಜಾತಿಗೆ ನೀಡಿರುವ ಶೇ 15ರ ಮೀಸಲಾತಿಯನ್ನು ಎಲ್ಲ ಉಪ ಜಾತಿಗಳಿಗೂ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡುವ ಮೂಲಕ ಒಳ ಮೀಸಲು ನಿಗದಿ ಮಾಡಬೇಕೆಂಬ ಹೋರಾಟವನ್ನು ಮತ್ತಷ್ಟು ಬಲಗೊಳಿಸಲು ಮಾದಿಗ ಸಮುದಾಯ ಹೆಜ್ಜೆ ಇಟ್ಟಿದೆ. ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಮೀಸಲಾತಿಯ ಪ್ರಮಾಣವನ್ನು ಶೇ 3ರಿಂದ ಶೇ 7.5ಕ್ಕೆ ಹೆಚ್ಚಿಸಬೇಕೆಂದು ಆಗ್ರಹಿಸಿ ಒಂದು ಸುತ್ತಿನ ಪಾದಯಾತ್ರೆ ನಡೆಸಿರುವ ವಾಲ್ಮೀಕಿ ಸಮುದಾಯ, ಎರಡನೇ ಹಂತದ ಹೋರಾಟಕ್ಕೆ ಅಣಿಯಾಗುತ್ತಿದೆ. ವೀರಶೈವ-ಲಿಂಗಾಯತ ಸಮುದಾಯದ ಎಲ್ಲ ಉಪ ಜಾತಿಗಳನ್ನೂ ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯನ್ನು ಆ ಸಮುದಾಯಗಳ ನೂರಾರು ಮಠಾಧೀಶರು ಒಗ್ಗೂಡಿ ರಾಜ್ಯ ಸರ್ಕಾರಕ್ಕೆ ರವಾನಿಸಿದ್ದಾರೆ.

ರಾಜ್ಯದಲ್ಲಿರುವ ಮೀಸಲಾತಿ ನೀತಿ

ಪ್ರವರ್ಗ	ಮೀಸಲಾತಿ ಪ್ರಮಾಣ	ಪಟ್ಟಿಯಲ್ಲಿರುವ ಜಾತಿಗಳ ವಿವರ
ಪರಿಶಿಷ್ಟ ಜಾತಿ	ಶೇ 15	ಹೊಲೆಯ, ಮಾದಿಗ, ಬೋವಿ, ಲಂಬಾಣಿ, ಕೊರಚ, ಕೊರಮ ಸೇರಿದಂತೆ 101 ಜಾತಿಗಳು
ಪರಿಶಿಷ್ಟ ಪಂಗಡ	ಶೇ 03	ವಾಲ್ಮೀಕಿ, ನಾಯಕ, ಸೋಲಿಗರು, ಕುರುಮಾನ್ ಸೇರಿದಂತೆ 50 ಜಾತಿಗಳು
ಹಿಂದುಳಿದ ವರ್ಗಗಳ ಪ್ರವರ್ಗ 1	ಶೇ 04	ಗಂಗಾಮತಸ್ಥ, ಉಪ್ಪಾರ, ಗೊಲ್ಲ ಸೇರಿ 95 ಜಾತಿಗಳು
ಹಿಂದುಳಿದ ವರ್ಗಗಳ ಪ್ರವರ್ಗ 2ಎ	ಶೇ 15	ಕುರುಬ, ಈಡಿಗ, ವಿಶ್ವಕರ್ಮ, ಕುಂಬಾರ, ಸವಿತಾ ಸಮಾಜ, ದೇವಾಂಗ, ನೇಕಾರ, ಮಡಿವಾಳ ಸೇರಿ 102 ಜಾತಿಗಳು
ಹಿಂದುಳಿದ ವರ್ಗಗಳ ಪ್ರವರ್ಗ 2ಬಿ	ಶೇ 04	ಮುಸ್ಲಿಂ ಮತ್ತು ಅದರಲ್ಲಿನ ಉಪ ಜಾತಿಗಳು
ಹಿಂದುಳಿದ ವರ್ಗಗಳ ಪ್ರವರ್ಗ 3ಎ	ಶೇ 04	ಒಕ್ಕಲಿಗ, ರೆಡ್ಡಿ, ಬಲಿಜ, ಬಂಟ, ಕೊಡವ ಸೇರಿ 12 ಜಾತಿಗಳು
ಹಿಂದುಳಿದ ವರ್ಗಗಳ ಪ್ರವರ್ಗ 3ಬಿ	ಶೇ 05	ವೀರಶೈವ ಮತ್ತು ಲಿಂಗಾಯತ ಸಮುದಾಯಗಳ ಎಲ್ಲ ಉಪ ಜಾತಿಗಳು

ರಾಜಕೀಯ ನಂಟು

ಬಹುಪಾಲು ಸಮುದಾಯಗಳು ಹೆಚ್ಚಿನ ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟದ ನೇತೃತ್ವವನ್ನು ಆಯಾ ಸಮುದಾಯದ ಮಠಾಧೀಶರೇ ವಹಿಸಿಕೊಂಡಿದ್ದಾರೆ. ಆದರೆ, ರಾಜಕೀಯ ನಾಯಕರೂ ಈ ಎಲ್ಲ ಹೋರಾಟಗಳ ಜತೆ ನಿಕಟ ನಂಟು ಹೊಂದಿದ್ದಾರೆ. ಸಚಿವ ಕೆ.ಎಸ್. ಈಶ್ವರಪ್ಪ ಅವರು ಕುರುಬರ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಸಚಿವರಾದ ಎಂ.ಟಿ.ಬಿ. ನಾಗರಾಜ್, ಆರ್. ಶಂಕರ್, ಜೆಡಿಎಸ್ ಶಾಸಕ ಬಂಡೆಪ್ಪ ಕಾಶೆಂಪುರ ಸೇರಿದಂತೆ ಹಲವು ನಾಯಕರು ನೇರವಾಗಿ ಸಮುದಾಯದ ಬೇಡಿಕೆಗೆ ಬೆಂಬಲ ಸೂಚಿಸಿದ್ದಾರೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೋರಾಟದಿಂದ ದೂರ ಉಳಿದಿದ್ದರೂ, ವಿರೋಧವನ್ನೇನೂ ವ್ಯಕ್ತಪಡಿಸಿಲ್ಲ.

ಸಚಿವರಾದ ರಮೇಶ ಜಾರಕಿಹೊಳಿ, ಬಿ. ಶ್ರೀರಾಮುಲು, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಸೇರಿದಂತೆ ಹಲವು ನಾಯಕರು ವಾಲ್ಮೀಕಿ ಸಮುದಾಯದ ಹೋರಾಟದಲ್ಲಿ ನೇರವಾಗಿ ಗುರುತಿಸಿಕೊಂಡಿದ್ದಾರೆ. ಪಂಚಸಾಲಿ ಸಮುದಾಯದ ಬೇಡಿಕೆಯ ಪರವಾಗಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಸೇರಿದಂತೆ ಹಲವರು ಧ್ವನಿ ಎತ್ತಿದ್ದಾರೆ. ಸಚಿವರಾದ ಜಗದೀಶ ಶೆಟ್ಟರ್, ಸಿ.ಸಿ. ಪಾಟೀಲ, ಲಕ್ಷ್ಮಣ ಸವದಿ, ಮುರುಗೇಶ ನಿರಾಣಿ ಸೇರಿದಂತೆ ಸಂಪುಟದ ಸದಸ್ಯರೂ ಬೆಂಬಲ ಸೂಚಿಸಿದ್ದಾರೆ.

ಎಸ್.ಟಿ ಸ್ಥಾನಮಾನಕ್ಕೆ ಕುರುಬರ ಪಟ್ಟು

ಹಿಂದುಳಿದ ವರ್ಗಗಳಲ್ಲಿ ಅತಿದೊಡ್ಡ ಸಮುದಾಯವಾಗಿರುವ ಕುರುಬರು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವಂತೆ ಪಟ್ಟು ಹಿಡಿದಿದ್ದಾರೆ. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೋರಾಟದ ನೇತೃತ್ವ ವಹಿಸಿದ್ದು, ಕಾಗಿನೆಲೆಯಿಂದ ಬೆಂಗಳೂರಿನವರೆಗೆ ಪಾದಯಾತ್ರೆಯನ್ನೂ ನಡೆಸಿದ್ದಾರೆ. ಕೊಡಗು ಜಿಲ್ಲೆಯ ಕುರುಬರಿಗೆ ಎಸ್.ಟಿ ಸ್ಥಾನಮಾನ ನೀಡಿರುವುದು, ಜೇನು ಕುರುಬ, ಕಾಡು ಕುರುಬ ಮತ್ತು ಗೊಂಡ ಸಮುದಾಯಗಳನ್ನು ಎಸ್.ಟಿ ಪಟ್ಟಿಗೆ ಸೇರಿಸಿರುವುದನ್ನು ಆಧಾರವಾಗಿಟ್ಟುಕೊಂಡು ಕುರುಬರು ಹೋರಾಟ ಆರಂಭಿಸಿದ್ದಾರೆ. 'ಕುರುಮಾನ್' ಜಾತಿಗೆ ಸಮಾನವಾಗಿ ಕರ್ನಾಟಕದಲ್ಲಿ ಕುರುಬ ಮತ್ತು ಅದರ ಎಲ್ಲ ಉಪ ಜಾತಿಗಳನ್ನೂ ಎಸ್.ಟಿ ಪಟ್ಟಿಗೆ ಸೇರಿಸಬೇಕು ಎಂಬುದು ಬೇಡಿಕೆ. ಈ ಕುರಿತು ರಾಜ್ಯ ಸರ್ಕಾರದ ಆದೇಶದಂತೆ ಮೈಸೂರಿನ ಬುಡಕಟ್ಟುಗಳ ಅಧ್ಯಯನ ಸಂಸ್ಥೆ ಕುಲ ಶಾಸ್ತ್ರೀಯ ಅಧ್ಯಯನ ನಡೆಸುತ್ತಿದೆ.

ಆರು ವರ್ಷಗಳಿಂದ ಬಾಕಿ

ಗಂಗಾಮತಸ್ಥರು ಮತ್ತು ಕಾಡು ಗೊಲ್ಲ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವಂತೆ ರಾಜ್ಯ ಸರ್ಕಾರ 2014ರಲ್ಲೇ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಪ್ರಸ್ತಾವ ಕೇಂದ್ರ ಸರ್ಕಾರದಲ್ಲೇ ಬಾಕಿ ಉಳಿದಿದೆ. ಗಂಗಾಮತಸ್ಥ ಸಮುದಾಯಕ್ಕೆ ಸಂಬಂಧಿಸಿದಂತೆ ಫೆಬ್ರುವರಿಯಲ್ಲೂ ರಾಜ್ಯ ಸರ್ಕಾರ ಹೆಚ್ಚುವರಿ ದಾಖಲೆಗಳನ್ನು ಕೇಂದ್ರಕ್ಕೆ ಸಲ್ಲಿಸಿದೆ.

'2ಎ' ಸೇರುವ ತವಕ

ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಪಟ್ಟಿಗೆ ಸೇರಿಸಬೇಕೆಂದು ಆಗ್ರಹಿಸಿ ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಹರಿಹರದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ಆರಂಭವಾಗಿರುವ ಪಾದಯಾತ್ರೆ ಬೆಂಗಳೂರು ತಲುಪಿದೆ. ಪಂಚಮ ಸಾಲಿ ಸಮುದಾಯವನ್ನು ಪ್ರವರ್ಗ '2ಎ' ಪಟ್ಟಿಗೆ ಸೇರಿಸುವ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಆದೇಶಿಸಿದ್ದಾರೆ. ಆದರೆ, ಅಧ್ಯಯನದ ಅಗತ್ಯವಿಲ್ಲ ಎಂದು ಪ್ರತಿಪಾದಿಸಿರುವ ಮಠಾಧೀಶರು ಮತ್ತು ಸಮುದಾಯದ ರಾಜಕೀಯ ನಾಯಕರು ತಕ್ಷಣವೇ ಆದೇಶ ಹೊರಡಿಸಬೇಕೆಂಬ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ.

ಪ್ರಬಲರ ಸೇರ್ಪಡೆಗೆ ವಿರೋಧ

ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಇತರ ಪ್ರವರ್ಗಗಳಲ್ಲಿರುವ ಪ್ರಬಲ ಸಮುದಾಯಗಳ ಸೇರ್ಪಡೆಗೆ ವಿರೋಧವೂ ಇದೆ. ಪಂಚಮಸಾಲಿ ಸಮುದಾಯವನ್ನು ಪ್ರವರ್ಗ '2ಎ' ಪಟ್ಟಿಗೆ ಸೇರಿಸುವುದಕ್ಕೆ ಈಡಿಗರು ಮತ್ತು ನೇಕಾರ ಸಮುದಾಯಗಳು ಈಗಾಗಲೇ ತಮ್ಮ ವಿರೋಧವನ್ನು ದಾಖಲಿಸಿವೆ.

ಕುರುಬರನ್ನು ಎಸ್.ಟಿ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯ ಕುರಿತೂ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿರುವ ಹಲವು ಸಮುದಾಯಗಳಿಗೆ ವಿರೋಧವಿದೆ. ಆದರೆ, ರಾಜ್ಯ ಸರ್ಕಾರದ ನಡೆಯನ್ನು ಆಧರಿಸಿ ಪ್ರತಿಕ್ರಿಯಿಸಲು ಸಜ್ಜಾಗುತ್ತಿವೆ ಎಂಬ ಮಾತು ಕೇಳಿಬರುತ್ತಿದೆ.

ಕೈಗೂಡದ ಯತ್ನಗಳು

ಸಾದರ ಲಿಂಗಾಯತ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಪಟ್ಟಿಗೆ ಸೇರಿಸುವ ಪ್ರಯತ್ನ 2009 ಮತ್ತು 2010ರಲ್ಲಿ ನಡೆದಿತ್ತು. ಕೆಲವು ಜಿಲ್ಲಾಧಿಕಾರಿಗಳು ಸಾದರ ಲಿಂಗಾಯತರಿಗೆ '2ಎ' ಜಾತಿ ಪ್ರಮಾಣಪತ್ರಗಳನ್ನೂ ವಿತರಿಸಿದ್ದರು. ಆದರೆ, ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು, ಪ್ರಬಲ ವಿರೋಧ ವ್ಯಕ್ತವಾದ ಕಾರಣ ಈ ನಿರ್ಧಾರವನ್ನು ಹಿಂಪಡೆದಿದ್ದರು.

ಶಿಕ್ಷಣಕ್ಕೆ ಸೀಮಿತವಾಗಿ ಬಲಿಜ ಸಮುದಾಯವನ್ನು '2ಎ' ಪಟ್ಟಿಗೆ ಸೇರಿಸುವ ತೀರ್ಮಾನವನ್ನು 2011ರಲ್ಲಿ ಕೈಗೊಳ್ಳಲಾಗಿತ್ತು. ಅದನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನ್ಯಾಯಾಲಯ ಆದೇಶಿಸಿದೆ. ಈ ವಿಚಾರದಲ್ಲೂ ಯಾವುದೇ ಬದಲಾವಣೆ ಜಾರಿಗೆ ಬಂದಿಲ್ಲ.

ಶೇ 7.5ರ ಮೀಸಲಾತಿಗೆ ಆಗ್ರಹ

ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಮೀಸಲಾತಿಯ ಪ್ರಮಾಣವನ್ನು ಶೇ 3ರಿಂದ ಶೇ 7.5ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ವಾಲ್ಮೀಕಿ ಸಮುದಾಯ ಹೋರಾಟ ನಡೆಸುತ್ತಿದೆ. ರಾಜನಹಳ್ಳಿಯ ಪ್ರಸನ್ನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನವರೆಗೂ ಮೊದಲ ಹಂತದ ಪಾದಯಾತ್ರೆ ನಡೆದಿದೆ. ಈ ಬೇಡಿಕೆಗೆ ಪೂರಕವಾಗಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ನೇತೃತ್ವದ ಆಯೋಗ ಸಲ್ಲಿಸಿರುವ ವರದಿ, ಸಂಪುಟ ಉಪ ಸಮಿತಿಯ ಪರಿಶೀಲನೆಯಲ್ಲಿದೆ.

ಹೋರಾಟಕ್ಕೆ ಸಜ್ಜು

ಒಕ್ಕಲಿಗ ಸಮುದಾಯದ ಎಲ್ಲ 115 ಉಪ ಜಾತಿಗಳನ್ನೂ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಹೋರಾಟ ಆರಂಭಿಸಲು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಿದ್ಧತೆ ನಡೆಸಿದ್ದಾರೆ. ಹೋರಾಟದ ರೂಪರೇಷೆ ಸಿದ್ಧಪಡಿಸಲು ಮತ್ತು ಬೇಡಿಕೆ ಪಟ್ಟಿ ರೂಪಿಸಲು ಎರಡು ಸಮಿತಿಗಳನ್ನೂ ರಚಿಸಿದ್ದಾರೆ.

ಒಳ ಮೀಸಲು ನನೆಗುದಿಗೆ

ಪರಿಶಿಷ್ಟ ಜಾತಿಗೆ ನಿಗದಿಪಡಿಸಿರುವ ಶೇಕಡ 15ರ ಮೀಸಲಾತಿಯನ್ನು ಸಮುದಾಯದ 101 ಉಪ ಜಾತಿಗಳಿಗೂ ಹಂಚಿಕೆ ಮಾಡುವಂತೆ ದಶಕಗಳಿಂದಲೂ ಹೋರಾಟ ನಡೆಯುತ್ತಿದೆ. ಮಾದಿಗ ಮತ್ತು ಆದಿಜಾಂಬವ ಸಮುದಾಯಗಳು ಈ ಹೋರಾಟದ ಮುಂಚೂಣಿಯಲ್ಲಿವೆ. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲು ಕಲ್ಪಿಸುವುದಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದ ಆಯೋಗ ನೀಡಿರುವ ವರದಿ ರಾಜ್ಯ ಸರ್ಕಾರದ ಮುಂದಿದೆ.

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಸರ್ವಧರ್ಮಗಳ ಪವಿತ್ರ ಭಾರತ

ಭಾರತದ ನೆಲ ಸರ್ವಧರ್ಮಗಳ ಬೀಡು. ಈ ನೆಲ ಸರ್ವ ವಿಚಾರಗಳ ಸಮನ್ವಯ ಭೂಮಿ. ಇಲ್ಲಿ ಸಾವಿರಾರು ವರ್ಷಗಳಿಂದ ಹಲವು ಸಂಸ್ಕೃತಿಗಳು ಕೂಡಿಬಾಳಿ ಬೆಳೆದಿವೆ. ಹೀಗಾಗಿ ಇಲ್ಲಿ ವಿಶ್ವದಲ್ಲೆಲ್ಲೂ ಕಾಣಸಿಗದಷ್ಟು ಭಾಷಾ ವೈವಿಧ್ಯ, ಧರ್ಮ- ಸಂಸ್ಕೃತಿಗಳು ಮೇಳೈಸಿವೆ. ಹಲವು ಭಿನ್ನ ಧರ್ಮ-ಪಂಥಗಳು ಹಿಂದೂ ಧರ್ಮದಡಿ ಒಂದಾಗಿ, ಭಾರತೀಯ ಪರಂಪರೆಯಲ್ಲಿ ಭಾವೈಕ್ಯ ಸಾರಿವೆ. ಇಂಥ ಪವಿತ್ರ ಭೂಮಿಯಲ್ಲಿ ಭಾರತೀಯರು ಭೇದಭಾವದಿಂದ ವರ್ತಿಸಬಾರದು. ವಿಶ್ವಧರ್ಮಗಳ ಸಂಕ್ರಮಣ ಕಾಲದಲ್ಲಿ ಭಾರತೀಯರು ಮತ್ತಷ್ಟು ಪ್ರಬುದ್ಧತೆಯಿಂದ ವರ್ತಿಸಬೇಕು. ಧರ್ಮಗಳ ನಡುವಿನ ಸಂಘರ್ಷ ಕೊನೆಗೊಳ್ಳಬೇಕಾದರೆ ಧರ್ಮದ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳಬಾರದು. ಧರ್ಮದ ಕರ್ತೃತ್ವ ಶಕ್ತಿ ಮೇಲೆ ನಂಬಿಕೆ ಇಟ್ಟುಕೊಂಡೇ, ಧರ್ಮಗಳ ನಡುವೆ ಸೌಹಾರ್ದ ಬೆಸುಗೆ ಮೂಡಿಸಬೇಕು.

ಧರ್ಮಧರ್ಮಗಳ ನಡುವೆ ಸೌಹಾರ್ದ ಮೂಡಿಸುವ ಕಾರ್ಯ ಭಾರತೀಯರಿಗೆ ಹೊಸದೇನೂ ಅಲ್ಲ. ಭಾರತದ ನೆಲದಲ್ಲಿ ಸಾವಿರಾರು ವರ್ಷಗಳಿಂದ ಹಲವು ಧರ್ಮ-ಪಂಥಗಳ ಒಗ್ಗೂಡಿವೆ. ಒಳ್ಳೆಯ ಆಶಯದಿಂದ ಹುಟ್ಟಿದ ಧರ್ಮಗಳನ್ನು ಕೆಲ ಮತಾಂಧರ ಕುಕೃತ್ಯಕ್ಕಾಗಿ ದೂಷಿಸದೆ, ಧರ್ಮಗಳ ನಡುವೆ ಸೌಹಾರ್ದ ಸೇತುವೆ ಕಟ್ಟಿದ್ದರಿಂದಲೇ, ಹಲವು ಸಂಸ್ಕೃತಿ--ಧರ್ಮಗಳ ಸಾರದಿಂದ ಭಾರತ ವಿಶ್ವದಲ್ಲೆ ಹೆಚ್ಚು ಪ್ರಬುದ್ಧವಾಗಿ ಕಾಣಿಸುತ್ತದೆ. ಭಾರತೀಯರು ಹೃದಯಶ್ರೀಮಂತಿಕೆಯಿಂದ ಕಂಗೊಳಿಸುತ್ತಾರೆ.

ಮತಭೇದ ಮಾಡುವ ಮೂಲಕ ಜನರ ನಡುವೆ ಕಂದಕ ನಿರ್ಮಿಸುವ ದುರ್ಜನರು ಹಿಂದಿನ ಕಾಲದಲ್ಲೂ ಇದ್ದರು. ಅಂತಹ ಸಂದರ್ಭದಲ್ಲಿ ವಿವೇಕವಂತರು ಧರ್ಮದ ತಿರುಳನ್ನು ಮತಾಂಧರಿಗೆ ತಿಳಿಸಿ, ಸರ್ವರ ಮನದಲ್ಲೂ ಸದ್ಭಾವನೆ ಮೂಡಿಸುವಲ್ಲಿ ಯಶಸ್ವಿಯಾಗುತ್ತಿದ್ದರು. ಇಲ್ಲದಿದ್ದರೆ ಧರ್ಮ-ದ್ವೇಷಗಳ ಉರಿಯಲ್ಲಿ ಜನ ಬೆಂದು ಬಸವಳಿದು ಹೋಗುತ್ತಿದ್ದರು. ಕಾಲದಿಂದ ಕಾಲಕ್ಕೆ ಜಾಗೃತ ಸಜ್ಜನರು ಮಾನವ ಸೌಹಾರ್ದತೆಯ ಮಹತ್ವವನ್ನು ಎಲ್ಲೆಡೆ ಸಾರಿದ್ದರಿಂದ ಧರ್ಮದ್ವೇಷದ ಮಹಾಪಾಪ ಅಳಿದು, ತತ್ವ ವಿಚಾರಗಳ ದೀಪ್ತಿ ಎಲ್ಲರ ಮನದಲ್ಲಿ ಬೆಳಗಿತು. ಭಾರತೀಯರು ಎಲ್ಲ ಧರ್ಮಗಳ ಎಲ್ಲಾ ದೇವರನ್ನು ಪವಿತ್ರದೃಷ್ಟಿಯಲ್ಲಿ ನೋಡಿದ್ದರಿಂದ ಭಾರತದ ನೆಲದಲ್ಲಿ ಧರ್ಮ--ಸಂಸ್ಕೃತಿಗಳ ವೈಭವ ಮೆರೆಯಿತು.

ಧರ್ಮಗಳು ಹುಟ್ಟಿದಾಗ ಅವು ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ನಡೆಸಿದ ದೊಡ್ಡ ಇತಿಹಾಸವೇ ಇದೆ. ಈಗ ಧರ್ಮ-ಧರ್ಮಗಳ ನಡುವೆ ಸೌಹಾರ್ದ ಸಂಬಂಧ ಬೆಸೆಯುವ ಕಾರ್ಯ ತಕ್ಷಣದಲ್ಲೇ ಆಗುತ್ತೆ ಎಂಬ ಆತುರ ಅಗತ್ಯವಿಲ್ಲ. ಇಂದು ಬೀಜ ಹಾಕಿದರೆ ನಾಳೆಗೇ ಫಲ ಸಿಗಬಹುದು ಎಂಬ ಅಪರಿಮಿತ ನಂಬಿಕೆಯನ್ನು ಇಟ್ಟುಕೊಳ್ಳಬೇಕಿಲ್ಲ. ಇಂದು ಮಾನವರ ಮನಸ್ಸಿನಲ್ಲಿ ಬಿತ್ತಿದ ಸೌಹಾರ್ದತೆ ಬೀಜ ಮೊಳೆತು ಹೆಮ್ಮರವಾಗಿ ಬಲಿತು, ಉತ್ತಮ ಫಲ ಸಿಗಬಹುದು ಎಂಬ ದೀರ್ಘಕಾಲೀನ ನಂಬಿಕೆಯನ್ನು ವಿವೇಕವಂತರು ಇಟ್ಟುಕೊಳ್ಳಬೇಕು. ಅಲ್ಲಿವರೆಗೆ ಸಂಯಮದಿಂದ ಮಾನವತೆ ತತ್ವಕ್ಕೆ ನೀರೆರೆದು ಪೋಷಿಸುವುದು ಸಜ್ಜನರ ಆದ್ಯ ಕರ್ತವ್ಯವಾಗಬೇಕು.

ಜಗತ್ತಿನ ಎಲ್ಲ ಧರ್ಮಗಳೂ ಮಾನವರಿಗೆ ಒಳ್ಳೆಯದನ್ನೇ ಬಯಸಿವೆ. ಧರ್ಮಗಳ ಆಶಯ, ವಿಶಾಲತೆ ಅರಿಯದ ಸಂಕುಚಿತ ಬುದ್ಧಿಯ ಜನ, ತಮ್ಮ ಜನಾಂಗಗಷ್ಟೆ ಅದನ್ನು ಸೀಮಿತಗೊಳಿಸಿದ್ದಾರೆ. ಇದರಿಂದ ಜನಸಾಮಾನ್ಯರಲ್ಲಿ ಧರ್ಮ ಮತ್ತು ದೇವರ ಬಗ್ಗೆ ಭೇದಭಾವ ಕಾಣಿಸಿಕೊಳ್ಳುತ್ತಿದೆ. ಮಾನವ-ಕಲ್ಯಾಣಕ್ಕೆಂದು ಹುಟ್ಟಿದ ಧರ್ಮಗಳು ಅವನ ವಿಕಾಸಕ್ಕೆ ತಳಹದಿ ಆಗದೆ, ಅವನ ನಾಶಕ್ಕೆ ಕಂದಕವಾಗುತ್ತಿವೆ. ಇಂಥ ಸಂದರ್ಭದಲ್ಲಿ ಜನ ಸಂಕುಚಿತ ಮನೋಭಾವ ತೊಡೆದು, ಎಲ್ಲ ಧರ್ಮಗಳನ್ನು ಗೌರವಿಸುವ ಒಳ್ಳೆಯ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಎಲ್ಲ ದೇವರನ್ನು ಆರಾಧಿಸುವ ಆರೋಗ್ಯಕರ ಮನಸ್ಸಿನ ಜನ ಜಗತ್ತಿನಲ್ಲಿ ಉದಯಿಸಿದಾಗ, 'ಸಚ್ಚಿದಾನಂದ'ಮಯ ಬೆಳಗು ಎಲ್ಲೆಡೆ ಪ್ರಕಾಶಿಸುತ್ತದೆ.

ಅಮಿತ್ ಶಾ ಚುನಾವಣಾ ಪ್ರಚಾರ: 5ನೇ ರಥಯಾತ್ರೆಗೆ ಚಾಲನೆ

'ಬಂಗಾಳಕ್ಕೆ ಸುವರ್ಣಯುಗದ ಭರವಸೆ'

ಕಾಕದ್ವೀಪ್/ಪೈಲಾನ್ (ಪಶ್ಚಿಮ ಬಂಗಾಳ) (ಪಿಟಿಐ): 'ಬಂಗಾಳದಲ್ಲಿ ಅತ್ತೆ-ಅಳಿಯನ ಸಿಂಡಿಕೇಟ್ ಆಳ್ವಿಕೆಯನ್ನು ಕೊನೆಗೊಳಿಸಿ. ಬಿಜೆಪಿಯನ್ನು ಅಧಿಕಾರಕ್ಕೆ ತನ್ನಿ. ಅಭಿವೃದ್ಧಿಯಲ್ಲಿ ಬಂಗಾಳವನ್ನು ಸುವರ್ಣಯುಗಕ್ಕೆ ಕರೆದೊಯ್ಯುತ್ತೇವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಳದ ಕಾಕದ್ವೀಪ್‌ನಲ್ಲಿ ಬಿಜೆಪಿಯ ಐದನೇ ರಥಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದ್ದಾರೆ. 'ಮಮತಾ ಬ್ಯಾನರ್ಜಿ ಮತ್ತು ಅವರ ತಂಡವನ್ನು ಸೋಲಿಸಿ, ಬಂಗಾಳದಲ್ಲಿ ಬಿಜೆಪಿ ಸರ್ಕಾರವನ್ನು ತರುವುದು ನಮ್ಮ ಗುರಿ ಅಲ್ಲ. ಇದು ಅವರ ಸಿಂಡಿಕೇಟ್ ರಾಜ್ ಅನ್ನು ಕೊನೆಗೊಳಿಸುವ ಯುದ್ಧ. ಇದು ಬಿಜೆಪಿ ಕಾರ್ಯಕರ್ತರು ಮತ್ತು ಟಿಎಂಸಿ ಸಿಂಡಿಕೇಟ್ ಸದಸ್ಯರ ನಡುವಣ ಯುದ್ಧ. ನೀವು ಬಿಜೆಪಿಗೆ ಮತ ನೀಡಿ. ಅಕ್ರಮ ವಲಸಿಗರು ಮಾತ್ರವಲ್ಲ, ಒಂದು ಪಕ್ಷಿಯೂ ಗಡಿಯನ್ನು ದಾಟಲು ಬಿಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಕೇಂದ್ರ ಸರ್ಕಾರದಿಂದ ಕಳುಹಿಸಿದ ಯಾವ ಅನುದಾನವೂ ಬಂಗಾಳದಲ್ಲಿ ಸರಿಯಾಗಿ ಹಂಚಿಕೆಯಾಗುತ್ತಿರಲಿಲ್ಲ. ಪಶ್ಚಿಮ ಬಂಗಾಳ ಸರ್ಕಾರವು ಅತ್ತೆ-ಅಳಿಯನ ಕಲ್ಯಾಣದಲ್ಲಿ ಮಾತ್ರ ಆಸಕ್ತಿ ಹೊಂದಿದೆ. ಜನರ ಕಲ್ಯಾಣದಲ್ಲಿ ಆಸಕ್ತಿ ಹೊಂದಿಲ್ಲ' ಎಂದು ಶಾ ಲೇವಡಿ ಮಾಡಿದ್ದಾರೆ.

'ನಾವು ಅಧಿಕಾರಕ್ಕೆ ಬಂದರೆ, ಎಲ್ಲಾ ಅನುದಾನವು ಜನರಿಗೆ ತಲುಪುವಂತೆ ಮಾಡುತ್ತೇವೆ. ಅನುದಾನವನ್ನು ದುರ್ಬಳಕೆ ಮಾಡಿಕೊಂಡವರನ್ನು ಜೈಲಿಗೆ ಅಟ್ಟುತ್ತೇವೆ' ಎಂದು ಶಾ ಹೇಳಿದ್ದಾರೆ.



ಕೋಲ್ಕತ್ತದಲ್ಲಿ ಶುಕ್ರವಾರ ನಡೆದ ಶೌರ್ಯಾಂಜಲಿ ಕಾರ್ಯಕ್ರಮದಲ್ಲಿ ಅಮಿತ್ ಶಾ ಮಾತನಾಡಿದರು –ಪಿಟಿಐ ಚಿತ್ರ

ಅಳಿಯನ ಸಮರ್ಥನೆಗೆ ನಿಂತ ಮಮತಾ

ಪೈಲಾನ್‌ನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ. 'ಬಿಜೆಪಿ 294ರಲ್ಲಿ 200 ಸ್ಥಾನಗಳನ್ನು ಗೆಲ್ಲುವುದಾಗಿ ಹೇಳುತ್ತಿದೆ. 2021ರ ಚುನಾವಣೆಯಲ್ಲಿ ಟಿಎಂಸಿಯು ಈ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿಯಲಿದೆ. ನಾವು ಹೆಚ್ಚಿನ ಮತಗಳನ್ನು ಪಡೆದು, ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ' ಎಂದು ಮಮತಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಅಮಿತ್ ಶಾ ಪ್ರತಿದಿನವೂ ಅತ್ತೆ-ಅಳಿಯ ಎಂದು ಮಾತನಾಡುತ್ತಿದ್ದಾರೆ. ಶಾ ಅವರು ಮೊದಲು ಅಭಿಷೇಕ್ ಬ್ಯಾನರ್ಜಿ ವಿರುದ್ಧ ಸ್ಪರ್ಧಿಸಲಿ, ಆಮೇಲೆ ನನ್ನ ವಿರುದ್ಧ ಸ್ಪರ್ಧಿಸುವ ಯೋಚನೆ ಮಾಡಲಿ' ಎಂದು ಸವಾಲು ಹಾಕಿದ್ದಾರೆ.

'ಪ್ರತಿದಿನವೂ ನೀವು ಅತ್ತೆ-ಅಳಿಯ, ಅತ್ತೆ-ಅಳಿಯ ಎನ್ನುತ್ತೀರಿ. ಅಳಿಯ ಯಾರು? ಅವರ ಹೆಸರನ್ನೇಕೆ ನೀವು ಹೇಳುವುದಿಲ್ಲ? ನಿಮ್ಮ ಮಗ ಯಾರು? ನಿಮ್ಮ ಮಗನೂ ನನ್ನ ಅಳಿಯನ ಸಮಾನ. ನಿಮ್ಮ ಮಗ ರಾಜಕೀಯಕ್ಕೆ ಬಂದು, ತಳಮಟ್ಟದಿಂದ ಉನ್ನತ ಸ್ಥಾನಕ್ಕೆ ಬರಲು ನೀವೇಕೆ ಅವಕಾಶ ನೀಡಬಾರದು?' ಎಂದು ಮಮತಾ ಅವರು ಸವಾಲು ಹಾಕಿದ್ದಾರೆ.

'ನನ್ನ ಅಳಿಯ ನೇರವಾಗಿ ರಾಜ್ಯಸಭೆಗೆ ಹೋಗಬಹುದಿತ್ತು. ಆದರೆ ಅವನು ಚುನಾವಣೆಯಲ್ಲಿ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾಗಿ ಹೋಗಿದ್ದಾನೆ. ನಾನು ಅವನನ್ನು ಉಪಮುಖ್ಯಮಂತ್ರಿ, ಮುಖ್ಯಮಂತ್ರಿಯಾಗಿ ಮಾಡಿಲ್ಲ. ಅವನೊಬ್ಬ ಸಾಮಾನ್ಯ ಸಂಸದ. ಅವನನ್ನು ಕೊಲ್ಲಲು ಅವನ ಪ್ರತಿಸ್ಪರ್ಧಿಗಳು ಯತ್ನಿಸಿದ್ದರು' ಎಂದು ಅವರು ಹೇಳಿದ್ದಾರೆ.

ರೈತರಿಗೆ ನೆರವಾಗಿ: ವಿದ್ಯಾರ್ಥಿಗಳಿಗೆ ಮೋದಿ ಕರೆ

ಶಾಂತಿನಿಕೇತನ: ಗುರು ರವೀಂದ್ರನಾಥ್ ಟ್ಯಾಗೋರ್ ಅವರು, ಕೇವಲ ವಿಶ್ವಭಾರತಿ ಎಂಬ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಿಲ್ಲ. ಬದಲಿಗೆ ಆ ಮೂಲಕ ಭಾರತೀಯ ಸಂಸ್ಕೃತಿಯು ಜಾಗತಿಕವಾಗಿ ತನ್ನ ಸಾಮರ್ಥ್ಯವನ್ನು ಅರ್ಥೈಸಿಕೊಳ್ಳುವಂತೆ ಮಾಡಿದರು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ವಿಡಿಯೊ ಸಂವಾದದ ಮೂಲಕ ವಿಶ್ವಭಾರತಿ ವಿಶ್ವವಿದ್ಯಾಲಯದ ಘಟಿಕೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಮೋದಿ ಅವರು, 'ವಿಶ್ವಭಾರತಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ರೈತರು ಮತ್ತು ಕುಶಲಕರ್ಮಿಗಳಿಗೆ ನೆರವಾಗಬೇಕು. ಅವರ ಉತ್ಪನ್ನಗಳು ಮತ್ತು ಕಲಾಕೃತಿಗಳಿಗೆ ಜಾಗತಿಕ ಮಾರುಕಟ್ಟೆ ಒದಗಿಸಲು ನೆರವಾಗಬೇಕು' ಎಂದು ಮೋದಿ ಕರೆ ನೀಡಿದ್ದಾರೆ.

'ಏಕ ಭಾರತ-ಶ್ರೇಷ್ಠ ಭಾರತ ಅಭಿಯಾನವನ್ನು ರೂಪಿಸುವಲ್ಲಿ ಪಶ್ಚಿಮ ಬಂಗಾಳವು ಮಹತ್ವದ ಪಾತ್ರ ವಹಿಸಿತ್ತು. ದೇಶದ ಮುಂದಿನ 25 ವರ್ಷಗಳ ಶಿಕ್ಷಣದ ದಿಕ್ಕನ್ನು ವಿಶ್ವಭಾರತಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಿರ್ಧರಿಸಬೇಕು. ಇಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರತಿವರ್ಷಕ್ಕೊಂದು ಧ್ಯೇಯದಂತೆ 25 ಧ್ಯೇಯಗಳ ವರದಿಯನ್ನು ಸಿದ್ಧಪಡಿಸಬೇಕು' ಎಂದು ಮೋದಿ ಕರೆ ನೀಡಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ 20 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ಅಷ್ಟಮಿ ಗಂ. 9-56 (ಹ. 10-45) ಶನಿವಾರ ನಿತ್ಯ ನಕ್ಷತ್ರ ರೋಹಿಣಿ ಗಂ 58-24 (ಬೆ. ಝಾ 6-08) ವೈಧೃತಿ ನಾಮ ಯೋಗ ಗಂ 50-50 ಬವ ಕರಣ ಗಂ 9-56 ವಿಷ. ಗಂ. 36-17 ಅಮೃತ ಗಂ. 49-26 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-44 ಸೂರ್ಯಾಸ್ತ: 6-23 ಅದೃಷ್ಟ ಸಂಖ್ಯೆ 2, 6

ಮೇಷ: ಸಹಕಾರ ಸಂಘ ಮುಂತಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಉತ್ತಮ ಹುದ್ದೆಯನ್ನು ಹೊಂದುವ ಅವಕಾಶ. ಬಂಧುಗಳ ಆಗಮನದಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ. ಕಾರ್ಯ ಸಾಧನೆಗಾಗಿ ಗಣೇಶ ಆರಾಧನೆ ಮಾಡಿ.

ವೃಷಭ: ಲೆಕ್ಕ ಪರಿಶೋಧನಾ ಅಥವಾ ಲೆಕ್ಕಪತ್ರಗಳನ್ನು ನೋಡಿಕೊಳ್ಳುವವರಿಗೆ ಬಿಡುವಿಲ್ಲದ ಕೆಲಸ. ಸಂಪಾದನೆಯಲ್ಲಿ ಏರುಮುಖ. ವಾದವಿವಾದಗಳು ಬಗೆಹರಿದು ನಿರಾಳತೆ ನೆಲೆಸುವುದು. ಆರೋಗ್ಯದೆಡೆ ಗಮನವಿರಲಿ.

ಮಿಥುನ: ಸಂಶೋಧನಾ ಕಾರ್ಯಗಳಲ್ಲಿ ತೊಡಗಿದವರಿಗೆ ಹೊಸ ಸಂಶೋಧನೆಗೆ ಆರ್ಥಿಕ ಸಹಕಾರ ದೊರೆತು ಕೆಲಸಗಳು ನಿರ್ವಿಘ್ನವಾಗಿ ನಡೆಯಲಿದೆ. ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಬಿಡುವಿಲ್ಲದ ಕೆಲಸ.

ಕರ್ಕಾಟಕ: ರಂಗಕಲಾವಿದರಿಗೆ ವಿಶೇಷವಾಗಿ ಹಾಸ್ಯ ಕಲಾವಿದರಿಗೆ ವಿಶೇಷ ಗೌರವ. ಮಾತುಗಳಿಗೆ ಮನ್ನಣೆ ಹೊಂದುವಿರಿ. ಸಹೋದ್ಯೋಗಿಗಳ ಉತ್ತಮ ಸಹಕಾರದಿಂದಾಗಿ ಕಾರ್ಯಬಾಹುಳ್ಯದ ನಡುವೆಯೂ ನೆಮ್ಮದಿ.

ಸಿಂಹ: ಕಲಾವಿದರು, ನಟರು, ಸಂಗೀತಗಾರರಿಗೆ ಉತ್ತಮ ದಿನವಾಗಿದ್ದು ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಲಿದೆ. ವಾಹನ ಖರೀದಿ ಅಥವಾ ವಿಕ್ರಯಲ್ಲಿ ಎಚ್ಚರಿಕೆ ವಹಿಸುವುದು ಉತ್ತಮ. ಹೊಸ ಆದಾಯ ಮೂಲಕ್ಕಾಗಿ ಹುಡುಕಾಟ.

ಕನ್ಯಾ: ಆಡಳಿತಾತ್ಮಕ ಹುದ್ದೆಯಲ್ಲಿರುವವರಿಗೆ ಗೌರವಾದರಗಳು ಲಭಿಸಲಿದೆ. ಬರಹಗಾರರಿಗೆ ಕವಿಗಳಿಗೆ, ಕಲಾವಿದರುಗಳಿಗೆ ಉತ್ತಮ ಅವಕಾಶಗಳು ದೊರೆಯಲಿದೆ. ಮಗಳಿಗೆ ಉತ್ತಮ ಸಂಬಂಧ ಕೂಡಿಬರಲಿದೆ.

ತುಲಾ: ಅರಣ್ಯ, ಪರಿಸರ ರಕ್ಷಣೆಯಲ್ಲಿ ತೊಡಗಿದವರಿಗೆ ಮನ್ನಣೆ ಸಿಗುವುದು. ಸತ್ಕಾರ ಸಮಾರಂಭಗಳಲ್ಲಿ ಭಾಗಿಯಾಗುವಿರಿ. ವಾಹನ ಮತ್ತು ಯಂತ್ರಗಳ ಬಿಡಿಭಾಗಗಳ ವ್ಯಾಪಾರದಿಂದಾಗಿ ವಿಶೇಷ ಲಾಭ. ಉತ್ತಮ ಆರೋಗ್ಯ.

ವೃಶ್ಚಿಕ: ಹೊಸ ಪುಸ್ತಕ ಅಥವಾ ಗ್ರಂಥ ಸಂಪಾದನೆಯಾಗಲಿದೆ. ವಿವಾಹದ ವಿಷಯದಲ್ಲಿ ನೇರ ಮಾತುಕತೆಯಿಂದಾಗಿ ಯಶಸ್ಸು. ಸಜ್ಜನರೊಂದಿಗಿನ ಮಾತುಕತೆಯಿಂದಾಗಿ ಮಾನಸಿಕ ಉಲ್ಲಾಸ. ವಿದ್ಯಾರ್ಥಿಗಳಿಗೆ ಶುಭ.

ಧನು: ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಗಳೊಂದಿಗೆ ಚರ್ಚೆಯಲ್ಲಿ ಭಾಗವಹಿಸಿ ಮಹತ್ತರ ನಿರ್ಣಯವೊಂದನ್ನು ಕೈಗೊಳ್ಳುವ ಸಾಧ್ಯತೆ. ವಸ್ತ್ರಾಭರಣ ಖರೀದಿ ಮಾಡಲು ಸುಸಮಯ.

ಮಕರ: ಕಟ್ಟಡ, ವಸ್ತ್ರ ವಿನ್ಯಾಸಕಾರರಿಗೆ ಬೇಡಿಕೆಯೊಂದಿಗೆ ಉದ್ಯೋಗಾವಕಾಶವು ವಿಪುಲವಾಗಿರುವುದು. ಉದ್ಯೋಗದಲ್ಲಿರುವವರಿಗೆ ಸ್ಥಾನ ಬದಲಾವಣೆ ಅಥವಾ ಬಡ್ತಿಯಿಂದಾಗಿ ಉತ್ತಮ ಆದಾಯ. ಉತ್ತಮ ಆರೋಗ್ಯ.

ಕುಂಭ: ಆದಾಯ – ಖರ್ಚುಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ. ಮಿತವಾದ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ. ಸಂಸಾರದಲ್ಲಿ ನೆಮ್ಮದಿ. ವಿಶೇಷ ವ್ಯಕ್ತಿಗಳ ಆಗಮನ ಸಾಧ್ಯತೆ ಕಂಡುಬರುವುದು.

ಮೀನ: ಚಿತ್ರ ಕಲಾವಿದರು, ಕವಿಗಳಿಗೆ ಮನ್ನಣೆಗಳು ದೊರಕಲಿವೆ. ರಾಜಕಾರಣಿಗಳ ಮಾತಿಗೆ ಮರುಳಾಗುವ ಸಾಧ್ಯತೆ. ಹಿತ ಶತ್ರುಗಳ ಭರವಸೆಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮನೆಯಲ್ಲಿ ಸಂತಸದ ವಾತಾವರಣ ಮೂಡಲಿದೆ.

ನಿಮ್ಮ ಜನ್ಮದಿನ 20-ಫೆಬ್ರುವರಿ ಈ ದಿನ ಅತ್ಯಂತ ಶುಭಕರ. ವಿದೇಶದಲ್ಲಿ ಶಿಕ್ಷಣ ವಿಚಾರದಲ್ಲಿ ಮನೆಯಲ್ಲಿ ಮಾತುಕತೆ ನಡೆಯುವುದರ ಮೂಲಕ ವರ್ಷಾರಂಭವಾಗಲಿದೆ. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ಈ ವರ್ಷಾರಂಭದಲ್ಲೇ ಕೊನಗಾಣಲಿದೆ. ಸಂಪಾದನೆ ಹೆಚ್ಚುವುದು.

ಪದಬಂಧ 4514 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸುದ್ದಿ ಸಂಗ್ರಹಕಾರ (4)
3.ಪದದಲ್ಲಿ ಪುಸ್ತಕದ ಸರ್ಗವಿದೆಯಲ್ಲಾ? (4)
4.ಅಮರಲೋಕದಲ್ಲಿ ಬೆಳೆದಿರುವ ವೃಕ್ಷ (2)
5.ಬಹಳಷ್ಟು ಹಣ ಉಳ್ಳವನು (4)
7.ಹಿಂದೆ ಆಗಿದ್ದನ್ನು ನೋಡುವಾಗ ದೆವ್ವ ತಿರುಗಿತಲ್ಲಾ? (2)
8.ಲೋಲುಪನ ಕುಂದು! (2)
9.ಹಿಡಿತದಿಂದ ಖರ್ಚು ಮಾಡುವಿಕೆ (4)
11.ನಾರಿಕೇಳ ಹಿಡಿದಿರುವ ಹೆಂಗಸು (2)
13.ಆಸ್ಪತ್ರೆಯನ್ನು ಹೀಗೂ ಹೇಳುವರು (4)
14.ಕೂಡುವ ಲೆಕ್ಕ (4)

ಮೇಲಿಂದ ಕೆಳಕ್ಕೆ
1.ತಂಬಾಕಿನಲ್ಲಿರುವ ಉಳಿಕೆ! (2)
2.ಈತ ಬಲು ಉದಾರಿ! (3)
3.ಈ ಪರಿ ಕಾಣುತ್ತಿರುವ ಅಳತೆ (4)
4.ಏನೂ ಬೆಳೆಯದ ಬಂಜರುನೆಲ (4)
5.ಯೌವ್ವನ ಹೀಗೆ ಕಾಣುತ್ತಿದೆ (3)
6.ಈಕೆ ತೆಳ್ಳಗಿನ ಸೊಂಟದವಳು (4)
10.ಸಾವಯವ ಬೇಸಾಯ (4)
11.ನಾಕದಲ್ಲಿ ತೂರಿಸಿದ ಮೂಗು (3)
12.ಜ್ಞಾತನ ಅರಿವು ! (2)



4513ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಜಾರಿ 2.ವಾಗಾಡಂಬರ4ಸಾಕ್ಷಾತ್ಕಾರ 6.ಹಸುಳೆ7.ತಮ 9.ದಿಕ್ಸೂಚಿ11.ತುಸು13.ಆವರ್ತ 14.ಕಲಿಯುಗ15.ಜಗಳಗಂಟಿ 16.ನಿಸರ್ಗ

ಮೇಲಿಂದ ಕೆಳಕ್ಕೆ: 1.ಅಹಿಂಸಾವ್ರತ3.ಬಳಸುಮಾತು 5.ರಶೀದಿ8.ಮದುವಣಿಗ 10.ಚಿಲಕ12.ಸುರಂಗಮಾರ್ಗ

ಸುಡೊಕು 4900

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4899 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಚಿರಸ್ಮರಣೆ

ಶ್ರೀ ರಾಮಣ್ಣ — ನಿಧನ : 20.02.2000
ಶ್ರೀಮತಿ ಲಕ್ಷ್ಮಮ್ಮ — ನಿಧನ : 06.11.1993

ನೀವು ನಮ್ಮ ಹೃದಯವನ್ನು ಪ್ರೀತಿ, ಸ್ಫೂರ್ತಿ, ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತೀ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ, ನಂಬಿಕೆಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ.

ನೀವು ನಮ್ಮ ನೆನಪುಗಳಲ್ಲಿ
ಕುಟುಂಬದವರು

ಮತ್ತೆ ಇಳಿದ ಷೇರು ಸೂಚ್ಯಂಕ

ಮುಂಬೈ (ಪಿಟಿಐ): ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 434 ಅಂಶ ಇಳಿಕೆ ಕಂಡಿದೆ. ನಿಫ್ಟಿ 137 ಅಂಶ ಇಳಿಕೆ ದಾಖಲಿಸಿತು. ಷೇರು ಮಾರುಕಟ್ಟೆಯಲ್ಲಿ ಸತತ ನಾಲ್ಕನೆಯ ದಿನವೂ ಷೇರುಗಳ ಮಾರಾಟ ಹೆಚ್ಚಿತ್ತು.

ಸೆನ್ಸೆಕ್ಸ್‌ನಲ್ಲಿ ಬ್ಯಾಂಕಿಂಗ್ ಮತ್ತು ಆಟೊಮೊಬೈಲ್ ವಲಯದ ಷೇರುಗಳ ಮಾರಾಟ ಹೆಚ್ಚಿತ್ತು. ಶುಕ್ರವಾರ ಒಎನ್‌ಜಿಸಿ ಷೇರುಗಳು ಅತಿಹೆಚ್ಚಿನ ಕುಸಿತ ಕಂಡವು. ಎಸ್‌ಬಿಐ, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಬಜಾಜ್ ಆಟೊ, ಮಾರುತಿ, ಮಹೀಂದ್ರ ಆ್ಯಂಡ್ ಮಹೀಂದ್ರ ಷೇರುಗಳು ಕೂಡ ಇಳಿಕೆ ಕಂಡವು. ಇಂಡಸ್‌ಇಂಡ್ ಬ್ಯಾಂಕ್, ಎಚ್‌ಯುಎಲ್, ಡಾ ರೆಡ್ಡೀಸ್, ಎನ್‌ಟಿಪಿಸಿ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಬಜಾಜ್ ಫಿನ್‌ಸರ್ವ್ ಷೇರುಗಳು ಏರಿಕೆ ಕಂಡವು.

ಶುಕ್ರವಾರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 63.14 ಅಮೆರಿಕನ್ ಡಾಲರ್‌ನಂತೆ ಮಾರಾಟವಾಗಿದೆ.

ಉತ್ತರ ಕ್ರಿಯಾದಿ ಹಾಗೂ ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಪೂಜಾರಿ ಲಕ್ಷ್ಮಯ್ಯನವರು
ಮರಣ: 10-02-2021 ನೇ ಬುಧವಾರ

ದಿನಾಂಕ 10-2-2021 ನೇ ಬುಧವಾರ ಬೆಳಿಗ್ಗೆ 5:00ಕ್ಕೆ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ 20-2-2021ನೇ ಶನಿವಾರ ಬೆಳಿಗ್ಗೆ 9:00 ಗಂಟೆಗೆ ಪುಣ್ಯಾಹ ಮತ್ತು ಮಧ್ಯಾಹ್ನ 3:00ಕ್ಕೆ ಬಾವಿ ಪೂಜೆ, ದಿನಾಂಕ 21-2-2021ನೇ ಭಾನುವಾರ ಮಧ್ಯಾಹ್ನ 1:30ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಬಯಸುವ

ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು. ಬೆಳ್ಳಂದೂರು, ಬೆಂಗಳೂರು.

ಆವಿಗೆ ಗ್ರಾಮಕ್ಕೆ ಆಗಲಿದೆ ಅಭಿವೃದ್ಧಿಯ 'ಸುದೀಪ್ ಸ್ಪರ್ಶ'

ಒಂದು ಗ್ರಾಮ, ನಾಲ್ಕು ಶಾಲೆ ದತ್ತು

ಪ್ರಜಾವಾಣಿ ವಾರ್ತೆ

ಸಾಗರ ತಾಲ್ಲೂಕಿನ ಆವಿಗೆ ಗ್ರಾಮದ ಸರ್ಕಾರಿ ಶಾಲೆಗೆ ಕಿಚ್ಚ ಸುದೀಪ್ ಚಾರಿಟೆಬಲ್ ಸೊಸೈಟಿಯ ಸದಸ್ಯರು ಭೇಟಿ ನೀಡಿ ಪರಿಶೀಲಿಸಿದರು. (ಸಂಗ್ರಹ ಚಿತ್ರ)

ಶಿವಮೊಗ್ಗ/ಬೆಂಗಳೂರು: ನಟ ಸುದೀಪ್ ಅವರು 'ಕಿಚ್ಚ ಸುದೀಪ್ ಚಾರಿಟೆಬಲ್ ಸೊಸೈಟಿ'ಯ ಮೂಲಕ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆವಿಗೆ ಗ್ರಾಮ ಹಾಗೂ ಹಾಳಸಸಿ, ಎಂ.ಎಲ್. ಹಳ್ಳಿ, ಎಸ್.ಎನ್. ನಗರದ ಶಾಲೆಗಳನ್ನು ದತ್ತು ಪಡೆದಿದ್ದಾರೆ. ಆವಿಗೆ ಗ್ರಾಮ ಹಾಗೂ ನಾಲ್ಕು ಶಾಲೆಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ.

ಸುದೀಪ್

ಕರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆವಿಗೆ ಉಡುಪಿ-ಶಿವಮೊಗ್ಗ ಜಿಲ್ಲೆಯ ಗಡಿಗೆ ಹೊಂದಿಕೊಂಡಿದೆ. ಬುಡಕಟ್ಟು ಕುಣಬಿ ಜನಾಂಗದವರೇ ವಾಸಿಸುವ ಈ ಗ್ರಾಮದಲ್ಲಿ 27 ಮನೆಗಳಿದ್ದು, 157 ಜನರು ನೆಲೆಸಿದ್ದಾರೆ. ಕೂಲಿ ಕೆಲಸ ಹುಡುಕಿಕೊಂಡು ರಾಜ್ಯದ ವಿವಿಧ ಜಿಲ್ಲೆಗಳಿಗೆ ತೆರಳುವ ಅಲ್ಲಿನ ಕುಟುಂಬಗಳಲ್ಲಿ ಶೇ 99ರಷ್ಟು ಜನ ಅನಕ್ಷರಸ್ಥರಾಗಿದ್ದು, ಸಂಕಷ್ಟದ ಬದುಕು ನಡೆಸುತ್ತಿದ್ದಾರೆ. ಈ ಗ್ರಾಮದಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಇರುವ ಪ್ರಾಥಮಿಕ ಶಾಲೆಯಲ್ಲಿ 13 ಮಕ್ಕಳು ಕಲಿಯುತ್ತಿದ್ದಾರೆ.

ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಕರೆತರಲು, ಸ್ಮಾರ್ಟ್ ತರಗತಿಗಳನ್ನು ಪರಿಚಯಿಸಲು ಹಾಗೂ ಮೂಲಸೌಕರ್ಯ ಒದಗಿಸಲು ಚಾರಿಟೆಬಲ್ ಸೊಸೈಟಿ ಮುಂದಾಗಿದೆ. ಮಾರ್ಚ್‌ನಲ್ಲಿ ದತ್ತು ಯೋಜನೆಗೆ ಚಾಲನೆ ನೀಡಲಾಗುತ್ತಿದೆ.

'ನಟ ಸುದೀಪ್ ಅವರು ಶಾಲೆಗಳನ್ನು ದತ್ತು ತೆಗೆದುಕೊಂಡು ಪೋಷಿಸುತ್ತಿರುವ ವಿಷಯ ತಿಳಿದು ಪತ್ರ ಬರೆದಿದ್ದೆ. ಮನವಿಗೆ ಸ್ಪಂದಿಸಿದ ಅವರು ಶಾಲೆ ದತ್ತು ತೆಗೆದುಕೊಳ್ಳಲು ಸಮ್ಮತಿಸಿದ್ದರು. ನಂತರ ಇಡೀ ಗ್ರಾಮವನ್ನೇ ದತ್ತು ಪಡೆಯಲು ನಿರ್ಧರಿಸಿದ್ದಾರೆ' ಎಂದು ಶಿಕ್ಷಕ ಚಂದ್ರಪ್ಪ ಮಾಹಿತಿ ನೀಡಿದರು.

ಆವಿಗೆ ಗ್ರಾಮವೇ ಏಕೆ?: 'ನಾವು ಆ ಗ್ರಾಮಕ್ಕೆ ಹೋಗಿದ್ದು, ಶಾಲೆಯನ್ನು ದತ್ತು ಪಡೆಯಲು. ಗ್ರಾಮದಲ್ಲಿರುವ ಒಂದೇ ಒಂದು ಶಾಲೆಗೆ ಮಕ್ಕಳು ಎಂಟು ಕಿ.ಮೀ ನಡೆದು ಬರಬೇಕು. ಸೂಕ್ತವಾದ ರಸ್ತೆ ಆ ಗ್ರಾಮಕ್ಕೆ ಇಲ್ಲ. ಹೊರಜಗತ್ತಿನೊಂದಿಗೆ ಸಂಪರ್ಕವನ್ನೇ ಗ್ರಾಮ ಕಳೆದುಕೊಂಡಿದೆ. ಮೂಲಸೌಕರ್ಯ ಕೊರತೆ ಇತ್ತು. ಈ ಎಲ್ಲ ವಿಚಾರಗಳನ್ನು ಸುದೀಪ್‌ಗೆ ತಿಳಿಸಿದಾಗ ಗ್ರಾಮವನ್ನೇ ದತ್ತು ಪಡೆದು ಸರ್ವಾಂಗೀಣ ಅಭಿವೃದ್ಧಿ ಮಾಡುವ ಬಗ್ಗೆ ಅವರು ಒಲವು ತೋರಿದರು' ಎಂದು ಕಿಚ್ಚ ಸುದೀಪ್ ಚಾರಿಟೆಬಲ್ ಸೊಸೈಟಿಯ ಅಧ್ಯಕ್ಷ ರಮೇಶ್ ಕಿಟ್ಟಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಜಿಲ್ಲಾಡಳಿತ, ಸ್ಥಳೀಯ ಶಾಸಕರ ಒಪ್ಪಿಗೆ ಪಡೆದು ಪ್ರಕೃತಿ ರಮಣೀಯವಾದ ಈ ಗ್ರಾಮವನ್ನೇ ದತ್ತು ತೆಗೆದುಕೊಂಡೆವು. ಸೊಸೈಟಿ ಮೂಲಕ ಈ ಹಿಂದೆ ಶಾಲೆಗಳನ್ನು ದತ್ತು ಪಡೆದಿದ್ದೆವು. ಆದರೆ, ಇದೇ ಮೊದಲ ಬಾರಿಗೆ ಗ್ರಾಮವೊಂದನ್ನು ದತ್ತು ಪಡೆದು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಿದ್ದೇವೆ' ಎಂದು ಹೇಳಿದರು.

ಮೊದಲು ಶಾಲೆ, ರಸ್ತೆ ಅಭಿವೃದ್ಧಿ: 'ಗ್ರಾಮದಲ್ಲಿ ಇತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೊದಲು ಶಾಲೆಯ ಅಭಿವೃದ್ಧಿ ಹಾಗೂ ಶಾಲೆಗೆ ಸಂಪರ್ಕಿಸುವ ರಸ್ತೆಯ ಅಭಿವೃದ್ಧಿ ನಮ್ಮ ಆದ್ಯತೆ. ಶಾಲೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಇ-ಬೋರ್ಡ್ ಮತ್ತಿತರ ಸೌಲಭ್ಯ, ಪಕ್ಕಾ ರಸ್ತೆ ಹಾಗೂ ಮಕ್ಕಳಿಗೆ ಅನುಕೂಲವಾಗುವಂತೆ ವಾಹನದ ವ್ಯವಸ್ಥೆಯನ್ನು ಒಂದು ವರ್ಷದೊಳಗೆ ಮಾಡುವ ಗುರಿ ಇದೆ. ಜೊತೆಗೆ ಗ್ರಾಮದಲ್ಲಿ ಒಂದು ಆಸ್ಪತ್ರೆ, ನೀರಿನ ಟ್ಯಾಂಕ್ ನಿರ್ಮಿಸುತ್ತೇವೆ' ಎಂದರು.

ಸ್ಯಾನಿಟರಿ ಪ್ಯಾಡ್ ತಯಾರಿಕೆ

'ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ್ ಭಾರತ್ ಯೋಜನೆಯಡಿ ಕೇರಳ ಮಾದರಿಯಲ್ಲಿ ಬಾಳೆದಿಂಡಿನ ನಾರಿನಿಂದ ಸ್ಯಾನಿಟರಿ ಪ್ಯಾಡ್ ತಯಾರಿಸಲು ಹಾಗೂ ಹೊಲಿಗೆ ತರಬೇತಿಯನ್ನು ಗ್ರಾಮದ ಮಹಿಳೆಯರಿಗೆ ನೀಡಲಿದ್ದೇವೆ. ಇದಕ್ಕೆ ಎನ್‌ಜಿಒಗಳ ಜೊತೆ ಮಾತುಕತೆ ನಡೆಸಿದ್ದೇವೆ. ಇಲ್ಲಿ ತಯಾರಿಸಲಾದ ಸ್ಯಾನಿಟರಿ ಪ್ಯಾಡ್‌ಗಳನ್ನು ಕರ್ನಾಟಕದಲ್ಲಿರುವ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಉಚಿತವಾಗಿ ನೀಡುವ ಚಿಂತನೆ ಇದೆ. ಮುಂದೆ ಇದರ ಮಾರಾಟಕ್ಕೂ ನಾವು ಕೈಜೋಡಿಸುತ್ತೇವೆ' ಎಂದು ರಮೇಶ್ ಕಿಟ್ಟಿ ಮಾಹಿತಿ ನೀಡಿದರು.

ಮೀಸಲು ಚಳವಳಿ ಹುಯಿಲು

ಒಂದನೇ ಪುಟದಿಂದ

ಅಷ್ಟರೊಳಗೆ ಸರ್ಕಾರ ಮೀಸಲಾತಿ ಘೋಷಿಸಬೇಕು. ತಪ್ಪಿದರೆ, ಮಹಾರ್‍ಯಾಲಿ ಸ್ಥಳದಿಂದ ಅಂದು ಸಂಜೆಯೇ ವಿಧಾನಸೌಧಕ್ಕೆ ತೆರಳಿ ಧರಣಿ ಸತ್ಯಾಗ್ರಹ ನಡೆಸುತ್ತೇವೆ' ಎಂದರು.

'ಧರಣಿ ನಂತರವೂ ಬೇಡಿಕೆ ಈಡೇರದಿದ್ದರೆ, ಮಾ.4ರಿಂದ ಆರಂಭವಾಗುವ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದೂ ಅವರು ಎಚ್ಚರಿಸಿದರು.

ರಾಜಕೀಯ ದುರುದ್ದೇಶವಿಲ್ಲ: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಗ್ಗೆ ನಮಗೆ ಅಸಮಾಧಾನವಿಲ್ಲ. ಅವರನ್ನು ಅಧಿಕಾರದಿಂದ ಇಳಿಸುವ ಉದ್ದೇಶ ನಮ್ಮದಾಗಿದ್ದರೆ ಪಂಚಮಸಾಲಿ ಸಮುದಾಯದ ಶಾಸಕರೊಂದಿಗೆ ದೆಹಲಿಗೆ ತೆರಳಿ ಬಿಜೆಪಿ ಹೈಕಮಾಂಡ್‌ಗೆ ದೂರು ನೀಡಬಹುದಿತ್ತು. ಪಂಚಮಸಾಲಿ ಮಕ್ಕಳ ಶಿಕ್ಷಣ ಹಾಗೂ ಯುವಜನ ಉದ್ಯೋಗಕ್ಕಾಗಿ ಮಾತ್ರ ಈ ಮೀಸಲಾತಿ ಕೇಳುತ್ತಿದ್ದೇವೆ' ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

'ಪಾದಯಾತ್ರೆ ತುಮಕೂರು ಪ್ರವೇಶಿಸಿದಾಗಿನಿಂದ ಕೆಲವು ಮುಖಂಡರು ಇಂತಹ ಆರೋಪ ಮಾಡುತ್ತಿದ್ದಾರೆ. ಬಸನಗೌಡ ಪಾಟೀಲ ಯತ್ನಾಳ ಅವರು ಬಿಜೆಪಿ ಶಾಸಕರಾಗಿ ಈ ಪಾದಯಾತ್ರೆಗೆ ಬೆಂಬಲ ನೀಡುತ್ತಿಲ್ಲ' ಎಂದೂ ಹೇಳಿದರು.

ಎಲ್ಲರಿಗೂ ಬೆಂಬಲ: 'ಪಂಚಮಸಾಲಿ ಸಮುದಾಯಕ್ಕೆ ಈ ಸೌಲಭ್ಯ ಸಿಗುವುದರಿಂದ ಈಗಾಗಲೇ ಈ ಪ್ರವರ್ಗದಲ್ಲಿರುವ ಸಮುದಾಯಗಳಿಗೆ ಅನ್ಯಾಯವಾಗುತ್ತದೆ ಎಂಬ ವಾದ ಸರಿಯಲ್ಲ. ನಮಗೆ ಸಂವಿಧಾನಬದ್ಧವಾಗಿ ಸಿಗಬೇಕಾದ ಸೌಲಭ್ಯವನ್ನು ಕೇಳುತ್ತಿದ್ದೇವೆ. ಯಾವುದೇ ತಳಸಮುದಾಯವು ನ್ಯಾಯಬದ್ಧವಾಗಿ ಮೀಸಲಾತಿ ಬೇಡಿಕೆ ಇಟ್ಟರೆ, ಬೆಂಬಲ ನೀಡುವಂತೆ ಕೋರಿದರೆ ಅಂತಹ ಸಮುದಾಯಕ್ಕೆ ನಮ್ಮ ಬೆಂಬಲ ಇದ್ದೇ ಇರುತ್ತದೆ' ಎಂದರು.

ಬೆಂಕಿ ಬೀಳಲಿದೆ: ಕುರುಬರ ಸಂಘದ ಎಚ್ಚರಿಕೆ

ಒಂದನೇ ಪುಟದಿಂದ

'ಕುರುಬ ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಿ ₹400 ಕೋಟಿ ಕಾಯ್ದಿರಿಸಬೇಕು. 2ಎ ಮೀಸಲಾತಿ ಪಟ್ಟಿಗೆ ಮುಂದುವರಿದ ಯಾವುದೇ ಜಾತಿಗಳನ್ನು ಸೇರ್ಪಡೆ ಮಾಡಬಾರದು. ಹಿಂದುಳಿದ ವರ್ಗಗಳ ಆಯೋಗ ನೀಡಿರುವ ಜಾತಿ ಗಣತಿ ವರದಿಯನ್ನು ಅಂಗೀಕರಿಸಿ ಅದನ್ನು ಜಾರಿಗೆ ತರಬೇಕು. ಹಿಂದುಳಿದ ವರ್ಗಗಳ ಸಿಂಧುತ್ವ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು' ಎಂದು ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದ ಮುಖಂಡರು ಆಗ್ರಹಿಸಿದರು.

ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಸಣ್ಣಕ್ಕಿ ಮಾತನಾಡಿ, 'ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕು. ಇಲ್ಲದಿದ್ದರೆ ರಾಜ್ಯದಲ್ಲಿ ಬೆಂಕಿ ಬೀಳಲಿದೆ' ಎಂದು ಎಚ್ಚರಿಸಿದರು.

'ಬೇರೆ ಸಮುದಾಯಗಳ ಮೀಸಲಾತಿ ಪರಿಷ್ಕರಣೆ ಬೇಡಿಕೆ ಬಗ್ಗೆ ಸ್ಪಂದಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಕುರುಬ ಸಮುದಾಯದ ಬೇಡಿಕೆ ಬಗ್ಗೆ ಸ್ಪಂದಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಪ್ರದೇಶ ಕುರುಬರ ಸಂಘದಿಂದ ಸಾಂಕೇತಿಕವಾಗಿ ಧರಣಿ ನಡೆಸಿದ್ದೇವೆ. ಬೇಡಿಕೆ ಈಡೇರದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು' ಎಂದು ಡಿ. ವೆಂಕಟೇಶ್‌ಮೂರ್ತಿ ಹೇಳಿದರು.

ಪ್ರತಿಭಟನೆಯಲ್ಲಿ ಸರ್ಕಾರದ ವಿರುದ್ಧದ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪರವಾಗಿ ಘೋಷಣೆಗಳು ಮೊಳಗಿದವು.

ಸೆಂಟಿಮೆಂಟಿನ ಕವಚದ ಚಾಕೊಲೇಟು

ನಾವು ನೋಡಿದ ಸಿನಿಮಾ

ಪೊಗರು (ಕನ್ನಡ)

- ನಿರ್ಮಾಣ: ಬಿ.ಕೆ. ಗಂಗಾಧರ್
- ನಿರ್ದೇಶನ: ನಂದ ಕಿಶೋರ್
- ತಾರಾಗಣ: ಧ್ರುವ ಸರ್ಜಾ, ರಶ್ಮಿಕಾ ಮಂದಣ್ಣ, ಪವಿತ್ರಾ ಲೋಕೇಶ್, ರವಿಶಂಕರ್, ಚಿಕ್ಕಣ್ಣ, ಧನಂಜಯ, ರಾಘವೇಂದ್ರ ರಾಜ್‌ಕುಮಾರ್, ಸಂಪತ್ ರಾಜ್, ಮಯೂರಿ

'ನನ್ನ ತೋಳಷ್ಟಿದೀಯ...ಎಷ್ಟು ಮಾತಾಡ್ತೀಯ...ಇಂಗ್ಲಿಷ್‌ಗೆ ಹುಟ್ಟಿದೋಳೆ...' ನಾಯಕ ಹೀಗೊಂದು ಡೈಲಾಗು ಹಾಗೂ ಪಟಾಕಿ ಎರಡನ್ನೂ ಒಟ್ಟೊಟ್ಟಿಗೆ ಬಿಸಾಕಿದಾಗ ಶಿಳ್ಳೆ. ಕ್ಯಾಮೆರಾ ಕಣ್ಣು ಮೊದಲು ನಾಯಕನ ತೋಳನ್ನೇ ನೋಡುವುದು. ಆಮೇಲೆ ಕಿವಿಯೊಳಕ್ಕೆ ಇಳಿಯುವುದು ಉದ್ದುದ್ದ ಡೈಲಾಗು. ಮಾತು ಹೊಮ್ಮಬೇಕು, ಆಗೀಗ ಹೊಡೆದಾಟ ಚಿಮ್ಮಬೇಕು. ಸೆಂಟಿಮೆಂಟಿನ ಕವಚದೊಳಗೆ ಮನರಂಜನೆಯ ಚಾಕೊಲೇಟು–ಇದೊಂಥರಾ 'ನಂದ ಕಿಶೋರ್ ಮೇಡ್ ಎಕ್ಲೇರ್ಸ್'. ಹ್ಯಾಪಿ ಹಾರ್ಮೋನ್ ಬಿಡುಗಡೆಗೆ ಹೇಳಿಮಾಡಿಸಿದ ತಂತ್ರ.

ತೆಲುಗಿನಲ್ಲಿ ಇಂತಹ ಸೆಂಟಿಮೆಂಟು–ಆ್ಯಕ್ಷನ್‌ನ ಸ್ಯಾಂಡ್‌ವಿಚ್ ಸವಿಯುತ್ತಿರುತ್ತೇವೆ. ಅದನ್ನು ಕನ್ನಡದಲ್ಲಿ ಅದ್ದೂರಿಯಾಗಿಯೇ ತೆರೆಮೇಲೆ ತಂದಿರುವುದರಲ್ಲಿ ಸಿನಿಮೀಯ ಜಾಣ್ಮೆಯಿದೆ.

ಧ್ರುವ ಸರ್ಜಾ

ತಾಯಿಪ್ರೀತಿಗಾಗಿ ಹಂಬಲಿಸುವ ನಾಯಕನದು ಕದಡಿದ ಬಾಲ್ಯ. ತಂದೆ ಅಗಲಿದ ವಿಷಯವೂ ಗೊತ್ತಿಲ್ಲದ ನತದೃಷ್ಟ. ಅವ್ವನಿದ್ದೂ ದೂರವಾಗಿ ಬೆಳೆಯುವ ಅವನು ಒಂಥರಾ ನಾಡಿನಲ್ಲಿನ ಕಾಡಿನ ಮನುಷ್ಯನಾಗಿಬಿಡುತ್ತಾನೆ. ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ ಎಂದು ನಾವೆಲ್ಲ ಅಂದುಕೊಂಡೇ ಗಡ್ಡ–ಮೀಸೆಯೊಳಗಿನ ಧ್ರುವ ಸರ್ಜಾ ಅವರನ್ನು ನೋಡಬೇಕು. ಅವರ ಹೊಡೆದಾಟ ನೋಡಿ ಕಣ್ಣರಳಿಸಬೇಕು. ನಗೆಚಟಾಕಿ ಹಾರಿಸಿದಾಗ ಕುರ್ಚಿಯ ಮೇಲೆ ಒಂದಿಷ್ಟು ಅಲುಗಾಡಬೇಕು. ಕೊನೆಯಲ್ಲಿ ಉಗ್ರಸ್ವರೂಪಿಗಳಾದ ವಿದೇಶಿ ಬಾಡಿಬಿಲ್ಡರ್‌ಗಳ ಅಲೆಯಂಥ ಸ್ನಾಯುಗಳ ನಾಯಕ ಹೊಸಕಿಹಾಕುವ ಕದನ ಕುತೂಹಲಕ್ಕೆ ಬಾಯಿ ತೆರೆಯಬೇಕು.

ಇಡೀ ಚಿತ್ರಕ್ಕೆ ಲಯ, ನಾಯಕನ ಪಾತ್ರದ ಅತಿರೇಕಕ್ಕೆ ಸಿನಿಮೀಯ ತರ್ಕವಿದೆ. ಗೂಳಿಯಂತೆ ಅವನು ನುಗ್ಗುವಾಗಲೇ ದಿಢೀರನೆ ಅಮ್ಮನೆಂಬ ಮೂಗುದಾರ. ಹುಚ್ಚುಹುಚ್ಚಾಗಿ ಆಡುವಾಗ ಎದುರಲ್ಲಿ ನಾಯಕಿಯ ಚೂಡಿದಾರ. ಚಿಕ್ಕಣ್ಣ ಕಾಮಿಡಿ ಟೈಮಿಂಗಿನಲ್ಲೂ ನಾಯಕನದ್ದೇ ವಗ್ಗರಣೆ. ನಾಯಕಿಯ ಪ್ರತಿಸಂಭಾಷಣೆಗೂ ಅವನದ್ದೇ ಮಸಾಲೆ. ಧನಂಜಯ, ಸಂಪತ್ ರಾಜ್ ರೂಪದಲ್ಲಿ ಕಡುಖಳರ ಘಾಟು. ಇವೆಲ್ಲಕ್ಕೂ ಕವಚದಂತೆ ತಂಗಿ ಸೆಂಟಿಮೆಂಟು.

ತೆರೆಮೇಲೆ ಕಣ್ಣು ಕೀಲಿಸಿಕೊಳ್ಳುವ ಅಷ್ಟೂ ಲಕ್ಷಣಗಳು 'ಪೊಗರು' ಚಿತ್ರಕ್ಕೆ ಇವೆ. ಧ್ರುವ ಸರ್ಜಾ ತಮ್ಮ ದೇಹಾಕಾರವನ್ನು ಬದಲಿಸಿಕೊಂಡಿರುವ ಶ್ರದ್ಧೆಗೆ ಹೆಚ್ಚೇ ಅಂಕ ಸಲ್ಲಬೇಕು. 'ಕಾಮನಬಿಲ್ಲು' ಸಿನಿಮಾದಲ್ಲಿ ಅಣ್ಣಾವ್ರು ಹೊಟ್ಟೆಯ ಸ್ನಾಯುಗಳನ್ನು ತಿರುಗಿಸಿದ್ದರಲ್ಲ; ಅದನ್ನು ಈ ಚಿತ್ರದಲ್ಲೂ ಧ್ರುವ ಮಾಡಿದ್ದಾರೆ. ತಮ್ಮ ಮಿತಿಯನ್ನೇ ಅರಿತು, ಮೇಕಪ್ ಇಲ್ಲದೆ, ಬಂಡೆಯಂಥ ದೇಹವನ್ನೂ ಬಳುಕಿಸುತ್ತಾ ನೃತ್ಯ ಮಾಡುವ ಅವರ ಆತ್ಮವಿಶ್ವಾಸ ಮೆಚ್ಚಬೇಕು. ರಶ್ಮಿಕಾ ಮಂದಣ್ಣ ಸುಂದರ ವದನ ಚಿತ್ರಕ್ಕೆ ರಿಲೀಫ್. ಅಮ್ಮನಾಗಿ ಪವಿತ್ರಾ ಲೋಕೇಶ್, ಅಪ್ಪನಾಗಿ ರವಿಶಂಕರ್ ಅಭಿನಯದ ಹದವರಿತದ್ದು. ರಾಘವೇಂದ್ರ ರಾಜ್‌ಕುಮಾರ್ ಅವರಿಗೂ ತೂಕದ ಪಾತ್ರವಿದೆ. ತಮಿಳಿನ ಸಿನಿಮಾಟೊಗ್ರಫರ್ ವಿಜಯ್ ಮಿಲ್ಟನ್ ಫೋಕಸ್ ಪಾಯಿಂಟ್‌ಗಳು ದೃಶ್ಯತೀವ್ರತೆಯನ್ನು ಹೆಚ್ಚುಗೊಳಿಸಿವೆ. ಚಂದನ್ ಶೆಟ್ಟಿಯ 'ಪೆಪ್ಪಿ ನಂಬರ್'ಗಳಿಗೆ ಕಾಲುಗಳನ್ನು ಆಡಿಸಲಡ್ಡಿಯಿಲ್ಲ. ಹಿನ್ನೆಲೆ ಸಂಗೀತದಲ್ಲೂ ಅವರ ಪ್ರತಿಭೆಗೆ ಸಾಕ್ಷಿಗಳಿವೆ.

ಸುದೀರ್ಘಾವಧಿ ನಂತರ ಬದಲಾದ ಧ್ರುವ ಸರ್ಜಾ ಅವರನ್ನು ತೆರೆಮೇಲೆ ನೋಡುವ ಅಭಿಮಾನಿಗಳ ಕಣ್ಣಿಗೆ ಈ ಚಿತ್ರ ಹಬ್ಬ. ಕೆಲವು ನಿಜತರ್ಕಗಳನ್ನು ಬದಿಗಿಡಬೇಕಷ್ಟೆ.

ವಿಶಾಖ ಎನ್.

'ಟೂಲ್‌ಕಿಟ್: ದಿಶಾ ಕುರಿತ ವರದಿ ಪೂರ್ವಗ್ರಹಪೀಡಿತ'

ಒಂದನೇ ಪುಟದಿಂದ...

ಇಂತಹ ವರದಿ ಮತ್ತು ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಮಾಡಿರುವ ಟ್ವೀಟ್‌ಗಳನ್ನು ಅಳಿಸಿ ಹಾಕಬೇಕು ಎಂದು ದಿಶಾ ಅವರು ಮಾಡಿದ ಮನವಿಯನ್ನು ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು ಎಂದು ನ್ಯಾಯಮೂರ್ತಿ ಪ್ರತಿಭಾ ಎಂ. ಸಿಂಗ್ ಅವರ ಪೀಠವು ಶುಕ್ರವಾರ ಹೇಳಿದೆ.

ಪ್ರಚೋದನಕಾರಿ ವರದಿಗಳು ಪ್ರಕಟವಾಗದಂತೆ ನೋಡಿಕೊಳ್ಳುವುದರಲ್ಲಿ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಪಾತ್ರ ಬಹಳ ಮಹತ್ವದ್ದಾಗಿದೆ. ಮಾಧ್ಯಮ ಸಂಸ್ಥೆಗಳು ಹೊಣೆಗಾರಿಕೆಯ ಪತ್ರಿಕೋದ್ಯಮಕ್ಕೆ ಬದ್ಧವಾಗಿರಬೇಕು. ಪೊಲೀಸರು ನೀಡಿದ ಮಾಹಿತಿ ಮತ್ತು ನ್ಯಾಯಾಲಯದ ಕಲಾಪಗಳ ವರದಿಯನ್ನು ಪ್ರಕಟಿಸಬಹುದು. ಆದರೆ, ಸೋರಿಕೆಯಾದ ದಾಖಲೆಗಳ ಆಧಾರದಲ್ಲಿ ವರದಿ ಪ್ರಕಟಿಸಬಾರದು ಎಂದು ನ್ಯಾಯಾಲಯವು ಹೇಳಿದೆ.

ಪ್ರಕರಣದ ವಿಚಾರದಲ್ಲಿ ಪೊಲೀಸರು ಮಾಧ್ಯಮಕ್ಕೆ ಮಾಹಿತಿ ನೀಡುವುದಕ್ಕೆ ಪೀಠವು ತಡೆ ಕೊಟ್ಟಿಲ್ಲ. ಆದರೆ, ಮಾಧ್ಯಮಕ್ಕೆ ಮಾಹಿತಿ ನೀಡುವಾಗ ಈಗ ಚಾಲ್ತಿಯಲ್ಲಿರುವ ನಿಯಮಗಳನ್ನು ಅನುಸರಿಸಬೇಕು ಎಂದು ಹೇಳಿದೆ.

ಮೂಲಗಳಿಂದ ಪಡೆದ ಮಾಹಿತಿಯು ನೈಜವೇ ಎಂಬುದನ್ನು ಪರಿಶೀಲಿಸಬೇಕು ಮತ್ತು ಪರಿಶೀಲಿಸಿ ದೃಢಪಟ್ಟ ಮಾಹಿತಿಯನ್ನು ಮಾತ್ರ ಪ್ರಸಾರ ಮಾಡಬೇಕು. ತನಿಖೆಗೆ ತೊಂದರೆಯಾಗುವ ಮಾಹಿತಿಯನ್ನು ಪ್ರಕಟಿಸಬಾರದು ಎಂದು ಮಾಧ್ಯಮ ಸಂಸ್ಥೆಗಳಿಗೆ ಸೂಚಿಸಲಾಗಿದೆ.

ತಮ್ಮ ಖಾಸಗಿ ವಾಟ್ಸ್‌ಆ್ಯಪ್ ಚಾಟ್‌ಗಳನ್ನು ಪೊಲೀಸರು ಮಾಧ್ಯಮಕ್ಕೆ ಸೋರಿಕೆ ಮಾಡಿದ್ದಾರೆ. ಅಂತಹ ಮಾಹಿತಿ ಸೋರಿಕೆ ಮಾಡದಂತೆ ಪೊಲೀಸರಿಗೆ ಸೂಚನೆ ಕೊಡಬೇಕು ಮತ್ತು ಈ ವರದಿಗಳನ್ನು ಅಳಿಸಿ ಹಾಕಲು ನಿರ್ದೇಶನ ನೀಡಬೇಕು ಎಂದು ಕೋರಿ ದಿಶಾ ಅವರು ಅರ್ಜಿ ಸಲ್ಲಿಸಿದ್ದರು. ಟೈಮ್ಸ್ ನೌ, ನ್ಯೂಸ್ 18 ಮತ್ತು ಇಂಡಿಯಾ ಟುಡೆ ಸುದ್ದಿವಾಹಿನಿಗಳನ್ನು ದಿಶಾ ಅವರು ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ದೆಹಲಿ ಪೊಲೀಸರ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಹಾಜರಿದ್ದರು. ತನಿಖಾ ಸಂಸ್ಥೆಯ ಕೆಲವು ಅಧಿಕಾರಿಗಳು ದಾಖಲೆಗಳನ್ನು ಸೋರಿಕೆ ಮಾಡಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ ಎಂದು ಅವರು ಹೇಳಿದರು.

ತಮ್ಮ ಕಕ್ಷಿದಾರರು ಪ್ರಕಟಿಸಿದ ವರದಿಯ ಮೂಲ ದೆಹಲಿ ಪೊಲೀಸರು ಮತ್ತು ಅವರ ಟ್ವೀಟ್‌ಗಳು ಎಂದು ಮಾಧ್ಯಮ ಸಂಸ್ಥೆಯೊಂದರ ಪರವಾಗಿ ವಾದಿಸಿದ ವಕೀಲ ಮೃಣಾಲ್ ಭಾರ್ತಿ ತಿಳಿಸಿದರು.

ಶ್ರದ್ಧಾಂಜಲಿ

ಶ್ರೀಮತಿ ಬಿ.ಆರ್. ಗುಣ
ಸಿ. ಬಚ್ಚೇಗೌಡರ ಧರ್ಮಪತ್ನಿ

ಇವರು ದಿನಾಂಕ: 18-02-2021 ರಂದು ರಾತ್ರಿ 9.00ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಇವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು: ಎಸ್. ಮುನಿಯಪ್ಪ, (ಆರ್.ಟಿ. ನಗರ), ಸಹೋದರ: ಬಿ.ಆರ್. ನಂಜುಂಡಪ್ಪ, ಆಡಳಿತ ಪಕ್ಷದ ಮಾಜಿ ನಾಯಕರು, ಬಿಬಿಎಂಪಿ, ಮಗಳು: ಶುಭ, ಅಳಿಯ: ಸೋಮರೆಡ್ಡಿ, ಸೊಸೆ: ಲಕ್ಷ್ಮಿ, ಹಾಗೂ ಕುಟುಂಬವರ್ಗದವರು

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

ಸುವರ್ಣಾವಕಾಶ ಪ್ರತಿಷ್ಠಿತ ಕಂಪನಿಗಳಿಗೆ ಹಾಗೂ ಖಾಸಗಿ ಆಫೀಸ್‌ಗಳ ಹುದ್ದೆಗಳಿಗೆ 7th, SSLC, PUC,ITI, Diploma Any Degree Pass/Fail ಆದ ಯುವಕಯುವತಿಯರು ಬೇಕಾಗಿದ್ದಾರೆ.ವಸತಿಯೂಟದೊಂದಿಗೆ ESI/PF +[OT-150/Hour] ಸಂಬಳ 15,600/- ರೂರಿಂದ 34,200/- ರೂವರೆಗೆ.7406000347, 7406000369

ಹೊಸದಾಗಿ ಪ್ರಾರಂಭವಾಗುತ್ತಿರುವ ಧಾರಾವಾಹಿ ಹಾಗೂ ಚಲನಚಿತ್ರದಲ್ಲಿ ನಟಿಸಲು ಆಸಕ್ತಿಯುಳ್ಳವರು ಸಂಪರ್ಕಿಸಿ. ಮಕ್ಕಳಿಗೂ ಅವಕಾಶ ಫೋ.: 8088233523, 7257999369

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

Accounts & Finance

ಎಂ.ಎನ್.ಸಿಗೆ ರಿಸೆಪ್ಷನಿಸ್ಟ್, ಆಫೀಸ್/ ಅಕೌಂಟ್ಸ್, ಅಸಿಸ್ಟೆಂಟ್ಸ್, ಕಂಪ್ಯೂಟರ್ ಆಪರೇಟರ್ಸ್, ಟೆಲಿಕಾಲರ್ಸ್, ಕ್ಲರ್ಕ್ ಅಕೌಂಟೆಂಟ್ಸ್, ಫಿಟ್ಟರ್ಸ್, ಎಲೆಕ್ಟ್ರಿಷಿಯನ್ಸ್, "ರಮ್ಯ": 9902807713/ 7204367465

Marketing & Sales

SALES EXECUTIVE Bike & Smart PhoneMust Jain Bearings 09343381877, 09986781877

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9663959295, 9686523337.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 8749014431

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ತಕ್ಷಣ ಬೇಕಾಗಿದ್ದಾರೆ ಕಂಪನಿ ಹಾಗು ಆಫೀಸ್ ಕೆಲಸಗಳಿಗೆ SSLC PUC Any degree ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ Rs.16600 -Rs.60000 7259261011, 9902839010

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

ವ್ಯಾಪಾರ

Business to Business

Business

ಜೋವರ್ ರೊಟ್ಟಿ, ರಾಗಿ ರೊಟ್ಟಿ, ಚಪಾತಿ, ಪುರಿ ಇತ್ಯಾದಿಗಳನ್ನು ತಯಾರಿಸಲು ಬೇಕಾದ ಯಂತ್ರಗಳಿಗೆ ಕರೆ ಮಾಡಿ. B K Engineers, Marathahalli, Bangalore, Ph:7676212917

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

ಸಾರ್ವಜನಿಕ ಪ್ರಕಟಣೆ

ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನ, ಗಡಿಕಲ್ಲು ಇದರ ಜೀರ್ಣೋದ್ಧಾರದ ಸಹಾಯಾರ್ಥ ಏರ್ಪಡಿಸಲಾದ ಲಕ್ಕಿ ಕೂಪನ್ ಡ್ರಾ ಫೆ.16 ರ ಬದಲು ಫೆ.26 ಕ್ಕೆ ಮುಂದೂಡಲಾಗಿದೆ.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ನಿಮ್ಮಾವುದೇ ಘೋರ ನಿಗೂಢ ಗುಪ್ತ ಸಮಸ್ಯೆಗಳಿಗೆ ಕೇವಲ 30ನಿಮಿಷಗಳಲ್ಲಿ ಪರಿಹಾರ ಸೂಚಿಸುತ್ತಾರೆ. ಹಾಗೂ ಉಚಿತವಾಗಿ ಸ್ತ್ರೀಪುರುಷ ವಶೀಕರಣವನ್ನು ಮಾಡಿಕೊಡುತ್ತಾರೆ. ವಿಳಾಸ: ಅಯ್ಯಪ್ಪ ಟೆಂಪಲ್ ಪಕ್ಕದಲ್ಲಿ ಮೆಟ್ರೋ ಸ್ಟೇಶನ್ ಹತ್ತಿರ, ಶ್ರೀರಾಂಪುರ ಬೆಂಗಳೂರು. 9845702800

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷೀತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ, ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

EDUCATION CORNER
ಸ್ಪರ್ಧಾ ಮಿತ್ರ Academy
KAS / PSI
ADMISSION OPEN FOR NEW BATCHES
KANNADA & ENGLISH MEDIUM
IBPS / Bank PO
Online / Offline Classes
Near Attiguppe Metro Station, Service Road, Vijayanagar, Bangalore - 40
9535111133 / 9535111199

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕವಶೀಕರಣ, ಸ್ತ್ರೀಯರಿಗೆ7ಗಂಟೆಗಳಲ್ಲಿ ಉಚಿತ ಪರಿಹಾರ. 9845153558

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಸಮಾಜಸೇವೆ

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

ರಿಯಾಯಿತಿ ದರದಲ್ಲಿ 12 ದಿನಗಳ ಕಾಶಿ,ದೆಹಲಿ ಪ್ರವಾಸ. 17 ದಿನಗಳ ಚಾರ್‌ಧಾಮ್, 6 ದಿನಗಳ ಅಂಡಮಾನ್ ಮತ್ತು 6 ದಿನಗಳ ದಕ್ಷಿಣಭಾರತ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರಿ ಸೇವಸಂಘ, ಗಿರಿನಗರ,ಬೆಂಗಳೂರು. 9916473906, 8861111568

ಕಾಶಿ, ಗಯಾ, ಅಯೋಧ್ಯ, ಅಲಹಾಬಾದ್, ನೇಪಾಳ 19.03.2021, 16.04.2021 ರಿಂದ 10 ದಿನಗಳು ರೂ.35750 ಅಹಮದಾಬಾದ್, ನಿಷ್ಕಳಂಕಮಾಹದೇವ, ಸೋಮನಾಥ್, ದ್ವಾರಕಾ, ನಾಗೇಶಂ, ಜಾಂಬವಂತಗುಹೆ, ಪಟೇಲ್ ಪ್ರತಿಮೆ, ಉಜ್ಜಯಿನಿ, ಓಂಕಾರೇಶ್ವರ್ 19.03.2021, 16.04.2021 ರಿಂದ 10 ದಿನಗಳು ರೂ.35750 ಚಾರ್ ಧಾಮ್ ಪ್ರವಾಸ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯುಮುನೋತ್ರಿ, ಹರಿದ್ವಾರ್, ಋಷಿಕೇಶ್ 19.05.2021 ರಿಂದ 15 ದಿನಗಳು ರೂ.40750 ಈಎಲ್ಲಾ ಪ್ರವಾಸಗಳು ವಿಮಾನದಲ್ಲಿ. ಸಂಪರ್ಕಿಸಿ: ವಿಷ್ಣನ್ ಟ್ರಾವಲ್ ಸ್ಕೈ N.R ಕಾಲೋನಿ, ಬೆಂಗಳೂರು-19. 8277467677, 8197185933, 7676009620, 9449772219

ಮಾರ್ಚ್, ಏಪ್ರಿಲ್,ಮೇನಲ್ಲಿ 5 ದಿನಗಳು ಅಂಡಮಾನ್ ಹವಳದ್ವೀಪ. 26/03/2021 15ದಿನಗಳು ರೈಲು/ಬಸ್ಸುನಲ್ಲಿ ದೆಹಲಿ, ಅಗ್ರ,ಅಲಹಾಬದ್, ಕಶಿ,ಗಯ, ಹರಿದ್ವರ್, ಇತ್ಯಾದಿ 15000/=(ಕೆಲವೇ ಸೀಟುಗಳಿವೆ). ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ಅಂಡಮಾನ್ ಪ್ರವಾಸ 6ದಿನಗಳು 28-04-2021.ಹ್ಯಾವ್‌ಲಾಕ್ ಐಲ್ಯಾಂಡ್, ನೀಲ್ ಐಲ್ಯಾಂಡ್, ಪ್ಲೋರ್ಟ್‌ಬ್ಲೇರ್, ಭಾರಟ್ಯಾಂಗ್ ಇತರೆ ಊಟ ವಸತಿ ಸೇರಿ ಸುವರ್ಣಯಾತ್ರ. 9008381022, 9019462508

ವಾಹನ

Four Wheelers Selling

Others

INTRA V10 ವಾಹನ ಈಗ 3.99% ಬಡ್ಡಿದರ ಲಾಭದ ಭರವಸೆಯೊಂದಿಗೆ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

33 kW ಇಂಜಿನ್
₹50,000/-* ದವರೆಗೆ ಗ್ರಾಹಕರ ಕೊಡುಗೆಗಳು ಅಥವಾ 3.99%* ಬಡ್ಡಿದರ / 47 ತಿಂಗಳು
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95384 14448
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ಮಂಗಳನ ಅಂಗಳಕ್ಕಿಳಿದ ನಾಸಾ ನೌಕೆ

ಮಂಗಳ ಗ್ರಹದಲ್ಲಿ ಜೀವಿಗಳು, ಸೂಕ್ಷ್ಮಾಣು ಜೀವಿಗಳು ಇದ್ದವೇ ಎಂಬುದನ್ನು ಪರಿಶೀಲಿಸಲು ಅಲ್ಲಿನ ಮಣ್ಣು-ಕಲ್ಲಿನ ಮಾದರಿಯನ್ನು ತರಲು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಕಳುಹಿಸಿದ್ದ 'ಪರ್ಸಿವಿಯರೆನ್ಸ್' ರೋವರ್ ನೌಕೆಯು ಶುಕ್ರವಾರ ಯಶಸ್ವಿಯಾಗಿ ಮಂಗಳನ ಅಂಗಳದಲ್ಲಿ ಇಳಿದಿದೆ. ನಾಸಾದ 'ಮಾರ್ಸ್ 2020' ಯೋಜನೆಯ ಒಂದು ಪ್ರಮುಖ ಘಟ್ಟ ಮುಗಿದಿದೆ. ಪರ್ಸಿವಿಯರೆನ್ಸ್ ರೋವರ್ ನೌಕೆಯು, ಮಂಗಳನ ಅಂಗಳದಲ್ಲಿ ಮಾದರಿ ಸಂಗ್ರಹ ಕಾರ್ಯವನ್ನು ಶೀಘ್ರವೇ ಆರಂಭಿಸಲಿದೆ.

1 ಮಣ್ಣು ತರುವ ಕಾರ್ಯಾಚರಣೆ

ಪರ್ಸಿವಿಯರೆನ್ಸ್ ರೋವರ್ ಅನ್ನು ಹೊತ್ತಿದ್ದ ನೌಕೆಯನ್ನು 2020ರ ಜುಲೈ 30ರಂದು ಫ್ಲಾರಿಡಾದಿಂದ ಉಡ್ಡಯನ ಮಾಡಲಾಗಿತ್ತು. ಬರೋಬ್ಬರಿ 203 ದಿನಗಳ ಪ್ರಯಾಣದ ನಂತರ ಆ ನೌಕೆಯು ಈಗ ಮಂಗಳನ ಅಂಗಳ ತಲುಪಿದೆ. ಹಲವು ರಾಕೆಟ್‌ಗಳನ್ನು ಹೊಂದಿದ್ದ ಮತ್ತು ಕ್ರೇನ್ ಸವಲತ್ತು ಇದ್ದ ಪರಿಭ್ರಮಣ ನೌಕೆಯ ಮೂಲಕ ಪರ್ಸಿವಿಯರೆನ್ಸ್ ನೌಕೆಯನ್ನು ಮಂಗಳಕ್ಕೆ ಇಳಿಸಲಾಗಿದೆ. ಮಂಗಳನ ಅಂಗಳದಿಂದ ಮಣ್ಣಿನ ಮಾದರಿಯನ್ನು ಭೂಮಿಗೆ ತರುವ ಕಾರ್ಯಾಚರಣೆಯನ್ನು ನಾಸಾ ಮತ್ತು ಯುರೋಪಿಯನ್ ಸ್ಪೇಸ್ ಏಜೆನ್ಸಿ (ಇಎಸ್‌ಎ) ಜಂಟಿಯಾಗಿ ನಡೆಸಲಿವೆ.



2 ಪರ್ಸಿವಿಯರೆನ್ಸ್ ತನ್ನಲ್ಲಿರುವ ಕೊರೆಗ (ಡ್ರಿಲ್ಲರ್) ಯಂತ್ರದ ಮೂಲಕ ಮಂಗಳನ ನೆಲದಲ್ಲಿನ ಮಣ್ಣು ಮತ್ತು ಕಲ್ಲನ್ನು ಕೊರೆಯಲಿದೆ



3 ಹೀಗೆ ಸಂಗ್ರಹಿಸಿದ ಮಾದರಿಗಳನ್ನು ಕ್ಯಾನ್‌ಗಳಲ್ಲಿ ಸಂಗ್ರಹಿಸಲಿದೆ. ಆ ಕ್ಯಾನ್‌ಗಳಲ್ಲಿ ಅಲ್ಲಿಯೇ ಬಿಸಾಡಿ ಮುಂದಕ್ಕೆ ಹೋಗಲಿದೆ



4 2026ರ ವೇಳೆಗೆ ಯುರೋಪಿಯನ್ ಸ್ಪೇಸ್ ಏಜೆನ್ಸಿಯ ಮತ್ತೊಂದು ಸಣ್ಣ ರೋವರ್ ನೌಕೆ ಮಂಗಳನ ಅಂಗಳದಲ್ಲಿ ಇಳಿಯಲಿದೆ. ಪರ್ಸಿವಿಯರೆನ್ಸ್ ನೌಕೆ ಬಿಸಾಡಿರುವ ಕ್ಯಾನ್‌ಗಳನ್ನು ಈ ರೋವರ್ ಸಂಗ್ರಹಿಸಲಿದೆ



5 ಇದೇ ವೇಳೆಗೆ ಮಂಗಳನ ಅಂಗಳದಲ್ಲಿ ಮತ್ತೊಂದು ಲ್ಯಾಂಡರ್ ನೌಕೆ ಇಳಿಯಲಿದೆ. ಮಾದರಿ ಇರುವ ಕ್ಯಾನ್‌ಗಳನ್ನು ಈ ಲ್ಯಾಂಡರ್ ನೌಕೆಗೆ ರೋವರ್ ನೌಕೆಯು ತುಂಬಲಿದೆ. ಆ ಕ್ಯಾನ್‌ಗಳನ್ನು ಸಣ್ಣ ರಾಕೆಟ್‌ಗಳಿಗೆ ಅಳವಡಿಸಿ, ನಭಕ್ಕೆ ಉಡ್ಡಯನ ಮಾಡಲಾಗುತ್ತದೆ



6 ಮಂಗಳನ ಸುತ್ತ ಸುತ್ತುತ್ತಿರುವ ಯುರೋಪಿಯನ್ ಸ್ಪೇಸ್ ಏಜೆನ್ಸಿಯ ಉಪಗ್ರಹವು ಈ ಕ್ಯಾನ್‌ಗಳನ್ನು ಹಿಡಿದುಕೊಳ್ಳಲಿದೆ



7 ಅಂತಿಮವಾಗಿ ಈ ಕ್ಯಾನ್‌ಗಳನ್ನು ಭೂಮಿಯಲ್ಲಿರುವ ಗ್ರೌಂಡ್ ಸ್ಟೇಷನ್‌ಗೆ ಉಪಗ್ರಹವು ರವಾನೆ ಮಾಡಲಿದೆ. 2031ರ ವೇಳೆಗೆ ಮೊದಲ ಮಾದರಿ ಭೂಮಿಯನ್ನು ತಲುಪುವ ಸಾಧ್ಯತೆ ಇದೆ

ಆಧಾರ: ನಾಸಾ, ಪಿಟಿಐ, ರಾಯಿಟರ್ಸ್, ಬಿಬಿಸಿ ಪ್ರಜಾವಾಣಿ ಗ್ರಾಫಿಕ್ಸ್

ಲ್ಯಾಂಡಿಂಗ್ ಮುಂದಾಳು ಕರ್ನಾಟಕ ಮೂಲದ ಮಹಿಳೆ

ಸ್ವಾತಿ ಮೋಹನ್

'ಟಚ್‌ಡೌನ್ ಕನ್‌ಫರ್ಮ್‌ಡ್'. ನಾಸಾದ ಪರ್ಸಿವಿಯರೆನ್ಸ್ ರೋವರ್ ನೌಕೆ ಮಂಗಳನ ನೆಲವನ್ನು ಸ್ಪರ್ಶಿಸಿದನ್ನು ದೃಢಪಡಿಸಿದ ಘೋಷಣೆ ಇದು. ನಾಸಾದ ವಿಜ್ಞಾನಿಗಳಿಗೆ ಮತ್ತು ಈ ನೆಲಸ್ಪರ್ಶವನ್ನು ಕುತೂಹಲದಿಂದ ಕಾಯುತ್ತಿದ್ದ ಆಸಕ್ತರಿಗೆ ಈ ವಿಚಾರವನ್ನು ತಿಳಿಸಿದ್ದು ಭಾರತೀಯ ಮೂಲದ ವಿಜ್ಞಾನಿ ಸ್ವಾತಿ ಮೋಹನ್. ಸ್ವಾತಿ ಅವರು, ಪರ್ಸಿವಿಯರೆನ್ಸ್ ನೌಕೆಯ ನೆಲಸ್ಪರ್ಶ ಕಾರ್ಯಾಚರಣೆಯ ನಿರ್ದೇಶನ, ಪಥನಿರ್ದೇಶನ ಮತ್ತು ನಿಯಂತ್ರಣ ಕಾರ್ಯಾಚರಣೆ ತಂಡದ ಮುಖ್ಯಸ್ಥರಾಗಿದ್ದಾರೆ. ಈ ವಿಭಾಗವನ್ನು ಮಂಗಳನ ನೆಲಕ್ಕೆ ಇಳಿಯುವ ಕಾರ್ಯಾಚರಣೆಯ ಕಣ್ಣು-ಕಿವಿ ಎನ್ನಲಾಗುತ್ತದೆ.

ಸ್ವಾತಿ ಅವರ ತಂದೆ-ತಾಯಿಯಾದ ಮೋಹನ್ ಮತ್ತು ಜ್ಯೋತಿ ಅವರು, ಕನ್ನಡ ನಾಡಿನವರು. ಒಂದು ವರ್ಷದ ಮಗುವಾಗಿದ್ದಾಗಲೇ ಸ್ವಾತಿ ಮೋಹನ್ ಅವರ ತಂದೆ-ತಾಯಿ, ಬೆಂಗಳೂರಿನಿಂದ ಅಮೆರಿಕಕ್ಕೆ ವಲಸೆ ಹೋಗಿದ್ದರು. ಅಮೆರಿಕದ ಉತ್ತರ ವರ್ಜೀನಿಯಾದಲ್ಲಿ ನೆಲೆಸಿದ್ದರು. ಸ್ವಾತಿ ಅವರು ಏರೊನಾಟಿಕ್ಸ್ ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಿದ್ದಾರೆ. '9ನೇ ವರ್ಷದಲ್ಲಿ ಸ್ಟಾರ್ ಟ್ರೆಕ್ ಧಾರಾವಾಹಿ ನೋಡಿದ್ದೆ. ಬಾಹ್ಯಾಕಾಶ ಸಂಶೋಧನೆಗೆ ಬರಲು ಆ ಧಾರಾವಾಹಿಯೇ ಸ್ಫೂರ್ತಿ' ಎಂದು ಅವರು ಹೇಳಿಕೊಂಡಿದ್ದಾರೆ.

ಪೂರ್ವ ಲಡಾಖ್ ಗಡಿಯಿಂದ ಸೇನೆಯನ್ನು ಹಿಂದಕ್ಕೆ ಕರೆಯಿಸುವ ಕಾರ್ಯ ಪೂರ್ಣ

ಭಾರತ– ಚೀನಾ: ಸೇನಾಮಟ್ಟದ ಮಾತುಕತೆ ಇಂದು

ನವದೆಹಲಿ (ಪಿಟಿಐ): 'ಪ್ಯಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ತೀರಗಳಿಂದ ಭಾರತ ಹಾಗೂ ಚೀನಾದ ಸೇನೆಗಳನ್ನು ಹಿಂದಕ್ಕೆ ಕರೆಯಿಸುವ ಕಾರ್ಯ ಪೂರ್ಣಗೊಂಡಿದ್ದು, ಶನಿವಾರ (ಫೆ. 20) ಉಭಯ ಸೇನಾ ನಾಯಕರ ಉನ್ನತ ಮಟ್ಟದ ಸಭೆ ಆರಂಭವಾಗಲಿದೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಎರಡೂ ಸೇನೆಗಳ ಕಮಾಂಡರ್ ಮಟ್ಟದ ಹತ್ತನೇ ಸುತ್ತಿನ ಮಾತುಕತೆಗಳು ವಾಸ್ತವ ಗಡಿರೇಖೆಯ ಚೀನಾದ ಭಾಗದಲ್ಲಿರುವ ಮೋಲ್ಡೊದಲ್ಲಿ ಶನಿವಾರ ಬೆಳಿಗ್ಗೆ 10 ಗಂಟೆಗೆ ಆರಂಭವಾಗಲಿವೆ. ಸೇನೆಯನ್ನು ಹಿಂದಕ್ಕೆ ಕರೆಯಿಸಿಕೊಂಡ ನಂತರ ನಡೆಯುತ್ತಿರುವ ಮೊದಲ ಮಾತುಕತೆ ಇದಾಗಿದೆ.

'ಉತ್ತರ ಹಾಗೂ ದಕ್ಷಿಣ ತೀರದಲ್ಲಿ ಬೀಡುಬಿಟ್ಟಿದ್ದ ಸೇನೆ, ಶಸ್ತ್ರಾಸ್ತ್ರಗಳು ಹಾಗೂ ಸೇನೆಗೆ ಸಂಬಂಧಿಸಿದ ಇತರ ಉಪಕರಣಗಳನ್ನು ವಾಪಸ್ ತರಿಸುವುದು, ಬಂಕರ್, ಟೆಂಟ್ ಹಾಗೂ ತಾತ್ಕಾಲಿಕ ಕಟ್ಟಡಗಳನ್ನು ನಾಶಪಡಿಸುವುದೇ ಮುಂತಾದ ಕೆಲಸಗಳು ಗುರುವಾರ ಪೂರ್ಣಗೊಂಡಿವೆ. ಎರಡೂ ಕಡೆಯವರು ಇದರ ಪರಿಶೀಲನೆಯನ್ನೂ ನಡೆಸಿಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ಶನಿವಾರ ನಡೆಯುವ ಮಾತುಕತೆಯ ಸಂದರ್ಭದಲ್ಲಿ, ಉಳಿದ ಪ್ರದೇಶಗಳಿಂದಲೂ ಸೇನೆಯನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ಕಾರ್ಯವನ್ನು ಚುರುಕುಗೊಳಿಸುವಂತೆ ಭಾರತವು ಚೀನಾವನ್ನು ಒತ್ತಾಯಿಸಲಿದೆ ಎನ್ನಲಾಗಿದೆ. ಭಾರತದ ಕಡೆಯಿಂದ ಲೆಫ್ಟಿನೆಂಟ್ ಜನರಲ್ ಪಿ.ಕೆ.ಜಿ. ಮೆನನ್ ಅವರು ಮಾತುಕತೆಯಲ್ಲಿ ಪಾಲ್ಗೊಳ್ಳುವರು. ಚೀನಾದ ಕಡೆಯಿಂದ ಮೇಜರ್ ಜನರಲ್ ಜೆನ್ ಲಿಯು ಲಿನ್ ಅವರು ಬರುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗಿದೆ.

ಫೆಬ್ರುವರಿ 10ರಿಂದ ಉಭಯ ದೇಶಗಳು ಪ್ಯಾಂಗಾಂಗ್ ಸರೋವರದ ಬಳಿಯಿಂದ ಸೇನೆಯನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ಕಾರ್ಯವನ್ನು ಆರಂಭಿಸಿದ್ದವು.

ಆಯುರ್ವೇದ ಅರ್ಥವ್ಯವಸ್ಥೆ: ಶೇ 90ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಆಯುರ್ವೇದಕ್ಕೆ ಜಾಗತಿಕ ಮಟ್ಟದಲ್ಲಿ ಸ್ವೀಕೃತಿ ಸಿಕ್ಕಿರುವ ಕಾರಣ, ಕೋವಿಡ್–19 ಸಾಂಕ್ರಾಮಿಕದ ನಂತರದಲ್ಲಿ ಆಯುರ್ವೇದ ಆಧಾರಿತ ಅರ್ಥವ್ಯವಸ್ಥೆಯು ಶೇಕಡ 90ರವರೆಗೆ ಬೆಳವಣಿಗೆ ಕಂಡಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಹೇಳಿದ್ದಾರೆ.

ಆಯುರ್ವೇದ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿ ಹೂಡಿಕೆ ಆಗುತ್ತಿದೆ, ಈ ಕ್ಷೇತ್ರದ ರಫ್ತಿನ ಪ್ರಮಾಣದಲ್ಲಿ ಹೆಚ್ಚಳ ಆಗಿದೆ ಎಂದೂ ಅವರು ತಿಳಿಸಿದ್ದಾರೆ. ಅಧಿಕೃತ ಅಂಕಿ–ಅಂಶಗಳ ಪ್ರಕಾರ ಆಯುರ್ವೇದವು ದೇಶದಲ್ಲಿ ₹ 30 ಸಾವಿರ ಕೋಟಿ ಮೌಲ್ಯದ ಉದ್ದಿಮೆಯನ್ನು ಪೋಷಿಸುತ್ತಿದೆ. ಈ ಕ್ಷೇತ್ರದ ವಾರ್ಷಿಕ ಬೆಳವಣಿಗೆ ಶೇ 15ರಿಂದ ಶೇ 20ರಷ್ಟು ಇದೆ.

'ಇದು ಕೋವಿಡ್–19 ಪೂರ್ವದ ಅಂಕಿ–ಅಂಶಗಳು. ಕೋವಿಡ್ ನಂತರದಲ್ಲಿ ಆಯುರ್ವೇದ ಆಧಾರಿತ ಅರ್ಥವ್ಯವಸ್ಥೆಯು ಶೇ 50ರಿಂದ ಶೇ 90ರವರೆಗೆ ಬೆಳವಣಿಗೆ ಕಂಡಿದೆ' ಎಂದು ಸಚಿವರು ಹೇಳಿದ್ದಾರೆ. ಭಾರತದ ಜನ ಹಾಗೂ ವಿಶ್ವದ ಜನ ಆಯುರ್ವೇದವನ್ನು ಸ್ವೀಕರಿಸಿದ್ದಾರೆ ಎಂಬುದನ್ನು ಈ ಅಂಕಿ–ಅಂಶಗಳೇ ಹೇಳುತ್ತಿವೆ ಎಂದು ಕೂಡ ಅವರು ಹೇಳಿದ್ದಾರೆ.

'ರಫ್ತು ಹಾಗೂ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಕೂಡ ಗಮನಾರ್ಹ ಹೆಚ್ಚಳ ಆಗಿದೆ' ಎಂದು ಅವರು ಪತಂಜಲಿ ಸಂಸ್ಥೆಯ ಸಂಶೋಧನಾ ಪ್ರಬಂಧವೊಂದರ ಬಿಡುಗಡೆ ವೇಳೆ ತಿಳಿಸಿದ್ದಾರೆ. 'ನಾನು ಆಧುನಿಕ ವೈದ್ಯವಿಜ್ಞಾನ ಅಧ್ಯಯನ ಮಾಡಿ, ವೈದ್ಯನಾಗಿ ಕೆಲಸ ಮಾಡಿದವನು. ಆದರೆ, ಆಯುರ್ವೇದವನ್ನು ಅಧ್ಯಯನ ಮಾಡಿದ ನಂತರ ಇದು ಎಲ್ಲರಿಗೂ ಪ್ರಯೋಜನಕಾರಿ ಎಂಬ ತೀರ್ಮಾನಕ್ಕೆ ಬಂದಿದ್ದೇನೆ' ಎಂದು ಹರ್ಷವರ್ಧನ್ ಹೇಳಿದ್ದಾರೆ.

ಗಡಿ ಜಿಲ್ಲೆಗಳಲ್ಲಿ ಹೈ ಅಲರ್ಟ್: ಸಚಿವ ಸುಧಾಕರ್

ಚಿಕ್ಕಬಳ್ಳಾಪುರ: ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚಾಗಿರುವುದರಿಂದ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಹೈ ಅಲರ್ಟ್ ಆಗಿರಲು ಸೂಚಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಶುಕ್ರವಾರ ತಿಳಿಸಿದರು.

ನೆರೆಯ ರಾಜ್ಯಗಳಲ್ಲಿ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಏರಿಕೆಯಾಗಿರುವುದರಿಂದ ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಶನಿವಾರ ವಿಡಿಯೊ ಸಂವಾದ ನಡೆಸಲಾಗುತ್ತದೆ ಎಂದರು.

'ಕೊರೊನಾ ಸೋಂಕು ಇನ್ನೂ ಜೀವಂತವಾಗಿದೆ. ಲಸಿಕೆ ಇದೆ ಎಂದು ಮಾಸ್ಕ್ ಧರಿಸದಿದ್ದರೆ ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಕಷ್ಟವಾಗುತ್ತದೆ. ಸೋಂಕು ಹೊರಟು ಹೋಗಿದೆ ಎನ್ನುವ ತಪ್ಪುಕಲ್ಪನೆ ಬೇಡ' ಎಂದರು.

ಕೋವಿಡ್ ಲಸಿಕೆ: ಮತ್ತೆ ನಾಲ್ವರಿಗೆ ಅಡ್ಡ ಪರಿಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆದವರಲ್ಲಿ ಮತ್ತೆ ಒಬ್ಬರಿಗೆ ತೀವ್ರ ಹಾಗೂ ಮೂವರಿಗೆ ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿರುವುದು ಶುಕ್ರವಾರ ದೃಢಪಟ್ಟಿದೆ. ಇವರಲ್ಲಿ ಚಿಕ್ಕಬಳ್ಳಾಪುರದ 56 ವರ್ಷದ ವ್ಯಕ್ತಿ ಮೃತಪಟ್ಟಿದ್ದಾರೆ.

ಹೃದಯ ಸಂಬಂಧಿ ಸಮಸ್ಯೆಗೆ ಜಯದೇವ ಹೃದ್ರೋಗ ಸಂಸ್ಥೆಗೆ ದಾಖಲಾಗಿದ್ದ 56 ವರ್ಷದ ವ್ಯಕ್ತಿ, ಗುರುವಾರ ಆಸ್ಪತ್ರೆಯಿಂದ ಮನೆಗೆ ತೆರಳಿದ್ದರು. ಅವರಿಗೆ ಶುಕ್ರವಾರ ಮಧ್ಯಾಹ್ನ 1 ಗಂಟೆ ವೇಳೆಗೆ ಮತ್ತೆ ಎದೆನೋವು ಕಾಣಿಸಿಕೊಂಡಿದ್ದು, ಆಸ್ಪತ್ರೆಗೆ ಕರೆದೊಯ್ಯುವ ವೇಳೆಯೇ ಮೃತಪಟ್ಟಿದ್ದಾರೆ. ಅವರು ಈ ಹಿಂದೆ ಕೋವಿಡ್ ಲಸಿಕೆ ಪಡೆದುಕೊಂಡಿದ್ದರು. ಅವರ ಸಾವಿಗೆ ಲಸಿಕೆಯ ಅಡ್ಡ ಪರಿಣಾಮ ಕಾರಣವೇ ಅಥವಾ ಬೇರೆ ಸಮಸ್ಯೆಯೇ ಎನ್ನುವುದರ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಸೋಂಕು: 5 ಸಾವು

ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ಕು ಮಂದಿ ಕೊಡಗಿನಲ್ಲಿ ಒಬ್ಬರು ಮೃತಪಟ್ಟಿರುವುದು ಶುಕ್ರವಾರ ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,287ಕ್ಕೆ ತಲುಪಿದೆ. ರಾಜ್ಯದಲ್ಲಿ ಹೊಸದಾಗಿ 386 ಸೋಂಕು ಪ್ರಕರಣಗಳು ದೃಢಪಟ್ಟಿವೆ.

ರಾಯಚೂರಿನ ಅಂಗನವಾಡಿ ಕಾರ್ಯಕರ್ತೆ ಜ.20ರಂದು ಲಸಿಕೆ ಪಡೆದುಕೊಂಡಿದ್ದರು. ಜ.27ರ ಬಳಿಕ ಅವರಿಗೆ ಮೈಕೈ ನೋವು ಕಾಣಿಸಿಕೊಂಡಿತ್ತು. ಫೆ.15ರ ಬಳಿಕ ಜ್ವರ, ಹೊಟ್ಟೆ ನೋವು ಸೇರಿದಂತೆ ವಿವಿಧ ಸಮಸ್ಯೆಗಳು ಎದುರಾಗಿದ್ದು, ಅವರನ್ನು ನಿಮ್ಹಾನ್ಸ್‌ಗೆ ದಾಖಲಿಸಲಾಗಿದೆ. ಮೈಸೂರಿನಲ್ಲಿ 40 ವರ್ಷದ ವ್ಯಕ್ತಿಗೆ ಕೈಕಾಲುಗಳಲ್ಲಿ ನೋವು ಕಾಣಿಸಿಕೊಂಡಿದ್ದು, ಅವರಿಗೆ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

'ಅನುಮತಿ ನಿರಾಕರಿಸಿದರೂ ಮಹಾಪಂಚಾಯಿತಿ ಖಚಿತ'

ರೈತ ಸಮಾವೇಶಕ್ಕೆ ಜಿಲ್ಲಾಡಳಿತ ಅನುಮತಿ ನಿರಾಕರಣೆ

ರಾಜಸ್ಥಾನದ ಕೋಟಖವಾಡದಲ್ಲಿ ನಡೆದ ಕಿಸಾನ್ ಮಹಾಪಂಚಾಯತ್‌ನಲ್ಲಿ ರಾಜ್ಯದ ಉಪಮುಖ್ಯಮಂತ್ರಿ, ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಮಾತನಾಡಿದರು –ಪಿಟಿಐ ಚಿತ್ರ

ನಾಗ್ಪುರ (ಪಿಟಿಐ): ಅನುಮತಿ ನೀಡಲು ಜಿಲ್ಲಾಡಳಿತವು ನಿರಾಕರಿಸಿದ್ದರೂ ಮಹಾರಾಷ್ಟ್ರದ ಯವತ್ಮಾಲ್‌ನಲ್ಲಿ ಶನಿವಾರ (ಫೆ. 20) ರೈತರ 'ಮಹಾ ಪಂಚಾಯಿತಿ' ಆಯೋಜಿಸುವುದು ಖಚಿತ ಎಂದು ರೈತ ಮುಖಂಡ ರಾಕೇಶ್ ಟಿಕಾಯತ್ ಹೇಳಿದ್ದಾರೆ.

ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಕಾರಣಕ್ಕೆ ರೈತರ ಮಹಾಪಂಚಾಯಿತಿ ಹಮ್ಮಿಕೊಳ್ಳಲು ಯವತ್ಮಾಲ್ ಜಿಲ್ಲಾಡಳಿತ ನಿರಾಕರಿಸಿದೆ. ಶಾಲಾ ಕಾಲೇಜುಗಳನ್ನು ಪುನಃ ಹತ್ತು ದಿನಗಳ ಕಾಲ ಮುಚ್ಚಲು ಜಿಲ್ಲಾಧಿಕಾರಿ ಸೂಚನೆ ನೀಡಿದ್ದಾರೆ. ಜನರು ಗುಂಪು ಸೇರುವುದರ ಮೇಲೂ ನಿಷೇಧ ಹೇರಲಾಗಿದೆ.

ಆದರೆ, 'ನಾವು ಕಾರ್ಯಕ್ರಮ ಆಯೋಜಿಸುವುದು ಖಚಿತ. ರೈತ ಮುಖಂಡ ಟಿಕಾಯತ್ ಹಾಗೂ ಇತರರನ್ನು ತಡೆಯುವ ಪ್ರಯತ್ನ ಮಾಡಿದರೆ ಎಲ್ಲಿ ಅವರನ್ನು ತಡೆಯಲಾಗುವುದೋ ಅಲ್ಲಿಯೇ ಧರಣಿ ನಡೆಸುತ್ತೇವೆ' ಎಂದು ರೈತರ ಸಂಘಟನೆಗಳ ಒಕ್ಕೂಟ 'ಸಂಯುಕ್ತ ಕಿಸಾನ್ ಮೋರ್ಚಾ'ದ ಮಹಾರಾಷ್ಟ್ರ ಘಟಕದ ಸಂಚಾಲಕ ಸಂದೀಪ್ ಗಿಡ್ಡೆ ಶುಕ್ರವಾರ ಹೇಳಿದ್ದಾರೆ.

ಮಧ್ಯಮವರ್ಗದ ವಿರೋಧಿ: 'ಹೊಸ ಕೃಷಿ ಕಾಯ್ದೆಗಳು ರೈತರಿಗಷ್ಟೇ ಅಲ್ಲ, ದೇಶದ ಮಧ್ಯಮವರ್ಗದ ಜನರ ವಿರೋಧಿಯೂ ಆಗಿವೆ' ಎಂದು ರಾಜಸ್ಥಾನದ ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಹೇಳಿದ್ದಾರೆ.

ಕೋಟಖವಾಡದಲ್ಲಿ ಆಯೋಜಿಸಿದ್ದ ಕಿಸಾನ್ ಮಹಾಪಂಚಾಯಿತಿಯಲ್ಲಿ ಮಾತನಾಡಿದ ಅವರು, 'ರೈತರು ಭಿಕ್ಷೆ ಬೇಡುತ್ತಿಲ್ಲ. ತಮ್ಮ ಹಕ್ಕಿಗಾಗಿ ಹೋರಾಡುತ್ತಿದ್ದಾರೆ. ಕಾಯ್ದೆಗಳನ್ನು ಹಿಂತೆಗೆದುಕೊಳ್ಳಲು ಕಾಂಗ್ರೆಸ್ ಪಕ್ಷವು ಸರ್ಕಾರದ ಮೇಲೆ ಒತ್ತಡ ಹೇರಲಿದೆ' ಎಂದರು.

ಮಧ್ಯವರ್ತಿಗಳಿಂದ ವಿರೋಧ: ಯೋಗಿ

'ಕೇಂದ್ರದ ಕೃಷಿ ಕಾಯ್ದೆಗಳನ್ನು ಮಧ್ಯವರ್ತಿಗಳು ಮಾತ್ರ ವಿರೋಧಿಸುತ್ತಿದ್ದಾರೆ' ಎಂದು ಉತ್ತರಪ್ರದೇಶ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಹೇಳಿದ್ದು ಭಾರಿ ಗದ್ದಲಕ್ಕೆ ಕಾರಣವಾಗಿದೆ.

ವಿಧಾನಸಭೆಯಲ್ಲಿ ವಿರೋಧಪಕ್ಷಗಳ ಒತ್ತಾಯಕ್ಕೆ ಮಣಿದು, ಕೃಷಿ ಕಾನೂನುಗಳ ಚರ್ಚೆಗೆ ಅವಕಾಶ ನೀಡಿದ ಕೂಡಲೇ ಯೋಗಿ ಅವರು, 'ಹಣವು ನೇರವಾಗಿ ರೈತರ ಖಾತೆಗಳಿಗೆ ಹೋಗುತ್ತಿರುವುದರಿಂದ ಹೊಸ ಕಾಯ್ದೆಗಳಿಂದ ಮಧ್ಯವರ್ತಿಗಳಿಗೆ ಭಾರಿ ಚಿಂತೆಯಾಗಿದೆ. ರೈತರಿಗೆ ತಮ್ಮ ಹಕ್ಕಿನ ಹಣ ಲಭಿಸುವುದಲ್ಲದೆ, ತಮ್ಮ ಫೋನ್‌ನಲ್ಲೇ ಆ ಕುರಿತ ವಿವರಗಳು ಲಭಿಸುತ್ತಿವೆ. ದಲ್ಲಾಳಿ ವ್ಯವಸ್ಥೆಯು ಅಂತ್ಯವಾಗುತ್ತಿದೆ' ಎಂದರು.

ಈ ಸಂದರ್ಭದಲ್ಲಿ ಭಾರಿ ಗದ್ದಲ ಸೃಷ್ಟಿಯಾಗಿ ಕಲಾಪವನ್ನು ಮುಂದೂಡಬೇಕಾದ ಪ್ರಸಂಗ ಒದಗಿತು. ಆ ನಂತರವೂ ಮತ್ತೊಮ್ಮೆ ಕಲಾಪವನ್ನು ಮುಂದೂಡಲಾಯಿತು.

ಸಂಕ್ಷಿಪ್ತ ಸುದ್ದಿ

ಕರ್ನಾಟಕ ಬ್ಯಾಂಕಿನ ಸಿಇಒಗೆ 'ವರ್ಷದ ಸಿಇಒ' ಪ್ರಶಸ್ತಿ

ಮಂಗಳೂರು: 'ವರ್ಲ್ಡ್ ಲೀಡರ್‌ಶಿಪ್ ಕಾಂಗ್ರೆಸ್ ಆ್ಯಂಡ್ ಅವಾರ್ಡ್ಸ್' ನೀಡುವ 'ಸಿಇಒ ಆಫ್ ದ ಇಯರ್' ಪ್ರಶಸ್ತಿಯನ್ನು ಮುಂಬೈನಲ್ಲಿ ನಡೆದ 19ನೇ 'ಗ್ಲೋಬಲ್ ಎಡಿಷನ್ ಆಫ್ ಬಿಸಿನೆಸ್ ಲೀಡರ್ ಆಫ್ ದ ಇಯರ್' ಸಮಾರಂಭದಲ್ಲಿ ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ಅವರಿಗೆ ಪ್ರದಾನ ಮಾಡಲಾಯಿತು.

'ಕೋವಿಡ್–19 ಸಂಕಷ್ಟದ ನಡುವೆಯೂ ಬ್ಯಾಂಕಿನ ಎಲ್ಲರ ಕಠಿಣ ಪರಿಶ್ರಮ ಹಾಗೂ ಬದ್ಧತೆಯ ಪ್ರತಿಫಲವಾಗಿ ಈ ಪ್ರತಿಷ್ಠಿತ ಪ್ರಶಸ್ತಿಯು ಒಲಿದು ಬಂದಿದೆ' ಎಂದುಪ್ರಶಸ್ತಿ ಸ್ವೀಕರಿಸಿ ಮಹಾಬಲೇಶ್ವರ ಅವರು ಹೇಳಿದರು.

ಫೇಸ್‌ಬುಕ್ ನಿರ್ಬಂಧ: ಆಸ್ಟ್ರೇಲಿಯಾ ಪ್ರಧಾನಿ ಬೇಸರ

ಕ್ಯಾನ್‌ಬೆರಾ (ಎಪಿ): ಆಸ್ಟ್ರೇಲಿಯಾದಲ್ಲಿ ಸುದ್ದಿಗಳ ವೀಕ್ಷಣೆ ಮತ್ತು ಹಂಚಿಕೆಗೆ ಫೇಸ್‌ಬುಕ್ ಹೇರಿರುವ ನಿರ್ಬಂಧ ಹಿಂಪಡೆಯಬೇಕು ಎಂದು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಆಗ್ರಹಿಸಿದ್ದಾರೆ.

ಮಾಧ್ಯಮ ಸಂಸ್ಥೆಗಳಿಗೆ ಹಣ ಪಾವತಿಸುವ ಕುರಿತ ನಮ್ಮ ಸರ್ಕಾರದ ನಿಯಮಗಳನ್ನೇ ವಿಶ್ವದ ಇತರ ಸರ್ಕಾರಗಳೂ ಜಾರಿಗೆ ತರಬಹುದು ಎಂಬ ಎಚ್ಚರಿಕೆಯನ್ನೂ ಅವರು ಇದೇ ವೇಳೆ ನೀಡಿದ್ದಾರೆ. ಈ ಕುರಿತು ಡಿಜಿಟಲ್ ದೈತ್ಯ ಸಂಸ್ಥೆಗಳು ಮಾತುಕತೆಗೆ ಮರಳುವಂತೆ ಅವರು ಕರೆ ನೀಡಿದ್ದಾರೆ.

'ಕೊರೊನಿಲ್'ಗೆ ಆಯುಷ್ ಪ್ರಮಾಣಪತ್ರ: ಬಾಬಾ ರಾಮ್‌ದೇವ್

ನವದೆಹಲಿ (ಪಿಟಿಐ): ಪತಂಜಲಿ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೋವಿಡ್ ಔಷಧಿ 'ಕೊರೊನಿಲ್'ಗೆ ಆಯುಷ್ ಸಚಿವಾಲಯವು, ವಿಶ್ವ ಆರೋಗ್ಯ ಸಂಸ್ಥೆ ಮಾನದಂಡಗಳ ಅನುಸಾರ ಪ್ರಮಾಣಪತ್ರ ನೀಡಿದೆ ಪತಂಜಲಿ ಸಂಸ್ಥೆಯು ಹೇಳಿಕೆ ನೀಡಿದೆ.

'ಕೋವಿಡ್ ವಿರುದ್ಧ ಬಳಕೆಗೆ ಕೊರೊನಿಲ್ ಮಾತ್ರೆ ಸಾಕ್ಷ್ಯ ಆಧರಿಸಿದ ಮೊದಲ ಔಷಧ' ಎಂದು ಕಂಪನಿ ಹೇಳಿಕೊಂಡಿದೆ. ಆಯುಷ್ ವಿಭಾಗದಡಿ ಕೊರೊನಿಲ್ ಒಂದು ಔಷಧ ಉತ್ಪನ್ನ ಎಂದು ಈಗ ಪ್ರಮಾಣಪತ್ರ ಲಭಿಸಿದೆ. ಇದರ ಪ್ರಕಾರ, ಈ ಔಷಧವನ್ನು 158 ದೇಶಗಳಿಗೆ ರಫ್ತು ಮಾಡಬಹುದಾಗಿದೆ ಎಂದು ಸಂಸ್ಥೆಯ ಹೇಳಿಕೆ ತಿಳಿಸಿದೆ.

ಬಾಲಕಿಯರು ಶವವಾಗಿ ಪತ್ತೆಯಾದ ಸ್ಥಳವನ್ನು ಪರಿಶೀಲಿಸುತ್ತಿರುವ ಪೊಲೀಸರು –ಪಿಟಿಐ ಚಿತ್ರ

ಉನ್ನಾವೊ: ಬಿಗಿ ಭದ್ರತೆಯಲ್ಲಿ ಅಂತ್ಯಕ್ರಿಯೆ

ಉನ್ನಾವೊ (ಉತ್ತರ ಪ್ರದೇಶ) (ಪಿಟಿಐ): ದನಗಳಿಗೆ ಮೇವು ತರಲು ಅರಣ್ಯಕ್ಕೆ ಹೋಗಿದ್ದ ಮೂವರು ಬಾಲಕಿಯರಲ್ಲಿ ಇಬ್ಬರ ಶವ ಹೊಲದಲ್ಲಿ ಶವವಾಗಿ ಪತ್ತೆಯಾಗಿದ್ದು, ಅಂತ್ಯಕ್ರಿಯೆಯನ್ನು ಶುಕ್ರವಾರ ಬಿಗಿ ಭದ್ರತೆಯಲ್ಲಿ ನಡೆಸಲಾಯಿತು.

ಹಿರಿಯ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ಸಮ್ಮುಖದಲ್ಲಿ ಕುಟುಂಬದವರಿಗೆ ಸೇರಿದ ಜಮೀನಿನಲ್ಲಿ ಇಬ್ಬರ ಶವಗಳ ಅಂತ್ಯಕ್ರಿಯೆ ನಡೆಸಲಾಯಿತು. ಅಸ್ವಸ್ಥಳಾಗಿದ್ದ ಮತ್ತೊಬ್ಬ ಬಾಲಕಿಯನ್ನು ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ. ಮೂವರು 14 ರಿಂದ 16 ವರ್ಷ ವಯಸ್ಸಿನವರು ಎಂದು ಪೊಲೀಸರು ತಿಳಿಸಿದ್ದಾರೆ.

ಮೂವರು ಹುಡುಗಿಯರು ಸಂಬಂಧಿಗಳು ಎಂದು ಸ್ಥಳೀಯರು ತಿಳಿಸಿದ್ದಾರೆ.

ವಾಷಿಂಗ್ಟನ್: 'ಪೌರತ್ವ ಕಾಯ್ದೆ–2021' ಮಂಡನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ನೆಲೆಸಿರುವ 1.1 ಕೋಟಿ ವಲಸಿಗರಿಗೆ ಪೌರತ್ವ ಒದಗಿಸುವ ಉದ್ದೇಶದ 'ಪೌರತ್ವ ಕಾಯ್ದೆ –2021' ಅನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಇದು ಅಂಗೀಕಾರವಾದರೆ ಅಸಂಖ್ಯ ಭಾರತೀಯರಿಗೂ ಅನುಕೂಲವಾಗಲಿದೆ.

ಈ ಮಸೂದೆ, ಉದ್ಯೋಗ ಆಧಾರಿತ ವಲಸೆ ವ್ಯವಸ್ಥೆಗೆ ಬದಲಾಗಿ ಆರ್ಥಿಕತೆ ಅಭಿವೃದ್ಧಿಗೆ ನೆರವಾಗುತ್ತದೆ. ಉದ್ಯೋಗ ಆಧರಿತ ಗ್ರೀನ್ ಕಾರ್ಡ್ (ಕಾಯಂ ಪೌರತ್ವ) ವಿತರಣೆಯ ಮೇಲೆ ಇದ್ದ ದೇಶವಾರು ಮಿತಿಯನ್ನು ರದ್ದುಗೊಳಿಸಿ, ಅಮೆರಿಕದ ವಿಶ್ವವಿದ್ಯಾಲಯಗಳಿಂದ (ಸೈನ್ಸ್, ಟೆಕ್ನಾಲಜಿ, ಇಂಗ್ಲಿಷ್ , ಮ್ಯಾಥಮ್ಯಾಟಿಕ್ಸ್ –ಎಸ್‌ಟಿಇಎಂ) ಡಿಗ್ರಿ ಪಡೆದವರಿಗೆ ಅಮೆರಿಕದಲ್ಲಿ ನೆಲಸಲು ಅನುಕೂಲ ಕಲ್ಪಿಸಲಿದೆ. ಕೈಗಾರಿಕೆಗಳಲ್ಲಿ ಕಡಿಮೆ ವೇತನಕ್ಕೆ ದುಡಿಯುವವರಿಗೆ ಗ್ರೀನ್ ಕಾರ್ಡ್‌ಗಳನ್ನು ಪಡೆಯುವುದನ್ನು ಸುಲಭಗೊಳಿಸುತ್ತದೆ.

ಉದ್ಯೋಗ ಮಾರುಕಟ್ಟೆ ಕುರಿತ ವರದಿ

1.8 ಕೋಟಿ ಜನರಿಗೆ ಹೊಸ ಉದ್ಯೋಗ ಅನಿವಾರ್ಯ

ಮುಂಬೈ (ಪಿಟಿಐ): ಕೋವಿಡ್–19 ಸಾಂಕ್ರಾಮಿಕವು ದೇಶದ ಉದ್ಯೋಗ ಮಾರುಕಟ್ಟೆಯ ಮೇಲೆ ಬಹುಕಾಲ ಪರಿಣಾಮ ಬೀರಲಿದೆ. ಸಾಂಕ್ರಾಮಿಕದ ಕಾರಣದಿಂದಾಗಿ, ಭಾರತದ ಕಾರ್ಮಿಕರ ಪೈಕಿ 1.8 ಕೋಟಿ ಜನ 2030ರೊಳಗೆ ಹೊಸ ಉದ್ಯೋಗ ಕಂಡುಕೊಳ್ಳುವುದು ಅನಿವಾರ್ಯ ಆಗಲಿದೆ ಎಂದು ವರದಿಯೊಂದು ಹೇಳಿದೆ.

ಚಿಲ್ಲರೆ ಮಾರಾಟ, ಆಹಾರ ಸೇವೆಗಳು, ಆತಿಥ್ಯ, ಕಚೇರಿ ನಿರ್ವಹಣೆಯಂತಹ ವಲಯಗಳಲ್ಲಿ ಕೆಲಸ ಮಾಡುವ ಕೆಳಗಿನ ಹಂತದ ನೌಕರರ ಮೇಲೆ ಸಾಂಕ್ರಾಮಿಕದ ಪರಿಣಾಮವು ತೀರಾ ಹೆಚ್ಚಿನ ಪ್ರಮಾಣದಲ್ಲಿ ಇರಲಿದೆ ಎಂದು ಮೆಕಿನ್ಸಿ ಗ್ಲೋಬಲ್ ಇನ್‌ಸ್ಟಿಟ್ಯೂಟ್ (ಎಂಜಿಐ) ಸಿದ್ಧಪಡಿಸಿರುವ ವರದಿಯಲ್ಲಿ ಹೇಳಲಾಗಿದೆ.

ಕೆಲಸದ ವಿಚಾರದಲ್ಲಿ ಕಂಪನಿಗಳು ಹೊಸ ಸವಾಲುಗಳನ್ನು ನಿಭಾಯಿಸಬೇಕಾಗಿದೆ. ಹೀಗಾಗಿ ಸಾಂಕ್ರಾಮಿಕದ ಪರಿಣಾಮವಾಗಿ ಕಾರ್ಮಿಕರ ಮಾರುಕಟ್ಟೆಯಲ್ಲಿ ತೀವ್ರ ಬದಲಾವಣೆಗಳು ಉಂಟಾಗಿವೆ. ಗ್ರಾಹಕರ ವರ್ತನೆಯಲ್ಲಿ ಹಾಗೂ ವಾಣಿಜ್ಯ ವಹಿವಾಟಿನ ಸ್ವರೂಪದಲ್ಲಿ ಆಗಿರುವ ಮೂರು ಮುಖ್ಯ ಬದಲಾವಣೆಗಳು ಉಳಿದುಕೊಳ್ಳಲಿವೆ. ಮನೆಯಿಂದ ಕೆಲಸ ಮಾಡುವ ಮಾದರಿ, ಇ-ಮಾರುಕಟ್ಟೆಯ ಮೇಲಿನ ಅವಲಂಬನೆ ಮತ್ತು ವರ್ಚುವಲ್ ಆಗಿ ಸಭೆಗಳನ್ನು ನಡೆಸುವುದು, ಕೃತಕ ಬುದ್ಧಿಮತ್ತೆಯ ಬಳಕೆ ತೀವ್ರವಾಗಿ ಹೆಚ್ಚುವುದು ಮುಂದುವರಿಯಲಿದೆ ಎಂದು ವರದಿಯು ಉಲ್ಲೇಖಿಸಿದೆ.

ಇವುಗಳ ಕಾರಣದಿಂದಾಗಿ ಅರ್ಥವ್ಯವಸ್ಥೆಯಲ್ಲಿ ಒಂದು ದಶಕದ ಅವಧಿಯಲ್ಲಿ ಉದ್ಯೋಗಗಳ ಸ್ವರೂಪದಲ್ಲಿ ಬದಲಾವಣೆ ಆಗಲಿದೆ. ಇದರಿಂದಾಗಿ 10 ಕೋಟಿಗಿಂತ ಹೆಚ್ಚು ಜನ ಹೊಸ ಕೆಲಸ ಕಂಡುಕೊಳ್ಳಬೇಕಾದ ಸ್ಥಿತಿ ಎದುರಾಗಲಿದೆ. ಈ 10 ಕೋಟಿ ಜನರ ಪೈಕಿ 1.8 ಕೋಟಿ ಜನ ಭಾರತದವರೇ ಆಗಿರುತ್ತಾರೆ. 'ಕೋವಿಡ್–19 ಸಾಂಕ್ರಾಮಿಕದ ದೂರಗಾಮಿ ಪರಿಣಾಮವಾಗಿ, ಉದ್ಯೋಗ ಮಾರುಕಟ್ಟೆಯಲ್ಲಿ ಲಭ್ಯವಿರುವ ಕಡಿಮೆ ಸಂಬಳದ ಕೆಲಸಗಳ ಸಂಖ್ಯೆ ತಗ್ಗಬಹುದು. ಇಂತಹ ಉದ್ಯೋಗಗಳು ಒಂದೆಡೆಯಿಂದ ಇನ್ನೊಂದೆಡೆ ಹೋಗಬೇಕಾದ ಸ್ಥಿತಿಯಲ್ಲಿರುವ ನೌಕರರ ಪಾಲಿಗೆ ನೆರವಿಗೆ ಬರುತ್ತಿದ್ದವು' ಎಂದು ಮೆಕಿನ್ಸಿ ಗ್ಲೋಬಲ್ ಇನ್‌ಸ್ಟಿಟ್ಯೂಟ್‌ನ ಸೂಸನ್ ಎಲ್. ಹೇಳಿದ್ದಾರೆ.

ಇಂತಹ ಕಾರ್ಮಿಕರು ಹೆಚ್ಚಿನ ಕೌಶಲ ಬೇಡುವ ಹಾಗೂ ಹೆಚ್ಚಿನ ಸಂಬಳ ನೀಡುವ ಕೆಲಸಗಳನ್ನು ನಿಭಾಯಿಸಲು ಸಿದ್ಧರಾಗಬೇಕಾಗುತ್ತದೆ. ಆರೋಗ್ಯ ಸೇವೆಗಳು, ತಂತ್ರಜ್ಞಾನ, ಬೋಧನೆ ಮತ್ತು ತರಬೇತಿಯಂತಹ ಕೆಲಸ ನಿಭಾಯಿಸುವುದನ್ನು ಇವರು ಕಲಿಯಬೇಕಾಗುತ್ತದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವಾಣಿಜ್ಯ ಉದ್ದೇಶಗಳಿಗಾಗಿ ಪ್ರಯಾಣ ಕೈಗೊಳ್ಳುವುದು ಕಡಿಮೆ ಆಗಲಿದೆ, ಕೃತಕ ಬುದ್ಧಿಮತ್ತೆ ಬಳಸಿಕೊಂಡು ಕೆಲಸ ನಿಭಾಯಿಸುವುದು ಹೆಚ್ಚಾಗಲಿದೆ ಎಂದು ವರದಿಯು ಹೇಳಿದೆ.

ಖಾಸಗಿತನ ಕಾಯಲು ಬದ್ಧ: ವಾಟ್ಸ್‌ಆ್ಯಪ್

ನವದೆಹಲಿ (ಪಿಟಿಐ): ಬಳಕೆದಾರರ ನಡುವೆ ನಡೆಯುವ ಖಾಸಗಿ ಮಾತುಕತೆಗಳ ಗೋಪ್ಯತೆಯನ್ನು ಕಾಯಲು ತಾನು ಬದ್ಧ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿರುವುದಾಗಿ ವಾಟ್ಸ್‌ಆ್ಯಪ್ ಹೇಳಿದೆ. ವಿವಾದಿತ ಖಾಸಗಿತನ ನೀತಿಯನ್ನು ಜಾರಿಗೆ ತರುವುದಾಗಿ ಘೋಷಿಸಿದ ಕೆಲವೇ ತಾಸುಗಳಲ್ಲಿ ಕಂಪನಿ ಈ ಮಾತು ಹೇಳಿದೆ.

ಬಳಕೆದಾರರ ಸೀಮಿತ ಮಾಹಿತಿಯನ್ನು ಫೇಸ್‌ಬುಕ್ ಮತ್ತು ಆ ಸಮೂಹಕ್ಕೆ ಸೇರಿದ ಇತರ ಕಂಪನಿಗಳ ಜೊತೆ ಹಂಚಿಕೊಳ್ಳಲು ಅವಕಾಶ ಆಗುವಂತೆ ಖಾಸಗಿತನದ ನೀತಿಯಲ್ಲಿ ಬದಲಾವಣೆ ತರುವುದಾಗಿ ವಾಟ್ಸ್‌ಆ್ಯಪ್ ಹಿಂದಿನ ತಿಂಗಳು ಹೇಳಿತ್ತು. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ವಾಟ್ಸ್‌ಆ್ಯಪ್‌ಗೆ ಹಲವು ಪ್ರಶ್ನೆಗಳನ್ನು ಕೇಳಿತ್ತು.

ನೀತಿಯಲ್ಲಿನ ಪ್ರಸ್ತಾವಿತ ಬದಲಾವಣೆಗೆ ಎದುರಾದ ಪ್ರತಿರೋಧ ಹಾಗೂ ಬಳಕೆದಾರರು ಟೆಲಿಗ್ರಾಂ, ಸಿಗ್ನಲ್‌ನಂತಹ ಆ್ಯಪ್‌ಗಳತ್ತ ಮುಖ ಮಾಡಿದ ಕಾರಣ ವಾಟ್ಸ್‌ಆ್ಯಪ್ ಹೊಸ ನೀತಿಯ ಜಾರಿಯನ್ನು ಮೇ ತಿಂಗಳಿಗೆ ಮುಂದೂಡಿತ್ತು. ನೀತಿಯಲ್ಲಿನ ಪರಿಷ್ಕರಣೆಗೆ ಸಂಬಂಧಿಸಿದ ಹೆಚ್ಚುವರಿ ಮಾಹಿತಿಯನ್ನು ಬಳಕೆದಾರರಿಗೆ ತಿಳಿಸಲಾಗುವುದು ಎಂದು ವಾಟ್ಸ್‌ಆ್ಯಪ್ ಹೇಳಿದೆ.

'ತಪ್ಪು ಮಾಹಿತಿ ಹರಡಿದ್ದರಿಂದ ಹಾಗೂ ಗ್ರಾಹಕರಿಂದ ನಮಗೆ ಬಂದ ಪ್ರತಿಕ್ರಿಯೆಯ ಕಾರಣದಿಂದಾಗಿ ನಾವು ನಮ್ಮ ಹೊಸ ನೀತಿಯನ್ನು ಒಪ್ಪಿಕೊಳ್ಳುವುದಕ್ಕೆ ಗಡುವನ್ನು ಮೇ 15ಕ್ಕೆ ವಿಸ್ತರಿಸಿದ್ದೇವೆ' ಎಂದು ವಾಟ್ಸ್‌ಆ್ಯಪ್ ಹೇಳಿದೆ. 'ನೀತಿಯಲ್ಲಿನ ಪರಿಷ್ಕರಣೆಯನ್ನು ಗಮನಿಸಿ, ಅದನ್ನು ಒಪ್ಪಿಕೊಳ್ಳುವಂತೆ ಗ್ರಾಹಕರಿಗೆ ನೆನಪಿಸುವ ಕೆಲಸ ಮಾಡುತ್ತೇವೆ' ಎಂದು ಕಂಪನಿ ತಿಳಿಸಿದೆ.

ಪರಿಷ್ಕೃತ ನೀತಿಯನ್ನು ಒಪ್ಪಿಕೊಳ್ಳದ ಗ್ರಾಹಕರು ಮೇ 15ರ ನಂತರವೂ ಸಂದೇಶಗಳನ್ನು ಹಾಗೂ ಕರೆಗಳನ್ನು ಸ್ವೀಕರಿಸಬಹುದು. ಆದರೆ, ತಮ್ಮಿಂದ ಸಂದೇಶ ಕಳುಹಿಸಬೇಕಾದಲ್ಲಿ, ಹೊಸ ನೀತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೊಸ ನೀತಿಯನ್ನು ಒಪ್ಪಿಕೊಳ್ಳಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಅವರ ಖಾತೆಗಳನ್ನು ಚಾಲ್ತಿಯಲ್ಲಿ ಇರಿಸಲಾಗುತ್ತದೆ.

ಹನ್ನೊಂದನೆಯ ದಿನವೂ ತೈಲ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಬೆಲೆಯು ದೆಹಲಿಯಲ್ಲಿ ಶುಕ್ರವಾರ ಲೀಟರ್‌ಗೆ ₹ 90ರ ಗಡಿದಾಟಿದೆ. ಸತತ ಹನ್ನೊಂದನೆಯ ದಿನವೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಆಗಿದೆ. ಇದರ ಪರಿಣಾಮವಾಗಿ ದೆಹಲಿಯಲ್ಲಿ ಪೆಟ್ರೋಲ್ ಬೆಲೆ ₹ 90.19 ಆಗಿದೆ. ಅಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ ₹ 80.60 ಆಗಿದೆ.

ಪೆಟ್ರೋಲ್ ಬೆಲೆಯು ಮುಂಬೈನಲ್ಲಿ ₹ 96.62ಕ್ಕೆ ಹೆಚ್ಚಳವಾಗಿದೆ.

ಗುರುವಾರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 65 ಅಮೆರಿಕನ್ ಡಾಲರ್‌ಗಿಂತ ಹೆಚ್ಚಾಗಿದೆ. ಕಳೆದ ಹನ್ನೊಂದು ದಿನಗಳ ಅವಧಿಯಲ್ಲಿ ಪೆಟ್ರೋಲ್ ಬೆಲೆಯಲ್ಲಿ ₹ 3.24ರಷ್ಟು ಹೆಚ್ಚಳ ಆಗಿದೆ. 2010ರಲ್ಲಿ ಪೆಟ್ರೋಲ್ ಬೆಲೆಯನ್ನು ನಿಯಂತ್ರಣಮುಕ್ತಗೊಳಿಸಿದ ನಂತರ ಆಗಿರುವ ದಾಖಲೆಯ ಹೆಚ್ಚಳ ಇದು. ಡೀಸೆಲ್ ಬೆಲೆ ಹನ್ನೊಂದು ದಿನಗಳಲ್ಲಿ ₹ 3.47ರಷ್ಟು ಹೆಚ್ಚಾಗಿದೆ. ಶುಕ್ರವಾರದ ಬೆಲೆ ಹೆಚ್ಚಳದ ಪರಿಣಾಮವಾಗಿ ಬೆಂಗಳೂರಿನಲ್ಲಿ ಪೆಟ್ರೋಲ್ ₹ 93.21ಕ್ಕೆ, ಡೀಸೆಲ್ ₹ 85.44ಕ್ಕೆ ಮಾರಾಟವಾಗಿದೆ.

ಐಒಸಿಎಲ್: ಕಾರ್ಯನಿರ್ವಾಹಕ ನಿರ್ದೇಶಕರಾಗಿ ಶೈಲೇಂದ್ರ

ಪ್ರಜಾವಾಣಿ ವಾರ್ತೆ

ಕೆ. ಶೈಲೇಂದ್ರ

ಬೆಂಗಳೂರು: ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ (ಐಒಸಿಎಲ್) ದಕ್ಷಿಣ ವಲಯದ ಪ್ರಾದೇಶಿಕ ಸೇವೆಗಳ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೆ. ಶೈಲೇಂದ್ರ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ತಮಿಳುನಾಡು ಮತ್ತು ಪುದುಚೇರಿ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಕೇರಳ ಹಾಗೂ ಲಕ್ಷದ್ವೀಪದ ಇಂಡಿಯನ್ ಆಯಿಲ್ ಕಂಪನಿಯ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ಬರುತ್ತವೆ.

ಮಾನವ ಸಂಪನ್ಮೂಲ, ಹಣಕಾಸು, ಎಲ್‌ಪಿಜಿ ಮತ್ತು ಇಂಧನ ಸಾಗಣೆ, ಒಪ್ಪಂದಗಳು, ಗುಣಮಟ್ಟ ನಿಯಂತ್ರಣ ಸೇರಿದಂತೆ ಪ್ರಮುಖ ವಿಭಾಗಗಳ ಪ್ರಾದೇಶಿಕ ಉಸ್ತುವಾರಿ ಹೊಣೆಯನ್ನೂ ಶೈಲೇಂದ್ರ ಹೊತ್ತಿದ್ದಾರೆ.

ಚಿನ್ನದ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ 10 ಗ್ರಾಂಗೆ ₹ 239ರಷ್ಟು ಕಡಿಮೆ ಆಗಿದೆ. 10 ಗ್ರಾಂ ಚಿನ್ನವು ₹ 45,568ಕ್ಕೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ತಗ್ಗಿದ ಕಾರಣ ದೇಶಿ ಮಾರುಕಟ್ಟೆಯಲ್ಲೂ ಬೆಲೆ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಬೆಳ್ಳಿ ಬೆಲೆಯಲ್ಲಿ ಕೆ.ಜಿ.ಗೆ ₹ 723ರಷ್ಟು ಇಳಿಕೆ ಆಗಿದ್ದು, ಕೆ.ಜಿ. ಬೆಳ್ಳಿಯು ₹ 67,370ಕ್ಕೆ ಮಾರಾಟವಾಗಿದೆ.

ಅಂಕಿತಾ ರೈನಾ –ಎಎಫ್‌ಪಿ ಚಿತ್ರ

ಅಂಕಿತಾಗೆ ಚೊಚ್ಚಲ ಪ್ರಶಸ್ತಿ

ಮೆಲ್ಬರ್ನ್ (ಪಿಟಿಐ): ಭಾರತದ ಭರವಸೆಯ ಟೆನಿಸ್ ಪಟು ಅಂಕಿತಾ ರೈನಾ ಇಲ್ಲಿ ನಡೆದ ಫಿಲಿಪ್ ಐಲ್ಯಾಂಡ್ ಟ್ರೋಫಿ ಟೂರ್ನಿಯ ಮಹಿಳೆಯರ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ರಷ್ಯಾದ ಕಮಿಲ ರಖಿಮೋವ ಜೊತೆ ಗೂಡಿ ಆಡಿದ ಅವರು ಫೈನಲ್‌ನಲ್ಲಿ ರಷ್ಯಾದ ಅನಾ ಬ್ಲಿಂಕೋವ ಮತ್ತು ಅನಸ್ತೇಸಿಯಾ ಪೊಟಪೋವ ಜೋಡಿಯನ್ನು 2-6, 6-4, 10-7ರಲ್ಲಿ ಮಣಿಸಿದರು.

ಅಂಕಿತಾ ಡಬ್ಲ್ಯುಟಿಎ ಟೂರ್ನಿಯೊಂದಲ್ಲಿ ಗೆಲ್ಲುವ ಚೊಚ್ಚಲ ಪ್ರಶಸ್ತಿ ಇದಾಗಿದ್ದು ಈ ಗೆಲುವಿನೊಂದಿಗೆ 280 ರ‍್ಯಾಂಕಿಂಗ್ ಪಾಯಿಂಟ್ ಕಲೆ ಹಾಕಿದರು. ಇದರಿಂದ ವಿಶ್ವದ ಅಗ್ರ 100 ಆಟಗಾರ್ತಿಯರ ಪಟ್ಟಿಯೊಳಗೆ ಅವರ ಹೆಸರು ಸೇರಲಿದೆ. ಸದ್ಯ 115ನೇ ಸ್ಥಾನದಲ್ಲಿರುವ ಅಂಕಿತಾ ಮುಂದಿನ ವಾರ ರ‍್ಯಾಂಕಿಂಗ್ ಪಟ್ಟಿ ಹೊರಬಿದ್ದಾಗ 94ನೇ ಸ್ಥಾನದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆರು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ಸಾನಿಯಾ ಮಿರ್ಜಾ ಅವರನ್ನು ಹೊರತುಪಡಿಸಿದರೆ ಭಾರತದ ಯಾವ ಆಟಗಾರ್ತಿಯೂ ಈ ವರೆಗೆ 100ರ ಒಳಗೆ ಕಾಣಿಸಿಕೊಂಡಿಲ್ಲ.

ಹಿಂದಿನ ಎರಡು ವಾರಗಳು ಅಂಕಿತಾ ಪಾಲಿಗೆ ಅವಿಸ್ಮ ರಣೀಯ. ಆಸ್ಟ್ರೇ ಲಿಯಾ ಓಪ ನ್‌ನ ಡಬಲ್ಸ್‌ನಲ್ಲಿ ಆಡುವ ಮೂಲಕ ಗ್ರ್ಯಾನ್‌ಸ್ಲಾಂ ಟೂರ್ನಿಗೆ ಪದಾರ್ಪಣೆ ಮಾಡಿದ ಅವರು ಡಬ್ಲ್ಯುಟಿಎ ಟೂರ್ನಿಯೊಂದರ ಸಿಂಗಲ್ಸ್ ವಿಭಾಗದ ಮುಖ್ಯ ಸುತ್ತಿನಲ್ಲಿ ಚೊಚ್ಚಲ ಜಯ ಗಳಿಸಿದ ಸಾಧನೆಯನ್ನೂ ಮಾಡಿದ್ದರು.

‘ಕಮಿಲಾ ಆಕ್ರಮಣಕಾರಿ ಆಟವಾಡಿದರು. ನೆಟ್ ಬಳಿ ಎದುರಾಳಿಗಳನ್ನು ಕಂಗೆಡಿಸುವ ಆಟವಾಡುವಂತೆ ಅವರಿಗೆ ಸೂಚಿಸಿದ್ದೆ. ಅದನ್ನು ಅಕ್ಷರಶಃ ಪಾಲಿಸಿದರು. ಟೂರ್ನಿಯ ಕೆಲವು ಪಂದ್ಯಗಳಲ್ಲಿ ಅತ್ಯುತ್ತಮ ಜೋಡಿಗಳನ್ನು ಮಣಿಸಿದ್ದೇವೆ. ಕಮಿಲಾ ಅವರ ಅಮೋಘ ಸಾಮರ್ಥ್ಯವೇ ಇದಕ್ಕೆ ಕಾರಣ’ ಎಂದ ಅಂಕಿತಾ, ಸಿಂಗಲ್ಸ್‌ನಲ್ಲೂ ಅಗ್ರ ನೂರರಲ್ಲಿ ಸ್ಥಾನ ಗಳಿಸುವತ್ತ ಗಮನಹರಿಸಿದ್ದಾರೆ.

ನಗರದಲ್ಲಿ ರಸ್ತೆ ಓಟ 28ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಟ ಮತ್ತು ಫಿಟ್‌ನೆಸ್‌ಗೆ ಉತ್ತೇಜನ ನೀಡುವ ಉದ್ದೇಶದಿಂದ ಬೆಂಗಳೂರು ನಗರ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ (ಬುಡಾ) ರಾಜ್ಯ ಅಥ್ಲೆಟಿಕ್ ಸಂಸ್ಥೆಯ ಸಹಯೋಗದಲ್ಲಿ 12, 14 ಮತ್ತು 16 ವರ್ಷದೊಳಗಿನವರಿಗಾಗಿ ಆಯೋಜಿಸಿರುವ ರಸ್ತೆ ಓಟ ಇದೇ 28ರಂದು ನಡೆಯಲಿದೆ. ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬೆಳಿಗ್ಗೆ 7 ಗಂಟೆಗೆ ಆರಂಭವಾಗಲಿರುವ ಓಟ 10 ಗಂಟೆಯ ವರೆಗೆ ನಡೆಯಲಿದೆ.

ಬೆಂಗಳೂರು ಮ್ಯಾರಥಾನ್ ಆಯೋಜಿಸುವ ಎನ್‌ಇಬಿ ಸ್ಪೋರ್ಟ್ಸ್ ಸಂಸ್ಥೆಯು ಈ ಓಟಕ್ಕೆ ವೃತ್ತಿಪರ ಸ್ಪರ್ಶ ನೀಡಲಿದ್ದು ಪ್ರತಿಯೊಬ್ಬ ಸ್ಪರ್ಧಿಗೂ ಟೈಮಿಂಗ್ ಪ್ರಮಾಣಪತ್ರ ಸಿಗಲಿದೆ. 12 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರಿಗೆ 800 ಮೀಟರ್ಸ್, 14 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರಿಗೆ 2.4 ಕಿಲೋಮೀಟರ್ಸ್, 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರಿಗೆ 3.2 ಕಿಲೋಮೀಟರ್ಸ್ ದೂರ ನಿಗದಿ ಮಾಡಲಾಗಿದೆ.

ಸೀಮಿತ ಸಂಖ್ಯೆಯ ಪ್ರವೇಶಾವಕಾಶವಿದ್ದು click2race.com ಮೂಲಕ ಹೆಸರು ನೊಂದಾಯಿಸಬಹುದು. 24ರಂದು ಸಂಜೆ ಐದು ಗಂಟೆಯ ಒಳಗೆ ಪ್ರವೇಶಪತ್ರಗಳನ್ನು ಕಳುಹಿಸಬೇಕು. ಮೊದಲ ಐದು ಸ್ಥಾನ ಗಳಿಸಿದವರಿಗೆ ನಗದು ಬಹುಮಾನ ಮತ್ತು ಟಿಶರ್ಟ್ ನೀಡಲಾಗುವುದು ಎಂದು ತಿಳಿಸಿದ್ದು ಮಾಹಿತಿಗೆ BUDAA@9845578089 ಅಥವಾ info@budaa.in ಸಂಪರ್ಕಿಸಬೇಕು.

ರಾಷ್ಟ್ರಮಟ್ಟದ ಎಂಟಿಬಿ ಸೈಕ್ಲಿಂಗ್ ಚಾಂಪಿಯನ್‌ಷಿಪ್

ಮೊದಲ ದಿನ ರಾಜ್ಯಕ್ಕೆ ಏಳು ಪದಕ

ಪ್ರಜಾವಾಣಿ ವಾರ್ತೆ

ಗದಗ: ಕರ್ನಾಟಕದ ಸೈಕ್ಲಿಸ್ಟ್‌ಗಳು ಇಲ್ಲಿನ ಬಿಂಕದಕಟ್ಟಿ ಸಾಲುಮರದ ತಿಮ್ಮಕ್ಕ ಉದ್ಯಾನದಲ್ಲಿ ಶುಕ್ರವಾರ ನಡೆದ 17ನೇ ರಾಷ್ಟ್ರಮಟ್ಟದ ಮೌಂಟೆನ್ ಬೈಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ದಿನ ಮೂರು ಚಿನ್ನ ಸೇರಿದಂತೆ ಏಳು ಪದಕಗಳನ್ನು ಗೆದ್ದುಕೊಂಡರು. ಎರಡು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳು ಒಲಿದವು.

ಮೊದಲ ದಿನದ ಫಲಿತಾಂಶಗಳು: 14 ವರ್ಷದೊಳಗಿನ ಬಾಲಕರು; (10 ಕಿ.ಮೀ. ವೈಯಕ್ತಿಕ ಟೈಮ್‌ಟ್ರಯಲ್ಸ್): ಅದೀಪ್ ವಾಘ್ (ಕಾಲ: 30:21.015, ಮಹಾರಾಷ್ಟ್ರ)–1, ಸಮರ್ಪಣ್ ಜೈನ್ (ಕಾಲ: 30:26.282, ಕರ್ನಾಟಕ)–2, ಮಲವ್ ದತ್ತ (ಕಾಲ: 31:25.851, ಅಸ್ಸಾಂ)–3.

16 ವರ್ಷದೊಳಗಿನ ವಿಭಾಗ: 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್: ಚರಿತಗೌಡ (ಕಾಲ: 27:31.199, ಕರ್ನಾಟಕ)–1, ಅದ್ವೈತ್ ಶಂಕರ್ ಎಸ್.ಎಸ್ (ಕಾಲ: 30:34.014, ಕೇರಳ)–2, ಸುಧಾಂಶು ಲಿಂಬು (ಕಾಲ: 30:35.588, ಪಶ್ಚಿಮ ಬಂಗಾಳ)–3. 18.4 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್ 18 ವರ್ಷದೊಳಗಿನ ವಿಭಾಗ: ಆಡ್ಯುನಿಸ್ ಟಂಗ್ಬು (ಕಾಲ: 53:33.200, ಕರ್ನಾಟಕ)–1, ಹರ್ಷಿತ್ ಕೆ.ಜೆ. (ಕಾಲ: 58:07.923, ಕರ್ನಾಟಕ)–2, ರಾಜ್‌ಕುಮಾರ ರಾಯ್ (ಕಾಲ: 01:00.58.770, ಪಶ್ಚಿಮ ಬಂಗಾಳ)–3. ಬಾಲಕಿಯರ ವಿಭಾಗ: (14 ವರ್ಷದೊಳಗಿನ 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್): ಸಿದ್ಧಿ ಸಿರ್ಕೇ (ಕಾಲ: 35:40.863, ಮಹಾರಾಷ್ಟ್ರ)–1, ಶ್ರಾವಣಿ ಪರಿತ್ (ಕಾಲ: 38:25.227, ಮಹಾರಾಷ್ಟ್ರ)–2, ಛಾಯಾ ನಾಗಶೆಟ್ಟಿ (ಕಾಲ: 40:18.372;ಕರ್ನಾಟಕ)–3. 16 ವರ್ಷದೊಳಗಿನವರ, 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್: ಕರೇನ್ ಮಾರ್ಷಲ್ (ಕಾಲ: 39:27.930– ಕರ್ನಾಟಕ)–1, ಆಗ್ಸಾ ಆನ್ ಥಾಮಸ್ (ಕಾಲ: 40:27.034, ಕೇರಳ)–2, ಪವಿತ್ರಾ ಕುರ್ತಕೋಟಿ (ಕಾಲ: 41:04.496; ಕರ್ನಾಟಕ)–3.

16 ವರ್ಷದೊಳಗಿನವರ 10 ಕಿ.ಮೀ. ವೈಯಕ್ತಿಕ ಟೈಮ್ ಟ್ರಯಲ್ಸ್‌ನಲ್ಲಿ ಮುನ್ನುಗ್ಗಿದ ಕರ್ನಾಟಕದ ಕರೇನ್ ಮಾರ್ಷಲ್ –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಪ್ರಶಸ್ತಿ ಸುತ್ತಿಗೆ ಮೆಡ್ವೆಡೆವ್ ಲಗ್ಗೆ

ಮೆಲ್ಬರ್ನ್ (ಎಎಫ್‌ಪಿ): ಬಲಶಾಲಿ ಹೊಡೆತಗಳು ಮತ್ತು ನಿಖರ ಪ್ಲೇಸಿಂಗ್ ಮೂಲಕ ಗ್ರೀಸ್‌ನ ಸ್ಟೆಫನೊಸ್ ಸಿಸಿಪಸ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಫೈನಲ್ ಪ್ರವೇಶಿಸಿದರು. ರೋಡ್ ಲಾವೆರ್ ಅರೆನಾದಲ್ಲಿ ಶುಕ್ರವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಮೆಡ್ವೆಡೆವ್ 6-4, 6-2, 7-5ರಲ್ಲಿ ಜಯ ಗಳಿಸಿದರು. ಒಂಬತ್ತನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಮೆಡ್ವೆಡೆವ್ ಎದುರಿಸುವರು.

ಮೆಡ್ವೆಡೆವ್

ಐದನೇ ಶ್ರೇಯಾಂಕದ ಸಿಸಿಪಸ್ ಎದುರು ನಾಲ್ಕನೇ ಶ್ರೇಯಾಂಕದ ಮೆಡ್ವೆಡೆವ್ ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದರು.

ಮಾನಸಿಕ ಒತ್ತಡ ಕಾಡಿತ್ತು: ಕೊಹ್ಲಿ

ನವದೆಹಲಿ (ಪಿಟಿಐ): ತಮ್ಮ ವೃತ್ತಿಜೀವನದ ಒಂದು ಹಂತದಲ್ಲಿ ತೀವ್ರವಾದ ಖಿನ್ನತೆಯಿಂದ ಬಳಲಿದ್ದಾಗಿ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಬಹಿರಂಗಪಡಿಸಿದ್ದಾರೆ.

’2014ರಲ್ಲಿ ಇಂಗ್ಲೆಂಡ್ ಪ್ರವಾಸದಲ್ಲಿ ಸತತ ಬ್ಯಾಟಿಂಗ್ ವೈಫಲ್ಯದಿಂದಾಗಿ ಮಾನಸಿಕವಾಗಿ ಕುಗ್ಗಿ ಹೋಗಿದ್ದೆ. ಇಡೀ ಜಗತ್ತಿನಲ್ಲಿ ಏಕಾಂಗಿಯಾಗಿ ನಿಂತಂತೆ ಭಾಸವಾಗಿತ್ತು. ನಂತರ ಮತ್ತೆ ಚೇತರಿಸಿಕೊಂಡು ಯಶಸ್ಸು ಸಾಧಿಸಿದೆ‘ ಎಂದು ’ನಾಟ್ ಜಸ್ಟ್ ಕ್ರಿಕೆಟ್ ಪಾಡ್‌ಕಾಸ್ಟ್‘ನಲ್ಲಿ ಇಂಗ್ಲೆಂಡ್ ಮಾಜಿ ಕ್ರಿಕೆಟಿಗ ಮಾರ್ಕ್ ನಿಕೊಲಸ್ ಜೊತೆಯ ಸಂವಾದದಲ್ಲಿ ತಿಳಿಸಿದ್ದಾರೆ.

’ನಮ್ಮಿಂದ ರನ್ ಗಳಿಕೆಯಾಗುತ್ತಿಲ್ಲ ಎಂಬ ಭಾವವು ಬಹಳ ಬೇಸರದ ಸಂಗತಿಯಾಗಿರುತ್ತದೆ. ಪ್ರತಿಯೊಬ್ಬ ಬ್ಯಾಟ್ಸ್‌ಮನ್ ಕೂಡ ಇಂತಹ ಪರಿಸ್ಥಿತಿಯನ್ನು ಅನುಭವಿಸಿರುತ್ತಾನೆ. ಅಂತಹ ಸಂದರ್ಭದಲ್ಲಿ ಬಹಳಷ್ಟು ವಿಷಯಗಳು ನಮ್ಮ ನಿಯಂತ್ರಣದಲ್ಲಿರುವುದಿಲ್ಲ‘ ಎಂದು ಅಭಿಪ್ರಾಯಪಟ್ಟರು.

2014ರಲ್ಲಿ ಭಾರತವು ಇಂಗ್ಲೆಂಡ್‌ನಲ್ಲಿ ಐದು ಟೆಸ್ಟ್‌ಗಳ ಸರಣಿ ಆಡಿತ್ತು. ಆಗ ವಿರಾಟ್ (1, 8, 25, 0, 39, 28, 0,7, 6 ಮತ್ತು 20) ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು. ಅದರ ನಂತರದ ಆಸ್ಟ್ರೇಲಿಯಾ ಪ್ರವಾಸದಲ್ಲಿ ಅವರು ಪುಟಿದೆದ್ದರು. ಅಲ್ಲಿ ಟೆಸ್ಟ್ ಸರಣಿಯಲ್ಲಿ 692 ರನ್‌ಗಳನ್ನು ಗಳಿಸಿದರು.

’ನಮ್ಮ ಭಾವನೆಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಒಬ್ಬ ವೃತ್ತಿಪರ ಸಲಹೆಗಾರ ಇರಬೇಕು‘ ಎಂದು ಕೊಹ್ಲಿ ಅಭಿಪ್ರಾಯಪಟ್ಟರು.

ಆರ್‌ಸಿಬಿ ಖರೀದಿಸಿರುವ ನ್ಯೂಜಿಲೆಂಡ್ ಬೌಲರ್ ಕೈಲ್ ಜೆಮಿಸನ್

₹ 15 ಕೋಟಿಯ ಡಾಲರ್ ಮೌಲ್ಯ ಎಷ್ಟು?

ಕ್ರೈಸ್ಟ್‌ಚರ್ಚ್ (ಪಿಟಿಐ): ನ್ಯೂಜಿಲೆಂಡ್ ಡಾಲರ್‌ಗಳಲ್ಲಿ ₹ 15 ಕೋಟಿಯ ಮೌಲ್ಯ ಎಷ್ಟಾಗುತ್ತದೆಯೆಂದೇ ತಮಗೆ ತಿಳಿದಿಲ್ಲ ಎಂದು ಕಿವೀಸ್ ತಂಡದ ಆಲ್‌ರೌಂಡರ್ ಕೈಲ್ ಜೆಮಿಸನ್ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಐಪಿಎಲ್ ಹರಾಜಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕೈಲ್ ಜೆಮಿಸನ್ ಅವರನ್ನು ₹ 15 ಕೋಟಿಗೆ (2 ಮಿಲಿಯನ್ ನ್ಯೂಜಿಲೆಂಡ್ ಡಾಲರ್)ಖರೀದಿಸಿದೆ. 6.8 ಅಡಿ ಎತ್ತರದ ಕೈಲ್ ಅವರು ಐಪಿಎಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಬಿಡ್ ಮೌಲ್ಯ ಪಡೆದ ನ್ಯೂಜಿಲೆಂಡ್ ಆಟಗಾರನಾಗಿದ್ದಾರೆ. ಒಟ್ಟಾರೆ ನಾಲ್ಕನೇ ಆಟಗಾರನೂ ಹೌದು.

’ಬಿಡ್ ನಡೆದ ಸಮಯದಲ್ಲಿ ಇಲ್ಲಿ ಮಧ್ಯರಾತ್ರಿಯಾಗಿತ್ತು. ನಿದ್ದೆಯಿಂದ ಎದ್ದು ಫೋನ್ ಪರಿಶೀಲಿಸಿದೆ. ಶೇನ್ ಬಾಂಡ್ (ನ್ಯೂಜಿಲೆಂಡ್ ಮಾಜಿ ಆಟಗಾರ ಮತ್ತು ಮುಂಬೈ ಇಂಡಿಯನ್ಸ್ ಬೌಲಿಂಗ್ ಕೋಚ್) ಸಂದೇಶ ಕಳಿಸಿದ್ದರು. ಅದರಲ್ಲಿ ನಾನು ಬಿಡ್ ಆದ ಪ್ರತಿಯೊಂದು ಹಂತಗಳ ಸಂದೇಶವೂ ಇತ್ತು‘ ಎಂದು ಜೆಮಿಸನ್ ವಿವರಿಸಿದರು.

’ಆ ಸಂದರ್ಭವು ಸಂತಸ ನೀಡಿತು. ಆದರೆ ಭಾರತೀಯ ಹಣದ ಮೊತ್ತವನ್ನು ನಮ್ಮ ಕರೆನ್ಸಿಯಲ್ಲಿ ಪರಿವರ್ತಿಸಿ ಹೇಳುವುದು ಹೇಗೆಂದು ಹೊಳೆಯಲಿಲ್ಲ‘ ಎಂದರು. ಹೋದ ವರ್ಷ ಭಾರತದ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಕೈಲ್ ಪದಾರ್ಪಣೆ ಮಾಡಿದ್ದರು.

ಕೈಲ್ ಜೆಮಿಸನ್

ರಜನಿಕಾಂತ್ ಅಭಿಮಾನಿ ಶಾರೂಕ್!

ಚೆನ್ನೈ (ಪಿಟಿಐ): ಬಾಲಿವುಡ್ ನಟಿ ಪ್ರೀತಿ ಜಿಂಟಾ ಸಹಮಾಲೀಕರಾಗಿರುವ ಪಂಜಾಬ್ ಕಿಂಗ್ಸ್ ತಂಡದಲ್ಲಿ ಈಗ ಶಾರೂಕ್ ಖಾನ್ ಪ್ರವೇಶಿಸಿದ್ದಾರೆ.

ಆದರೆ ಇವರು ಬಾಲಿವುಡ್ ತಾರೆಯಲ್ಲ. ತಮಿಳುನಾಡಿನ ಕ್ರಿಕೆಟಿಗ. ಸೂಪರ್ ಸ್ಟಾರ್ ರಜನಿಕಾಂತ್ ಅವರ ಅಪ್ಪಟ ಅಭಿಮಾನಿ ಶಾರೂಕ್ ಖಾನ್ ಗುರುವಾರ ಐಪಿಎಲ್ ಆಟಗಾರರ ಹರಾಜಿನಲ್ಲಿ ₹ 5.25 ಕೋಟಿ ಮೌಲ್ಯ ಗಿಟ್ಟಿಸಿದ್ದಾರೆ. ಈಚೆಗೆ ಮುಷ್ತಾಕ್ ಅಲಿ ಟ್ರೋಫಿಯನ್ನು ತಮಿಳುನಾಡು ಜಯಿಸಲು ಶಾರೂಕ್ ಆಟವೂ ಪ್ರಮುಖವಾಗಿತ್ತು. ಬಾಲ್ಯದಿಂದಲೇ ಕ್ರಿಕೆಟಿಗನಾಗುವ ಅವರ ಆಸೆಗೆ ತಂದೆ ಮಸೂದ್ ಮತ್ತು ತಾಯಿ ಲುಬ್ನಾ ಅವರ ಬೆಂಬಲ ಲಭಿಸಿತು. ಚರ್ಮೋತ್ಪನ್ನಗಳ ಉದ್ಯಮಿಯಾಗಿರುವ ಮಸೂದ್ ಕ್ಲಬ್ ಕ್ರಿಕೆಟಿಗನಾಗಿದ್ದವರು. ಇದೀಗ ಅವರ ಮನೆಯಲ್ಲಿ ಸಂತಸ ಹೊನಲಾಗಿದೆ.

ಶಾರುಕ್ ಖಾನ್

’ಬಿಡ್ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ತಂಡದ ಬಸ್‌ನಲ್ಲಿದ್ದೆವು. ನನ್ನ ಹೆಸರು ಬಂದಾಗ ಒತ್ತಡದ ಅನುಭವ ಆಗಲಿಲ್ಲ. ಆದರೆ ಆ ಕ್ಷಣವನ್ನು ಮನದುಂಬಿ ಆನಂದಿಸಿದೆ. ನಮ್ಮ ತಂಡದ ನಾಯಕ ದಿನೇಶ್ ಕಾರ್ತಿಕ್, ಸಹ ಆಟಗಾರರೆಲ್ಲರೂ ಸಂಭ್ರಮಿಸಿದರು. ಎಲ್ಲರೂ ಅಭಿನಂದಿಸಿದರು‘ ಎಂದರು.

ನನ್ನ ಹೆಸರು ಬಂದಾಗ ಭಾವುಕನಾಗಿದ್ದೆ

ಅಹಮದಾಬಾದ್ (ಪಿಟಿಐ): ’ಹರಾಜು ಪ್ರಕ್ರಿಯೆ ಯನ್ನು ಟಿವಿಯಲ್ಲಿ ನೋಡುತ್ತಿದ್ದೆ. ಆ ಸಂದರ್ಭದಲ್ಲಿ ನನ್ನ ಹೆಸರು ಬಂದಾಗ ಭಾವೋದ್ವೇಗಕ್ಕೆ ಒಳಗಾಗಿದ್ದೆ. ಅತ್ತ ಮನೆಯಲ್ಲಿ ಅಪ್ಪ, ಅಮ್ಮ ಮತ್ತು ಪತ್ನಿ ಸಂತಸದಿಂದ ಕಣ್ಣೀರು ಹಾಕಿದ್ದರು‘ ಎಂದು ಕರ್ನಾಟಕ ಕ್ರಿಕೆಟ್ ತಂಡದ ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಹೇಳಿದ್ದಾರೆ. ಗುರುವಾರ ನಡೆದ ಐಪಿಎಲ್ ಆಟಗಾರರ ಹರಾಜಿನಲ್ಲಿ ಗೌತಮ್ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ತಂಡವು ₹ 9.25 ಕೋಟಿಗೆ ಖರೀದಿಸಿದೆ. ’ಗುರುವಾರ ಅಹಮದಾಬಾದ್‌ಗೆ ಬಂದು ಸ್ವಲ್ಪ ಸಮಯ ಆಗಿತ್ತು. ಹೋಟೆಲ್‌ನಲ್ಲಿ ಟಿವಿ ಆನ್ ಮಾಡಿದಾಗ, ನನ್ನ ಹೆಸರು ಬರುತ್ತಿತ್ತು. ಆ ಹಂತದಲ್ಲಿ ಪ್ರತಿಯೊಂದು ಕ್ಷಣವೂ ನನ್ನ ಭಾವನೆಗಳು ಏರಿಳಿಯುತ್ತಿದ್ದವು. ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ನನ್ನ ಕೋಣೆಯ ಬಾಗಿಲು ಬಡಿದರು. ಒಳಬಂದವರೇ ಆಲಂಗಿಸಿಕೊಂಡು ಅಭಿನಂದಿಸಿದರು‘ ಎಂದು ಗೌತಮ್ ಹೇಳಿದರು.

ಕೃಷ್ಣಪ್ಪ ಗೌತಮ್

32 ವರ್ಷದ ಗೌತಮ್ ಐಪಿಎಲ್‌ನಲ್ಲಿ 2018ರಿಂದ ಇಲ್ಲಿಯವರೆಗೆ 24 ಪಂದ್ಯಗಳನ್ನು ಆಡಿದ್ದಾರೆ. 186 ರನ್ ಗಳಿಸಿದ್ದಾರೆ. ಆಫ್‌ಸ್ಪಿನ್ನರ್ ಆಗಿರುವ ಗೌತಮ್ 13 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅವರು ಎರಡು ವರ್ಷ ರಾಜಸ್ಥಾನ್ ರಾಯಲ್ಸ್ ತಂಡದಲ್ಲಿದ್ದರು. ಹೋದ ವರ್ಷ ಕಿಂಗ್ಸ್ ಇಲೆವನ್ ಪಂಜಾಬ್ (ಪಂಜಾಬ್ ಕಿಂಗ್ಸ್) ತಂಡದಲ್ಲಿ ಆಡಿದ್ದರು. ಪಂಜಾಬ್ ತಂಡದಲ್ಲಿ ಎರಡು ಪಂದ್ಯಗಳಲ್ಲಿ ಆಡುವ ಅವಕಾಶ ಲಭಿಸಿತ್ತು. ಭಾರತ ಎ ತಂಡದಲ್ಲಿ ಆಡಿರುವ ಗೌತಮ್, ಇನ್ನೂ ರಾಷ್ಟ್ರೀಯ ಸೀನಿಯರ್ ತಂಡಕ್ಕೆ ಕಾಲಿಟ್ಟಿಲ್ಲ.

’ಮಹೇಂದ್ರಸಿಂಗ್ ಧೋನಿ ನಾಯಕತ್ವದ ತಂಡದಲ್ಲಿ ಆಡುವುದು ದೊಡ್ಡ ಗೌರವದ ವಿಷಯ. ಅವರಿಂದ ಕಲಿಯುವುದು ಬಹಳಷ್ಟಿದೆ. ನನ್ನ ಆಟವನ್ನು ಉನ್ನತ ಹಂತಕ್ಕೆ ಬೆಳೆಸಿಕೊಳ್ಳಲು ಇದು ನೆರವಾಗಲಿದೆ‘ ಎಂದರು.

ಬಿಟಿಸಿ ಜಾಕಿ ಅಮಾನತು

ಬೆಂಗಳೂರು: ಕುದುರೆ ಜಾಕಿ ಸೂರಜ್ ನರೇಡು ಅವರ ಲೈಸೆನ್ಸ್ ಅನ್ನು ಬೆಂಗಳೂರು ಟರ್ಫ್ ಕ್ಲಬ್ ನಾಲ್ಕು ತಿಂಗಳ ಅವಧಿಗೆ ಅಮಾನತು ಮಾಡಿದೆ.

ಸೂರಜ್

’ಫೆಬ್ರುವರಿ 5ರಂದು ನಡೆದಿದ್ದ ಬೆಂಗಳೂರು ಚಳಿಗಾಲದ ರೇಸ್ (ಸಂಖ್ಯೆ 118)ನ ಟ್ರಯಲ್ಸ್ ಸ್ಟೇಕ್ ಆಯೋಜಿಸಲಾಗಿತ್ತು. ನರೇಡು ಸವಾರಿ ಮಾಡಿದ್ದ ಸಲಾರ್ಝೂರ್ ಕುದುರೆಯು ರೇಸ್‌ಗೂ ಮುನ್ನ ಗೆಲ್ಲುವ ಫೇವರಿಟ್ ಆಗಿತ್ತು. ಆದರೆ, ಉದ್ದೇಶಪೂರ್ವಕವಾಗಿಯೇ ನರೇಡು, ಕುದುರೆ ಜಯಿಸುವುದನ್ನು ತಪ್ಪಿಸಿ ಮೂರನೇ ಸ್ಥಾನ ಪಡೆಯುವಂತೆ ಮಾಡಿದರೆಂಬ ದೂರು ಇತ್ತು. ಅದನ್ನು ಕೂಲಂಕಷವಾಗಿ ವಿಚಾರಣೆ ನಡೆಸಿದ ನಂತರ ಅಮಾನತು ಮಾಡಲಾಗಿದೆ‘ ಎಂದು ಹೆಸರು ಹೇಳಲು ಇಚ್ಛಿಸದ ಕ್ಲಬ್‌ನ ಉನ್ನತ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

’ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದಾಗಿ ಸೂರಜ್ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-42500
ಹಳತು	42500-51000

ಬೆಳ್ತಂಗಡಿ

ಕೋಕ	15000-29000
ಹೊಸತು	22000-42000

ಚಿತ್ರದುರ್ಗ

ಆಪಿ	42139-42589
ಬೆಟ್ಟೆ	33119-33569
ಕೆಂಪುಗೋಟು	29200-29600
ರಾಶಿ	41629-42099

ಕುಂದಾಪುರ

ಹಳೆ ಚಾಲಿ	45000-51000
ಹೊಸ ಚಾಲಿ	35000-42500

ಪುತ್ತೂರು

ಕೋಕ	9500-24000
ಹೊಸತು	29000-42500

ಸಿದ್ದಾಪುರ

ಬಿಳಿಗೋಟು	23699-30399
ಕೋಕ	23669-30009
ಹಳೆ ಚಾಲಿ	36499-40333
ಹೊಸ ಚಾಲಿ	34689-37199
ಕೆಂಪುಗೋಟು	23671-31899
ರಾಶಿ	39899-42909
ತಟ್ಟಿಬೆಟ್ಟೆ	33199-41919

ಯಲ್ಲಾಪುರ

ಆಪಿ	48930-52365
ಬಿಳಿಗೋಟು	23299-32499
ಚಾಲಿ	32699-42169
ಕೋಕ	21899-30699
ಕೆಂಪುಗೋಟು	27699-34899
ರಾಶಿ	39910-47444
ತಟ್ಟಿಬೆಟ್ಟೆ	35812-39699

ಶಿವಮೊಗ್ಗ (ಎಪಿಎಂಸಿ)

ಬೆಟ್ಟೆ	40000-44740
ಗೊರಬಲು	17560-34799
ರಾಶಿ	37169-43199
ಸರಕು	45000-75200

ಶಿವಮೊಗ್ಗ (ಮ್ಯಾಮ್ಕೋಸ್)

ಬೆಟ್ಟೆ	43339-44339
ಹಸ	41499-71610
ರಾಶಿ ಇಡಿ	36189-43199
ಗೊರಬಲು	23099-31269

ಚನ್ನಗಿರಿ (ತುಮ್ಕೋಸ್)

ರಾಶಿ	38599-43609
ಬೆಟ್ಟೆ	33199-35379

ಸಾಗರ

ಚಾಲಿ	29699-30199
ಕೋಕ	26899-26899
ಕೆಂಪುಗೋಟು	32229-33699
ರಾಶಿ	41899-42599

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	1000-1,050
ನಡುಗೋಲು	1150-1250
ರಾಶಿ	1400-1450
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2,000-2050
ಕಾಳು ಮೆಣಸು	325

ರೇಷ್ಮೆಗೂಡು

ರಾಮನಗರ

ಮಿಶ್ರ ತಳಿ (ಸಿ.ಬಿ)	311-478
ದ್ವಿತಳಿ (ಬಿ.ವಿ)	215-545

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10,000	10,100	10,050	127.60 ಸೆಂಟ್ಸ್
ಎಸಿ	4005	3950	3950	ಲಂಡನ್
ಆರ್‌ಪಿ	5200	5150	5225	1352 ಡಾಲರ್ಸ್
ಆರ್‌ಸಿ	3000	2950	2950	

ಮುಂಬೈ ಧಾರಣೆ

ಶೇಂಗಾ

19-2-2021

ಜಾವಾ 70/80(ಹೊಸ)	10850-10900
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1470)
ಒಂದು ವಾರದ ಡೆಲಿವರಿ	1460 (1465)
ಸೋಯಾ ಕಚ್ಚಾ	1465 (1110)
ಪಾಮ್ ವಾರದ ಡೆಲಿವರಿ	1118 (1116)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ

45950 (46300)

ಬೆಳ್ಳಿ ಕೆ.ಜಿ

68,450 (68,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಮರ್ಥ್ ನಾಯಕತ್ವಕ್ಕೆ ಭುವನೇಶ್ವರ್ ಸವಾಲು

ಬೆಂಗಳೂರು: ಬಲಗೈ ಬ್ಯಾಟ್ಸ್‌ಮನ್ ರವಿಕುಮಾರ್ ಸಮರ್ಥ್ ಶನಿವಾರ ಕರ್ನಾಟಕ ತಂಡದಲ್ಲಿ ನಾಯಕತ್ವದ ಇನಿಂಗ್ಸ್ ಆರಂಭಿಸಲಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಮೊದಲ ಪಂದ್ಯದಲ್ಲಿ ಸಮರ್ಥ್ ಚಾಂಪಿಯನ್ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ. ಭಾರತದ ತಂಡದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ನಾಯಕತ್ವದ ಉತ್ತರ ಪ್ರದೇಶದ ಸವಾಲನ್ನು ಎದುರಿಸಲಿದ್ದಾರೆ.

ನಾಲ್ಕು ಬಾರಿ ಪ್ರಶಸ್ತಿ ಗೆದ್ದಿರುವ ಕರ್ನಾಟಕ ತಂಡವು ಈ ಬಾರಿಯೂ ಕಿರೀಟ ಉಳಿಸಿಕೊಳ್ಳಲು ಸಮರ್ಥ್ ತಂತ್ರಗಾರಿಕೆ ಯಾವ ರೀತಿ ಫಲ ನೀಡಲಿದೆ ಎಂಬುದು ಕುತೂಹಲ ಕೆರಳಿಸಿದೆ. ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಮನೀಷ್ ಪಾಂಡೆ ಮತ್ತು ಐಪಿಎಲ್ ಹರಾಜಿನಲ್ಲಿ ಬಂಪರ್ ಮೌಲ್ಯ ಗಳಿಸಿರುವ ಕೃಷ್ಣಪ್ಪ ಗೌತಮ್ ಅವರು ತಂಡದಲ್ಲಿಲ್ಲ.

ಅನುಭವಿ ಕರುಣ್ ನಾಯರ್ ಅವರಿಗೆ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳಲು ಈ ಟೂರ್ನಿ ಬಹುಶಃ ಕೊನೆಯ ಅವಕಾಶವಾಗಲಿದೆ. ಈಚೆಗೆ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಟೂರ್ನಿಯಲ್ಲಿ ಕರುಣ್ ನಾಯಕತ್ವದ ತಂಡವು ಎಂಟರ ಘಟ್ಟದಲ್ಲಿ ಸೋತಿತ್ತು. ಕರುಣ್ ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸಿದ್ದರು. ಅವರು ಈ ಟೂರ್ನಿಯಲ್ಲಿ ಲಯಕ್ಕೆ ಮರಳಿದರೆ ಬ್ಯಾಟಿಂಗ್ ಬಲ ಹೆಚ್ಚುತ್ತದೆ. ದೇವದತ್ತ ಪಡಿಕ್ಕಲ್, ಅನಿರುದ್ಧ ಜೋಶಿ, ನಿಶ್ಚಲ್ ಕೂಡ ಸ್ಥಿರ ಪ್ರದರ್ಶನ ನೀಡಿದರೆ ಲೀಗ್ ಹಂತದ ಸವಾಲನ್ನು ಮೀರಿ ನಿಲ್ಲುವುದು ಸುಲಭವಾಗುತ್ತದೆ. ಟಿ20 ಮಾದರಿಯಲ್ಲಿ ಕೆ.ವಿ. ಸಿದ್ಧಾರ್ಥ್, ಶ್ರೇಯಸ್ ಗೋಪಾಲ್ ಮತ್ತು ಬಿ.ಆರ್. ಶರತ್ ಅವರಿಗೆ ಹೆಚ್ಚು ಅವಕಾಶ ಸಿಕ್ಕಿರಲಿಲ್ಲ ಅವರಿಗೂ ಇಲ್ಲಿ ತಮ್ಮ ಸಾಮರ್ಥ್ಯ ಸಾಬೀತು ಮಾಡುವ ಅವಕಾಶಗಳು ಲಭಿಸುವ ನಿರೀಕ್ಷೆ ಇದೆ.

ಆರ್. ಸಮರ್ಥ್

ಭುವನೇಶ್ವರ್ ಯುವ ಪಡೆಯನ್ನೇ ನೆಚ್ಚಿಕೊಂಡಿದ್ದಾರೆ. ಅನುಭವಿ ಸುರೇಶ್ ರೈನಾ ಅವರು ಆಡುತ್ತಿಲ್ಲ. ಆದ್ದರಿಂದ ಭುವಿ ಮೇಲೆ ಹೊಣೆ ಹೆಚ್ಚಿದೆ.

ತಂಡಗಳು: ಕರ್ನಾಟಕ: ಆರ್. ಸಮರ್ಥ್ (ನಾಯಕ), ರೋಹನ್ ಕದಂ, ಬಿ.ಆರ್. ಶರತ್ (ವಿಕೆಟ್ ಕೀಪರ್), ಕರುಣ್ ನಾಯರ್, ಡಿ. ನಿಶ್ಚಲ್, ಅಭಿಮನ್ಯು ಮಿಥುನ್, ಅನಿರುದ್ಧ ಜೋಶಿ, ಶ್ರೇಯಸ್ ಗೋಪಾಲ್, ರೋನಿತ್ ಮೋರೆ, ಜೆ. ಸುಚಿತ್, ವೈಶಾಖ ವಿಜಯಕುಮಾರ್, ಆದಿತ್ಯ ಸೋಮಣ್ಣ, ಪ್ರಸಿದ್ಧಕೃಷ್ಣ, ಕೆ.ವಿ. ಸಿದ್ಧಾರ್ಥ್, ಎಂ.ಬಿ. ದರ್ಶನ್, ನಿಕಿನ್ ಜೋಸ್, ಶಿವಕುಮಾರ್ ರಕ್ಷಿತ್, ಕೆ.ಎಲ್. ಶ್ರೀಜಿತ್, ದೇವದತ್ತ ಪಡಿಕ್ಕಲ್, ಮನೋಜ್ ಭಾಂಡಗೆ, ಶುಭಾಂಗ್ ಹೆಗಡೆ.

ಭುವನೇಶ್ವರ್ ಕುಮಾರ್

ಉತ್ತರಪ್ರದೇಶ: ಭುವನೇಶ್ವರ್ ಕುಮಾರ್ (ನಾಯಕ), ಸಮರ್ಥ್ ಸಿಂಗ್, ಉಪೇಂದ್ರ ಯಾದವ್ (ವಿಕೆಟ್‌ಕೀಪರ್), ರಿಂಕು ಸಿಂಗ್, ಪ್ರಿಯಂ ಗಾರ್ಗ್, ಅಕ್ಷದೀಪ್ ನಾಥ್, ಅಲ್ಮಸ್ ಶೌಕತ್, ಶಿವಂ ಮಾವಿ, ಅಭಿಷೇಕ್ ಗೋಸ್ವಾಮಿ, ಕಾರ್ತಿಕ್ ತ್ಯಾಗಿ, ಮೊಹಸಿನ್ ಖಾನ್, ಆರ್ಯನ್ ಜುಯಾಲ್, ಶಾನು ಸೈನಿ, ಸಮೀರ್ ಚೌಧರಿ, ಐಶ್ವರ್ಯ ಮೌರ್ಯ, ಮಾಧವ್ ಕೌಶಿಕ್, ಶಿವಂ ಶರ್ಮಾ, ಪೂರ್ಣಕ್ ತ್ಯಾಗಿ, ಕರಣ್ ಶರ್ಮಾ.

ಆರಂಭ: ಬೆಳಿಗ್ಗೆ 9.00

ಎಟಿಕೆಎಂಬಿ ಜಯಭೇರಿ

ಫತೋರ್ಡಾ, ಗೋವಾ (ಪಿಟಿಐ): ಎಟಿಕೆ ಮೋಹನ್ ಬಾಗನ್ ತಂಡ ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಜಯಭೇರಿ ಬಾರಿಸಿತು. ಫತೋರ್ಡಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಟಿಕೆ ತಂಡವು 3–1 ಗೋಲುಗಳಿಂದ ಈಸ್ಟ್ ಬೆಂಗಾಲ್ ವಿರುದ್ಧ ಜಯಿಸಿತು.

ಷೇರುಪೇಟೆ ವಹಿವಾಟು

434



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,118
ಇಂದಿನ ಅಂತ್ಯ	14,981
▼	137
ದಿನದ ಗರಿಷ್ಠ	15,144

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹63

ಮೈಸೂರು

100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1460)
ಸೋಯಾ (ರಿಫೈನ್ಡ್)	₹1110 (1150)
ಸೂರ್ಯಕಾಂತಿ (ರಿಫೈನ್ಡ್)	₹1440(1430)
ಪಾಮೋಲಿನ್	₹1120 (1118)